prajavani.net prajavani

ಶನಿವಾರ, ಜನವರಿ 17, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 17 | ಪುಟ 18

www.prajavani.net

ರಾಧಾ ಅರ್ಧಶತಕ

ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ರಾಧಾ ಯಾದವ್ ಅವರು ಮಹಿಳಾ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಅರ್ಧಶತಕ ಗಳಿಸಿದರು

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ಸೆನ್ಸೆಕ್ಸ್ 83,570 | ನಿಫ್ಟಿ 25,694 | $/₹ 90.78 | ಚಿನ್ನ (Std. 10g) ₹1,47,700 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,98,700 (ಬೆಂಗಳೂರು)

ಬಳ್ಳಾರಿ: ಇಂದು ಬಿಜೆಪಿ ಸಮಾವೇಶ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಬಳ್ಳಾರಿ ಘರ್ಷಣೆ ಪ್ರಕರಣದ ಸಂಬಂಧ ಶಾಸಕ ನಾರಾ ಭರತ್ ರೆಡ್ಡಿ, ಅವರ ಬೆಂಬಲಿಗರನ್ನು ಬಂಧಿಸಬೇಕು ಮತ್ತು ತನಿಖೆಯನ್ನು ಸಿಬಿಐಗೆ ವಹಿಸಬೇಕು ಎಂದು ಆಗ್ರಹಿಸಿ ಬಿಜೆಪಿ ಶನಿವಾರ (ಜನವರಿ 17) ನಗರದಲ್ಲಿ ಬಹಿರಂಗ ಸಮಾವೇಶ ಹಮ್ಮಿಕೊಂಡಿದೆ.

‘ಎಪಿಎಂಸಿ ಪ್ರಾಂಗಣದಲ್ಲಿ ಸಮಾವೇಶ ನಡೆಯಲಿದ್ದು, 30 ಸಾವಿರಕ್ಕೂ ಹೆಚ್ಚು ಜನ ಸೇರುವ ನಿರೀಕ್ಷೆ ಇದೆ’ ಎಂದು ಬಿಜೆಪಿ ನಾಯಕರು ತಿಳಿಸಿದ್ದಾರೆ. ಅಹಿತಕರ ಘಟನೆಗೆ ಆಸ್ಪದವಾಗದಂತೆ ನಿಗಾ ವಹಿಸಲು 2,500 ಪೊಲೀಸ್ ಸಿಬ್ಬಂದಿಯನ್ನು ಭದ್ರತೆಗೆ ನಿಯೋಜಿಸಲಾಗಿದೆ.

▶5

ಚಿನಕುರುಳಿ — ಪ್ರಕಾಶ್ ಶೆಟ್ಟಿ

ಠಾಕ್ರೆ ಭದ್ರಕೋಟೆ ಭೇದಿಸಿದ ಬಿಜೆಪಿ

ಪುಣೆಯಲ್ಲಿ ಎನ್‌ಸಿಪಿ ಬಣಗಳ ಮೈತ್ರಿಯನ್ನೂ ಮಣಿಸಿದ ಕೇಸರಿ ಪಕ್ಷ

ಪ್ರಜಾವಾಣಿ ವಾರ್ತೆ/ಪಿಟಿಐ

ಮುಂಬೈ: ದೇಶದ ಗಮನ ಸೆಳೆದಿದ್ದ ಬೃಹನ್ ಮುಂಬೈ ಮಹಾನಗರ ಪಾಲಿಕೆ (ಬಿಎಂಸಿ) ಚುನಾವಣೆಯಲ್ಲಿ ಬಿಜೆಪಿಯು ಭರ್ಜರಿ ಜಯ ಸಾಧಿಸಿದೆ. ಹೀಗಾಗಿ ಬಿಜೆಪಿ ನೇತೃತ್ವದ ‘ಮಹಾಯುತಿ’ ಮೈತ್ರಿಕೂಟ ಅಧಿಕಾರದ ಚುಕ್ಕಾಣಿ ಹಿಡಿಯಲಿದ್ದು, ಈ ಪಾಲಿಕೆಯಲ್ಲಿ ಅವಿಭಜಿತ ಶಿವಸೇನಾ ಕಳೆದ ಮೂರು ದಶಕ ಹೊಂದಿದ್ದ ಪ್ರಾಬಲ್ಯವನ್ನು ಛಿದ್ರಗೊಳಿಸಿದೆ.

ಬಿಎಂಸಿಯಲ್ಲಿ ತನ್ನ ಮೇಯರ್ ಹೊಂದಬೇಕು ಎಂಬ ಬಿಜೆಪಿಯ ದೀರ್ಘ ಕಾಲದ ಕನಸು ನನಸಾಗುವ ಗಳಿಗೆ ಕೂಡಿಬಂದಂತಾಗಿದೆ. ಇದಕ್ಕೆ ಮಿತ್ರಪಕ್ಷವಾದ ಶಿವಸೇನಾ (ಶಿಂದೆ ಬಣ) ಸಾಥ್ ನೀಡಿದೆ.

ಬಿಎಂಸಿಯ ಒಟ್ಟು ಸದಸ್ಯ ಬಲ 227. ಬಿಜೆಪಿ ಹಾಗೂ ಶಿವಸೇನಾ (ಶಿಂದೆ ಬಣ) ಒಳಗೊಂಡ ಮೈತ್ರಿಕೂಟವು ಸರಳ ಬಹುಮತ ಪಡೆಯುವತ್ತ ಹೆಜ್ಜೆ ಇಟ್ಟಿದ್ದು, ಈ ಮೂಲಕ ದೇಶದ ಅತ್ಯಂತ ಶ್ರೀಮಂತ ನಗರ ಸ್ಥಳೀಯ ಸಂಸ್ಥೆಯ ಆಡಳಿತ ಚುಕ್ಕಾಣಿ ಹಿಡಿಯಲು ಸಜ್ಜಾಗಿದೆ. 2025–26ನೇ ಸಾಲಿನ ಬಿಎಂಸಿ ಬಜೆಟ್ ಗಾತ್ರ ₹74,427 ಕೋಟಿ ಆಗಿದೆ.

29 ನಗರ ಸ್ಥಳೀಯ ಸಂಸ್ಥೆಗಳ ಪೈಕಿ, 23ರಲ್ಲಿ ಮಹಾಯುತಿ, 5ರಲ್ಲಿ ಎಂವಿಎ ಅಧಿಕಾರ ಹಿಡಿಯಲಿದ್ದರೆ, ಮಾಲೇಗಾಂವ್‌ನಲ್ಲಿ ಅತಂತ್ರ ಸ್ಥಿತಿ ನಿರ್ಮಾಣವಾಗಿದೆ.

ನಗರ ಸ್ಥಳೀಯ ಸಂಸ್ಥೆಗಳಿಗೆ ನಡೆದ ಚುನಾವಣೆಯ ಮತ ಎಣಿಕೆ ಶುಕ್ರವಾರ ನಡೆಯಿತು.

▶7

ಧನ್ಯವಾದ ಮಹಾರಾಷ್ಟ್ರ. ಉತ್ತಮ ಆಡಳಿತದ ಎನ್‌ಡಿಎ ಕಾರ್ಯಸೂಚಿಯನ್ನು ರಾಜ್ಯದ ಜನರು ಆಶೀರ್ವದಿಸಿದ್ದಾರೆ. ವಿವಿಧ ಪಾಲಿಕೆಗಳ ಚುನಾವಣಾ ಫಲಿತಾಂಶದಿಂದ ಎನ್‌ಡಿಎ ಜೊತೆಗೆ ಮಹಾರಾಷ್ಟ್ರದ ಜನರ ಬಾಂಧವ್ಯ ಮತ್ತಷ್ಟು ಗಟ್ಟಿಯಾಗಿದೆ.

ನರೇಂದ್ರ ಮೋದಿ, ಪ್ರಧಾನಿ

ಅಭಿವೃದ್ಧಿಯನ್ನು ಬಯಸಿ ಮಹಾಯುತಿಗೆ ಜನರು ಮತ ನೀಡಿದ್ದಾರೆ. ಬಿಜೆಪಿಯ ಅಭಿವೃದ್ಧಿಯ ಕಾರ್ಯಸೂಚಿಯನ್ನು ಜನರ ಮುಂದಿಟ್ಟಿದ್ದೆವು, ಇದಕ್ಕೆ ಜನರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ

ದೇವೇಂದ್ರ ಫಡಣವೀಸ್
ಮಹಾರಾಷ್ಟ್ರ ಮುಖ್ಯಮಂತ್ರಿ

ನವಿ ಮುಂಬೈನಲ್ಲಿ ಬಿಜೆಪಿ ಕಾರ್ಯಕರ್ತರು ವಿಜಯೋತ್ಸವ ನಡೆಸಿದರು — ಪಿಟಿಐ ಚಿತ್ರ

ಮಹಾನಗರ ಪಾಲಿಕೆ ಪಕ್ಷಗಳ ಬಲಾಬಲ

ಬೃಹನ್ ಮುಂಬೈ	227 ಒಟ್ಟು ವಾರ್ಡ್‌ಗಳು
ಬಿಜೆಪಿ	89
ಶಿವಸೇನಾ (ಯುಬಿಟಿ)	65
ಶಿವಸೇನಾ(ಶಿಂದೆ)	29
ಕಾಂಗ್ರೆಸ್	24
ಇತರೆ	20

ಪುಣೆ	165 ಒಟ್ಟು ಸ್ಥಾನಗಳು
ಬಿಜೆಪಿ	123
ಎನ್‌ಸಿಪಿ (ಅಜಿತ್)	21
ಕಾಂಗ್ರೆಸ್	16
ಇತರೆ	5

ಪಿಂಪ್ರಿ-ಚಿಂಚವಾಡ	128 ಒಟ್ಟು ಸ್ಥಾನಗಳು
ಬಿಜೆಪಿ	84
ಎನ್‌ಸಿಪಿ (ಅಜಿತ್)	37
ಶಿವಸೇನಾ	6
ಇತರೆ	1

ನಾಗ್ಪುರ	151 ಒಟ್ಟು ಸ್ಥಾನಗಳು
ಬಿಜೆಪಿ	102
ಕಾಂಗ್ರೆಸ್	33
ಶಿವಸೇನಾ (ಯುಬಿಟಿ)	2
ಇತರೆ	14

ನವಿ ಮುಂಬೈ: 111 ಒಟ್ಟು ಸ್ಥಾನಗಳು • ಬಿಜೆಪಿ 65 • ಶಿವಸೇನಾ(ಶಿಂದೆ) 43 • ಶಿವಸೇನಾ(ಯುಬಿಟಿ) 2 • ಎಂಎನ್‌ಎಸ್ 1

ಮಾಜಿ ಸಚಿವ ಭೀಮಣ್ಣ ಖಂಡ್ರೆ ನಿಧನ

ಪ್ರಜಾವಾಣಿ ವಾರ್ತೆ



ಬೀದರ್: ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದ ಮಾಜಿ ಸಚಿವ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಮಾಜಿ ಅಧ್ಯಕ್ಷ, ಶತಾಯುಷಿ ಭೀಮಣ್ಣ ಖಂಡ್ರೆ (102) ಅವರು ಶುಕ್ರವಾರ ರಾತ್ರಿ 10.50ಕ್ಕೆ ಭಾಲ್ಕಿಯಲ್ಲಿನ ಅವರ ಸ್ವಗೃಹದಲ್ಲಿ ನಿಧನರಾದರು.

ಬೀದರ್ ನಗರದ ಗುದಗೆ ಮಲ್ಟಿ ಸ್ಪೆಷಾಲಿಟಿ ಆ್ಯಂಡ್ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ದಾಖಲಿಸಿ, ಒಂದು ವಾರ ಜೀವರಕ್ಷಕಗಳ ಮೂಲಕ ಚಿಕಿತ್ಸೆ ನೀಡಲಾಗಿತ್ತು. ಸತತವಾಗಿ ಆರೋಗ್ಯ ಕ್ಷೀಣಿಸಿದ ಕಾರಣ ಸೋಮವಾರ (ಜ.12) ಅವರನ್ನು ಮನೆಗೆ ಕರೆದೊಯ್ಯಲಾಗಿತ್ತು. ಬಳಿಕ ಮನೆಯಲ್ಲಿಯೇ ವೈದ್ಯರ ತಂಡ ಅವರನ್ನು ಉಪಚರಿಸುತ್ತಿತ್ತು. ಆರೋಗ್ಯದಲ್ಲಿ ಚೇತರಿಕೆ ಕಂಡು ಬಂದಿತ್ತು.

ಶುಕ್ರವಾರ ಆರೋಗ್ಯದಲ್ಲಿ ಏರುಪೇರು ಉಂಟಾಗಿ ರಾತ್ರಿ ನಿಧನರಾದರು. ತಂದೆಯ ಅನಾರೋಗ್ಯದ ಕಾರಣದಿಂದ ಅವರ ಮಗ, ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಬಿ. ಖಂಡ್ರೆ, ಸಂಸದರೂ ಆಗಿರುವ ಮೊಮ್ಮಗ ಸಾಗರ ಖಂಡ್ರೆ ಸೇರಿದಂತೆ ಕುಟುಂಬ ಸದಸ್ಯರು ಎಲ್ಲಾ ರೀತಿಯ ಕಾರ್ಯಕ್ರಮಗಳಿಂದ ದೂರ ಉಳಿದು ಮನೆಯಲ್ಲಿಯೇ ಉಳಿದುಕೊಂಡಿದ್ದರು.

ಖಂಡ್ರೆಯವರ ಆರೋಗ್ಯದಲ್ಲಿ ಏರುಪೇರಾದ ವಿಷಯ ತಿಳಿದು ವಿವಿಧ ಮಠಾಧೀಶರು, ಸಚಿವರು, ಶಾಸಕರು, ರಾಜಕೀಯ ಪಕ್ಷಗಳ ಮುಖಂಡರು, ಅವರ ಬೆಂಬಲಿಗರು ಕಳೆದ ಹಲವು ದಿನಗಳಿಂದ ಅವರ ಮನೆಗೆ ಭೇಟಿ ನೀಡುತ್ತಿದ್ದರು. ಭೀಮಣ್ಣ ಖಂಡ್ರೆಯವರಿಗೆ ಪರಿಸರ, ಅರಣ್ಯ ಮತ್ತು ಜೀವಿಶಾಸ್ತ್ರ ಸಚಿವ ಈಶ್ವರ ಬಿ. ಖಂಡ್ರೆ ಸೇರಿದಂತೆ ಇಬ್ಬರು ಪುತ್ರರು, ಐದು ಜನ ಪುತ್ರಿಯರು ಇದ್ದಾರೆ. ಪತ್ನಿ ಲಕ್ಷ್ಮೀಬಾಯಿ ಖಂಡ್ರೆ, ಗಂಡು ಮಕ್ಕಳ ಪೈಕಿ ಹಿರಿಯ ಮಗ, ಮಾಜಿ ಶಾಸಕ ವಿಜಯಕುಮಾರ್ ಖಂಡ್ರೆ ಅವರು ಅನಾರೋಗ್ಯದಿಂದ ಈ ಹಿಂದೆಯೇ ಮೃತಪಟ್ಟಿದ್ದಾರೆ. ನಾಲ್ಕು ಸಲ ಶಾಸಕರಾಗಿ, ಎರಡು ಸಲ ವಿಧಾನ ಪರಿಷತ್ ಸದಸ್ಯರಾಗಿದ್ದ ಭೀಮಣ್ಣ ಖಂಡ್ರೆ ಅವರು ಎಂ. ವೀರಪ್ಪ ಮೊಯ್ಲಿ ಅವರ ಸಂಪುಟದಲ್ಲಿ ಸಾರಿಗೆ ಸಚಿವರಾಗಿ ಕೆಲಸ ನಿರ್ವಹಿಸಿದ್ದರು. ಸಮಾಜವಾದಿ ಪಕ್ಷದ ಕಾರ್ಯಕರ್ತರಾಗಿ ರಾಜಕೀಯ ಜೀವನ ಆರಂಭಿಸಿದ ಅವರು, 1953ರಲ್ಲಿ ಭಾಲ್ಕಿ ಪುರಸಭೆ ಅಧ್ಯಕ್ಷರಾಗಿದ್ದರು.

ಅಂತ್ಯಕ್ರಿಯೆ ಶನಿವಾರ (ಜ 17) ಸಂಜೆ 5ಕ್ಕೆ ಭಾಲ್ಕಿಯಲ್ಲಿ ನೆರವೇರಲಿದೆ.

ಹೋರಾಟದ ಕೆಚ್ಚು, ಸ್ವಾಭಿಮಾನದ ಕಿಚ್ಚು ▶5C

ಕೆ. ಎನ್. ಎಸ್.

RERA No.: PRM/KA/RERA/1250/307/PR/060325/007551

RERA Registered

LAUNCHING

KNS® Samooha

Nelamangala
Off Bengaluru - Tumkur Exp Highway

PLOTS FROM ₹69 lakhs*

Launching on Jan 31st & Feb 1st

www.knsgroup.in

CREDAI BANGALORE

Scan for Invite

See it to believe it
Call for a site visit

080 4736 0336

ADDRESS:
#1125/12, 1st Floor, Service Road, Hampinagar, 2nd Stage, Vijayanagar, Bengaluru - 560 104

Financed by Piramal Finance

Our Banking Partners

*T&C Apply

सत्यमेव जयते

ಪಶ್ಚಿಮ ಬಂಗಾಳ ಮತ್ತು ಅಸ್ಸಾಂ ರಾಜ್ಯಗಳ ಕ್ಷಿಪ್ರ ಪ್ರಗತಿ

ರೂ. 3,250 ಕೋಟಿಗೂ ಅಧಿಕ ಮೌಲ್ಯದ ರೈಲು ಮತ್ತು ರಸ್ತೆ ಯೋಜನೆಗಳ ಮೂಲಕ

ಶುಭಾರಂಭ

ವಂದೇ ಭಾರತ್ ಸ್ಲೀಪರ್ ರೈಲು

ಹೌರಾ - ಗುವಾಹಟಿ (ಕಾಮಾಖ್ಯ)
ಮಾಲ್ಡಾ ಟೌನ್ ರೈಲು ನಿಲ್ದಾಣದಿಂದ

ಗುವಾಹಟಿ (ಕಾಮಾಖ್ಯ)-ಹೌರಾ
ಕಾಮಾಖ್ಯ ರೈಲು ನಿಲ್ದಾಣದಿಂದ

....

ಅಮೃತ್ ಭಾರತ್ ಎಕ್ಸ್‌ಪ್ರೆಸ್

ನ್ಯೂ ಜಲಯಪಾಯ್‌ಗುಡಿ - ನಾಗರಕೊಯಿಲ್

ನ್ಯೂ ಜಲಪಾಯ್‌ಗುಡಿ - ತಿರುಚ್ಚಿರಪಲ್ಲಿ

ಅಲಿಪುರದೂರ್ - ಎಸ್‌ಎಂವಿಟಿ ಬೆಂಗಳೂರು

ಅಲಿಪುರದೂರ್ - ಮುಂಬೈ (ಪನ್ವೇಲ್)

....

ಮೈಲ್ ಎಕ್ಸ್‌ಪ್ರೆಸ್

ಬಾಲೂರಘಾಟ್ - ಎಸ್‌ಎಂವಿಟಿ ಬೆಂಗಳೂರು

ರಾಧಿಕಾಪುರ - ಎಸ್‌ಎಂವಿಟಿ ಬೆಂಗಳೂರು

ಶಿಲಾನ್ಯಾಸ

4 ಲೇನಿಂಗ್

ಎನ್‌ಎಚ್-27ರ ಧೂಪ್‌ಗುರಿ - ಫಲಕತಾ ಸೆಕ್ಷನ್

ನ್ಯೂ ರೈಲ್ ಲೈನ್

ಬಲೂರ್‌ಘಾಟ್ ಮತ್ತು ಹಿಲಿ ಮಧ್ಯೆ

ಲೋಕೊ ಷೆಡ್ ಮೇಲ್ದರ್ಜೀಕರಣ

@ ಸಿಲಿಗುರಿ

ಭವಿಷ್ಯದ ಪೀಳಿಗೆಯ ಫ್ರೈಟ್ ನಿರ್ವಹಣಾ ಸೌಕರ್ಯಗಳು

@ ಜಲಪಾಯ್‌ಗುಡಿ

ಮೇಲ್ದರ್ಜೀಕರಣ

ಜಲಪಾಯ್‌ಗುಡಿಯಲ್ಲಿ ವಂದೇ ಭಾರತ್ ರೈಲುಗಳಿಗಾಗಿ ನಿರ್ವಹಣಾ ಸೌಲಭ್ಯಗಳ ಸುಧಾರಣೆ

ರಾಷ್ಟ್ರಕ್ಕೆ ಸಮರ್ಪಣೆ

ರೈಲ್ ಲೈನ್ ವಿದ್ಯುದೀಕರಣ

ನ್ಯೂ ಕಚ್‌ಬಿಹಾರ್ - ಬಹನಹಾತ್ ನಡುವೆ

ನ್ಯೂ ಕಚ್‌ಬಿಹಾರ್ - ಬಾಕ್ಸಿರ್‌ಹಾತ್ ನಡುವೆ

ಯೋಜನೆಯ ಲಾಭಗಳು

ವಂದೇ ಭಾರತ್ ಸ್ಲೀಪರ್ ರೈಲು
- ಕೈಗೆಟಕುವ ಮತ್ತು ಆಹ್ಲಾದಕರ ಪ್ರಯಾಣ
- ಸುಮಾರು 2.5 ರಿಂದ 3 ಗಂಟೆಗಳ ಪ್ರಯಾಣ ಅವಧಿಯಲ್ಲಿ ಕಡಿತ
- ವೇಗ ಹೆಚ್ಚಳ ಪ್ರತಿ ಗಂಟೆಗೆ 180 ಕಿ.ಮೀ.
- ಸೋಂಕುರಹಿತ ತಂತ್ರಜ್ಞಾನವುಳ್ಳ ಶೌಚಾಲಯಗಳ ಅಳವಡಿಕೆ

ಅಮೃತ್ ಭಾರತ್ ಎಕ್ಸ್‌ಪ್ರೆಸ್ ರೈಲುಗಳು
- ಪ್ರಯಾಣ ಅವಧಿಯಲ್ಲಿ ಗಮನಾರ್ಹ ಕಡಿತ
- ಸುರಕ್ಷಿತ, ಅನುಕೂಲಕರ ಮತ್ತು ಭರವಸೆದಾಯಕ ಪ್ರಯಾಣಗಳು

ಮೈಲ್ ಎಕ್ಸ್‌ಪ್ರೆಸ್ ರೈಲುಗಳು
- ಆಧುನಿಕ ಸೌಲಭ್ಯಗಳೊಂದಿಗೆ ಸುಸಜ್ಜಿತ
- ಪ್ರವಾಸೋದ್ಯಮ ಮತ್ತು ಸ್ಥಳೀಯ ಆರ್ಥಿಕತೆಗೆ ಉತ್ತೇಜನ

ರೈಲ್ ಲೈನ್‌ಗಳ ವಿದ್ಯುದೀಕರಣ
- ತ್ವರಿತ ಮತ್ತು ವಿಶ್ವಾಸರ್ಹ ರೈಲು ಸೇವೆಗಳು
- ಸುಧಾರಿತ ಸಮಯಪಾಲನೆ ಮತ್ತು ಕಡಿತಗೊಂಡ ಪ್ರಯಾಣ ಅವಧಿ
- ಸ್ವಚ್ಛ ಮತ್ತು ಪರಿಸರ-ಸ್ನೇಹಿ ರೈಲು ಪ್ರಯಾಣ

ಎನ್‌ಎಚ್-27 ರಸ್ತೆ ಯೋಜನೆ
- ಪ್ರಮುಖ ಚಿಕನ್ ನೆಕ್ ಕಾರಿಡಾರ್‌ಗಳು ಕೂಡ ಸೇರಿದಂತೆ, ಈಶಾನ್ಯ ರಾಜ್ಯಗಳ ಸಂಪರ್ಕ ವ್ಯವಸ್ಥೆಯಲ್ಲಿ ಭಾರಿ ಸುಧಾರಣೆ ಉಂಟಾಗುತ್ತದೆ
- ಸಿಲಿಗುರಿ ಮತ್ತು ಗುವಾಹಟಿ ನಡುವೆ ಪ್ರಯಾಣ ಸಮಯದಲ್ಲಿ ಸುಮಾರು 1 ಗಂಟೆ ಉಳಿತಾಯ

ಉದ್ಘಾಟಕರು

ನರೇಂದ್ರ ಮೋದಿ

ಪ್ರಧಾನ ಮಂತ್ರಿ

17ನೇ ಜನವರಿ 2026 | ಮಾಲ್ಡಾ ಟೌನ್ ಸ್ಟೇಷನ್ | ಬೆಳಗ್ಗೆ 11:00 ಗಂಟೆ

ಗಣ್ಯ ಉಪಸ್ಥಿತರು

ಡಾ. ಸಿ. ವಿ. ಆನಂದ ಬೋಸ್
ರಾಜ್ಯಪಾಲರು, ಪಶ್ಚಿಮ ಬಂಗಾಳ

ಲಕ್ಷ್ಮಣ ಪ್ರಸಾದ್ ಆಚಾರ್ಯ
ರಾಜ್ಯಪಾಲರು, ಅಸ್ಸಾಂ

ಮಮತಾ ಬ್ಯಾನರ್ಜಿ
ಮುಖ್ಯಮಂತ್ರಿ, ಪಶ್ಚಿಮ ಬಂಗಾಳ

ಡಾ. ಹಿಮಂತ್ ಬಿಸ್ವ ಶರ್ಮಾ
ಮುಖ್ಯಮಂತ್ರಿ, ಅಸ್ಸಾಂ

ನಿತಿನ್ ಜೈರಾಮ್ ಗಡ್ಕರಿ
ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ

ಅಶ್ವಿನಿ ವೈಷ್ಣವ್
ಕೇಂದ್ರ ರೈಲ್ವೆ, ಮಾಹಿತಿ ಮತ್ತು ಪ್ರಸಾರ ಹಾಗೂ ಇಲೆಕ್ಟ್ರಾನಿಕ್ಸ್ & ಮಾಹಿತಿ ತಂತ್ರಜ್ಞಾನ ಸಚಿವ

ಶಾಂತನು ಠಾಕೂರ್
ಕೇಂದ್ರ ಬಂದರು, ಸಾಗಾಣಿಕೆ ಮತ್ತು ಜಲಮಾರ್ಗಗಳ ರಾಜ್ಯ ಸಚಿವ

ಡಾ. ಸುಕಂತಾ ಮಜುಮ್ದಾರ್
ಕೇಂದ್ರ ಶಿಕ್ಷಣ & ಈಶಾನ್ಯ ಪ್ರದೇಶ ಅಭಿವೃದ್ಧಿ ರಾಜ್ಯ ಸಚಿವ

INDIAN RAILWAYS

DD NEWS ಡಿಡಿ ನ್ಯೂಸ್ ವಾಹಿನಿಯಲ್ಲಿ ನೇರಪ್ರಸಾರ ವೀಕ್ಷಿಸಿ www.indianrailways.gov.in ನಮ್ಮನ್ನು ಅನುಸರಿಸಿ /RailMinIndia

ಸ್ವಚ್ಛತಾ ಅಭಿಯಾನ ಪಶ್ಚಿಮ ಬಂಗಾಳದ ಸಾಗರ ದ್ವೀಪದಲ್ಲಿ ನಡೆದ ಬೀಚ್ ಸ್ವಚ್ಛತಾ ಕಾರ್ಯದ ವೇಳೆ ಮರದ ವೇಷ ಧರಿಸಿದ್ದ ಜನರು ಗಮನಸೆಳೆದರು

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ರವಿ ಆಯ್ಕೆ ನ್ಯೂಜಿಲೆಂಡ್ ಎದುರು ನಡೆಯಲಿರುವ ಟಿ20 ಕ್ರಿಕೆಟ್ ಸರಣಿಯಲ್ಲಿ ಆಡುವ ಭಾರತ ತಂಡದಲ್ಲಿ ಲೆಗ್‌ಸ್ಪಿನ್ನರ್ ರವಿ ಬಿಷ್ಣೋಯಿ ಸ್ಥಾನ ಪಡೆದಿದ್ದಾರೆ

ಐಟಿಪಿಬಿ: ಸ್ಕೈವಾಕ್‌ಗೆ ಚಾಲನೆ

ಪಟ್ಟಂದೂರು ಅಗ್ರಹಾರ ಮೆಟ್ರೊ ನಿಲ್ದಾಣದಿಂದ ಐಟಿಪಿಬಿ, ಪಾರ್ಕ್ ಸ್ಕ್ವೇರ್ ಮಾಲ್ ಸಂಪರ್ಕಿಸುವ ಮೇಲ್ಸೇತುವೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಟ್ಟಂದೂರು ಅಗ್ರಹಾರದಲ್ಲಿ ನಮ್ಮ ಮೆಟ್ರೊ ನಿಲ್ದಾಣದಿಂದ ನೇರವಾಗಿ ಐಟಿಪಿಬಿ ಕಚೇರಿಗೆ ತಲುಪುವ ಪಾದಚಾರಿ ಮೇಲ್ಸೇತುವೆಗೆ (ಸ್ಕೈವಾಕ್) ಶುಕ್ರವಾರ ಚಾಲನೆ ನೀಡಲಾಗಿದೆ. ಇದರಿಂದಾಗಿ ಐಟಿ ಹಬ್ ಆಗಿರುವ ವೈಟ್‌ಫೀಲ್ಡ್ ಸುತ್ತಮುತ್ತ ಟೆಕಿಗಳು ವಾಹನ ದಟ್ಟಣೆಯ ನಡುವೆ ಸಿಲುಕುವುದು ತಪ್ಪಿದ್ದು, 55 ಸಾವಿರಕ್ಕೂ ಅಧಿಕ ಮಂದಿಗೆ ಪ್ರಯೋಜನವಾಗಲಿದೆ.

ಪಕ್ಕದಲ್ಲೇ ಕಚೇರಿ ಇದ್ದರೂ ವಿಪರೀತ ವಾಹನ ದಟ್ಟಣೆಯ ನಡುವೆ ರಸ್ತೆ ದಾಟಲು, ವಾಹನಗಳಲ್ಲಿ ಸಂಚರಿಸಲು ಪರದಾಡುವ ಸ್ಥಿತಿ ನಿತ್ಯ ಇರುತ್ತಿತ್ತು. ಟ್ರಾಫಿಕ್ ಸಿಗ್ನಲ್ ಬಿದ್ದಾಗ ಕಿಲೋಮೀಟರ್ ಗಟ್ಟಲೆ ವಾಹನಗಳು ನಿಲ್ಲುವಂತಾಗಿತ್ತು. ಈ ಸಮಸ್ಯೆಗೆ ಈಗ ಸ್ಕೈವಾಕ್ ಮುಕ್ತಿ ನೀಡಿದೆ.

ನಮ್ಮ ಮೆಟ್ರೊ ನೇರಳೆ ಮಾರ್ಗದ ಪಟ್ಟಂದೂರು ಅಗ್ರಹಾರ ಮೆಟ್ರೊ ನಿಲ್ದಾಣದಿಂದ ಇಂಟರ್‌ನ್ಯಾಷನಲ್ ಟೆಕ್ ಪಾರ್ಕ್ (ಐಟಿಪಿಬಿ) ಮತ್ತು ಪಾರ್ಕ್ ಸ್ಕ್ವೇರ್ ಮಾಲ್‌ಗೆ ಸಂಪರ್ಕ ಕಲ್ಪಿಸುವ ಪಾದಚಾರಿ ಮೇಲ್ಸೇತುವೆ ನಿರ್ಮಿಸಲು 2023ರ ಜನವರಿ 17 ರಂದು ಬಿಎಂಆರ್‌ಸಿಎಲ್ ಮತ್ತು ಐಟಿಪಿಎಲ್ ನಡುವೆ ಒಪ್ಪಂದ ಆಗಿತ್ತು.

ಕ್ಯಾಪಿಟಲ್ಯಾಂಡ್ ಇಂಡಿಯಾ ಟ್ರಸ್ಟ್‌ನ ಸಿಇಒ ಗೌರಿಶಂಕರ್ ನಾಗಭೂಷಣಂ ಮತ್ತು ಬಿಎಂಆರ್‌ಸಿಎಲ್ ಪ್ರಾಜೆಕ್ಟ್ ಮತ್ತು ಪ್ಲಾನಿಂಗ್ ವಿಭಾಗದ ನಿರ್ದೇಶಕ ಸುಬ್ರಹ್ಮಣ್ಯ ಗುಡ್ಗೆ ಅವರು ಶುಕ್ರವಾರ ಸ್ಕೈವಾಕ್ ಉದ್ಘಾಟಿಸಿದರು.

ಗೌರಿಶಂಕರ ನಾಗಭೂಷಣಂ ಮಾತನಾಡಿ, 'ನಿತ್ಯ ಮೆಟ್ರೊ ಮೂಲಕ ಕಚೇರಿಗೆ ಬರುವ ಸಾವಿರಾರು ತಂತ್ರಜ್ಞರಿಗೆ ಇದರಿಂದ ಅನುಕೂಲ ಆಗಲಿದೆ. ನಿಲ್ದಾಣದಿಂದ ನೇರವಾಗಿ ಬಿಸಿನೆಸ್ ಪಾರ್ಕ್ ಮತ್ತು ಮಾಲ್‌ಗೆ ತೆರಳಬಹುದಾದ್ದರಿಂದ ಸುರಕ್ಷತೆಯ ಜೊತೆಗೆ ಸಮಯದ ಉಳಿತಾಯವೂ ಆಗಲಿದೆ. ಪ್ರಯಾಣಿಕರು, ವಾಹನ ಸವಾರರಿಗೆ ಮಾತ್ರವಲ್ಲದೇ ವೈಟ್‌ಫೀಲ್ಡ್ ಪ್ರದೇಶದ ನಿವಾಸಿಗಳಿಗೂ ಸುರಕ್ಷತೆ ಕಲ್ಪಿಸಲಿದೆ' ಎಂದು ಹೇಳಿದರು.

ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ರವಿಶಂಕರ್ ಜೆ. ಮಾತನಾಡಿ, 'ಕೊನೆಯ ಹಂತದ ಸಂಪರ್ಕವನ್ನು ಬಲಪಡಿಸಲು ಸರ್ಕಾರ ಮತ್ತು ಖಾಸಗಿ ಪಾಲುದಾರಿಕೆ ಸಹಕಾರಿಯಾಗಬಲ್ಲದು ಎನ್ನುವುದಕ್ಕೆ ಐಟಿಪಿಬಿ ಮೆಟ್ರೊ ಪಾದಚಾರಿ ಮೇಲ್ಸೇತುವೆ ಉತ್ತಮ ಉದಾಹರಣೆ. ಪ್ರಮುಖ ಮೆಟ್ರೊ ನಿಲ್ದಾಣಗಳಿಗೆ ಸುಗಮವಾದ ಪಾದಚಾರಿ ಮಾರ್ಗದ ನಿರ್ಮಾಣ ಮಾಡುವುದರಿಂದ ಪೂರಕವಾದ ವಹಿವಾಟು ವಲಯಗಳಿಗೆ ಅನುಕೂಲವಾಗುತ್ತದೆ. ಮೆಟ್ರೊ ಸಾರಿಗೆ ಸುಧಾರಣೆಯಾಗುತ್ತದೆ. ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಬಳಸಲು ಸಾರ್ವಜನಿಕರಿಗೆ ಪ್ರೇರಣೆಯಾಗುತ್ತದೆ' ಎಂದು ಅಭಿಪ್ರಾಯಪಟ್ಟರು.

ಟಾಟಾ ಕನ್ಸಲ್ಟನ್ಸಿ ಸರ್ವಿಸಸ್, ಅಪ್ಲೈಡ್ ಮೆಟೀರಿಯಲ್ಸ್, ಲೈಟ್ ಆ್ಯಂಡ್ ವಂಡರ್, ಎಟಿ ಆ್ಯಂಡ್ ಟಿ, ಸೇಬರ್, ಕ್ಯಾಪಿಟಲ್ ಒನ್, ಮ್ಯೂ ಸಿಗ್ಮಾ, ಕಂಡೂಯೆಟ್ ಇಂಡಿಯಾ, ಎಸ್‌ಜಿ ಲಾಟರಿ ಇಂಡಿಯಾ, ಎಚ್‌ಸಿಎಲ್ ಸೇರಿದಂತೆ ಐಟಿಪಿಬಿಯಲ್ಲಿ ಕಾರ್ಯ- ನಿರ್ವಹಿಸುತ್ತಿರುವ ವಿವಿಧ ಕಂಪನಿಗಳ ಪ್ರತಿನಿಧಿಗಳು ಉಪಸ್ಥಿತರಿದ್ದರು.

ಇಂಟರ್‌ನ್ಯಾಷನಲ್ ಟೆಕ್ ಪಾರ್ಕ್ (ಐಟಿಪಿಬಿ) ಮತ್ತು ಪಾರ್ಕ್ ಸ್ಕ್ವೇರ್ ಮಾಲ್‌ಗೆ ಸಂಪರ್ಕ ಕಲ್ಪಿಸುವ ಪಾದಚಾರಿ ಮೇಲ್ಸೇತುವೆ

370 ಅಡಿ ಉದ್ದದ ಮೇಲ್ಸೇತುವೆ

ಐಟಿಪಿಬಿ ಮೆಟ್ರೊ ಸ್ಕೈವಾಕ್ 370 ಅಡಿಗಳಷ್ಟು ಉದ್ದವಾಗಿದ್ದು, ರಸ್ತೆ ಮಟ್ಟದಿಂದ 24 ಅಡಿ ಎತ್ತರದಲ್ಲಿದೆ. ದೀರ್ಘಬಾಳಿಕೆಯ ಸ್ಟ್ರಕ್ಚರಲ್ ಸ್ಟೀಲ್ ಮತ್ತು ಕಾಂಕ್ರೀಟ್ ಬಳಸಿ ಆಧುನಿಕ ಶೈಲಿಯ ಸ್ಪರ್ಶ ನೀಡಲಾಗಿದೆ. ಮೆಟ್ರೊ ಪ್ರಯಾಣಿಕರು ರಸ್ತೆಗೆ ಇಳಿಯದೇ ಮಾಲ್‌ಗೆ ತೆರಳಿ ಆ ಮುಖಾಂತರ ಬಿಸಿನೆಸ್ ಪಾರ್ಕ್‌ನಲ್ಲಿರುವ ಕಂಪನಿಗಳಿಗೆ ತೆರಳಬಹುದು.

ಮುಖ್ಯಾಂಶಗಳು

- ಮೂರು ವರ್ಷಗಳಲ್ಲಿ ಕಾಮಗಾರಿ ಪೂರ್ಣ
- ಖಾಸಗಿ–ಸಾರ್ವಜನಿಕ ಸಹಭಾಗಿತ್ವದಲ್ಲಿ ನಿರ್ಮಾಣ
- ಸಂಚಾರ ದಟ್ಟಣೆಯ ಕಿರಿಕಿರಿಗೆ ಮುಕ್ತಿ

ಜಿಬಿಎ ವ್ಯಾಪ್ತಿಯ ಐದು ಪಾಲಿಕೆಗಳ ಚುನಾವಣೆ

ಜೆಡಿಎಸ್–ಬಿಜೆಪಿ ಮೈತ್ರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭೆ ಚುನಾವಣೆಯನ್ನು ಬಿಜೆಪಿ ಜತೆಗೂಡಿ ಎದುರಿಸಿದ್ದ ಜೆಡಿಎಸ್, ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ವ್ಯಾಪ್ತಿಯ ಪಾಲಿಕೆಗಳ ಚುನಾವಣೆಯಲ್ಲೂ ಮೈತ್ರಿಗೆ ಮುಂದಾಗಿದೆ.

'ಚುನಾವಣೆಯನ್ನು ಬಿಜೆಪಿ ಜತೆಗೆ ಮೈತ್ರಿಯೊಂದಿಗೇ ಎದುರಿಸೋಣ. ಮೈತ್ರಿಗೆ ಧಕ್ಕೆಯಾಗುವ ರೀತಿಯಲ್ಲಿ ಯಾರೂ ನಡೆದುಕೊಳ್ಳಬಾರದು' ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ, ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ ಅವರು ತಮ್ಮ ಪಕ್ಷದ ನಾಯಕರು ಮತ್ತು ಕಾರ್ಯಕರ್ತರಿಗೆ ಸೂಚಿಸಿದ್ದಾರೆ.

ಬೃಹತ್ ಮುಂಬೈ ನಗರ ಪಾಲಿಕೆಗೆ (ಬಿಎಂಸಿ) ನಡೆದ ಚುನಾವಣೆಯಲ್ಲಿ ಬಿಜೆಪಿ ಮತ್ತು ಶಿವಸೇನಾ ಮೈತ್ರಿಕೂಟವು ಸರಳ ಬಹುಮತ ಪಡೆದ ಬೆನ್ನಲ್ಲೇ, ಶುಕ್ರವಾರ ಸಂಜೆ ಜೆಡಿಎಸ್ ನಾಯಕರ ಸಭೆ ನಡೆಯಿತು. ಜಿಬಿಎ ವ್ಯಾಪ್ತಿಯ ಪಾಲಿಕೆಗಳ ಚುನಾವಣಾ ಸಿದ್ಧತಾ ಸಭೆಯಲ್ಲಿ ಬಿಜೆಪಿ ಮೈತ್ರಿಯೊಂದಿಗೆ ಕಣಕ್ಕೆ ಇಳಿಯಲು ನಿರ್ಧರಿಸಲಾಯಿತು ಎಂದು ಪಕ್ಷದ ಪ್ರಕಟಣೆ ತಿಳಿಸಿದೆ.

ಬಿಜೆಪಿ ಜತೆಗಿನ ಮೈತ್ರಿ ಜತೆಗೇ ಚುನಾವಣೆ ಎದುರಿಸಿದರೆ ಪಕ್ಷಕ್ಕೆ ಅನುಕೂಲವಾಗಲಿದೆ ಎಂಬ ಅಭಿಪ್ರಾಯ ಸಭೆಯಲ್ಲಿ ವ್ಯಕ್ತವಾಯಿತು. ಕುಮಾರಸ್ವಾಮಿ ಅವರೂ ಈ ಅಭಿಪ್ರಾಯವನ್ನು ಬೆಂಬಲಿಸಿದರು ಎಂದು ಮಾಹಿತಿ ನೀಡಿದೆ.

'ಬಿಎಂಸಿ ಚುನಾವಣೆಯನ್ನು ಬಿಜೆಪಿ ಮತ್ತು ಶಿವಸೇನಾ ಎದುರಿಸಿದ ರೀತಿಯು ನಮಗೆ ಮಾದರಿಯಾಗಬೇಕು. ಮೈತ್ರಿ ವಿಚಾರದಲ್ಲಿ ಸಮಸ್ಯೆ, ಗೊಂದಲಗಳು ಇದ್ದರೆ ಅದನ್ನು ಮೊದಲು ನನ್ನ ಗಮನಕ್ಕೆ ತನ್ನಿ. ಅವನ್ನು ಬಗೆಹರಿಸುತ್ತೇನೆ ಎಂದು ಕುಮಾರಸ್ವಾಮಿ ಅವರು ಕಾರ್ಯಕರ್ತರಿಗೆ ತಾಕೀತು ಮಾಡಿದರು' ಎಂದು ತಿಳಿಸಿದೆ.

'ಬೆಂಗಳೂರಿನಲ್ಲಿ ಮೂಲಸೌಕರ್ಯ ಸಮಸ್ಯೆ ವಿಪರೀತ ಎನಿಸುವಷ್ಟಾಗಿದೆ. ರಾಜ್ಯ ಸರ್ಕಾರದ ಆಡಳಿತದಿಂದ ಜನ ರೋಸಿ ಹೋಗಿದ್ದಾರೆ. ಇದೆಲ್ಲವನ್ನೂ ಜನರಿಗೆ ತಲುಪಿಸುವ ಕೆಲಸವನ್ನು ಜೆಡಿಎಸ್ ಮತ್ತು ಬಿಜೆಪಿ ಕಾರ್ಯಕರ್ತರು ಒಟ್ಟಾಗಿ ಮಾಡಬೇಕು ಎಂದು ಕರೆ ನೀಡಿದರು' ಎಂದು ಪ್ರಕಟಣೆ ವಿವರಿಸಿದೆ.

ಪಕ್ಷದ ವರಿಷ್ಠ ಎಚ್‌.ಡಿ.ದೇವೇಗೌಡ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸುರೇಶ್ ಬಾಬು, ಬೆಂಗಳೂರು ನಗರದ ಎಲ್ಲ ವಿಧಾನಸಭೆ ಕ್ಷೇತ್ರಗಳ ಮುಖಂಡರು ಸಭೆಯಲ್ಲಿ ಭಾಗಿಯಾಗಿದ್ದರು.

ಮುಖ್ಯಾಂಶಗಳು

- ಬಿಎಂಸಿ ಮಾದರಿಯಲ್ಲಿ ಕಣಕ್ಕಿಳಿಯಲು ಜೆಡಿಎಸ್ ನಿರ್ಧಾರ
- ಮೈತ್ರಿಗೆ ಧಕ್ಕೆಯಾಗದಂತೆ ನಡೆದುಕೊಳ್ಳಲು ಕುಮಾರಸ್ವಾಮಿ ಸೂಚನೆ
- ಮೈತ್ರಿ ಬಗ್ಗೆ ಹಾದಿ–ಬೀದಿಯಲ್ಲಿ ಮಾತು ಬೇಡ: ತಾಕೀತು

'ಕನ್ನಡ ವಾತಾವರಣ ನಿರ್ಮಾಣ ನಮ್ಮದೇ ಹೊಣೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡ ನಮ್ಮ ನಾಡು ಮತ್ತು ತಾಯಿ ನುಡಿಯಾಗಿದ್ದು, ಬೆಂಗಳೂರಿನಲ್ಲಿ ಕನ್ನಡದ ವಾತಾವರಣ ನಿರ್ಮಾಣದ ಹೊಣೆಯು ಕನ್ನಡಿಗರದ್ದೇ ಆಗಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ವಿಧಾನಸೌಧದ ಮೆಟ್ಟಿಲುಗಳ ಮೇಲೆ ಶುಕ್ರವಾರ ಸಂಜೆ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಅವರು 'ಬೆಂಗಳೂರು ಹಬ್ಬ–2026'ಕ್ಕೆ ಚಾಲನೆ ನೀಡಿ ಮಾತನಾಡಿ ದರು. 'ಬೆಂಗಳೂರು ಹಬ್ಬದ ಭಾಗವಾಗಿ, ನಮ್ಮ ನಾಡು ಮತ್ತು ನುಡಿಯನ್ನು ಪ್ರತಿನಿಧಿಸುವ 350ಕ್ಕೂ ಹೆಚ್ಚು ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ' ಎಂದರು.

5B

ವಿಧಾನಸೌಧದ ಮೆಟ್ಟಿಲುಗಳ ಮೇಲೆ ಡೊಳ್ಳು ಬಾರಿಸುವ ಮೂಲಕ ಸಿದ್ದರಾಮಯ್ಯ ಅವರು ಬೆಂಗಳೂರು ಹಬ್ಬಕ್ಕೆ ಚಾಲನೆ ನೀಡಿದರು. ಪುರುಷೋತ್ತಮ ಬಿಳಿಮಲೆ, ಶಾಲಿನಿ ರಜನೀಶ್, ಆನ್‌ಬಾಕ್ಸಿಂಗ್ ಬಿಎಲ್‌ಆರ್ ಫೌಂಡೇಷನ್‌ನ ಪ್ರಶಾಂತ್ ಪ್ರಕಾಶ್ ಮತ್ತು ವಿ.ರವಿಚಂದರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿ ಜೆ. ಮಂಜುನಾಥ್, ವಿಧಾನ ಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿ, ನಟ ಶಿವರಾಜ್‌ಕುಮಾರ್, ಗೋವಿಂದರಾಜು ಮತ್ತು ನಟಿ ಜಯಮಾಲಾ ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ

ಯಲಹಂಕ, ಹೆಬ್ಬಾಳದಲ್ಲಿ ತಲಾ 125 ಹಾಸಿಗೆಗಳ ಆಸ್ಪತ್ರೆ

ನಗರದಲ್ಲಿ ಎರಡು ಆಸ್ಪತ್ರೆ ನಿರ್ಮಾಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಲಹಂಕದ ಬೆಳ್ಳಹಳ್ಳಿ ಮತ್ತು ಹೆಬ್ಬಾಳದಲ್ಲಿ ತಲಾ 125 ಹಾಸಿಗೆಗಳ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಗಳ ನಿರ್ಮಾಣಕ್ಕೆ ಆರೋಗ್ಯ ಇಲಾಖೆ ಅನುಮೋದನೆ ನೀಡಿದೆ.

ಬೆಂಗಳೂರು ಉತ್ತರ ತಾಲ್ಲೂಕಿನ ವ್ಯಾಪ್ತಿಯಲ್ಲಿ ₹150 ಕೋಟಿ ವೆಚ್ಚದಲ್ಲಿ 200 ಹಾಸಿಗೆಗಳ ಅತ್ಯಾಧುನಿಕ ಆಸ್ಪತ್ರೆ ನಿರ್ಮಾಣ ಮಾಡುವುದಾಗಿ ರಾಜ್ಯ ಸರ್ಕಾರ 2025–26ನೇ ಸಾಲಿನ ಬಜೆಟ್‌ನಲ್ಲಿ ಘೋಷಿಸಿತ್ತು. ಈ ಆಸ್ಪತ್ರೆಯ ಬದಲು, ಇದೇ ಅನುದಾನದಲ್ಲಿ ಎರಡು ಆಸ್ಪತ್ರೆಗಳನ್ನು ನಿರ್ಮಾಣ ಮಾಡಲಾಗುತ್ತಿದೆ. ತಲಾ ₹75 ಕೋಟಿ ಹಂಚಿಕೆ ಮಾಡಲಾಗಿದೆ.

ಬೆಳ್ಳಹಳ್ಳಿಯಲ್ಲಿ 5 ಎಕರೆ ಜಮೀನು ಗುರುತಿಸಲಾಗಿದೆ. ಹೆಬ್ಬಾಳದಲ್ಲಿ ಪಶುಸಂಗೋಪನೆ ಮತ್ತು ಕೃಷಿ ಇಲಾಖೆ ಆವರಣದಲ್ಲಿ 4 ಎಕರೆ ಜಮೀನು ಗುರುತಿಸಲಾಗಿದ್ದು, ಇಲ್ಲಿ ಆಸ್ಪತ್ರೆ ನಿರ್ಮಿಸಲಾಗುತ್ತದೆ. ಪ್ರಸಕ್ತ ಸಾಲಿನಲ್ಲಿ ₹20 ಕೋಟಿ ಅನುದಾನದಲ್ಲಿ ಈ ಕಾಮಗಾರಿ ಕೈಗೊಳ್ಳುವಂತೆ ತಿಳಿಸಲಾಗಿದೆ.

5B

'2 ವರ್ಷದಲ್ಲಿ ಲೋಕಾರ್ಪಣೆ'

'ಹೆಬ್ಬಾಳ ವಿಧಾನಸಭೆ ಕ್ಷೇತ್ರದಲ್ಲಿ ಸರ್ಕಾರಿ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಕಾಮಗಾರಿ ಸದ್ಯದಲ್ಲೇ ಆರಂಭವಾಗಲಿದ್ದು, ಎರಡು ವರ್ಷದೊಳಗೆ ನಾಗರಿಕರ ಸೇವೆಗೆ ಲಭ್ಯವಾಗಲಿದೆ' ಎಂದು ಹೆಬ್ಬಾಳ ಶಾಸಕರೂ ಆಗಿರುವ ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಹೇಳಿದರು.

ಗೋಪಾಲ ರಾಮ ನಾರಾಯಣ ಸರ್ಕಾರಿ ಶಾಲೆಯಲ್ಲಿ ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೆಬ್ಬಾಳ ಕ್ಷೇತ್ರದ ಜನರ ಅನುಕೂಲಕ್ಕೆ ಒಂದು ಸುಸಜ್ಜಿತ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣಕ್ಕೆ ಅನುದಾನ ಮಂಜೂರು ಮಾಡಿದ್ದಾರೆ. ಸದ್ಯದಲ್ಲಿಯೇ ಈ ಆಸ್ಪತ್ರೆಯ ನಿರ್ಮಾಣ ಕಾಮಗಾರಿ ಆರಂಭವಾಗಲಿದೆ' ಎಂದರು.



ಹವಾಮಾನ ಮುನ್ಸೂಚನೆ: ನಗರದಲ್ಲಿ ಮಂಜು ಮುಸುಕಿದ ವಾತಾವರಣ ಇರಲಿದೆ

ಹೆಚ್ಚುವರಿ ಅಂತಸ್ತು ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪುಲಕೇಶಿನಗರ ಉಪ ವಿಭಾಗದ ವ್ಯಾಪ್ತಿಯ ಫ್ರೇಜರ್ ಟೌನ್ ಕೆಂಚಪ್ಪ ಅಡ್ಡರಸ್ತೆಯಲ್ಲಿ ಅನಧಿಕೃತವಾಗಿ ನಿರ್ಮಿಸಿದ್ದ ಮಹಡಿಗಳ ತೆರವು ಕಾರ್ಯಾಚರಣೆಯನ್ನು ಬೆಂಗಳೂರು ಉತ್ತರ ನಗರ ಪಾಲಿಕೆ ಅಧಿಕಾರಿಗಳು ಆರಂಭಿಸಿದ್ದಾರೆ.

ನೆಲ ಮತ್ತು ಎರಡು ಮಹಡಿಗಳನ್ನು ನಕ್ಷೆಗೆ ವ್ಯತಿರಿಕ್ತವಾಗಿ ನಿರ್ಮಿಸಲಾಗಿತ್ತು. ಯಾವುದೇ ಪರವಾನಗಿ ಪಡೆಯದೇ ಹೆಚ್ಚುವರಿ ಎರಡು ಮಹಡಿ ನಿರ್ಮಿಸಲಾಗಿತ್ತು. ಪ್ಯಾರಫಿಟ್ ಗೋಡೆ ಮತ್ತು ಹೆಚ್ಚುವರಿ ಮಹಡಿಗಳನ್ನು ಸಿಬ್ಬಂದಿ ತೆರವುಗೊಳಿಸುತ್ತಿದ್ದಾರೆ.

ನಿರ್ಮಾಣ ಕಾರ್ಯವನ್ನು ಅರ್ಧದಲ್ಲಿ ನಿಲ್ಲಿಸುವಂತೆ, ಅನಧಿಕೃತ ಅಂತಸ್ತುಗಳನ್ನು ತೆರವುಗೊಳಿಸುವಂತೆ ಸ್ವತ್ತು ಸಂಖ್ಯೆ 18/3ರ ಕಟ್ಟಡದ ಮಾಲೀಕರಿಗೆ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಹಲವು ಬಾರಿ ನೋಟಿಸ್ ನೀಡಿದ್ದರು. ಆದರೂ ಕಟ್ಟಡ ನಿರ್ಮಾಣ ಕಾರ್ಯ ಮುಂದುವರಿಸಿದ್ದರು.

ಬೆಂಗಳೂರು ಉತ್ತರ ನಗರ ಪಾಲಿಕೆಯ ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ನಿರ್ದೇಶನದಂತೆ ಪುಲಕೇಶಿನಗರ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ತಿಪ್ಪೇಸ್ವಾಮಿ, ಸಹಾಯಕ ಕಾರ್ಯಪಾಲಕ ಎಂಜಿನಿಯರ್ ರವಿ ವಡ್ಡರ್, ಪೊಲೀಸ್ ಸಿಬ್ಬಂದಿ ಉಪಸ್ಥಿತಿಯಲ್ಲಿ ಕಾರ್ಯಾಚರಣೆ ನಡೆಯುತ್ತಿದೆ ಎಂದು ಜಿಬಿಎ ಅಧಿಕಾರಿಗಳು ತಿಳಿಸಿದ್ದಾರೆ.

ಕೆಂಚಪ್ಪ ಅಡ್ಡರಸ್ತೆಯಲ್ಲಿ ಅನಧಿಕೃತವಾಗಿ ನಿರ್ಮಿಸಿದ್ದ ಮಹಡಿಗಳನ್ನು ಪಾಲಿಕೆ ಸಿಬ್ಬಂದಿ ತೆರವು ಮಾಡಿದರು

ಮಲೆನಾಡಿಗರ ವಾರ್ಷಿಕ ಕ್ರೀಡಾಕೂಟ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರಿನಲ್ಲಿರುವ ಮಲೆನಾಡಿಗರ ವಾರ್ಷಿಕ ಕ್ರೀಡಾಕೂಟವನ್ನು ಜ.18ರಂದು ಸುಂಕದಕಟ್ಟೆ ಶ್ರೀಗಂಧಕಾವಲ್ ಒಕ್ಕಲಿಗರ ಸಂಘ ಪ್ರೌಢಶಾಲೆ ಆವರಣದಲ್ಲಿ ಸಹ್ಯಾದ್ರಿ ಸಂಘ ಆಯೋಜಿಸಿದೆ.

ಇದು 22ನೇ ವಾರ್ಷಿಕ ಕ್ರೀಡಾಕೂಟವಾಗಿದ್ದು, ಐದು ವರ್ಷದೊಳಗಿನ, 6ರಿಂದ 10 ವರ್ಷದೊಳಗಿನ, 11ರಿಂದ 15 ವರ್ಷದೊಳಗಿನ ಮಕ್ಕಳಿಗೆ, 16ರಿಂದ 25 ವರ್ಷದೊಳಗಿನ, 26ರಿಂದ 35 ವರ್ಷದೊಳಗಿನ ವಯಸ್ಕರಿಗೆ ವಿವಿಧ ಸ್ಪರ್ಧೆಗಳಿವೆ. ಕಬಡ್ಡಿ, ವಾಲಿಬಾಲ್, ಥ್ರೋಬಾಲ್ ಸ್ಪರ್ಧೆಗಳು ನಡೆಯಲಿವೆ. ನೃತ್ಯ, ಅದೃಷ್ಟ ದಂಪತಿ ಮೊದಲಾದ ವಿಶೇಷ ಆಕರ್ಷಣೆಯ ಸ್ಪರ್ಧೆಗಳೂ ಇರಲಿವೆ.

ಸಂಜೆ 6ಕ್ಕೆ ಕ್ರೀಡಾಕೂಟದ ಸಮಾರೋಪ ಸಮಾರಂಭ ನಡೆಯಲಿದೆ. ಉಪ ಮುಖ್ಯಮಂತ್ರಿಯವರ ವಿಶೇಷಾಧಿಕಾರಿ ಬಿ.ಎಸ್. ಶ್ರೀಧರ್, ಚಿತ್ರನಟಿ ಅಮೂಲ್ಯ, ರಾಮನಗರದ ಹೆಚ್ಚುವರಿ ಎಸ್‌ಪಿ ರಾಜೇಂದ್ರ ತೂದೂರು, ಒಕ್ಕಲಿಗರ ಸಂಘದ ಶಿವಮೊಗ್ಗ ಜಿಲ್ಲೆಯ ಕಾಮಗಾರಿ ಸಮಿತಿ ಅಧ್ಯಕ್ಷ ಧರ್ಮೇಶ್ ಸಿರಿಬೈಲ್, ಉದ್ಯಮಿ ಜಗದೀಶ್. ಆರ್.ಚಂದ್ರ ಭಾಗವಹಿಸಲಿದ್ದಾರೆ.

ಸಹ್ಯಾದ್ರಿ ಸಂಘದ ಅಧ್ಯಕ್ಷ ಬಿ.ಎ. ಪುರುಷೋತ್ತಮ ಗೌಡ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಸಂಘದ ಕಾರ್ಯದರ್ಶಿ ಎಚ್.ಸಿ. ಜಯಪ್ರಕಾಶ್ ತಿಳಿಸಿದ್ದಾರೆ.

650 ಹಾಸಿಗೆ ಆಸ್ಪತ್ರೆ ನಿರ್ಮಿಸಿ: ಸಂಸದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಮನಗರದ ಪ್ರಸ್ತಾವಿತ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ವೈದ್ಯಕೀಯ ಕಾಲೇಜು ಆವರಣದಲ್ಲಿ 650 ಹಾಸಿಗೆಗಳ ಆಸ್ಪತ್ರೆ ನಿರ್ಮಾಣ ಮಾಡಬೇಕು ಎಂದು ಬೆಂಗಳೂರು ಗ್ರಾಮಾಂತರ ಸಂಸದ ಡಾ.ಸಿ.ಎನ್. ಮಂಜುನಾಥ್ ಒತ್ತಾಯಿಸಿದ್ದಾರೆ.

ಈ ಸಂಬಂಧ ಅವರು ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣ ಪ್ರಕಾಶ್ ಪಾಟೀಲ ಅವರಿಗೆ ಪತ್ರ ಬರೆದಿದ್ದಾರೆ.

ಸುಮಾರು ₹600 ಕೋಟಿ ವೆಚ್ಚದಲ್ಲಿ ವೈದ್ಯಕೀಯ ಕಾಲೇಜು ಕಟ್ಟಡಗಳ ನಿರ್ಮಾಣ ನಡೆಯುತ್ತಿದೆ. ಆದರೆ, ಆಸ್ಪತ್ರೆ ನಿರ್ಮಾಣ ಸೇರಿಸಿಲ್ಲ. ಇದರಿಂದ ಯೋಜನೆ ಪರಿಪೂರ್ಣ ಎನಿಸುವುದಿಲ್ಲ. ಯಾವುದೇ ವೈದ್ಯಕೀಯ ಕಾಲೇಜಿಗೆ ಶೈಕ್ಷಣಿಕ, ಸಾರ್ವಜನಿಕ ಆರೋಗ್ಯ ಹಾಗೂ ರಾಷ್ಟ್ರೀಯ ವೈದ್ಯಕೀಯ ಆಯೋಗದ ಮಾನ್ಯತೆ ದೃಷ್ಟಿಯಿಂದ 650 ಹಾಸಿಗೆಗಳ ಸಾಮರ್ಥ್ಯದ ಸಂಪೂರ್ಣ ಕಾರ್ಯನಿರ್ವಹಣೆಯ ಆಸ್ಪತ್ರೆ ಬೇಕು ಎಂದಿದ್ದಾರೆ.

ಉಡುಗೊರೆ

ರಸ್ತೆಯಲ್ಲಿ ಬಿದ್ದಿದ್ದ ಚಿನ್ನಾಭರಣವನ್ನು ಪೊಲೀಸ್ ಇಲಾಖೆಗೆ ಹಸ್ತಾಂತರಿಸಿ, ಪ್ರಾಮಾಣಿಕತೆ ಮೆರೆದ ಚೆನ್ನೈ ಮಹಾನಗರ ಪಾಲಿಕೆಯಲ್ಲಿ ಪೌರ ಕಾರ್ಮಿಕರಾಗಿ ಕೆಲಸ ಮಾಡುತ್ತಿರುವ ಪದ್ಮಾ ಅವರನ್ನು ಲಲಿತಾ ಜ್ಯುವೆಲ್ಲರಿ ಅಧ್ಯಕ್ಷ ಎಂ.ಕಿರಣ್ ಕುಮಾರ್ ಚೆನ್ನೈನಲ್ಲಿರುವ ತಮ್ಮ ಮನೆಗೆ ಆಹ್ವಾನಿಸಿ ಸನ್ಮಾನಿಸಿದರು. ಈ ವೇಳೆ ಪದ್ಮಾ ಅವರಿಗೆ ಮೆಚ್ಚುಗೆಯ ಸಂಕೇತವಾಗಿ ಬೆಳ್ಳಿ ತಟ್ಟೆಯನ್ನು ಉಡುಗೊರೆಯಾಗಿ ನೀಡಿದ್ದಾರೆ

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Sites

Banashankari

"BANASHANKARI 6TH STAGE 4th Block`50x80 North`West corner and`50x80 North`facing 7th-Block and`30x40 West`facing 2nd-Block and`40x60 3rd-Block East`facing near`BDA Complex. Call: 9845146725/ 9741466369"

BANASHANKARI 6TH Stage 10th Block 40X60 West Facing Price. 2.34 CR. Genuine Buyers: 9148914809/ 9993959099

BDA HALF site for sale IV H Block FE of BSK VI stage 6mx9mEF 9449081178

FOREST VIEW BANASHANKARI 6th, 2nd Block 30x40 East Facing with Borewell. Brokers Excuse. 98458-59217/ 9845609477.

J P Nagar

"J.P.NAGAR, SRINIDHI_LAYOUT 30x51 Residential Site, East Facing, BBMP A Katha, Full White. Direct Owner: 9845249799/ 9845088449"

Kempegowda Layout

KEMPEGOWDA LAYOUT, Commercial/ Residential BDA Site for Sale 20x30, 30x40, 40x60, 50x80 Contact Kumar 9945119449

NADAPRABHU KEMPEGOWDA LAYOUT BDA SITES SELLING/ BUYING 20x30, 30x40, 40x60, 50x80. Genuine Buyers Call: 9632146784, 9731162167.

Magadi Road

"BEL 2ND_STAGE Magadi_Main Road 1425_Sqft x 2 Sites South West Corner 60`ft Road. 9845500019/ 7019314962"

Out-Station

PENUKONDA NEAR KIA Car-Factory, Madakasira Highway 50X100 (4-Nos) Sites for Sale, Residencial Converted, Gated Community, 499/-PSft. Contact: 8310681025

Peenya

"SITE FOR SALE 2260 Sqft East Facing in Peenya 2nd Stage, DC.Conversion, BBMP 'A`KHATHA Rs.7000/- Per Sqft. Contact: 9353057779"

Vijayanagar

SITE FOR SALE 60x90 RPC LAYOUT VIJAYANAGAR
SALE: 60X90 West Facing
Only Genuine Buyers Contact:
6363250343
9845038343

Vishweshwariah Layout

"VISHVESWARAIAH LAYOUT 6th Block 40x60 South facing Site Sale, Good Location Genuine Buyers Contact: 9845500019/ 7019314962"

BDA SITE SALE VISHWESHWARAIAH LAYOUT 2ND BLOCK 40X60 NORTH FACE, NEAR 100FT ROAD, GOOD LOCATION CONTACT: 8892901567

DIRECT OWNER 30x40 BDA Site Sale VISHWESHWARAIAH LAYOUT 40ft Road, Full Developed Area, ₹11000/-. 9742681666

20X30 BDA SITE For Sale East Facing Allottee Site Vishveshwaraiah Layout 6th Block. Contact: 9901057383

BDA SITE SALE 40x60 EAST FACING 5TH BLOCK SMV LAYOUT RATE 3.20CR NEGOTIABLE CONTACT: 9108133156

'DIRECT OWNER' 20x30 N/F Vishveswaraiah Layout 2nd Block, Near Kommagatta, Fully Developed Area: 8496030007/ 8310885235

Mangaluru

AFFORDABLE PREMIUM Residential Plots now Available in Surathkal, Mangaluru. Fast-developing neighbourhood with excellent connectivity. Flexible Pricing. Limited Availability. Call: 9035297760

AFFORDABLE RESIDENTIAL Plots for Sale in Surathkal, Mangaluru. Well-Connected prime location. Fast-developing area. Attractive pricing. Few plots left. Call: 9845607725 now

DH Classifieds
DECCAN HERALD
More value, more impact
ಪ್ರಜಾವಾಣಿ
REAL ESTATE
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY
@ 2481/-* FOR 15 WORDS
www.dhclassifieds.com
BOOK NOW
*Conditions apply
Book your ad with us now! For more details contact:
+91 9845114560 | +91 9886213331
+91 9731810277 | +91 9900428036 | 080-45557163/164

PROPERTY CORNER ಕ್ಲಾಸಿಫೈಡ್ಸ್

COMMERCIAL BUILDING AVAILABLE FOR RENT
at 80 Feet Road, Padmanabhanagar, Banashankari 3rd Stage, Bangalore-85
East and South Corner Building Basement, Ground, First, Second and Third Floor, RCC Total Builtup area 14,000 Sqft. (Each Floor 2750 Sqft.) and 4th Floor 2000 Sqft. ACP Roof Space for Workers and other use.
FACILITIES: Borewell Water, BWSSB Water, Sanitary, Lift, Generator and Parking Area in Basement.
SUITABLE For: Institutions, School, Software Office, Two Wheeler Showroom, Car Showroom and any other Commercial Purpose.
Call: 9341227474, 9731219967

WANTED COMMERCIAL BUILDING FOR RENT
1. MINIMUM BUILT UP AREA IS 15K SQFT
2. STANDALONE BUILDING
3. BESCOM & BWSSB IS MUST
4. ONLY ON MAIN ROAD OF BBMP LIMITS ONLY
5. LIFT IS MUST
CONTACT: +91 7483233755

BASAVANAGUDI
Prime Property for Sale No. 13/18, 4th Main, N.R. Colony, Basavanagudi, Site Size 44'x60' Clean Title 'A' & 'E' Khata
G.N. PROPERTIES
98450 44179

Hebbal

HEBBAL 30X35 House Sale, Ground 1 BHK, Two Carparking, 1st 2 BHK, 2nd 2 BHK 9845623970/ 9739400838

Nagarabhavi

"FOR SALE: BDA Auction 1000 sqft South/West Corner SITE Nagarbhavi 2nd-Stage. CONTACT FOR PRICE. 9900004060"

House

Bannerghatta Road

BANNERGHATTA ROAD, Kodichikkana Halli Near Vijay Bank Layout, 20x34 East, 30' Road, Unfinished Building, 1,20,00,000/- 9980761200.

Flat

Banashankari

KATRIGUPPE GANAPATHI HANUMANTHA RESIDENCY 3 BHK FLATS FOR SALE Rs. 8999/ SFT Contact: 94482-58218/ 96065-03064

Nagarabhavi

FLATS FOR-SALE @ Nagarabhavi Chandra Layout 2 & 3BHK Ready to Move In Good Location Call:9538472420 9845066608

Uttarahalli

4BHK NEW FLATS SALE Ready to`Move, A Khatha, E-swathu, Carparking, Lift, Vaasthu, Maruthi Layout. Rs.1.10.Cr. 9945224058, 6363181276.

Commerical

General

TENANTED PROPERTY for sale in Prestige towers Residency Road, 1948 sqft. Rentals 2 Lakhs /month, Sale Rs. 4.25 Crore (Negotiable) Citilines: 9741417120

REQUIRED PROPERTY FOR PURCHASE
SURABHI SOUHARDA CREDIT CO-OPERATIVE SOCIETY LIMITED
Looking for commercial building about 800 to 1500 Sq.ft in Basaveshwara Nagar Main Road
Contact with Property details 96069 75769, 96060 32385, 98450 69444

Agricultural Land Converted

Out-Station

HOLALKERE, CHITRADURGA, Sale or Investment 12 Acres Converted Land with Layout Plan Sanction. Good Location: 9342822252/ 9916922211

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE BUYING

Sites

Multiple Locations

WANTED BDA Sites Anjanapura-Arkavathi, Banashankari 6th stage, Vishweswaraiah, Kempegowda, Dr. Shivaramkaranth Layout. Contact: Sapthagiri "(Opposite BDA Head Office)" 9036360366.

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

RENTAL PROPERTIES

Accommodation Available

Commercial

FOR RENT: PRIME COMMERCIAL BUILDING, Mariappa Rd, off CMR Main Rd, Kalyan Nagar. Ideal for Clinic, Diagnostic, Tuition, Corporate Office, Banks. GF-300 sqft, FF- 1250 sqft, SF-1250 sqft, TF-500 sqft. Ample parking (4 cars & 25 two-wheelers). 24/7 power & water. Ph: 9845123866, 9880016254. Location: Google Maps -13.021880, 77.638321

OFFICE/ SHOP/ ATM Space of 130 sqft. Available in Jayanagar 4th 'T' Block, Contact: 9740785589

Accommodation Wanted

Commercial

WAREHOUSE REQUIRED ON LEASE Approximate 2 – 3 lakh sqft + 40% parking space, max 30- 35 kms from Majestic, Bangalore must have Fire Hydrants, Sprinklers, Fire NOC, Rental advance 3 months only. Brokers excuse. 8086151234, 7510400801.

OTHERS

Auction Sale

UNDER INSTRUCTION from National Institute of Animal Nutrition & Physiology Adugodi, Bangalore-560030, auction will be held on 20-01-2026 at 11.30 AM, for Harvesting of Coconuts from 146 Trees and Sheep and Goats 51 Nos. auction in NIANP Campus by Royal Auctioneers.

JOB OPPORTUNITIES

Teachers/ Professors

JOB OPENING
SAMVAAD INSTITUTE OF SPEECH AND HEARING HEBBAL, BANGALORE
POST
LECTURER IN AUDIOLOGY
ELIGIBILITY: Candidate should have completed M.Sc Audiology from a reputed institution and have worked as a Clinical Supervisor for at least 1 year
LECTURER IN SPEECH LANGUAGE PATHOLOGY
ELIGIBILITY: Candidate should have completed M.Sc Speech Language Pathology from a reputed institution and have worked as a Clinical Supervisor for at least 1 year.
Attractive salary offered Post reserved for SC/ST candidates as per govt rules. Interested candidates may apply with biodata to:
Director
Samvaad Institute of Speech and Hearing #18th, 1st Cross 5th Main, Anandgiri Extension, Hebbal, Bangalore -560024
Ph: 9663388623/9480295004
Email: samvaadinstitute@yahoo.co.in

ST.PHILOMENA'S English`School, Doddabommasandra, Bengaluru-97. State`&.ICSE Board Hiring Teachers for`all the classes for all the`subjects including Art-craft PE-Female. Qualification: BA,B.Sc,MA, M.Sc`B.Ed. Walk-in`OR`send Resume`WhatsApp 9741275231, Email:administrator @st-philomena.org Contact: 40903810

Marketing & Sales

WANTED SALES Managers (Male & Female), Sales Executives and Telecallers. Contact 8867627879

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

PUBLIC NOTICE

ಸಾರ್ವಜನಿಕ ಸೂಚನೆ

ನನ್ನ ಕಕ್ಷಿದಾರರು ಬೆಂಗಳೂರು ಉತ್ತರ ತಾಲ್ಲೂಕು, ದಾಸನಪುರ ಹೋಬಳಿ, ಗವಿಪಾಳ್ಯ, ಶ್ರೀ ತಪಸ್ಸಿ ಮುನಿಆಂಜನೇಯ ಸ್ವಾಮಿ ಟ್ರಸ್ಟ್ ಸಮಿತಿಗೆ ಸೇರಲು ಬಯಸುತ್ತಿರುವ ಟ್ರಸ್ಟಿಗಳು, ನನ್ನ ಕಕ್ಷಿದಾರರು, ಸಾರ್ವಜನಿಕರ ಗಮನಕ್ಕೆ ತರಲಾಗಿದೆ.
ಈ ಟ್ರಸ್ಟ್‌ನಲ್ಲಿ ಸಾರ್ವಜನಿಕರ ಯಾವುದೇ ಹಕ್ಕು, ಆಸಕ್ತಿ ಅಥವಾ ಯಾವುದೇ ಹಕ್ಕು ಹೊಂದಿದ್ದರೆ, ಈ ಸೂಚನೆಯ ದಿನಾಂಕದಿಂದ 15 ದಿನಗಳ ಒಳಗೆ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸಬಹುದು, ವಿಫಲವಾದರೆ ನನ್ನ ಕಕ್ಷಿದಾರರು ಮತ್ತು ಟ್ರಸ್ಟಿಗಳು ನಂತರ ಟ್ರಸ್ಟ್ ಸೇರುವ ಕುರಿತು ಹೆಚ್ಚಿನ ವಿವರಗಳೊಂದಿಗೆ ಮುಂದುವರಿಯುತ್ತಾರೆ.

ಸಹಿ/– **ಶಿವರುದ್ರ**, ಅಡ್ವೊಕೇಟ್
77/1, 2ನೇ ಮಹಡಿ ಕೃಷ್ಣ ಕೃಪಾ
2ನೇ ಮುಖ್ಯ ರಸ್ತೆ, ಶೇಷಾದ್ರಿಪುರಂ,
ಬೆಂಗಳೂರು–560020.
ಸಂಪರ್ಕಿಸಿ: 9448477666

BUSINESS

Business Offers

Finance

MSME LOAN Available For Any Start-UpsCompanies And Existing Running Companies,Hotels,Shops Establishments Etc Contact-7204995189

JOB
To Place your Classified Ads Contact:
9886213331

PERSONAL

Change of Name

CHANGE OF NAME
I, **Pradnya Deshapande** and **Pradnya Nagaraj Kulkarni,** Residing at No. 410, 4th Floor, Wing A, Baldota Signature Apartment, Rachenahalli, Dr. Shivarama Karanth Nagar, Bangalore-560077, declare that the above names pertain to me only & henceforth I shall be known as **PRADNYA NAGARAJ KULKARNI,** vide affidavit dated 14-01-2026 before notary C.N. Chandrashekar, Bangalore.

I SHAIK ZAKIR HUSSAIN, have changed my daughter's name from SHAIK BEEBI MARIAM to SHAIK SANA MARIAM, Vide affidavit dated 03-01-2026 , Sworn before notary M Rajendra, Bangalore.

WEEKEND CORNER

‘ಅಭಿವೃದ್ಧಿ ಕಡೆ ಗಮನಹರಿಸಿ’

ಬೆಂಗಳೂರು ವರದಿಗಾರರ ಕೂಟ ಹೊರತಂದಿರುವ ದಿನಚರಿ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಿನ ಬೆಳಗಾದರೆ ನಾಯಕತ್ವ ಬದಲಾವಣೆಯ ಬಗ್ಗೆ ಚರ್ಚಿಸುವುದನ್ನು ಬಿಟ್ಟು ನಾಡಿನ ಅಭಿವೃದ್ಧಿಯ ಕಡೆ ಗಮನ ಹರಿಸುವುದು ಎಲ್ಲರ ಕರ್ತವ್ಯ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ಬೆಂಗಳೂರು ವರದಿಗಾರರ ಕೂಟ ಹೊರತಂದಿರುವ ದಿನಚರಿಯನ್ನು ಶುಕ್ರವಾರ ಬಿಡುಗಡೆ ಮಾಡಿ ಮಾತನಾಡಿದ ಅವರು, ‘ಹಲವು ತಿಂಗಳಿನಿಂದ ರಾಜ್ಯದಲ್ಲಿ ಬರೀ ನಾಯಕತ್ವದ ಕುರಿತು ಚರ್ಚೆ ನಡೆಯುತ್ತಿದೆ. ನಾಯಕತ್ವದ ವಿಚಾರವನ್ನು ಪಕ್ಷದ ಹೈಕಮಾಂಡ್ ನೋಡಿಕೊಳ್ಳುತ್ತದೆ. ಹೀಗಾಗಿ ನಾಯಕತ್ವದ ಬದಲಾವಣೆ ಎಂಬುದು ಸಾರ್ವಜನಿಕ ಚರ್ಚೆಯ ವಿಷಯವಾಗಬಾರದು’ ಎಂದು ಅಭಿಪ್ರಾಯಪಟ್ಟರು.

ವ್ಯವಸ್ಥೆಯಲ್ಲಿ ಈಗ ಯಾವುದೂ ಹಿಂದಿನ ಹಾಗೆ ಇಲ್ಲ. ಹಲವು ಬದಲಾವಣೆಗಳಾಗಿವೆ. ಅದು ರಾಜಕೀಯ ರಂಗ ಅಂತಲ್ಲ, ಮಾಧ್ಯಮ ಸೇರಿದಂತೆ ಸಮಾಜದ ಎಲ್ಲ ರಂಗಗಳಲ್ಲೂ ಬದಲಾವಣೆಯಾಗಿದೆ ಎಂದರು.

ಪತ್ರಕರ್ತರಾದ ಹುಣಸವಾಡಿ ರಾಜನ್, ಎಂ.ಸಿದ್ಧರಾಜು, ಅ.ಮ.ಸುರೇಶ್, ಬಿ.ಪಿ.ಮಲ್ಲಪ್ಪ, ಮೈ.ಸಿ.ಪಾಟೀಲ್, ಬೆಲಗೂರು ಸಮೀವುಲ್ಲಾ, ಶಾಂತಲಾ ಧರ್ಮರಾಜ್ ಮಾತನಾಡಿದರು.

ಮಾಜಿ ಸಚಿವ ಕೆ.ಗೋಪಾಲಯ್ಯ, ಉದ್ಯಮಿ ಸ್ಟಾರ್ ಚಂದ್ರು, ಡಿ.ಎಸ್. ಮ್ಯಾಕ್ಸ್ ಸಂಸ್ಥೆಯ ಮುಖ್ಯಸ್ಥ ದಯಾನಂದ್, ಕೂಟದ ಅಧ್ಯಕ್ಷ ಆರ್.ಟಿ. ವಿಠ್ಠಲಮೂರ್ತಿ, ಪ್ರಧಾನ ಕಾರ್ಯದರ್ಶಿ ಎಚ್.ವಿ.ಕಿರಣ್, ಸದಾಶಿವ ಶೆಣೈ ಹಾಜರಿದ್ದರು. ಕೂಟದ ಸಂಸ್ಥಾಪಕ ಸದಸ್ಯ ಪ್ರಹ್ಲಾದ್ ಕುಳಲಿ, ಎಂ.ಸಿದ್ದರಾಜು ಮತ್ತು ಅ.ಮ.ಸುರೇಶ್ ಅವರನ್ನು ಸನ್ಮಾನಿಸಲಾಯಿತು.

ಬೆಂಗಳೂರು ವರದಿಗಾರರ ಕೂಟದ ಸಂಸ್ಥಾಪಕ ಸದಸ್ಯ ಪ್ರಹ್ಲಾದ್ ಕುಳಲಿ ಅವರನ್ನು ಸನ್ಮಾನಿಸಲಾಯಿತು

ಟಿಎಪಿಎಂಐನಲ್ಲಿ ನಡೆದ ಸಂಸ್ಥಾಪಕರ ದಿನಾಚರಣೆಯಲ್ಲಿ ಲೋಟಸ್ ಪೆಟಲ್ ಫೌಂಡೇಶನ್ ಸ್ಥಾಪಕ ಕುಶಾಲ್ ರಾಜ್ ಚಕ್ರವರ್ತಿಅವರನ್ನು ಮಾಹೆ ಬೆಂಗಳೂರಿನ ಹೆಚ್ಚುವರಿ ಕುಲಸಚಿವರಾದ ರಾಘವೇಂದ್ರ ಪ್ರಭು.ಪಿ ಹಾಗೂ ಡೀನ್ ಪ್ರೊ.ನವನೀತ ಕೃಷ್ಣನ್ ಸನ್ಮಾನಿಸಿದರು

ಸಿಎಸ್ಇ ಕೇಂದ್ರ ಉದ್ಘಾಟನೆ

ಯಲಹಂಕ: ಮಣಿಪಾಲ್ ಅಕಾಡೆಮಿ ಆಫ್ ಹೈಯರ್ ಎಜುಕೇಶನ್ (ಮಾಹೆ) ವಿಶ್ವವಿದ್ಯಾಲಯದ ಅಂಗ ಸಂಸ್ಥೆಯಾದ ಟಿ.ಎ.ಪೈ ಮ್ಯಾನೇಜ್‌ಮೆಂಟ್ ಇನ್‌ಸ್ಟಿಟ್ಯೂಟ್ (ಟಿಎಪಿಎಂಐ) ಕ್ಯಾಂಪಸ್‌ನಲ್ಲಿ ಸಂಸ್ಥಾಪಕರ ದಿನಾಚರಣೆ ಹಾಗೂ ಪದ್ಮಭೂಷಣ ತೋನ್ಸೆ ಅನಂತ ಪೈ ಅವರ 104ನೇ ಜನ್ಮದಿನ ಆಚರಿಸಲಾಯಿತು.

ಇದೇ ವೇಳೆ ಸಿಎಸ್ಇ ಕೇಂದ್ರ ಉದ್ಘಾಟಿಸಿ ಮಾತನಾಡಿದ ಮಾಹೆ ಬೆಂಗಳೂರು ಕ್ಯಾಂಪಸ್‌ನ ಹೆಚ್ಚುವರಿ ಕುಲಸಚಿವ ರಾಘವೇಂದ್ರ ಪ್ರಭು, ‘ಸಂಸ್ಥಾಪಕರಾದ ಟಿ.ಎ. ಪೈ ಅವರ 104ನೇ ಜನ್ಮದಿನದ ಮುನ್ನಾದಿನ 'ಸಾಮಾಜಿಕ ಸಬಲೀಕರಣ ಕೇಂದ್ರದ (ಸಿಎಸ್ಇ) ಉದ್ಘಾಟನೆ ಆಗಿದ್ದು, ಈ ಕೇಂದ್ರವು ಜ್ಞಾನ ಮತ್ತು ಕ್ರಿಯೆಯ ನಡುವೆ ಸೇತುವೆಯಾಗಲಿದೆ’ ಎಂದರು.

ಲೋಟಸ್ ಪೆಟಲ್ ಫೌಂಡೇಶನ್‌ನ ಸಂಸ್ಥಾಪಕ ಕುಶಾಲ್ ರಾಜ್ ಚಕ್ರವರ್ತಿ ಮಾತನಾಡಿದರು.

ಟಿಎಪಿಎಂಐ ಬೆಂಗಳೂರು ಡೀನ್ ಪ್ರೊ.ನವನೀತ ಕೃಷ್ಣನ್ ಮಾತನಾಡಿ, ‘ಸಾಮಾಜಿಕ ಸಬಲೀಕರಣ ಕೇಂದ್ರವು ಬಹುಶಿಸ್ತೀಯ ವೇದಿಕೆಯಾಗಿದೆ ಎಂದರು. ಜಾಗತಿಕ ಮಾನವ ಸಂಪನ್ಮೂಲ ವಿಭಾಗದ ಮುಖ್ಯಸ್ಥ ವಿ.ಪ್ರೇಮ್ ಕುಮಾರ್, ಎಚ್.ಆರ್ ಬಿಸಿನೆಸ್ ಪಾಲುದಾರ ಸಂಸ್ಥೆಯ ನಿರ್ದೇಶಕ ಸ್ವಾಮಿನಾಥನ್ ಚಂದ್ರಶೇಖರ್ ಹಾಜರಿದ್ದರು.

DH DECCAN HERALD ಪ್ರಜಾವಾಣಿ

ನಮ್ಮ ಕಂಪನಿಯ ಕೆಳಕಂಡ ವಾಹನಗಳು
“ಎಲ್ಲಿ ಹೇಗಿವೆಯೋ ಹಾಗಿನ ಸ್ಥಿತಿಯಲ್ಲಿ” ಮಾರಾಟಕ್ಕಿವೆ.

Honda MOBILIO 1.5 S MT (I-DTEC)-Diesel 7 Seater Car, Model : Jan-2015

ಮೇಲ್ಕಂಡ ವಾಹನವನ್ನು ನಂ. 75, ಎಂ.ಜಿ.ರಸ್ತೆ, ಬೆಂಗಳೂರು–1, ಇಲ್ಲಿ ಕೆಲಸದ ಯಾವುದೇ ದಿನದಂದು ಬೆಳಿಗ್ಗೆ 10.00 ರಿಂದ ಸಂಜೆ 4.00 ಗಂಟೆವರೆಗೆ ಪರಿಶೀಲಿಸಬಹುದು. ಮೊಹರಾದ ಲಕೋಟೆಯಲ್ಲಿ ಆಫರುಗಳ ಜೊತೆಗೆ ರೂ. 5,000/–ಗಳನ್ನು ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್ ಇವರ ಹೆಸರಿನಲ್ಲಿ ಪಡೆದ ಡಿ.ಡಿ. ರೂಪದಲ್ಲಿ ಸಲ್ಲಿಸಬೇಕು. ದಿನಾಂಕ: 30–01–2026 ರಂದು ಅಥವಾ ಇದಕ್ಕಿಂತ ಮುಂಚಿತವಾಗಿ ಕೆಳಗೆ ತಿಳಿಸುವವರಿಗೆ ಸಲ್ಲಿಸತಕ್ಕದ್ದು.

ಯಾವುದೇ ಕಾರಣ ನೀಡದೇ ಆಫರ್‌ನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಂಪನಿ ಕಾಯ್ದಿರಿಸಿಕೊಂಡಿದೆ.

ಸಂಪರ್ಕಿಸಿ ಬೇಕಾದ ವ್ಯಕ್ತಿ: ದಿನೇಶ್ ಕುಮಾರ್.ಡಿ. – ಮೊಬೈಲ್: +91 7411127118

ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್
ನಂ. 75, ಎಂ.ಜಿ.ರಸ್ತೆ, ಬೆಂಗಳೂರು–560001. ಫೋ: +91 8045557342

UNIVERSITY BUSINESS SCHOOL
PANJAB UNIVERSITY, CHANDIGARH
ADMISSION NOTICE (2026-2027)

Applications are invited for Admission to Two Year Full Time Management Programmes MBA, MBA (IB), MBA (HR), MBA (EP) and MBA (Business Data Analytics) for Academic Session 2026-27

Candidates are required to visit the website https://ubsadmissions.puchd.ac.in for detailed instructions. The said website would remain open for online registration through online payment from 26.11.2025 to 28.01.2026. Hard copy of the application form along with necessary documents should reach the undersigned latest by 04:00 p.m. on 10.02.2026. Application received after due date shall not be entertained

Note: Our Institution uses the CAT scores for short-listing/selecting the candidates for our Post-graduate Programme(s) in Management/ MBA. IIMs have no role either in the selection process or in the conduct of the programme.

Professor Parmjit Kaur, Chairperson

Be it fresh goals or new possibilities, every new chapter deserves the right start. Begin 2026 with a Kia that comes with exclusive benefits, and drive into an inspired year with your perfect companion. Visit your nearest dealership today.

Model	Seltos	Sonet	Syros	Carens	Carens Clavis	Carens Clavis EV
Range starts at	₹ 10 79 276	₹ 7 30 138	₹ 8 67 053	₹ 10 47 454	₹ 11 17 835	₹ 17 99 000
Total benefits	₹ 2 14 000	₹ 1 23 000	₹ 1 93 000	₹ 1 08 000	₹ 1 70 000	₹ 1 74 000

*Benefits available on other Kia cars as per applicability.

For more information, visit our dealership or contact:
1800 108 5000 | 093195 91407 | www.kia.com | Book Kia | kiacare@kiaindia.net | Look for "Kia India" @

*Terms & condition apply. Ex-showroom price mentioned is for the base variant (Pan India). Benefits shown are the combination of exchange, loyalty, corporate, scrappage and special benefits, which are applicable on limited stock of 2025, may vary from model to model and region to region. The product shown is for representation purposes only. Actual features, colors, and specifications may not be part or standard fitment and may vary. Kia India Pvt. Ltd. reserves the right to make any changes with respect to the trims, colors, specifications, and other details of any model as mentioned or to modify/ discontinue any offer/ scheme/ service without prior notice. Kia urges you to follow traffic rules, these are meant to keep you safe on the roads. Visit your nearest Kia dealership for more details.

Bangalore: **PPS Kia:** Mysore Road, Tel: 6309990010; **JSP Kia:** Bellandur, Tel: 9513918131; Hosur Road, Tel: 9986644472; Sarjapur, Tel: 8095553636; **VST Kia:** Palace Cross, Tel: 9606988123, Yeshwanthpur, Tel: 9606988124 **Naara Kia:** JP Nagar, Tel: 7406528200, Kanakpura Road, Tel: 907010099; **Epitome Kia:** Whitefield, Tel: 9606970216, Yelahanka, Tel: 7406343339, Varthur, Tel: 9844240044, Avalahalli, Tel: 7022317666; **Taapasi Kia:** Kalyan Nagar, Tel: 8095537777; Koramangala, Tel: 9071177333; **Advaith Kia:** Lalbagh, Tel: 9611006006, Magadi Road, Tel: 6364871023, Banashankari, Tel: 6364871022, Basaweshwar Nagar, Tel: 6364871024; Tumkur: **PPS Kia:** Tel: 6303622210; Kolar: **Epitome Kia:** Tel: 8951903224

BREAKING NEWS

THE REAL FACTORY FASHION SALE

DIRECT COMAPNY ANNUAL SALE- PARTY WEAR, SUMMER & WOOLEN GARMENTS

ಕಂಪನಿಯು ಪ್ರತಿ ವರ್ಷ ಜನವರಿ ತಿಂಗಳಲ್ಲಿ ಸ್ಟಾಕ್ ಕ್ಲಿಯರ್ಸ್ ಸೇಲ್ ಆಯೋಜಿಸುತ್ತದೆ ಮತ್ತು
90% ಡಿಸ್ಕೌಂಟ್ ಎಂಬಂತಹ ಯಾವುದೇ ಫೇಕ್ ಜಾಹೀರಾತು ಮತ್ತು ಸುಳ್ಳು ಹೇಳಿಕೆಗಳನ್ನು ನಾವು ನೀಡುವುದಿಲ್ಲ.

100% ಒರಿಜಿನಲ್ ಬ್ರಾಂಡ್‌ಗಳ ವಿಂಟರ್ ಗಾರ್ಮೆಂಟ್ಸ್, ಶೂಸ್ ಮತ್ತು ಹ್ಯಾಂಡ್‌ಲೂಮ್ ಉತ್ಪನ್ನಗಳ ನೇರವಾಗಿ ಫ್ಯಾಕ್ಟರಿಯಿಂದ ಮಾರಾಟ

ಸೇಲ್ @ ಫ್ಲ್ಯಾಟ್ 75% ಡಿಸ್ಕೌಂಟ್

D'Cot Quality Wear Clothing | RARE RABBIT | aurelia | Raymond | PARK AVENUE | W | parx | ColorPlus

ವಿಂಟರ್ & ಸಮ್ಮರ್ ಗಾರ್ಮೆಂಟ್ಸ್:– ಸ್ವೆಟ್ ಷರ್ಟ್ಸ್–ಜಾಕೆಟ್–ಹುಡ್ಡೀ–ಸ್ವೆಟರ್–ಟಾಪ್–ಲೋವರ್–ಲಾಂಗ್ ಕುರ್ತಿ; ಯಾವುದೇ ಖರೀದಿಸಿ @ ರೂ.100/–, 200/–, 300/–
ಎಂಆರ್‌ಪಿ 4000 ರಿಂದ 5000 ವರೆಗಿನ ಪ್ರಿಮಿಯಂ ವಿಂಟರ್ ಗಾರ್ಮೆಂಟ್ಸ್; ಯಾವುದೇ ಖರೀದಿಸಿ @ ರೂ. 400/– & 1100/–

ಲೇಡೀಸ್ ಗಾರ್ಮೆಂಟ್ಸ್:– ಲೇಡೀಸ್ ಟಾಪ್, ಲೋವರ್, ಹಾಫ್ ಪ್ಯಾಂಟ್, ಸಲ್ವಾರ್ ಕಮೀಜ್, ಕುರ್ತಿ & ಇತರೆ ಮಿಕ್ಸ್ ಗಾರ್ಮೆಂಟ್ಸ್ ಯಾವುದೇ ಖರೀದಿಸಿ @ ರೂ. 100/– & 200/–

ಜೆಂಟ್ಸ್ ಗಾರ್ಮೆಂಟ್ಸ್:– ಜೆಂಟ್ಸ್ ಟಿ–ಷರ್ಟ್ಸ್, ಕುರ್ತಾ, ನಿಕರ್, ಬರ್ಮುಡಾ, ಮೋದಿ ಕಿಟ್ & ಇನ್ನಿತರ ಮಿಕ್ಸ್ ಗಾರ್ಮೆಂಟ್ಸ್ ಯಾವುದೇ ಖರೀದಿಸಿ @ ರೂ. 200/– & 400/–

ಕಾರಣ:– ಕಂಪನಿಯ ಸಂಪೂರ್ಣ ವರ್ಷದ ದಾಸ್ತಾನನ್ನು ಉಗ್ರಾಣಗಳಿಂದ ಮತ್ತು ಶೋರೂಮ್‌ಗಳಿಂದ ಇಂತಹ ಸೇಲ್‌ಗಳಿಗೆ ಹಾಕುತ್ತದೆ.
ಮಿಕ್ಸ್ ಹ್ಯಾಂಡ್‌ಲೂಮ್ ವೆರೈಟಿ ಮತ್ತು ಲೇಡೀಸ್ ಚಪ್ಪಲ್ ಖರೀದಿಸಿ @ ಕೇವಲ ರೂ. 50/–
ಎಂಆರ್‌ಪಿ 2000 ರಿಂದ 5000 ವರೆಗಿನ ಲೇಡೀಸ್ ಮತ್ತು ಜೆಂಟ್ಸ್ ಸ್ಪೋರ್ಟ್ಸ್ ಶೂಸ್ ಖರೀದಿಸಿ @ ಕೇವಲ ರೂ.600/–

17 & 18ನೇ ಜನವರಿ, 26 ಶನಿ–ಭಾನು

ನೆನಪಿರಲಿ, ಈ ಸೇಲ್ 2 ದಿನ ಮಾತ್ರ
ಸಮಯ: ಬೆಳಗ್ಗೆ 10 ರಿಂದ ರಾತಿ 10

ಶುಭ್ ಕನ್ವೆನ್ಷನ್

ಜೆಪಿನಗರ 7ನೇ ಹಂತ, ಬ್ರಿಗೇಡ್ ಮಿಲ್ಲೇನಿಯಂ ಸಮೀಪ, ಕೊತ್ತನೂರ ಮುಖ್ಯರಸ್ತೆ, 6ನೇ ಮೇನ್ ಪುಟ್ಟೇನಹಳ್ಳಿ, ಬೆಂಗಳೂರು, ಕರ್ನಾಟಕ 78

ಉಚಿತ ಪ್ರವೇಶ – ಉಚಿತ ಪಾರ್ಕಿಂಗ್

ಡಿಜಿಟಲ್ ಪಾವತಿ ಸ್ವೀಕರಿಸಲಾಗುತ್ತದೆ

ಚಿಟಿಕೆ ಸುದ್ದಿ

ಭೀಮಣ್ಣ ಖಂಡ್ರೆ ಆರೋಗ್ಯದಲ್ಲಿ ಏರುಪೇರು

ಭಾಲ್ಕಿ (ಬೀದರ್ ಜಿಲ್ಲೆ): ಎರಡು ದಿನಗಳಿಂದ ಚೇತರಿಕೆ ಕಂಡಿದ್ದ ಮಾಜಿ ಸಚಿವ ಭೀಮಣ್ಣ ಖಂಡ್ರೆ ಅವರ ಆರೋಗ್ಯದಲ್ಲಿ ಶುಕ್ರವಾರ ಮತ್ತೆ ಏರುಪೇರಾಗಿದೆ.

ಮಧ್ಯಾಹ್ನ 2 ಗಂಟೆಯಿಂದ ಉಸಿರಾಟದಲ್ಲಿ ತೀವ್ರ ತೊಂದರೆ ಕಂಡು ಬಂದಿದೆ. ವೈದ್ಯರ ತಂಡ ನಿಗಾ ವಹಿಸಿದ್ದು ಚಿಕಿತ್ಸೆ ಮುಂದುವರಿಸಿದೆ.

ಹುಬ್ಬಳ್ಳಿಯ ಮೂರು ಸಾವಿರ ಮಠದ ಗುರುಸಿದ್ಧ ರಾಜಯೋಗೀಂದ್ರ ಸ್ವಾಮೀಜಿ, ಸುಲಫಲದ ಸಾರಂಗಧರ ದೇಶಿಕೇಂದ್ರ ಸ್ವಾಮೀಜಿ, ಬಾಳೆಹೊನ್ನೂರಿನ ರಂಭಾಪುರಿ ಸ್ವಾಮೀಜಿ, ಭಾಲ್ಕಿ ಹಿರೇಮಠದ ಗುರುಬಸವ ಪಟ್ಟದ್ದೇವರು ಭೇಟಿ ನೀಡಿ ಆರೋಗ್ಯ ವಿಚಾರಿಸಿದರು.

ಸೆರೆ ಸಿಕ್ಕ ಹೆಣ್ಣು ಹುಲಿ ಮರಿ

10 ತಿಂಗಳ ಹುಲಿ ಮರಿ ಸೆರೆ

ಚಾಮರಾಜನಗರ: ಬಿಳಿಗಿರಿ ರಂಗನಾಥಸ್ವಾಮಿ ಹುಲಿ ಸಂರಕ್ಷಿತ ಪ್ರದೇಶ ವ್ಯಾಪ್ತಿಯ, ತಾಲ್ಲೂಕಿನ ನಂಜೇದೇವನಪುರ ಗ್ರಾಮದ ಬಳಿ ಗುರುವಾರ ರಾತ್ರಿ 10 ತಿಂಗಳ ಹೆಣ್ಣು ಹುಲಿ ಮರಿಯನ್ನು ಸೆರೆ ಹಿಡಿಯಲಾಗಿದೆ. ಉಳಿದ ಮೂರು ಮರಿಗಳಿಗೆ ಶೋಧ ನಡೆದಿದೆ.

ನಾಲ್ಕು ಸಾಕಾನೆ ಬಳಸಿ ಕಾರ್ಯಾಚರಣೆ ನಡೆಸುವಾಗ ಮರಿ ಸಿಕ್ಕಿದ್ದು ಅರಿವಳಿಕೆ ಚುಚ್ಚುಮದ್ದು ನೀಡಿ ಸೆರೆ ಹಿಡಿಯಲಾಗಿದೆ. 'ಸುರಕ್ಷಿತ ಸ್ಥಳದಲ್ಲಿ ಇರಿಸಲಾಗಿದ್ದು ಆರೋಗ್ಯದ ಮೇಲೆ ನಿಗಾ ಇರಿಸಲಾಗಿದೆ' ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಗ್ರಾಮದ ಸುತ್ತಮುತ್ತ ತಿಂಗಳ ಹಿಂದೆ ತಾಯಿ ಹುಲಿ ಹಾಗೂ ನಾಲ್ಕು ಮರಿಗಳು ಕಾಣಿಸಿ ಗ್ರಾಮಸ್ಥರು ಭೀತಿ ಪಟ್ಟಿದ್ದರು. ಬಳಿಕ ಜ.9ರಂದು ತಾಯಿ ಹುಲಿ ಬೋನಿಗೆ ಬಿದ್ದಿತ್ತು.

ಹೊಲಕ್ಕೆ ಬೆಂಕಿ: ರೈತ ಸಜೀವ ದಹನ



ಮಲ್ಲನಗೌಡ ಬಿರಾದಾರ

ವಿಜಯಪುರ: ಜಿಲ್ಲೆಯ ಸಿಂದಗಿ ತಾಲ್ಲೂಕಿನ ಬನ್ನೆಟ್ಟಿ (ಪಿ.ಎ.) ಗ್ರಾಮದಲ್ಲಿ ಶುಕ್ರವಾರ ಕಬ್ಬಿನ ಹೊಲಕ್ಕೆ ಬಿದ್ದ ಬೆಂಕಿ ನಂದಿಸಲು ಯತ್ನಿಸಿದ ರೈತ ಮಲ್ಲನಗೌಡ ಬಿರಾದಾರ (62) ಅವರು ಸಜೀವವಾಗಿ ದಹನವಾಗಿದ್ದಾರೆ.

'ಹೊಲಕ್ಕೆ ಬೆಂಕಿ ಬಿದ್ದಿದ್ದು ಗೊತ್ತಾದಾಗ ಆರಿಸಲು ಮಲ್ಲನಗೌಡ ಮುಂದಾದರು. ಅವರಿಗೂ ಬೆಂಕಿ ತಗುಲಿ, ದಹನವಾದರು' ಎಂದು ದೇವರಹಿಪ್ಪರಗಿ ಠಾಣೆ ಪೊಲೀಸರು ತಿಳಿಸಿದ್ದಾರೆ.

ವಿ.ವಿ: ಪದವಿ ಪ್ರಾಧ್ಯಾಪಕರ ಬೋಧನೆ

ಗರಿಷ್ಠ 5 ವರ್ಷ ನಿಯೋಜನೆ • ಪ್ರಾಧ್ಯಾಪಕ ಹುದ್ದೆಗೆ ಬಡ್ತಿ ಪಡೆದ ಪರಿಣತರಿಗೆ ಆದ್ಯತೆ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅನುಭವಿ ಪ್ರಾಧ್ಯಾಪಕರನ್ನು ಸೇವಾ ಜ್ಯೇಷ್ಠತೆಯ ಆಧಾರದಲ್ಲಿ ವಿವಿಧ ವಿಶ್ವವಿದ್ಯಾಲಯಗಳ ಸ್ನಾತಕೋತ್ತರ ವಿಭಾಗಗಳಿಗೆ ಗರಿಷ್ಠ ಐದು ವರ್ಷ ನಿಯೋಜನೆ ಮೇಲೆ ಕಳುಹಿಸಲು ರಾಜ್ಯ ಸರ್ಕಾರ ಮುಂದಾಗಿದೆ.

ಉನ್ನತ ಶಿಕ್ಷಣ ಬಲಗೊಳಿಸಲು ಹಲವು ಸುಧಾರಣಾ ಕ್ರಮಗಳನ್ನು ರೂಪಿಸಲಾಗಿದೆ. ಆದರೆ, ವಿಶ್ವವಿದ್ಯಾಲಯಗಳಿಗೆ ಕಾಲಕಾಲಕ್ಕೆ ಅಗತ್ಯವಿರುವ ಬೋಧಕ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳದ ಕಾರಣ ಸ್ನಾತಕೋತ್ತರ ವಿಭಾಗಗಳಲ್ಲಿ ನುರಿತ ಪ್ರಾಧ್ಯಾಪಕರ ಕೊರತೆ ಎದುರಾಗಿದೆ. ಇದರಿಂದ ವಿದ್ಯಾರ್ಥಿಗಳ ಕಲಿಕೆಗೆ ತೊಡಕಾಗಿದೆ. ಇದನ್ನು ನೀಗಿಸಲು ಪದವಿ ಕಾಲೇಜುಗಳ ನುರಿತ ಪ್ರಾಧ್ಯಾಪಕರ ಸೇವೆಯನ್ನು ತಾತ್ಕಾಲಿಕವಾಗಿ ಬಳಸಿಕೊಳ್ಳುವ ಸೂತ್ರ ರೂಪಿಸಿದೆ.

ಸ್ಪರ್ಧಾ ಪರೀಕ್ಷೆಗಳ ಮೂಲಕ ಪದವಿ ಕಾಲೇಜುಗಳಿಗೆ ಸಹಾಯಕ ಪ್ರಾಧ್ಯಾಪಕರಾಗಿ ನೇಮಕಗೊಂಡು ನಿರಂತರ ಸಂಶೋಧನೆ, ಅನುಭವದ ಆಧಾರದಲ್ಲಿ ಪ್ರಾಧ್ಯಾಪಕರ ಹುದ್ದೆಗೆ ಬಡ್ತಿ ಪಡೆದ ಪರಿಣತರಿಗೆ ಆದ್ಯತೆ ನೀಡಿ ಪಟ್ಟಿ ಸಿದ್ಧಪಡಿಸಲಾಗುತ್ತಿದೆ. ಈ ಪಟ್ಟಿ ಆಧಾರದಲ್ಲಿ ಆಯಾ ವಿಶ್ವವಿದ್ಯಾಲಯಗಳು ತಮಗೆ ಅಗತ್ಯವಿರುವ ವಿಷಯಗಳ ಪ್ರಾಧ್ಯಾಪಕರ ಸೇವೆ ಬಳಸಲು ಅವಕಾಶ ಮಾಡಿಕೊಡಲಾಗುತ್ತಿದೆ. ಬೇಡಿಕೆ ಸಲ್ಲಿಸುವ ವಿಶ್ವವಿದ್ಯಾಲಯಗಳಿಗೆ ಕಾಲೇಜು ಶಿಕ್ಷಣ ಇಲಾಖೆ ಶೇ15ರಷ್ಟು ಪ್ರಾಧ್ಯಾಪಕರನ್ನು ನಿಯೋಜನೆ ಮಾಡಲಿದೆ.

ಯುಜಿಸಿ ನಿಯಮದಂತೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅಧ್ಯಾಪಕರಿಗೂ ಬಡ್ತಿ ನೀಡಲಾಗುತ್ತಿದೆ. ವಿ.ವಿಗಳಿಗೆ ನಿಯೋಜಿಸಿದರೆ ಹುದ್ದೆಯ ಘನತೆ ಹೆಚ್ಚುತ್ತದೆ
ಟಿ.ಎಂ.ಮಂಜುನಾಥ್, ಅಧ್ಯಕ್ಷ, ಸರ್ಕಾರಿ ಕಾಲೇಜು ಅಧ್ಯಾಪಕರ ಸಂಘ

ಅಂಕಿ ಅಂಶಗಳು

- 32 ಸರ್ಕಾರಿ ವಿ.ವಿಗಳು
- 2,997 ಖಾಲಿ ಇರುವ ಬೋಧಕರ ಹುದ್ದೆಗಳು
- 3,417 ಸಂಯೋಜಿತ ಕಾಲೇಜುಗಳು
- 440 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು
- 6,295 ಕಾಯಂ ಅಧ್ಯಾಪಕರು
- 3.50 ಲಕ್ಷ ಉನ್ನತ ಶಿಕ್ಷಣ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು

ವಿಶ್ವವಿದ್ಯಾಲಯಗಳ ಕುಲಪತಿ ಸ್ಥಾನ ಹಾಗೂ ಸ್ನಾತಕೋತ್ತರ ವಿಭಾಗಗಳ ಬೋಧಕ ಹುದ್ದೆಗೆ ತಮ್ಮನ್ನು ಪರಿಗಣಿಸುವಂತೆ ಸರ್ಕಾರಿ ಪ್ರಥಮ ದರ್ಜೆ ಪದವಿ ಕಾಲೇಜುಗಳ ಅಧ್ಯಾಪಕ ವೃಂದವು ಸರ್ಕಾರ ಹಾಗೂ ರಾಜ್ಯ ಶಿಕ್ಷಣ ನೀತಿ ಆಯೋಗಕ್ಕೆ ಮನವಿ ಮಾಡಿತ್ತು.

ರಾಜ್ಯದಲ್ಲಿನ ಬಹುತೇಕ ವಿಶ್ವವಿದ್ಯಾಲಯಗಳಲ್ಲಿ 2007ರಿಂದಲೂ ಬೋಧಕ ಸಿಬ್ಬಂದಿ ನೇಮಕಾತಿ ನಡೆದಿಲ್ಲ. ವಿವಿಧ ವಿಭಾಗಗಳಲ್ಲಿ ಶೇ 50ಕ್ಕಿಂತ ಹೆಚ್ಚು ಹುದ್ದೆಗಳು ಖಾಲಿ ಇವೆ. ಅತಿಥಿ ಉಪನ್ಯಾಸಕರು, ಹೊರಗುತ್ತಿಗೆ ನೌಕರರ ಸಂಖ್ಯೆಯಲ್ಲಿ ಭಾರಿ ಏರಿಕೆಯಾಗಿದೆ. ವಿವಿಧ ಕಾಲೇಜುಗಳ ಸಂಯೋಜನೆ. ಪರೀಕ್ಷೆ, ಇತರೆ ಶುಲ್ಕಗಳಿಂದ ಬರುತ್ತಿರುವ ಆದಾಯವು ಪಿಂಚಣಿ, ಅತಿಥಿ ಉಪನ್ಯಾಸಕರು, ಹೊರಗುತ್ತಿಗೆ ನೌಕರರ ವೇತನ-ಭತ್ಯೆ ಭರಿಸುವುದಕ್ಕೆ ಸಾಲುತ್ತಿಲ್ಲ. ಸರ್ಕಾರದ ಅನುದಾನ ನಿರೀಕ್ಷೆಯಂತೆ ಸಿಗದೆ ಶೈಕ್ಷಣಿಕ ಪ್ರಗತಿಯ ಮೇಲೆ ಪ್ರತಿಕೂಲ ಪರಿಣಾಮ ಬೀರಿವೆ. ಶೇ 90ರಷ್ಟು ವಿಶ್ವವಿದ್ಯಾಲಯಗಳು ಆರ್ಥಿಕ ಬಿಕ್ಕಟ್ಟಿಗೆ ಸಿಲುಕಿದ್ದು, ಅವುಗಳಿಗೆ ನೆರವು ನೀಡುವ ಪ್ರಕ್ರಿಯೆಯನ್ನೂ ಉನ್ನತ ಶಿಕ್ಷಣ ಇಲಾಖೆ ಆರಂಭಿಸಿದೆ.

ರಾಯಚೂರು, ಗುಲ್ಬರ್ಗಾ, ಸೇರಿದಂತೆ ವಿವಿಧ ವಿಶ್ವವಿದ್ಯಾಲಯಗಳ ಕುಲಪತಿ ನೇಮಕಕ್ಕೆ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಈಚೆಗೆ ರಚಿಸಲಾಗಿದ್ದ ಶೋಧನಾ ಸಮಿತಿಗಳು ವಿಶ್ವವಿದ್ಯಾಲಯಗಳ ಪ್ರಾಧ್ಯಾಪಕರನ್ನಷ್ಟೇ ಪರಿಗಣಿಸಿ, ರಾಜ್ಯದ ಪ್ರಥಮ ದರ್ಜೆ ಕಾಲೇಜುಗಳ ಪ್ರಾಧ್ಯಾಪಕರ ಅರ್ಜಿಗಳನ್ನು ತಿರಸ್ಕರಿಸಿರುವುದು ವಿವಾದಕ್ಕೆ ನಾಂದಿ ಹಾಡಿತ್ತು.

ನಿವೃತ್ತರು, ಪರಿಣತರ ಸೇವೆ ಬಳಕೆ

ವಿಶ್ವವಿದ್ಯಾಲಯಗಳಲ್ಲಿ ಗುಣಮಟ್ಟದ ಶಿಕ್ಷಣ ಸಿಗುವಂತೆ ಮಾಡಲು ಮತ್ತೊಂದು ಹೆಜ್ಜೆ ಮುಂದಿಟ್ಟಿರುವ ಉನ್ನತ ಶಿಕ್ಷಣ ಇಲಾಖೆ, ವಿವಿಧ ವಿಶ್ವವಿದ್ಯಾಲಯಗಳಲ್ಲಿ ಈಗಾಗಲೇ ಬೋಧಕರಾಗಿ ನಿವೃತ್ತರಾದ ಅನುಭವಿ ಅಧ್ಯಾಪಕರು, ವಿವಿಧ ಕ್ಷೇತ್ರಗಳಲ್ಲಿ ಪರಿಣತಿ ಹೊಂದಿರುವ ತಜ್ಞರನ್ನು ವಿಶೇಷ ಅತಿಥಿ ಉಪನ್ಯಾಸಕರಾಗಿ ಬಳಸಿಕೊಳ್ಳಲು ಸರ್ಕಾರ ನಿರ್ಧರಿಸಿದೆ.

ಪತ್ರಿಕೋದ್ಯಮ, ಇತಿಹಾಸ, ಎಂಜಿನಿಯರಿಂಗ್ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿದ್ದು, ತಮ್ಮ ಕೆಲಸದ ಮೂಲಕ ಸಾಕಷ್ಟು ಅನುಭವ ಇರುವ ಪತ್ರಕರ್ತರು, ಇತಿಹಾಸ ತಜ್ಞರು, ಎಂಜಿನಿಯರ್‌ಗಳಿಂದ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಶಿಕ್ಷಣದ ಅನುಭವ ಸಿಗುತ್ತದೆ. ಅವರಿಗೆ ವಿಶೇಷ ಗೌರವ ಸಂಭಾವನೆ ನಿಗದಿ ಮಾಡಲು ವಿಶ್ವವಿದ್ಯಾಲಯಗಳಿಗೆ ಸೂಚಿಸಿದೆ.

ಸುದ್ದಿ 2 ನಿಮಿಷ

ಬೇರೆಯವರಾಗಿದ್ರೆ ಕಪಾಳಕ್ಕೆ ಬಾರಿಸ್ತಿದ್ರು: ಕೃಷ್ಣ ಬೈರೇಗೌಡ

ಸಕಲೇಶಪುರ (ಹಾಸನ ಜಿಲ್ಲೆ): 'ಎಷ್ಟು ಸುಳ್ಳು ಹೇಳ್ತೀರಾ? ಸ್ವಾಭಿಮಾನ ಅಂದ್ರೆ ಏನು ಅಂತ ಗೊತ್ತಾ?. ಬೇರೆಯವರಾಗಿದ್ದರೆ ಕಪಾಳಕ್ಕೆ ಬಾರಿಸುತ್ತಿದ್ದರು' ಎಂದು ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳ ವಿರುದ್ಧ ಕಂದಾಯ ಸಚಿವ ಕೃಷ್ಣ ಬೈರೇಗೌಡ ಇಲ್ಲಿ ಆಕ್ರೋಶ ವ್ಯಕ್ತಪಡಿಸಿದರು.

ತಾಲ್ಲೂಕಿನ ದೋಣಿಗಾಲ್ ಬಳಿ ಹೆದ್ದಾರಿ ಕಾಮಗಾರಿ ವೀಕ್ಷಿಸಿದ ಅವರು, 'ಬಾಯಿ ಬಿಟ್ರೆ ಸುಳ್ಳು ಹೇಳ್ತೀರಾ. ಇದೇನಾ ನಿಮ್ಮ ಆರ್ಗನೈಜೇಶನ್ ಕಲ್ಚರ್?' ಎಂದು ತರಾಟೆಗೆ ತೆಗೆದುಕೊಂಡರು.

'ಹಾಸನ ಬೈಪಾಸ್ ಕಾಮಗಾರಿಗೆ ಸಮಸ್ಯೆ ಇಲ್ಲ. ಒಂದು ಮರ ತೆರವಿಗೆ ವಿಳಂಬ ಮಾಡುತ್ತಾ, ಕಿ.ಮೀ ಗಟ್ಟಲೆ ರಸ್ತೆ ನಿರ್ಮಿಸದೇ ವಿಳಂಬ ಮಾಡುವುದು ಸರಿಯೇ' ಎಂದು ಪ್ರಶ್ನಿಸಿದರು.



'9 ವರ್ಷಗಳಾದರೂ ಚತುಷ್ಪಥ ಹೆದ್ದಾರಿ ಕಾಮಗಾರಿ ಮುಗಿದಿಲ್ಲ. ನೀವು ಕೇಂದ್ರ ಸರ್ಕಾರಕ್ಕೆ ಇಂತಹ ವರದಿಗಳನ್ನು ನೀಡುತ್ತೀರಾ? ಅದಕ್ಕೇ ಅವರು ಓದಿದ್ದೇ ಓದಿದ್ದು' ಎಂದು ಬೇಸರ ವ್ಯಕ್ತಪಡಿಸಿದರು. ಅಧಿಕಾರಿಗಳ ನಿರ್ಲಕ್ಷ್ಯ ಹಾಗೂ ಸುಳ್ಳು ಮಾಹಿತಿಯನ್ನೂ ಖಂಡಿಸಿದರು.

ವಿದ್ಯಾರ್ಥಿಗಳ ಓದಿಗೆ 2 ತಾಸು ಟಿ.ವಿ, ಮೊಬೈಲ್ ಬಂದ್

ಹಂದಿಗುಂದ (ಬೆಳಗಾವಿ ಜಿಲ್ಲೆ): ರಾಯಬಾಗ ತಾಲ್ಲೂಕಿನ ಕಪ್ಪಲಗುದ್ದಿ ಗ್ರಾಮದ ಎಸ್ಎಸ್ಎಲ್‌ಸಿ, ಪಿಯು ವಿದ್ಯಾರ್ಥಿಗಳ ಓದಿಗೆ ಉತ್ತೇಜನ ನೀಡಲು ನಿತ್ಯ ಸಂಜೆ 7ರಿಂದ ರಾತ್ರಿ 9ರವರೆಗೆ ಟಿ.ವಿ ಮತ್ತು ಮೊಬೈಲ್‌ಫೋನ್ ಬಳಸದಂತೆ ಗ್ರಾಮ ಪಂಚಾಯಿತಿಯಲ್ಲಿ ಠರಾವ್ ಪಾಸ್ ಮಾಡಲಾಗಿದೆ. ನಾಲ್ಕು ದಿನಗಳಿಂದ ಇದನ್ನು ಪಾಲಿಸಲಾಗುತ್ತಿದೆ.

'ಗ್ರಾಮಸ್ಥರ ಸಹಕಾರದಿಂದ ಇದು ಸಾಧ್ಯವಾಗಿದೆ' ಎಂದು ಗ್ರಾಮ ಪಂಚಾಯಿತಿ ಅಧ್ಯಕ್ಷೆ ಪಾರ್ವತಿ ಮಹಾದೇವ ನಾಯಕ ತಿಳಿಸಿದ್ದಾರೆ. ಪಿಡಿಒ ಬಿ.ಎಸ್. ನಾಗನೂರ, ಎಸ್‌ಡಿಎಂಸಿ ಅಧ್ಯಕ್ಷ ಗುರು ಅಂಗಡಿ ಮತ್ತು ಮುಖ್ಯ ಶಿಕ್ಷಕ ಪಿ.ಎಂ. ದಿವಾಕರ ಸಮ್ಮತಿಸಿದ್ದಾರೆ.

'ಕಪ್ಪಲಗುದ್ದಿಯಲ್ಲಿ ಸರ್ಕಾರಿ ಮಾದರಿ ಶಾಲೆ ಮತ್ತು ಉನ್ನತೀಕರಿಸಿದ ಸರ್ಕಾರಿ ಪ್ರೌಢಶಾಲೆ ಇದೆ. ಪಿಯು ಮತ್ತು ಪದವಿ ಶಿಕ್ಷಣಕ್ಕಾಗಿ ವಿದ್ಯಾರ್ಥಿಗಳು ಬೇರೆ ಪಟ್ಟಣಗಳಿಗೆ ಹೋಗುತ್ತಾರೆ. ಮನೆಯಲ್ಲೇ ಓದಲಿ ಎಂಬುದು ಇದರ ಉದ್ದೇಶ' ಎಂದು ಗ್ರಾಮಸ್ಥರು ತಿಳಿಸಿದರು.

'ಬೆಳಗಾವಿ ತಾಲ್ಲೂಕಿನ ಹಲಗಾದಲ್ಲಿ ತಿಂಗಳ ಹಿಂದೆ ಇಂಥ ಯತ್ನ ನಡೆದಿತ್ತು. ಅವರಿಂದ ಕಪ್ಪಲಗುದ್ದಿ ಗ್ರಾಮಸ್ಥರು ಪ್ರೇರಣೆ ಪಡೆದಿದ್ದಾರೆ. ಖುದ್ದು ಪರಿಶೀಲಿಸಿದ್ದೇನೆ. ಇದು ಒಳ್ಳೆಯ ಪ್ರಯತ್ನ' ಎಂದು ಜಿಲ್ಲಾ ಪಂಚಾಯಿತಿ ಸಿಇಒ ರಾಹುಲ್ ಶಿಂಧೆ ಪ್ರತಿಕ್ರಿಯಿಸಿದರು.

ಒಂಟೆ ನಡಿಗೆ...

ಚಿತ್ರ: ತಾಜುದ್ದೀನ್ ಆಜಾದ್

ಒಂಟೆ ಮೇಲೆ ಮೇವು ಹೇರಿಕೊಂಡು ಹೋಗುತ್ತಿದ್ದ ದೃಶ್ಯ ಕಲಬುರಗಿ ನಗರದ ಅಪ್ಪನ ಕೆರೆ ಪಕ್ಕದ ರಸ್ತೆಯ ಮೇಲೆ ಶುಕ್ರವಾರ ಕಂಡುಬಂತು

'ಸಿ.ಎಂ ಹುದ್ದೆ–ಬಹಿರಂಗ ಚರ್ಚೆ ಇಲ್ಲ'

ಪ್ರಜಾವಾಣಿ ವಾರ್ತೆ

ನವದೆಹಲಿ: ಮುಖ್ಯಮಂತ್ರಿ ಸ್ಥಾನದ ವಿಚಾರ ನನ್ನ, ಸಿಎಂ ಹಾಗೂ ಹೈಕಮಾಂಡ್ ನಡುವಣ ವಿಚಾರ. ಇದು ಸಾರ್ವಜನಿಕವಾಗಿ ಚರ್ಚೆ ಮಾಡುವ ವಿಷಯವಲ್ಲ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಶನಿವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ನಮ್ಮ ಪಕ್ಷದ ಯೋಜನೆಗಳನ್ನು ಬಹಿರಂಗಪಡಿಸಲು ಹೇಗೆ ಸಾಧ್ಯ? ಇದನ್ನು ಪಕ್ಷದ ಮಟ್ಟದಲ್ಲಿ ಮಾತ್ರ ಚರ್ಚೆ ಮಾಡಲಾಗುವುದು. ಸಾರ್ವಜನಿಕವಾಗಿ ಅಲ್ಲ. ಏನಾದರೂ ಮಾಹಿತಿ ನೀಡುವುದಿದ್ದರೆ, ನಮ್ಮ ಪಕ್ಷದ ಪ್ರಧಾನ ಕಾರ್ಯದರ್ಶಿಗಳು ಇದ್ದಾರೆ. ಅವರು ನೀಡುತ್ತಾರೆ" ಎಂದರು.

ಉಪ ಮುಖ್ಯಮಂತ್ರಿ ದೆಹಲಿ ಭೇಟಿ ವಿಚಾರ ನನಗೆ ಗೊತ್ತಿಲ್ಲ. ಏತಕ್ಕೆ ಹೋಗಿದ್ದಾರೆ, ಹೈಕಮಾಂಡ್ ಭೇಟಿ ಬಗ್ಗೆಯೂ ಗೊತ್ತಿಲ್ಲ
ಸಿದ್ದರಾಮಯ್ಯ, ಮುಖ್ಯಮಂತ್ರಿ

'ನಾನು ಪಕ್ಷದ ನಾಯಕರನ್ನು ಭೇಟಿ ಮಾಡುವ ಉದ್ದೇಶದಿಂದಲೇ ದೆಹಲಿಗೆ ಬಂದಿದ್ದೇನೆ, ನೋಡೋಣ' ಎಂದರು.

ನೀರಾವರಿ ಯೋಜನೆಗಳಿಗೆ ಸಂಬಂಧಿಸಿದಂತೆ ಕೆಲವು ಪ್ರಮುಖ ಕಾನೂನಾತ್ಮಕ ವಿಚಾರಗಳನ್ನು ಚರ್ಚೆ ಮಾಡಬೇಕಾಗಿದ್ದು, ಹೀಗಾಗಿ ಕಾನೂನು ತಜ್ಞರು ಹಾಗೂ ಕೇಂದ್ರ ಸಚಿವರನ್ನು ಭೇಟಿ ಮಾಡಲಿದ್ದೇನೆ ಎಂದು ತಿಳಿಸಿದರು.

'ಬಿಗ್ ಬಾಸ್'ಗೆ ನೋಟಿಸ್

ಪ್ರಜಾವಾಣಿ ವಾರ್ತೆ

ರಾಮನಗರ: ಅಳಿವಿನಂಚಿನಲ್ಲಿರುವ ರಣಹದ್ದುಗಳ ಬಗ್ಗೆ 'ಬಿಗ್ ಬಾಸ್' ಕನ್ನಡ ರಿಯಾಲಿಟಿ ಷೋನಲ್ಲಿ ನಿರೂಪಕ ಕಿಚ್ಚ ಸುದೀಪ್ ತಪ್ಪು ಮಾಹಿತಿ ನೀಡಿದ್ದ ಸಂಬಂಧ ಸ್ಪಷ್ಟೀಕರಣ ನೀಡುವಂತೆ 'ಕಲರ್ಸ್' ವಾಹಿನಿ ಷೋ ಆಯೋಜಕರಿಗೆ ಅರಣ್ಯ ಇಲಾಖೆ ನೋಟಿಸ್ ನೀಡಿದೆ.

ಷೋನ 'ವಾರದ ಕಥೆ ಕಿಚ್ಚನ ಜೊತೆ' ಸಂಚಿಕೆ ಟಾಸ್ಕ್‌ನಲ್ಲಿ ಸ್ಪರ್ಧಿಯೊಬ್ಬರು ರಣಹದ್ದು ಚಿತ್ರ ತೋರಿಸಿದಾಗ ಸುದೀಪ್, 'ಹೊಂಚು ಹಾಕಿ ಸಂಚು ಮಾಡಿ ಕರೆಕ್ಟ್ ಟೈಮಿಗೆ ಲಬಕ್ ಅಂತ ಹಿಡಿಯುವುದು' ಎಂದಿದ್ದರು. ಕರ್ನಾಟಕ ರಣಹದ್ದು ಸಂರಕ್ಷಣಾ ಟ್ರಸ್ಟ್ ಇದನ್ನು ಆಕ್ಷೇಪಿಸಿತ್ತು.

ರಣಹದ್ದು ಸ್ವಭಾವ ಕುರಿತು ಸುದೀಪ್ ತಪ್ಪು ಮಾಹಿತಿ ನೀಡಿದ್ದಾರೆ. ರಣಹದ್ದುಗಳು ಸತ್ತ ಜೀವಿಗಳ ಕಳೇಬರ ತಿಂದು ಪರಿಸರ ಸ್ವಚ್ಛಗೊಳಿಸಿ, ಸಾಂಕ್ರಾಮಿಕ ರೋಗ ಹರಡದಂತೆ ಪ್ರಮುಖ ಪಾತ್ರ ವಹಿಸುತ್ತವೆ. ತಪ್ಪು ಮಾಹಿತಿಯಿಂದ ರಣಹದ್ದುಗಳ ಸಂರಕ್ಷಣೆಗೆ ಹಿನ್ನಡೆ ಆಗಲಿದೆ.

ಈ ಬಗ್ಗೆ ಸುದೀಪ್ ಸ್ಪಷ್ಟೀಕರಣ ನೀಡಿ ತಪ್ಪುಗ್ರಹಿಕೆ ದೂರ ಮಾಡಲು ಷೋ ಆಯೋಜಕರಿಗೆ ಸೂಚನೆ ನೀಡಬೇಕು ಎಂದು ಟ್ರಸ್ಟ್‌ನ ಪದಾಧಿಕಾರಿಗಳು ಅರಣ್ಯ ಇಲಾಖೆಯ ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ವಲಯ ಅರಣ್ಯ ಸಂರಕ್ಷಣಾಧಿಕಾರಿಗೆ ಜ.12ಕ್ಕೆ ಮನವಿ ಕೊಟ್ಟಿದ್ದರು.

ಇದರ ಬೆನ್ನಲ್ಲೇ, ಉಪ ಅರಣ್ಯ ಸಂರಕ್ಷಣಾಧಿಕಾರಿ ಎಂ.ರಾಮಕೃಷ್ಣಪ್ಪ, ಷೋ ಮುಖ್ಯಸ್ಥರಿಗೆ ನೋಟಿಸ್ ನೀಡಿದ್ದಾರೆ. 'ಪರಿಸರ ಸಮತೋಲನ ಕಾಪಾಡುವ ರಣಹದ್ದುಗಳ ಬಗ್ಗೆ ಮುಂದಿನ ಪೀಳಿಗೆಗೆ ಸರಿಯಾದ ಮಾಹಿತಿ ಒದಗಿಸುವುದು ನಮ್ಮ ಕರ್ತವ್ಯ. ರಣಹದ್ದು ಸ್ವಭಾವ ಕುರಿತು ಮುಂದಿನ ಸಂಚಿಕೆಯಲ್ಲಿ ಸ್ಪಷ್ಟೀಕರಣ ನೀಡಬೇಕು' ಎಂದು ನೋಟಿಸ್‌ನಲ್ಲಿ ತಿಳಿಸಿದ್ದಾರೆ.

ನಿಧಿ ಸಿಕ್ಕ ಸ್ಥಳದ ಸಮೀಪವೇ ಚಾಲನೆ • ಪ್ರಾಚ್ಯ ಅವಶೇಷಗಳು ಸಿಗುವ ನಿರೀಕ್ಷೆ

ಲಕ್ಕುಂಡಿ: ಉತ್ಖನನ ಕಾರ್ಯ ಆರಂಭ

ಪ್ರಜಾವಾಣಿ ವಾರ್ತೆ

ಗದಗ: ಲಕ್ಕುಂಡಿ ಗ್ರಾಮದ ಕೋಟೆ ವೀರಭದ್ರೇಶ್ವರ ದೇವಸ್ಥಾನದ ಆವರಣದಲ್ಲಿ ಶುಕ್ರವಾರ ಉತ್ಖನನ ಕಾರ್ಯ ಆರಂಭವಾಯಿತು. ಕಳೆದ ವರ್ಷ ಜೂನ್‌ನಲ್ಲಿ ಮುಖ್ಯಮಂತ್ರಿಯವರು ಉತ್ಖನನಕ್ಕೆ ಚಾಲನೆ ನೀಡಿದ್ದರು. ಆದರೆ, ಮಳೆಗಾಲ ಕಾರಣಕ್ಕೆ ಮುಂದೂಡಲಾಗಿತ್ತು.

ರಾಜ್ಯ ಪುರಾತತ್ವ ಇಲಾಖೆ, ಜಿಲ್ಲಾಡಳಿತ ಮತ್ತು ಲಕ್ಕುಂಡಿ ಪಾರಂಪರಿಕ ಅಭಿವೃದ್ಧಿ ಪ್ರಾಧಿಕಾರ ಗುರುತಿಸಿರುವ ನಾಲ್ಕು ಪ್ರಮುಖ ಸ್ಥಳಗಳಲ್ಲಿ ನಾಲ್ಕು ತಿಂಗಳು ಉತ್ಖನನ ನಡೆಯಲಿದೆ

'ಕೋಟೆ ವೀರಭದ್ರೇಶ್ವರ ದೇವಸ್ಥಾನದ ಆವರಣದ 10X10 ಸ್ಥಳದಲ್ಲಿ ಉತ್ಖನನ ನಡೆಯಲಿದೆ. ತಗ್ಗು ಪ್ರದೇಶದ ಮಣ್ಣನ್ನು ತೆರವುಗೊಳಿಸಿದ್ದಲ್ಲಿ, ದೇವಸ್ಥಾನದ ತಳಪಾಯ ಗೊತ್ತಾಗಲಿದೆ. ನಂತರದ ಹಂತದಲ್ಲಿ ಸೂಕ್ಷ್ಮ ರೀತಿ ಉತ್ಖನನ ನಡೆಯಲಿದೆ. ದೇವಸ್ಥಾನದ ಕುರುಹು, ಶಿಲ್ಪಕಲಾಕೃತಿಗಳು ಸಿಗುವ ನಿರೀಕ್ಷೆ ಇದೆ' ಎಂದು ಉತ್ಖನನಕ್ಕೆ ಚಾಲನೆ ನೀಡಿದ ಜಿಲ್ಲಾಧಿಕಾರಿ ಸಿ.ಎನ್.ಶ್ರೀಧರ್ ಬಳಿಕ ತಿಳಿಸಿದರು.

'ಲಕ್ಕುಂಡಿಯ ಇತಿಹಾಸವನ್ನು 11ನೇ ಶತಮಾನಕ್ಕೆ ಸೀಮಿತಗೊಳಿಸಲಾಗದು. ಈಚೆಗೆ ರಿತ್ತಿ ಕುಟುಂಬಕ್ಕೆ ನಿಧಿ ಸಿಕ್ಕಿದ್ದು ಕಾಕತಾಳೀಯ. ಭೂಮಿಯಲ್ಲಿ ನಿಧಿಯಿದ್ದರೆ, ಉತ್ಖನನ ವೇಳೆ ಸಿಗಲೆಂದು ಪ್ರಾರ್ಥಿಸುವೆ' ಎಂದು ಹೇಳಿದರು.

ಲಕ್ಕುಂಡಿ ಪಾರಂಪರಿಕ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ಶರಣು ಗೋಗೇರಿ, 'ಭಾರತ ಪುರಾತತ್ವ ಇಲಾಖೆಯು 33X33 ಆಳತೆಯ ಜಾಗದಲ್ಲಿ ಉತ್ಖನನಕ್ಕೆ ಅನುಮತಿ ನೀಡಿದೆ. ನಾಲ್ಕು ಭಾಗವಾಗಿ 10 ರಿಂದ 12 ಅಡಿ ಆಳದಲ್ಲಿ ಉತ್ಖನನ ನಡೆಸಲಾಗುವುದು' ಎಂದು ಹೇಳಿದರು.

ಲಕ್ಕುಂಡಿಯಲ್ಲಿ ಶುಕ್ರವಾರ ಸಲಕರಣೆಗಳಿಗೆ ಪೂಜೆ ಸಲ್ಲಿಸುವ ಮೂಲಕ ಜಿಲ್ಲಾಧಿಕಾರಿ ಸಿ.ಎನ್.ಶ್ರೀಧರ್ ಉತ್ಖನನಕ್ಕೆ ಚಾಲನೆ ನೀಡಿದರು

ಲಕ್ಕುಂಡಿ ಗ್ರಾಮ ಸ್ಥಳಾಂತರ ವಿಷಯ ಉತ್ಖನನದಲ್ಲಿ ಸಿಗುವ ಪ್ರಾಚ್ಯ ಅವಶೇಷಗಳ ಮಹತ್ವವನ್ನು ಆಧರಿಸಿ ನಿರ್ಧಾರವಾಗಲಿದೆ
ಸಿ.ಎನ್.ಶ್ರೀಧರ್ ಜಿಲ್ಲಾಧಿಕಾರಿ

ಉತ್ಖನನದ ಸ್ಥಳ ಪ್ರಜ್ವಲ್ ರಿತ್ತಿಗೆ ನಿಧಿ ಸಿಕ್ಕ ಜಾಗದಿಂದ 200 ಮೀಟರ್, ಟಂಕಸಾಲೆ ಇದ್ದ ಜಾಗದಿಂದ 60 ಮೀಟರ್ ದೂರದಲ್ಲಿದೆ. ಹಾಗಾಗಿ, ಈ ಉತ್ಖನನ ಹೆಚ್ಚು ಮಹತ್ವ ಪಡೆದಿದೆ
ಶರಣು ಗೋಗೇರಿ, ಆಯುಕ್ತ ಲಕ್ಕುಂಡಿ ಪಾರಂಪರಿಕ ಅಭಿವೃದ್ಧಿ ಪ್ರಾಧಿಕಾರ

ಗಾಯಾಳು ಆರೈಕೆಗೆ ಬೇಕು ಮೃತರ ಚರ್ಮ

ಒಂದನೇ ಪುಟದಿಂದ...

ಈವರೆಗೆ 280 ಮೃತರಿಂದ ಚರ್ಮವನ್ನು ದಾನವಾಗಿ ಪಡೆದು, 326 ಮಂದಿಗೆ ಅಗತ್ಯಕ್ಕೆ ಅನುಸಾರ ಚರ್ಮವನ್ನು ಉಚಿತವಾಗಿ ಒದಗಿಸಲಾಗಿದೆ.

ಚಿಕಿತ್ಸಾ ಕೇಂದ್ರ: ವಿಕ್ಟೋರಿಯಾ ಆಸ್ಪತ್ರೆ ಮಹಾಬೋಧಿ ಸುಟ್ಟಗಾಯಗಳ ಚಿಕಿತ್ಸಾ ಕೇಂದ್ರದಲ್ಲಿ 50 ಹಾಸಿಗೆಗಳಿವೆ. ಚರ್ಮಕ್ಕೆ ಗಂಭೀರ ಹಾನಿ ಪ್ರಕರಣಗಳಲ್ಲಿ ಇಲ್ಲಿ ಚಿಕಿತ್ಸೆ ಒದಗಿಸಿ, ಅಗತ್ಯವಿದ್ದಲ್ಲಿ ಸ್ಕಿನ್ ಬ್ಯಾಂಕ್‌ನಿಂದ ಚರ್ಮವನ್ನು. ದಾಖಲಾದ ಗಾಯಾಳುಗಳಿಗೆ ಆದ್ಯತೆ ಮೇರೆಗೆ ಒದಗಿಸಲಾಗುತ್ತದೆ. ರಸ್ತೆ ಅಪಘಾತ ಹಾಗೂ ಬೆಂಕಿ ಅವಘಡಗಳು ಹೆಚ್ಚುತ್ತಿರುವ ಪರಿಣಾಮ, ಚರ್ಮಕ್ಕೆ ತಿಂಗಳಿಗೆ ಸರಾಸರಿ 15 ರಿಂದ 20 ಕಡೆಗಳಿಂದ ಬೇಡಿಕೆ ಬರುತ್ತಿದೆ. 8ರಿಂದ 10 ಮಂದಿಗೆ ಒದಗಿಸಲಷ್ಟೇ ಸಾಧ್ಯವಾಗುತ್ತಿದೆ.

'18ರಿಂದ 70 ವರ್ಷದೊಳಗಿನವರು ಮೃತಪಟ್ಟ 6ರಿಂದ 8 ಗಂಟೆಯೊಳಗೆ ಅವರ ಚರ್ಮವನ್ನು ಪಡೆದು, ಐದು ಹಂತದಲ್ಲಿ ಸಂಸ್ಕರಿಸುತ್ತೇವೆ. ಬೇಡಿಕೆ ಮತ್ತು ಪೂರೈಕೆ ನಡುವೆ ಹೊಂದಾಣಿಕೆಯಾಗುತ್ತಿಲ್ಲ' ಎಂದು ಬಿಎಂಸಿಆರ್‌ಐ ಪ್ಲಾಸ್ಟಿಕ್ ಸರ್ಜರಿ ಮತ್ತು ಸುಟ್ಟಗಾಯಗಳ ವಿಭಾಗ ಹಾಗೂ ಸ್ಕಿನ್ ಬ್ಯಾಂಕ್ ಮುಖ್ಯಸ್ಥ ಡಾ. ಯೋಗೀಶ್ವರಪ್ಪ ಸಿ.ಎನ್. ತಿಳಿಸಿದರು.

5 ವರ್ಷದವರೆಗೂ ಶೇಖರಣೆ

'18 ವರ್ಷ ಮೇಲ್ಪಟ್ಟ ಮೃತರ ಕಾಲು ಹಾಗೂ ತೊಡೆಯ ಭಾಗದ ಚರ್ಮದ ಮೇಲ್ಪದರವನ್ನು ದಾನವಾಗಿ ಪಡೆಯಲಾಗುತ್ತದೆ. ಈ ಪ್ರಕ್ರಿಯೆಗೂ ಮೊದಲು ಕುಟುಂಬದ ಸದಸ್ಯರ ಒಪ್ಪಿಗೆ ಪಡೆಯಲಾಗುತ್ತದೆ. ದಾನಿಯು ಎಚ್‌ಐವಿ, ಎಚ್‌ಸಿವಿ, ಚರ್ಮದ ಕ್ಯಾನ್ಸರ್ ಪೀಡಿತರಲ್ಲ ಎಂಬುದನ್ನು ಖಚಿತಪಡಿಸಿಕೊಂಡು ಪಡೆದ ಚರ್ಮವನ್ನು ಅಗತ್ಯ ಇರುವವರಿಗೆ ನೀಡಲಾಗುತ್ತದೆ. ವೈದ್ಯಕೀಯ ಉಪಕರಣದ ಸಹಾಯದಿಂದ ರಕ್ತಸ್ರಾವ ಆಗದ ರೀತಿಯಲ್ಲಿ ಚರ್ಮದ ಮೇಲ್ಪದರವನ್ನು ಮಾತ್ರ ತೆಗೆದು, ಬ್ಯಾಂಡೇಜ್ ಮಾಡಲಾಗುತ್ತದೆ. ಸಂಸ್ಕರಿಸಿದ ಚರ್ಮವನ್ನು 5 ವರ್ಷದವರೆಗೂ ಶೇಖರಿಸಬಹುದು' ಎಂದು ಚರ್ಮ ಬ್ಯಾಂಕಿನ ತಾಂತ್ರಿಕ ಸಿಬ್ಬಂದಿ ಕೆ.ಆರ್. ಲೋಹಿತಾಶ್ವ ವಿವರಿಸಿದರು.

'ಜನರು ನೇತ್ರದಾನ, ಇತರ ಅಂಗಾಂಗಗಳ ದಾನಕ್ಕೆ ಸಿದ್ಧರಿದ್ದಾರೆ. ಆದರೆ, ಚರ್ಮದಾನ ಮಾಡಿದರೆ ದೇಹ ವಿರೂಪಗೊಳ್ಳುತ್ತದೆ ಎಂಬ ತಪ್ಪು ಕಲ್ಪನೆಯಿಂದ ಹಿಂಜರಿಯುತ್ತಾರೆ. ದಾನಿಗಳಿಂದ ದೇಹದ ಎಲ್ಲ ಚರ್ಮ ಪಡೆಯುವುದಿಲ್ಲ. ತೊಡೆಗಳು ಮತ್ತು ಕಾಲುಗಳಿಂದ (1,000ದಿಂದ 1,500 ಚದರ ಸೆಂ.ಮೀ) ಚರ್ಮದ ಹೊರ ಪದರವನ್ನು ಮಾತ್ರ ಪಡೆಯಲಾಗುತ್ತದೆ' ಎಂದರು.

'ಸಿ.ಎಂ ಅವರಿಂದ ಸದನದ ಪಾವಿತ್ರ್ಯ ಹಾಳು'

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಕೇಂದ್ರದ ವಿರುದ್ಧ ಜನರನ್ನು ಎತ್ತಿ ಕಟ್ಟಲು ರಾಜ್ಯ ಸರ್ಕಾರ ಸದನವನ್ನೇ ಬಳಸಲು ಮುಂದಾಗಿ ಸಿದ್ದರಾಮಯ್ಯ ಶಾಸನಸಭೆ ಪಾವಿತ್ರ್ಯ ಹಾಳುಮಾಡುತ್ತಿದ್ದಾರೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಶುಕ್ರವಾರ ಇಲ್ಲಿ ಟೀಕಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ವಿಬಿ– ಜಿ ರಾಮ್ ಜಿ ಕುರಿತು ಗೊಂದಲಗಳಿದ್ದರೆ ಚರ್ಚಿಸಬೇಕು. ಆದರೆ, ಅದೇ ನೆಪದಲ್ಲಿ ವಿಶೇಷ ಅಧಿವೇಶನ ಕರೆದು ಕೇಂದ್ರ ಸರ್ಕಾರದ ವಿರುದ್ಧ ದ್ವೇಷ ಸಾಧಿಸಲು ಹೊರಟಿರುವುದು ಸರಿಯಲ್ಲ' ಎಂದರು.

ದೀಪಾಲಂಕಾರದಿಂದ ಕಂಗೊಳಿಸುತ್ತಿರುವ ಉಡುಪಿಯ ಶೀರೂರು ಮಠ

ಶೀರೂರು ಪರ್ಯಾಯಕ್ಕೆ ಸಜ್ಜು

ಪ್ರಜಾವಾಣಿ ವಾರ್ತೆ

ಉಡುಪಿ: ಶೀರೂರು ಮಠಾಧೀಶ ವೇದವರ್ಧನ ತೀರ್ಥ ಶ್ರೀಪಾದರ ಪ್ರಥಮ ಪರ್ಯಾಯ ಮಹೋತ್ಸವಕ್ಕೆ ಸಿದ್ಧತೆಗಳು ನಡೆದಿದ್ದು, ಭಕ್ತರ ಸ್ವಾಗತಕ್ಕೆ ಉಡುಪಿ ನಗರ ಸಜ್ಜಾಗಿದೆ.

ನಗರಸಭೆಯ ವತಿಯಿಂದ ₹50 ಲಕ್ಷ ವೆಚ್ಚದಲ್ಲಿ ವಿದ್ಯುತ್ ದೀಪಾಲಂಕಾರ ಮಾಡಿದ್ದು, ರಾತ್ರಿ ವೇಳೆ ನಗರವು ಕಂಗೊಳಿಸುತ್ತಿದೆ.

ಜ.17 ರಂದು ರಾತ್ರಿ 2 ಗಂಟೆಯಿಂದ ಇಲ್ಲಿನ ಜೋಡುಕಟ್ಟೆಯಿಂದ ಶ್ರೀಕೃಷ್ಣ ಮಠದವರೆಗೆ 85ಕ್ಕೂ ಅಧಿಕ ಕಲಾ ತಂಡಗಳು, ಸ್ತಬ್ಧ ಚಿತ್ರಗಳಿರುವ ಪರ್ಯಾಯ ಮೆರವಣಿಗೆ ನಡೆಯಲಿದೆ.

18ರಂದು ಬೆಳಿಗ್ಗೆ 5.55ಕ್ಕೆ ಕೃಷ್ಣಮಠದ ಬಡಗು ಮಾಳಿಗೆಯ ಅರಳು ಗದ್ದುಗೆಯಲ್ಲಿ ಸಾಂಪ್ರದಾಯಿಕ ದರ್ಬಾರ್ ಹಾಗೂ ಅಷ್ಟ ಮಠಾಧೀಶರಿಗೆ ಮಾಲಿಕೆ ಮಂಗಳಾರತಿ ಜರುಗಲಿದೆ.

ಬೆಳಿಗ್ಗೆ 6ಗಂಟೆಗೆ ರಾಜಾಂಗಣದಲ್ಲಿ ಪರ್ಯಾಯ ದರ್ಬಾರ್ ಸಭೆ ನಡೆಯಲಿದೆ. ವಿವಿಧ ಮಠಾಧೀಶರು, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಗೃಹ ಸಚಿವ ಜಿ.ಪರಮೇಶ್ವರ, ಜಿಲ್ಲಾ ಉಸ್ತುವಾರಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ, ಬಿಜೆಪಿ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಪಾಲ್ಗೊಳ್ಳುವರು.

'ಎರಡು ಲಕ್ಷಕ್ಕೂ ಅಧಿಕ ಭಕ್ತರು ಪರ್ಯಾಯ ಮಹೋತ್ಸವದಲ್ಲಿ ಭಾಗಿಯಾಗುವ ನಿರೀಕ್ಷೆ ಇದೆ' ಎಂದು ಸ್ವಾಗತ ಸಮಿತಿ ಅಧ್ಯಕ್ಷ, ಶಾಸಕ ಯಶ್‌ಪಾಲ್ ಸುವರ್ಣ ಹೇಳಿದ್ದಾರೆ.

ಪರ್ಯಾಯ ಮಹೋತ್ಸವವನ್ನು ಯಶಸ್ವಿಯಾಗಿ ಪೂರೈಸಿದ ಪುತ್ತಿಗೆ ಮಠಾಧೀಶ ಸುಗುಣೇಂದ್ರ ತೀರ್ಥ ಸ್ವಾಮೀಜಿ ಹಾಗೂ ಕಿರಿಯ ಶ್ರೀ ಸುಶ್ರೀಂದ್ರ ತೀರ್ಥ ಶ್ರೀಪಾದರನ್ನು ಶೀರೂರು ಪರ್ಯಾಯ ಸ್ವಾಗತ ಸಮಿತಿಯಿಂದ ಜ.17ರಂದು ಸನ್ಮಾನಿಸಲಾಗುವುದು. ಪರ್ಯಾಯ ದರ್ಬಾರ್ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳ ಸಾಧಕರಿಗೆ ಶೀರೂರು ಶ್ರೀಪಾದರು ಶ್ರೀ ಕೃಷ್ಣಾನುಗ್ರಹ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಿದ್ದಾರೆ ಎಂದೂ ಅವರು ತಿಳಿಸಿದ್ದಾರೆ.

ಸಭೆಯಲ್ಲೇ ಹಣಕ್ಕೆ ಬೇಡಿಕೆ: ಆರೋಪ

ಜೇವರ್ಗಿ (ಕಲಬುರಗಿ ಜಿಲ್ಲೆ): ತಹಶೀಲ್ದಾರ್ ಮಲ್ಲಣ್ಣ ಯಲಗೋಡ ಅವರು ಸಭೆಯಲ್ಲೇ ಸಿಬ್ಬಂದಿ ಬಳಿ ಹಣ ಕೇಳಿದರು ಎನ್ನಲಾದ ಆಡಿಯೊ ಜಾಲತಾಣಗಳಲ್ಲಿ ಹರಿದಾಡಿದೆ.

ತಹಶೀಲ್ದಾರ್ ಹಾಗೂ ಸಿಬ್ಬಂದಿ ಸಂಭಾಷಣೆಯದ್ದು ಎನ್ನಲಾದ ಆಡಿಯೊದಲ್ಲಿ 'ನನ್ನ ಹೆಸರಿನಲ್ಲಿ ನೀವು ಹಣ ಮಾಡ್ತೀರಿ, ಹೀಗಾಗಿ ನನಗೂ ನೀಡಿ' ಎಂದು ವ್ಯಕ್ತಿಯೊಬ್ಬರು ಹೇಳಿದ್ದಾರೆ. ಇದಕ್ಕೆ ಪ್ರತಿಕ್ರಿಯಿಸಿರುವ ಸಿಬ್ಬಂದಿ, 'ನನಗೆ ಆರ್.ಐ ಜವಾಬ್ದಾರಿಯೇ ಬೇಡ, ನನ್ನನ್ನು ಕಚೇರಿ ಕೆಲಸಕ್ಕೆ ಹಾಕಿ, ಹಣ ನೀಡಲು ಆಗಲ್ಲ' ಎಂದಿದ್ದಾರೆ.

ಸ್ಪಷ್ಟನೆ: 'ಆರು ತಿಂಗಳ ಹಿಂದೆ ಕಾರ್ಯಕ್ರಮವೊಂದು ಅಸ್ತವ್ಯಸ್ತವಾಗಿತ್ತು. ಆಗ ಸಿಬ್ಬಂದಿ ಜೊತೆ ಚರ್ಚಿಸಿದ್ದೆ. ಹಣಕ್ಕೆ ಬೇಡಿಕೆ ಇಟ್ಟಿಲ್ಲ' ಎಂದು ತಹಶೀಲ್ದಾರ್ ಪ್ರತಿಕ್ರಿಯಿಸಿದ್ದಾರೆ.

'ಆರು ತಿಂಗಳ ಹಿಂದೆ ಶರಣು ಹೆಸರಿನ ಗ್ರಾಮ ಲೆಕ್ಕಾಧಿಕಾರಿ ಅಮಾನತುಗೊಳಿಸಿದ್ದೆ. ಆತನೇ ಇದನ್ನೆಲ್ಲ ಮಾಡಿ, ದೂರು ಕೊಟ್ಟಿದ್ದಾನೆ. ಹಿಂದಿನ ತಹಶೀಲ್ದಾರ್‌ಗೂ ಬ್ಲ್ಯಾಕ್‌ಮೇಲ್ ಮಾಡಿದ್ದ' ಎಂದು ಹೇಳಿದರು.

ಸುತ್ತೂರು ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರೆಯಲ್ಲಿ ಸಾಮೂಹಿಕ ವಿವಾಹ

ದಾಂಪತ್ಯದ ಬದುಕಿಗೆ ಕಾಲಿಟ್ಟ 135 ಜೋಡಿ

ಪ್ರಜಾವಾಣಿ ವಾರ್ತೆ

ಸುತ್ತೂರು (ಮೈಸೂರು ಜಿಲ್ಲೆ): ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವದ ಭಾಗವಾಗಿ ಶುಕ್ರವಾರ ಇಲ್ಲಿ ನಡೆದ ಸಾಮೂಹಿಕ ವಿವಾಹದಲ್ಲಿ 11 ಅಂತರ್ಜಾತಿ, 3 ಮರು ಮದುವೆ ಸೇರಿ 135 ಜೋಡಿಗಳು ದಾಂಪತ್ಯ ಬದುಕಿಗೆ ಕಾಲಿಟ್ಟವು.

4 ವೀರಶೈವ ಲಿಂಗಾಯತ, 84 ಪರಿಶಿಷ್ಟ ಜಾತಿ, 15 ಪರಿಶಿಷ್ಟ ಪಂಗಡ, 21 ಹಿಂದುಳಿದ ವರ್ಗ, 3 ಅಂಗವಿಕಲ, 5 ತಮಿಳುನಾಡಿನ ಜೋಡಿಗಳು ಮಧ್ಯಾಹ್ನ 12.10ಕ್ಕೆ ಮಂಗಳವಾದ್ಯ ಮೊಳಗುತ್ತಿದ್ದಂತೆ ಹೊಸ ಬಾಳಿಗೆ ಕಾಲಿಟ್ಟರು. ಹರುಷದ ಹೊನಲು ಹರಿದಿತ್ತು. ಸರಳ ವಿವಾಹದ ಮೌಲ್ಯವನ್ನು ಸಾರಿದ ಸಂತಸದ ಜೊತೆಗೆ ಕಣ್ಣುಗಳು ತುಂಬಿಬಂದವು. ಕನ್ನಡ, ಮಲಯಾಳ, ತಮಿಳು ಸೇರಿ ಬಹುಭಾಷಿಕ ದಂಪತಿಗಳೂ ಇದ್ದದ್ದು, ವೈವಿಧ್ಯವನ್ನು ಸಾರಿತು.

ಚಾಮರಾಜನಗರದ ಕಾವುದವಾಡಿಯ ಟಿ.ಎನ್.ಸುದೀಪ್, ತಮಿಳುನಾಡಿನ ತಿರುಪ್ಪೂರಿನ ಬಿ.ಬೃಂದಾ ಅವರನ್ನು ಕೈಹಿಡಿದರು. ಬೃಂದಾ ಮಾತೃಭಾಷೆ ಮಲಯಾಳ, ಕೆಲಸಕ್ಕೆಂದು ಸುದೀಪ್ ತಿರುಪ್ಪೂರಿಗೆ ಹೋಗಿದ್ದಾಗ ಪ್ರೀತಿ ಮೂಡಿತ್ತು. 'ಇಬ್ಬರ ಭಾಷೆ ಬೇರೆ. ಭಾಷೆ ಅರ್ಥವಾಗಲು ಕಷ್ಟವಾದರೂ ಪ್ರೀತಿಯ ಭಾಷೆ ಅರಿತೆವು' ಎಂದು ಸುದೀಪ್ ನಕ್ಕರು.

ಮುಖ್ಯಾಂಶಗಳು

- 11 ಅಂತರ್ಜಾತಿ ವಿವಾಹ
- 3 ಅಂಗವಿಕಲ ಜೋಡಿ
- ಮೂರು ಮರು ಮದುವೆ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ಮೈಸೂರು ಜಿಲ್ಲೆಯ ಸುತ್ತೂರಿನಲ್ಲಿ ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವದಲ್ಲಿ ಶುಕ್ರವಾರ ಆಯೋಜಿಸಿದ್ದ ಸಾಮೂಹಿಕ ವಿವಾಹದಲ್ಲಿ 135 ಜೋಡಿ ವೈವಾಹಿಕ ಜೀವನಕ್ಕೆ ಕಾಲಿಟ್ಟರು ಚಿತ್ರ: ಅನೂಪ್ ರಾಘ. ಟಿ.

ಕಲಬುರಗಿಯ ಅಫ್ಜಲ್‌ಪುರದ ದಣ್ಣೂರು ಗ್ರಾಮದ ಆನಂದ, ಮೈಸೂರಿನ ಹೆಬ್ಬಾಳದ ವೈಷ್ಣವಿ ಅವರನ್ನು ವರಿಸಿದರು. ಇವರದ್ದೂ ಅಂತರ್ಜಾತಿ ವಿವಾಹ. '5 ವರ್ಷದಿಂದ ಪ್ರೀತಿಸುತ್ತಿದ್ದೆವು. ನಾನು ಟೈಲರಿಂಗ್ ಮಾಡುತ್ತಿದ್ದೇನೆ. ಆನಂದ್ ಪೇಂಟರ್. ಮನೆಯವರನ್ನು ಒಪ್ಪಿಸಿ ಶ್ರೀಕ್ಷೇತ್ರದಲ್ಲಿ ಮದುವೆ ಆದೆವು' ಎಂದು ನುಡಿದರು.

ಚಾಮರಾಜನಗರ ತಾಲ್ಲೂಕು ರಾಮಸಮುದ್ರದ ಮಹೇಶ್ ಮತ್ತು ಚಂದ್ರಮ್ಮ ಅವರಿಗೆ 2ನೇ ಮದುವೆ. 'ಮೊದಲ ಪತಿ ನಿಧನರಾಗಿದ್ದರು. ಜೀವನ ನಡೆಸುವುದು ಕಷ್ಟವಿತ್ತು. ಈ ವೇಳೆ ಮಹೇಶ್ ಸಿಕ್ಕರು' ಎಂದು ಚಂದ್ರಮ್ಮ ಹೇಳಿದರು.

ದೃಷ್ಟಿದೋಷವುಳ್ಳ ಎಚ್.ಡಿ. ಕೋಟೆ ತಾಲ್ಲೂಕಿನ ನೇರಳೆ ಗ್ರಾಮದ ರೇಖಾ, ಸರಗೂರು ತಾಲ್ಲೂಕಿನ ಹೂವಿನಕೊಳ ಗ್ರಾಮದ ಎಚ್.ಎಂ.ಸುರೇಶ, ಕೊಳ್ಳೇಗಾಲದ ಹೇಮಾವತಿ– ಹನೂರಿನ ಜಡೇಸ್ವಾಮಿ, ಚಾಮರಾಜನಗರದ ಸಾಕಮ್ಮ– ನಂಜನಗೂಡಿನ ಚಿನ್ನಸ್ವಾಮಿ ಒಬ್ಬರಿಗೊಬ್ಬರು ಆಸರೆಯಾದರು.

ಸಿಇಟಿ: ಅರ್ಜಿ ಸಲ್ಲಿಕೆ ಪ್ರಕ್ರಿಯೆ ಆರಂಭ

ಬೆಂಗಳೂರು: ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ನಡೆಸುವ ಸಿಇಟಿ–2026ಕ್ಕೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಪ್ರಕ್ರಿಯೆ ಆರಂಭವಾಗಿದ್ದು, ಫೆ.16 ಕೊನೆಯ ದಿನ.

ಅರ್ಜಿ ಸಲ್ಲಿಕೆಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ವೆಬ್‌ಸೈಟ್‌ನಲ್ಲಿ ಲಿಂಕ್ ಬಿಡುಗಡೆ ಮಾಡಿದ್ದು, ಅರ್ಜಿ ಶುಲ್ಕ ಪಾವತಿಗೆ ಫೆ.18 ಕೊನೆ ದಿನ. ಅಭ್ಯರ್ಥಿಗಳು ಪೂರಕ ದಾಖಲೆಗಳನ್ನು ಸಿದ್ಧವಿಟ್ಟುಕೊಂಡು ಭರ್ತಿ ಮಾಡಬೇಕು ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಹೇಳಿದ್ದಾರೆ.

ಈ ಸಾಲಿನ ಅರ್ಜಿ ಆಧಾರ್ ಆಧಾರಿತವಾಗಿದೆ. ಅರ್ಜಿಯಲ್ಲಿ ಹೆಸರು ಇತ್ಯಾದಿ ಅಂಶಗಳು ಸ್ವಯಂಚಾಲಿತವಾಗಿ ಬಂದು ಕೂರಲಿವೆ. ಇ-ಮೇಲ್ ಮೂಲಕವೂ ಒಟಿಪಿ ಜತೆಗೆ ಪ್ರತಿ ಹಂತದ ಮಾಹಿತಿಯನ್ನು ತಿಳಿಸುವ ವಿಶೇಷ ವ್ಯವಸ್ಥೆ ಮಾಡಲಾಗಿದೆ. ಎಸ್‌ಎಟಿಎಸ್ ಮತ್ತು ಆರ್‌ಡಿ ಸಂಖ್ಯೆ ದಾಖಲಿಸಿದ ನಂತರ ಆನ್‌ಲೈನ್‌ನಲ್ಲಿ ಪರಿಶೀಲನೆಗೆ ಒಳಪಡುವ ಅಭ್ಯರ್ಥಿಗಳು ನೇರವಾಗಿ ಅರ್ಜಿ ಮುದ್ರಿಸಿಕೊಳ್ಳಬಹುದು. ಆದರೆ, ಆನ್‌ಲೈನ್‌ನಲ್ಲಿ ಪರಿಶೀಲನೆ ಆಗದವರು ಕಾಲೇಜಿಲ್ಲಿ ಪರಿಶೀಲಿಸಿ ಅರ್ಜಿ ಮುದ್ರಿಸಿಕೊಳ್ಳಬಹುದು ಎಂದು ಅವರು ವಿವರಿಸಿದ್ದಾರೆ. ರಾಜ್ಯದ ಎಲ್ಲೆಡೆ ಏ.23 ಮತ್ತು 24ರಂದು ಸಿಇಟಿ ನಡೆಯಲಿದೆ.

ಎನ್‌ಎಚ್‌ಎಂ ಸಿಬ್ಬಂದಿಗೆ ವೇತನ ವಿಳಂಬ: ಸ್ಪಷ್ಟನೆ

ಬೆಂಗಳೂರು: ತಾಂತ್ರಿಕ ಕಾರಣದಿಂದ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ (ಎನ್‌ಎಚ್‌ಎಂ) ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗೆ ವೇತನ ಪಾವತಿ ವಿಳಂಬವಾಗಿದೆ ಎಂದು ಎನ್‌ಎಚ್‌ಎಂ ಸ್ಪಷ್ಟನೆ ನೀಡಿದೆ.

ಎನ್‌ಎಚ್‌ಎಂ ಅಡಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ಹಾಗೂ ಆಶಾ ಕಾರ್ಯಕರ್ತೆಯರಿಗೆ ನವೆಂಬರ್ ಮತ್ತು ಡಿಸೆಂಬರ್ ತಿಂಗಳ ವೇತನ ಪಾವತಿಯಾಗಿಲ್ಲ.

‘ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ರಾಷ್ಟ್ರೀಯ ಆರೋಗ್ಯ ಅಭಿಯಾನ ಯೋಜನೆಯನ್ನು ಆರ್ಥಿಕ ವರ್ಷದ ಮಧ್ಯಭಾಗದಲ್ಲಿ, ‘ಎಸ್‌ಎನ್‌ಎ–ಸ್ಪರ್ಶ್’ ಎಂಬ ಹೊಸ ಹಣಕಾಸು ವ್ಯವಸ್ಥೆಗೆ ವರ್ಗಾಯಿಸಲಾಗಿದೆ. ಈ ಸಂದರ್ಭದಲ್ಲಿ, ನಿಧಿ ಬಿಡುಗಡೆ ಹಾಗೂ ಪಾವತಿ ಪ್ರಕ್ರಿಯೆಗಳಲ್ಲಿ ತಾಂತ್ರಿಕ ಬದಲಾವಣೆಗಳು ಅಗತ್ಯ. ಹಾಗಾಗಿ ವೇತನ ಪಾವತಿ ವಿಳಂಬವಾಗಿದೆ’ ಎಂದು ಎನ್‌ಎಚ್‌ಎಂ ಹೇಳಿದೆ. ‘ಕೇಂದ್ರ ಸರ್ಕಾರವು ಇದೇ 8ರಂದು ₹175.75 ಕೋಟಿ ಅನುದಾನ ಬಿಡುಗಡೆ ಮಾಡಿದೆ. ಶೀಘ್ರ ಜಿಲ್ಲೆಗಳಿಗೆ ಒದಗಿಸಲಾಗುವುದು’ ಎಂದು ಭರವಸೆ ನೀಡಿದೆ.

ಪ್ರಜಾಪ್ರಭುತ್ವ ಪತನ, ದೇಶ ವಿಭಜನೆ ಕಥನ

ಜೈಪುರ ಸಾಹಿತ್ಯ ಉತ್ಸವದ ಎರಡನೆಯ ದಿನದ ಚರ್ಚೆಗಳು

● ಬಿ.ವಿ.ಶ್ರೀನಾಥ್

ಜೈಪುರ: ಭಾರತದಲ್ಲಿನ ಪ್ರಜಾಪ್ರಭುತ್ವದ ಸಮಸ್ಯೆ ಮತ್ತು ಸವಾಲುಗಳು, ಶ್ರೀಮಂತರು ಹಾಗೂ ಕಂಪನಿಗಳು ದೇಣಿಗೆ ನೀಡುವ ವ್ಯವಸ್ಥೆಯಲ್ಲಿನ ವೈರುಧ್ಯಗಳು, ದೇಶ ವಿಭಜನೆಯ ನೋವಿನ ಕಥೆಗಳ ಕುರಿತು ಜೈಪುರ ಸಾಹಿತ್ಯ ಉತ್ಸವದ ಎರಡನೆಯ ದಿನ ಚರ್ಚೆಗಳು ನಡೆದವು.

ಪ್ರಜಾಪ್ರಭುತ್ವ ಕುರಿತ ಗೋಷ್ಠಿಯಲ್ಲಿ ಮಾತನಾಡಿದ ಕೇಂದ್ರದ ಮಾಜಿ ಸಚಿವ ಅಶ್ವನಿ ಕುಮಾರ್, ‘ಜನಪ್ರಿಯತೆ ಮತ್ತು ಬಹುಸಂಖ್ಯೆಯನ್ನು ಆಧರಿಸಿದ ಪ್ರಜಾಪ್ರಭುತ್ವದಲ್ಲಿ ತತ್ವಗಳು ಕಡೆಗಣಿಸಲ್ಪಟ್ಟಿದ್ದು, ಪ್ರಜಾಪ್ರಭುತ್ವ ಪತನಗೊಳ್ಳುತ್ತಿದೆ’ ಎಂದರು.

‘ಸುಪ್ರೀಂ ಕೋರ್ಟ್ ಅನೇಕ ಅದ್ಭುತ ತೀರ್ಪುಗಳನ್ನು ನೀಡಿದೆ. ಆದರೆ, ಅವು ಜಾರಿಯಾಗುವಂತೆ ಮಾಡುವಲ್ಲಿ ಸೋತಿದೆ. ಅಂದರೆ, ಪ್ರಜಾಸತ್ತೆಯಲ್ಲಿ ಸಾಂವಿಧಾನಿಕ ಸಂಸ್ಥೆಗಳಿಂದ ಹೆಚ್ಚಿನ ಬದಲಾವಣೆಯೇನೂ ಸಾಧ್ಯವಾಗದು. ಪ್ರತಿಯೊಬ್ಬ ಪ್ರಜೆಗೂ ಘನತೆಯಿಂದ ಬದುಕುವ ಹಕ್ಕನ್ನು ಖಾತರಿಪಡಿಸುವುದರಲ್ಲಿ ಪ್ರಜಾಪ್ರಭುತ್ವದ ಯಶಸ್ಸು ಇದೆ’ ಎಂದರು.

‘ಪ್ರಜಾಪ್ರಭುತ್ವವು ನಿರಂತರ ವಿಕಾಸಗೊಳ್ಳುವ ವ್ಯವಸ್ಥೆಯಾಗಿದ್ದು, ಇದೊಂದರಿಂದಲೇ ಸಂಪೂರ್ಣ ಸಮಾನತೆ ತರಲು ಸಾಧ್ಯವಿಲ್ಲ. ಭಾರತದ ಪ್ರಜಾಪ್ರಭುತ್ವದ ಯಶಸ್ಸಿನ ಬೇರುಗಳು ರಾಜಪ್ರಭುತ್ವದಲ್ಲಿವೆ’ ಎಂದು ಸಾಮಾಜಿಕ ಚರಿತ್ರೆಕಾರ ಮತ್ತು ಕವಿ ಬದ್ರಿನಾರಾಯಣ್ ಅಭಿಪ್ರಾಯಪಟ್ಟರು.

ಭಿನ್ನ ನಿಲುವು ಮಂಡಿಸಿದ ಲೇಖಕಿ ರೂಹಿ ತಿವಾರಿ, ‘ಸಮಾಜ, ರಾಜಕಾರಣದ ಅಂಚಿನಲ್ಲಿರುವ ಮಹಿಳೆಯರು ಲಿಂಗಸೂಕ್ಷ್ಮತೆಯಿಂದಲೇ ಮತ ಚಲಾಯಿಸುವ ಸ್ಥಿತಿಯಲ್ಲಿದ್ದು, ಇದು ಪ್ರಜಾಪ್ರಭುತ್ವದ ಬೆಳವಣಿಗೆಗೆ ಅಡ್ಡಿಯಾಗಿದೆ’ ಎಂದರು.

ದೇಣಿಗೆ ನೀಡಿಕೆ ಹೆಚ್ಚಾಗಲಿ: ಭಾರತದಲ್ಲಿ ಶ್ರೀಮಂತರು ಮತ್ತು ಕಂಪನಿಗಳು ನೀಡುವ ಸಿಎಸ್‌ಆರ್ ಮತ್ತು ದೇಣಿಗೆ ವ್ಯವಸ್ಥೆಯಲ್ಲಿನ ವೈರುಧ್ಯಗಳ ಬಗೆಗಿನ ಗೋಷ್ಠಿಯಲ್ಲಿ ಭಾಗವಹಿಸಿದ್ದ ಟಾಟಾ ಟ್ರಸ್ಟ್ ಸಿಇಒ ಸಿದ್ಧಾರ್ಥ ಶರ್ಮಾ, ‘ಜನರಿಂದ ಬಂದದ್ದು ಜನರಿಗೇ ಹೋಗಬೇಕು ಎನ್ನುವುದು ಜೆಆರ್‌ಡಿ ಟಾಟಾ ಅವರ ನಂಬಿಕೆಯಾಗಿತ್ತು. ದೇಶದ ಒಟ್ಟು ದೇಣಿಗೆಯಲ್ಲಿ ಟಾಟಾ ಟ್ರಸ್ಟ್ ಪಾಲು ಶೇ 10 ರಿಂದ ಶೇ 15ರಷ್ಟು ಇದೆ. ಆದರೆ, ಅದನ್ನು

ರಾಜಸ್ಥಾನದ ಜೈಪುರದಲ್ಲಿ ನಡೆಯುತ್ತಿರುವ ಸಾಹಿತ್ಯ ಉತ್ಸವದ ಎರಡನೇ ದಿನ ಪ್ರಜಾಪ್ರಭುತ್ವ ಕುರಿತ ಗೋಷ್ಠಿಯಲ್ಲಿ ಬದ್ರಿನಾರಾಯಣ್ ಮಾತನಾಡಿದರು

ಪರಿಣಾಮಕಾರಿಯಾಗಿ ಬಳಸುವ, ತಳಮಟ್ಟದಲ್ಲಿ ಕೆಲಸ ಮಾಡುವ ವ್ಯವಸ್ಥೆಯ ಕೊರತೆ ಇದೆ’ ಎಂದರು.

ಮಹಿಳಾ ಅಭಿವೃದ್ಧಿ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಕಾಂತಾ ಸಿಂಗ್, ‘ದೇಣಿಗೆಯನ್ನು ಬಳಸುವಾಗ ಲಿಂಗ ಸಮಾನತೆ, ಅಂಗವೈಕಲ್ಯ, ವಲಸೆಯಂಥ ಕ್ಷೇತ್ರಗಳನ್ನು ನಿರ್ಲಕ್ಷಿಸಲಾಗಿದೆ’ ಎಂದರು.

ಸಂವಾದದಲ್ಲಿ ಭಾಗವಹಿಸಿದ್ದ ನೊಬೆಲ್ ಪ್ರಶಸ್ತಿ ಪುರಸ್ಕೃತ ಅರ್ಥಶಾಸ್ತ್ರಜ್ಞೆ ಎಸ್ತರ್ ಡುಫ್ಲೊ, ‘ದೇಣಿಗೆ ನೀಡಲು ಗಾಢ ಪ್ರೀತಿ ಇರಬೇಕು. ಶತಕೋಟ್ಯಧಿಪತಿಗಳ ಸಂಖ್ಯೆ ಹೆಚ್ಚುತ್ತಿರುವ ಭಾರತದ ಅನಪೇಕ್ಷಿತ ಬೆಳವಣಿಗೆಯ ಕಾಲದಲ್ಲಿ ದೇಣಿಗೆ ನೀಡುವುದು ಹೆಚ್ಚಾಗಬೇಕು’ ಎಂದರು.

ಕಂಪನಿಗಳು ದೇಣಿಗೆ ನೀಡುವಾಗ ಅಭಿವೃದ್ಧಿ ಕಾರ್ಯಗಳಿಗೆ ನೀಡುತ್ತಿವೆಯೇ ವಿನಾ ಅವುಗಳ ಪರಿಣಾಮಕಾರಿ ಜಾರಿಗೆ ಅಗತ್ಯವಾದ ಜ್ಞಾನ, ಸಾಮರ್ಥ್ಯ ನಿರ್ಮಾಣವನ್ನು ನಿರ್ಲಕ್ಷಿಸುತ್ತಿವೆ ಎನ್ನುವ ಅಭಿಪ್ರಾಯ ಗೋಷ್ಠಿಯಲ್ಲಿ ವ್ಯಕ್ತವಾಯಿತು

ಪ್ರಸ್ತುತ ಸಂದರ್ಭದಲ್ಲಿ ಜಗತ್ತಿನ ಯಾವ ಭೂಭಾಗವೂ ಸುರಕ್ಷಿತವಲ್ಲ. ಈ ಸವಾಲುಗಳನ್ನು ಎದುರಿಸಲು ವಿಶ್ವಸಂಸ್ಥೆಯು ಬಲಿಷ್ಠವಾಗಬೇಕು ಎನ್ನುವ ಅಭಿಪ್ರಾಯ ‘ಗಾಯಗೊಂಡ ಜಗತ್ತಿನಲ್ಲಿ ಶಾಂತಿಯ ದಾರಿಗಳು’ ಗೋಷ್ಠಿಯಲ್ಲಿ ವ್ಯಕ್ತವಾಯಿತು.

ಕಾದಂಬರಿಗಳ ಬರವಣಿಗೆಗೆ ಸಂಬಂಧಿಸಿದ ಗೋಷ್ಠಿಯಲ್ಲಿ ಲೇಖಕರಾದ ರುಚಿರ್ ಜೋಷಿ ಮತ್ತು ರಾಹುಲ್ ಭಟ್ಟಾಚಾರ್ಯ ಅವರೊಂದಿಗೆ ನಂದಿನಿ ನಾಯರ್ ಸಂವಾದ ನಡೆಸಿದರು. ಜೋಷಿ ಅವರ ‘ಗ್ರೇಟ್ ಈಸ್ಟರ್ನ್ ಹೋಟೆಲ್’ ಹಾಗೂ ಭಟ್ಟಾಚಾರ್ಯ ಅವರ ‘ರೈಲ್ ಸಾಂಗ್’ ಕಾದಂಬರಿಗಳು ಭಾರತದ ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಲೋಕದ ಚಿತ್ರಣವನ್ನು ನೀಡುತ್ತವೆ ಎಂದರು.

ಗಡಿಯಲ್ಲಿ ಗಾಯಕಿಯರ ಪಾರ್ಟಿ

‘ದೇಶ ವಿಭಜನೆಯ ಕಾಲದ ಅವ್ಯಕ್ತ ಕಥೆಗಳು’ ಗೋಷ್ಠಿಯಲ್ಲಿ ಪಾಕಿಸ್ತಾನದ ಗಾಯಕಿ ನೂರ್ ಜಹಾನ್ ಅವರಿಗೆ ಸಂಬಂಧಿಸಿದ ಎರಡು ಘಟನೆಗಳನ್ನು ಹಂಚಿಕೊಳ್ಳಲಾಯಿತು.

ಮುಂಬೈಗೆ ಬಂದಿದ್ದ ಅವರು ತಾನು ದೇಶವಿಭಜನೆಯ ಪೂರ್ವದಲ್ಲಿ ವಾಸವಿದ್ದ ಮನೆಗೆ ಅಸ್ಪಷ್ಟ ನೆನಪಿನಿಂದಲೇ ಕಾರು ಚಾಲಕನಿಗೆ ದಾರಿ ತೋರಿಸಿದ್ದನ್ನು, ಮನೆಯನ್ನು ಕಂಡು ಸಂಭ್ರಮಿಸಿದ್ದನ್ನು ಸಿನಿಮಾ ವಿಮರ್ಶಕಿ ಭಾವನಾ ಸೋಮಯ್ಯ ನೆನಪಿಸಿಕೊಂಡರು.

ಅದಕ್ಕೆ ಧ್ವನಿಗೂಡಿಸಿದ ಲೇಖಕಿ ಕಿಶ್ವರ್ ದೇಸಾಯಿ, ಅಮೃತಸರದಲ್ಲಿ ಪೊಲೀಸ್ ಅಧಿಕಾರಿಯಾಗಿದ್ದ ತಮ್ಮ ತಂದೆಯನ್ನು ಕಾಡಿಬೇಡಿ ಲತಾ ಮಂಗೇಶ್ಕರ್ ಅವರು ಮತ್ತು ನೂರ್ ಜಹಾನ್ ಅವರು ಗಡಿಯಲ್ಲಿ ಭೇಟಿ ಮಾಡಿ ಜತೆಗೆ ಕಾಲ ಕಳೆದಿದ್ದರು, ಪಾರ್ಟಿ ಮಾಡಿದ್ದರು ಎಂದು ವಿವರಿಸಿದರು.

ಆರೈಕೆ

ಚಿತ್ರ: ಬಿ.ಎಂ.ಕೇದಾರನಾಥ

ಧಾರವಾಡ ತಾಲ್ಲೂಕಿನ ದೇವರಹುಬ್ಬಳ್ಳಿ ಗ್ರಾಮದ ಕೆರೆಯಲ್ಲಿ ಬಾತುಕೋಳಿಯೊಂದು (ಲಿಟಲ್ ಗ್ರೆಬ್) ಮರಿಗೆ ಆಹಾರ ನೀಡಿದ ಪರಿ

ಸರ್ಕಾರದ ವೈಫಲ್ಯಕ್ಕೆ ಕನ್ನಡಿ: ಲಹರ್ ಸಿಂಗ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಿರೀಕ್ಷಿತ ಪ್ರಮಾಣದಲ್ಲಿ ತೆರಿಗೆ ಸಂಗ್ರಹವಾಗದೇ ರಾಜ್ಯ ಸರ್ಕಾರವು ತನ್ನ ಆದಾಯದಲ್ಲಿ ₹13 ಸಾವಿರ ಕೋಟಿ ಖೋತಾ ಅನುಭವಿಸುತ್ತಿದೆ. ಇದು ಕಾಂಗ್ರೆಸ್ ಸರ್ಕಾರದ ಸರ್ವಾಂಗೀಣ ವೈಫಲ್ಯಕ್ಕೆ ಸೂಚನೆ’ ಎಂದು ಬಿಜೆಪಿ ರಾಜ್ಯಸಭಾ ಸದಸ್ಯ ಲಹರ್ ಸಿಂಗ್ ಸಿರೋಯಾ ಹೇಳಿದ್ದಾರೆ.

ಲಹರ್ ಸಿಂಗ್ ಸಿರೋಯಾ

‘ಪ್ರಜಾವಾಣಿ’ಯಲ್ಲಿ ಪ್ರಕಟವಾದ ‘ಬೊಕ್ಕಸ: ₹13 ಸಾವಿರ ಕೋಟಿ ನಷ್ಟ’ ವರದಿಯನ್ನು ಉಲ್ಲೇಖಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದು ಆಡಳಿತ ವೈಖರಿಯನ್ನು ಟೀಕಿಸಿದ್ದಾರೆ.

‘ಅಧಿಕಾರಕ್ಕಾಗಿ ಕಾಂಗ್ರೆಸ್‌ನಲ್ಲಿ ನಡೆದಿರುವ ಕಚ್ಚಾಟದ ಪರಿಣಾಮ ಆರ್ಥಿಕತೆ ಹಳಿ ತಪ್ಪಿದೆ. ಭಾರಿ ಪ್ರಮಾಣದ ಭ್ರಷ್ಟಾಚಾರ, ಕೆಟ್ಟ ನೀತಿಗೂ ಈ ವರದಿ ಕೈಗನ್ನಡಿ. ಸರ್ಕಾರದ ಗ್ಯಾರಂಟಿ ಯೋಜನೆಗಳಿಂದ ಖಜಾನೆ ಬರಿದಾಗಿದೆ ಎಂಬುದು ಸಾಮಾನ್ಯ ಜ್ಞಾನ’ ಎಂದು ಅವರು ಹೇಳಿದ್ದಾರೆ.

‘ಸಿದ್ದರಾಮಯ್ಯ ಅವರು ಜನಹಿತಕ್ಕಾಗಿ ಆಡಳಿತ ಮಾಡದೇ, ಸ್ವಹಿತಕ್ಕಾಗಿ ಆಡಳಿತ ಮಾಡುತ್ತಿದ್ದಾರೆ. ಇವರು ಗಿನ್ನಿಸ್ ಅಥವಾ ಲಿಮ್ಕಾ ಬುಕ್ ಆಫ್ ರೆಕಾರ್ಡ್‌ನಲ್ಲಿ ದಾಖಲೆ ಸೃಷ್ಟಿಸುವುದರಿಂದ ಸಾಮಾನ್ಯ ಜನರಿಗೆ ಆಗುವ ಪ್ರಯೋಜನವಾದರೂ ಏನು’ ಎಂದು ಪ್ರಶ್ನಿಸಿದ್ದಾರೆ.

‘ಬೆದರಿಸುವವರ ವಿರುದ್ಧ ಕ್ರಮಕೈಗೊಳ್ಳಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಧಿಕಾರಿಗಳು, ನೌಕರರನ್ನು ನಿಂದಿಸುವ ಹಾಗೂ ಅವರ ಹಲ್ಲೆ ನಡೆಸುವವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕು ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರು ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರನ್ನು ಒತ್ತಾಯಿಸಿದ್ದಾರೆ.

ಮುಖ್ಯ ಕಾರ್ಯದರ್ಶಿ ಅವರನ್ನು ತಮ್ಮ ಕಚೇರಿಗೆ ಕರೆಸಿಕೊಂಡು ಈ ಕುರಿತು ಮಾತುಕತೆ ನಡೆಸಿದ ಬಳಿಕ ಅವರು ಸುದ್ದಿಗೋಷ್ಠಿಯಲ್ಲಿ ವಿವರ ನೀಡಿದರು.

ಕಾಂಗ್ರೆಸ್ ಆಡಳಿತದಲ್ಲಿ ಅಧಿಕಾರಿಗಳಿಗೆ ರಕ್ಷಣೆಯೇ ಇಲ್ಲವಾಗಿದೆ. ಅಧಿಕಾರಿಗಳು ಮತ್ತು ನೌಕರರಿಗೆ ಕರ್ತವ್ಯ ನಿರ್ವಹಿಸಲು ಬಿಡಬೇಕು. ಇವರಿಗೆ ಅಡ್ಡಿಪಡಿಸುವುದು, ಬೆದರಿಕೆ ಒಡ್ಡುವುದು ಮತ್ತು ನಿಂದಿಸುವವರನ್ನು

ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್‌.ಅಶೋಕ ಮತ್ತು ಉಪನಾಯಕ ಅರವಿಂದ ಬೆಲ್ಲದ ಅವರು ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಹಕ್ಕೊತ್ತಾಯದ ಪತ್ರ ನೀಡಿದರು.

ರಕ್ಷಿಸುವ ಕೆಲಸ ಮಾಡಬಾರದು ಎಂದು ಅಶೋಕ ಸೂಚಿಸಿದರು.

‘ಶಿಡ್ಲಘಟ್ಟದ ಪೌರಾಯುಕ್ತೆ ಅಮೃತಗೌಡ ಅವರನ್ನು ಕಾಂಗ್ರೆಸ್ ಮುಖಂಡ ರಾಜೀವ್‌ಗೌಡ ಅವಾಚ್ಯ ಪದಗಳಿಂದ ನಿಂದಿಸಿದ್ದರೂ ಸಚಿವ ಕೆ.ಎಚ್.ಮುನಿಯಪ್ಪ ಅವರು ಆತ ಒಳ್ಳೆಯ ವ್ಯಕ್ತಿ ಎಂದು ಹೇಳಿದ್ದಾರೆ. ಕಳೆದೆರಡು ವರ್ಷಗಳ ಕಾಂಗ್ರೆಸ್ ಆಡಳಿತದಲ್ಲಿ ಅನೇಕ ಅಧಿಕಾರಿಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕಾಂಗ್ರೆಸ್ ಪುಂಡರು ಸರ್ಕಾರಿ ಕಚೇರಿಗಳನ್ನು ಪಕ್ಷದ ಕಚೇರಿ ಮಾಡಿಕೊಂಡಿದ್ದಾರೆ. ಅಧಿಕಾರಿಗಳನ್ನು ರಕ್ಷಿಸುವುದು ನಿಮ್ಮ ಕರ್ತವ್ಯವೆಂದು ಅವರಿಗೆ ಹೇಳಿದ್ದೇನೆ’ ಎಂದರು.

‘ಪಿಎಸ್‌ಐ ಪರಶುರಾಮ್, ನೌಕರ ರುದ್ರಣ್ಣ, ಗ್ರಂಥಪಾಲಕಿ ಭಾಗ್ಯವತಿ ಪ್ರಕರಣಗಳು, ಮಾಗಡಿ ಶಾಸಕ ಬಾಲಕೃಷ್ಣ ತಹಶೀಲ್ದಾರ್‌ಗೆ ಹೊಡೆಯುತ್ತೇನೆ ಎಂದು ಬೆದರಿಕೆ ಹಾಕಿರುವುದೂ ಸೇರಿ, ಹಲವು ಘಟನೆಗಳಲ್ಲಿ ತಪ್ಪಿತಸ್ಥರ ವಿರುದ್ಧ ಕ್ರಮ ವಹಿಸಿಲ್ಲ. ಅಧಿಕಾರಿಗಳು ಒಂದೋ ಪ್ರತಿಭಟನೆ ನಡೆಸಬೇಕು, ಇಲ್ಲವಾದರೆ ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿ ರಾಜ್ಯದಲ್ಲಿದೆ’ ಎಂದರು.

‘ಅಧಿಕಾರಿ ಮೇಲೆ ಯಾರಾದರೂ ಹಲ್ಲೆ ಮಾಡಿದರೆ ಮಾಧ್ಯಮಗಳ ಬಳಿ ಹೋಗಬಾರದು ಎಂದೇನಿಲ್ಲ. ಸರ್ಕಾರದ ಮೇಲೆ ನಂಬಿಕೆ ಇಲ್ಲದ ಅಧಿಕಾರಿಗಳು ಮಾಧ್ಯಮಗಳ ಬಳಿ ಹೋದರೆ ಅದರಲ್ಲಿ ತಪ್ಪಿಲ್ಲ. ಶಾಸಕ ಸಿ.ಟಿ.ರವಿ ಅವರ ಪ್ರಕರಣದಲ್ಲಿ ಅವರನ್ನು ಬಂಧಿಸಿ ಕಾಡು ಸುತ್ತಿಸಿದ್ದರು. ಆದರೆ, ಶಿಡ್ಲಘಟ್ಟ ಪ್ರಕರಣದಲ್ಲಿ ಯಾರನ್ನೂ ಬಂಧಿಸಿಲ್ಲ ಏಕೆ’ ಎಂದು ಪ್ರಶ್ನಿಸಿದರು.

ಬಳ್ಳಾರಿ: ಇಂದು ಬಿಜೆಪಿ ಸಮಾವೇಶ

ಒಂದನೇ ಪುಟದಿಂದ...

‘ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ ವಿಜಯೇಂದ್ರ, ಮುಖಂಡರಾದ ಆರ್. ಅಶೋಕ, ಛಲವಾದಿ ನಾರಾಯಣಸ್ವಾಮಿ, ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ, ಸಂಸದರಾದ ಗೋವಿಂದ ಕಾರಜೋಳ, ಜಗದೀಶ ಶೆಟ್ಟರ್ ಮತ್ತಿತರರು ಭಾಗವಹಿಸುವರು’ ಎಂದು ಶಾಸಕ ಜನಾರ್ದನ ರೆಡ್ಡಿ ತಿಳಿಸಿದ್ದಾರೆ.

ಇಬ್ಬರು ಅಂಗರಕ್ಷಕರ ಬಂಧನ: ಘರ್ಷಣೆ ಮತ್ತು ಹತ್ಯೆ ಪ್ರಕರಣ ಸಂಬಂಧ ಸಿಐಡಿ ಅಧಿಕಾರಿಗಳು ಶುಕ್ರವಾರ ಶಾಸಕ ಭರತ್ ರೆಡ್ಡಿ ಕಡೆಯವರ ಬಲ್ಜೀತ್ ಸಿಂಗ್ ಮತ್ತು ಮಹೇಂದ್ರ ಸಿಂಗ್ ಎಂಬ ಅಂಗರಕ್ಷಕರನ್ನು ವಶಕ್ಕೆ ಪಡೆದಿದ್ದಾರೆ. ಇಬ್ಬರನ್ನೂ ಬ್ರೂಸ್‌ಪೇಟೆಯ ಪೊಲೀಸ್ ಠಾಣೆಯಲ್ಲಿ ವಿಚಾರಣೆಗೆ ಒಳಪಡಿಸಿ, ನಂತರ ಬೆಂಗಳೂರಿಗೆ ಕರೆದೊಯ್ಯಲಾಯಿತು ಎಂದು ಮೂಲಗಳು ಹೇಳಿವೆ. ಭರತ್ ರೆಡ್ಡಿ ಕಡೆಯ ಅಂಗರಕ್ಷಕರು ಆತ್ಮರಕ್ಷಣೆಗಾಗಿ ಜಮ್ಮು ಕಾಶ್ಮೀರದಿಂದ ಬಂದೂಕು ಪರವಾನಗಿ ಪಡೆದಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ವಿರೋಧವಿಲ್ಲ’

ಬೆಳಗಾವಿ: ‘ಬಳ್ಳಾರಿ ಪಾದಯಾತ್ರೆ ವಿಷಯದಲ್ಲಿ ಯಾವುದೇ ಗೊಂದಲಲ್ಲ. ನನ್ನ ವಿರೋಧವೂ ಇಲ್ಲ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಇಲ್ಲಿ ತಿಳಿಸಿದರು.

‘ಹಿಂದೆ ಸಿದ್ದರಾಮಯ್ಯ ಸರ್ಕಾರದ ವಿರುದ್ಧ ಬೆಂಗಳೂರಿನಿಂದ ಮೈಸೂರಿಗೆ ಪಾದಯಾತ್ರೆ ಮಾಡುವಾಗ ಕೆಲ ಗೊಂದಲ ಇದ್ದವು. ಈ ಬಾರಿ ಹಾಗೆ ಆಗದು. ಹೋರಾಟ, ಪಾದಯಾತ್ರೆ ಸೇರಿ ಏನೇ ನಿರ್ಧರಿಸಿದರೂ ಕೇಂದ್ರದ ವರಿಷ್ಠರ ಗಮನಕ್ಕೆ ತರುತ್ತೇನೆ’ ಎಂದು ಹೇಳಿದರು. ‘ಇದೇ 19 ಮತ್ತು 20ರಂದು ಹೊಸ ರಾಷ್ಟ್ರೀಯ ಅಧ್ಯಕ್ಷರ ಆಯ್ಕೆ ಪ್ರಕ್ರಿಯೆ ನಡೆಯಲಿದೆ. ಆ ಸಂದರ್ಭದಲ್ಲಿ ನಾನು ದೆಹಲಿಯಲ್ಲಿ ಇರುತ್ತೇನೆ. ವರಿಷ್ಠರ ಜೊತೆಗೆ ಚರ್ಚಿಸುತ್ತೇನೆ’ ಎಂದರು.

29ರಿಂದ ವೀರಶೈವ-ಲಿಂಗಾಯತ ವ್ಯಾಪಾರ ಸಮಾವೇಶ

ಬೆಂಗಳೂರು: ಅಂತರರಾಷ್ಟ್ರೀಯ ಲಿಂಗಾಯತ ಯುವ ವೇದಿಕೆಯು (ಐಎಲ್‌ವೈಎಫ್) ಇದೇ 29ರಿಂದ ಫೆ.1ರವರೆಗೆ ಅರಮನೆ ಮೈದಾನದ ವೈಟ್ ಪೆಟಲ್ಸ್‌ನಲ್ಲಿ ವೀರಶೈವ-ಲಿಂಗಾಯತ ಜಾಗತಿಕ ವ್ಯಾಪಾರ ಸಮಾವೇಶ ಹಮ್ಮಿಕೊಂಡಿದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಐಎಲ್‌ವೈಎಫ್ ಟ್ರಸ್ಟ್ ಅಧ್ಯಕ್ಷ ಸಂತೋಷ್ ಕಂಚಂಬಾ, ‘ಸಮುದಾಯದ ಉದ್ಯಮಿಗಳನ್ನು ಒಟ್ಟುಗೂಡಿಸುವ ಜತೆಗೆ, ವ್ಯಾಪಾರ ಮತ್ತು ಆರ್ಥಿಕ ಬೆಳವಣಿಗೆಗೆ ವೇದಿಕೆ ಕಲ್ಪಿಸುವ ಗುರಿಯನ್ನು ಹೊಂದಲಾಗಿದೆ. ಸಿದ್ದಗಂಗಾ ಮಠದ ಸಿದ್ದಲಿಂಗ ಸ್ವಾಮೀಜಿ ಅವರು ಈ ಸಮಾವೇಶ ಉದ್ಘಾಟಿಸುತ್ತಾರೆ. 230ಕ್ಕೂ ಹೆಚ್ಚು ಮಳಿಗೆಗಳು ಇರಲಿದ್ದು, 75 ಸಾವಿರಕ್ಕೂ ಅಧಿಕ ಮಂದಿ ಪಾಲ್ಗೊಳ್ಳುವ ನಿರೀಕ್ಷೆಯಿದೆ’ ಎಂದು ತಿಳಿಸಿದರು.

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಪ್ರಯಾಣಿಕರ ಸಂಚಾರ, ಸರಕು ಸಾಗಣೆ ಹೆಚ್ಚಳ

ಕೆಐಎ: ಒಂದೇ ವರ್ಷದಲ್ಲಿ 4.38 ಲಕ್ಷ ಜನರು ವಿಮಾನದಲ್ಲಿ ಪ್ರಯಾಣ; ದೇಶೀಯ ವಿಮಾನಗಳ ಸಂಖ್ಯೆಯಲ್ಲಿ ಎರಡನೇ ಸ್ಥಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಪ್ರಯಾಣಿಕರ ಸಂಚಾರ ಮತ್ತು ಸರಕು ಸಾಗಣೆಯಲ್ಲಿ ಕಳೆದ ವರ್ಷ (2025) ದಾಖಲೆ ಪ್ರಮಾಣದಲ್ಲಿ ಹೆಚ್ಚಳವಾಗಿದೆ.

4,38,20,000 ಜನರು ಪ್ರಯಾಣಿಸಿದ್ದಾರೆ. ನವೆಂಬರ್ 23ರಂದು ಒಂದೇ ದಿನ 1,37,317 ಪ್ರಯಾಣಿಸಿರುವುದು ದಾಖಲೆಯಾಗಿದೆ. ಸಾಮಾನ್ಯವಾಗಿ ದೈನಂದಿನ ಸರಾಸರಿ ವಿಮಾನ ಸಂಚಾರ 765 ಇರುತ್ತಿದ್ದು, ಅ.19ರಂದು 837 ಬಾರಿ ವಿಮಾನಗಳು ಹಾರಾಟ ನಡೆಸಿದ್ದು, ಇದು ಗರಿಷ್ಠ ವಾಯು ಸಂಚಾರ ನಿರ್ವಹಣೆ ಆಗಿದೆ. ಭಾರತೀಯ ವಿಮಾನ ನಿಲ್ದಾಣಗಳಲ್ಲಿ ದೇಶೀಯ ವಿಮಾನಗಳ ಸಂಖ್ಯೆಯಲ್ಲಿ ಮೂರನೇ ಸ್ಥಾನದಲ್ಲಿದ್ದ ಕೆಐಎ ಅಕ್ಟೋಬರ್‌ನಲ್ಲಿ ಎರಡನೇ ಸ್ಥಾನಕ್ಕೇರಿದೆ.

2024ರಲ್ಲಿ ದೈನಂದಿನ ಪ್ರಯಾಣಿಕರ ಸಂಚಾರ ಶೇ 38 ಇದ್ದಿದ್ದು, 2025ರಲ್ಲಿ ಶೇ 51ಕ್ಕೆ ಏರಿದೆ. ಅಂತರರಾಷ್ಟ್ರೀಯ ಪ್ರಯಾಣಿಕರ ಸಂಚಾರದಲ್ಲಿ ವರ್ಷದಿಂದ ವರ್ಷಕ್ಕೆ ಏರಿಕೆಯಾಗುತ್ತಿದ್ದು, 2025ರಲ್ಲಿ ಶೇ 28.7ರಷ್ಟು ಹೆಚ್ಚಳವಾಗಿರುವುದು ದಾಖಲೆಯಾಗಿದೆ. ಇದೇ ಸಮಯದಲ್ಲಿ ಐದು ಹೊಸ ದೇಶೀಯ ಮತ್ತು ಐದು ಹೊಸ ಅಂತಾರಾಷ್ಟ್ರೀಯ ಮಾರ್ಗಗಳ ಸೇರ್ಪಡೆಯಾಗಿವೆ ಎಂದು ಬಿಐಎಎಲ್‌ನ ಮುಖ್ಯ ಕಾರ್ಯಾಚರಣಾ ಅಧಿಕಾರಿ ಗಿರೀಶ್ ನಾಯರ್ ಮಾಹಿತಿ ನೀಡಿದ್ದಾರೆ.

ಡಿ.31ರ ಹೊತ್ತಿಗೆ, ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವು 79 ದೇಶೀಯ ಮತ್ತು 34 ಅಂತರರಾಷ್ಟ್ರೀಯ ನಗರಗಳನ್ನು ಒಳಗೊಂಡ 113 ಪ್ರಯಾಣಿಕರ ತಾಣಗಳಿಗೆ ಸಂಪರ್ಕ ಹೊಂದಿದೆ. ದೆಹಲಿ, ಮುಂಬೈ, ಕೋಲ್ಕತ್ತ, ಹೈದರಾಬಾದ್ ಮತ್ತು ಪುಣೆ ಪ್ರಮುಖ ದೇಶೀಯ ತಾಣಗಳಾಗಿ ಹೊರಹೊಮ್ಮಿದರೆ, ದುಬೈ, ಅಬುಧಾಬಿ, ಸಿಂಗಪುರ, ಲಂಡನ್ ಮತ್ತು ಕೌಲಾಲಂಪುರ ಅಂತಾರಾಷ್ಟ್ರೀಯ ಜಾಲವನ್ನು ಹೊಂದಿದೆ. 2025ರಲ್ಲಿ ದೇಶೀಯ ಮಾರ್ಗದಲ್ಲಿ ಹಿಂದನ್, ಬೀದರ್, ಜೈಸಲ್ಮೇರ್, ಸಿಲ್ಚಾರ್ ಮತ್ತು ನವಿ ಮುಂಬೈ ಸೇರ್ಪಡೆಗೊಂಡಿವೆ. ಹಾಗೆಯೇ, ದಮ್ಮಾಮ್, ಹೋ ಚಿ ಮಿನ್ಹ್ ಸಿಟಿ, ಕ್ರಾಬಿ, ಹನೋಯ್ ಮತ್ತು ರಿಯಾದ್ ಅಂತರರಾಷ್ಟ್ರೀಯ ಮಾರ್ಗಗಳನ್ನು ಹೊಸದಾಗಿ ಸೇರ್ಪಡೆ ಮಾಡಲಾಗಿದೆ ಎಂದು ತಿಳಿಸಿದ್ದಾರೆ.

ಸರಕು ಪ್ರಮಾಣವು ವರ್ಷದಿಂದ ವರ್ಷಕ್ಕೆ ಶೇ 5ರಷ್ಟು ಬೆಳವಣಿಗೆ ಆಗುತ್ತಿದ್ದು, 2025ರಲ್ಲಿ 5,20,985 ಟನ್‌ಗಳ ನಿರ್ವಹಣೆಯಾಗಿದೆ. ಆ.7ರಂದು ಒಂದೇ ದಿನ 2,207 ಟನ್‌ಗಳ ಸರಕು ಸಾಗಣೆಯ ದಾಖಲೆ ಬರೆದಿದೆ.

ವಿಮಾನ ನಿಲ್ದಾಣವು ಈಗ 15 ದೇಶೀಯ ಮತ್ತು ಅಂತರರಾಷ್ಟ್ರೀಯ ಸರಕು ಸಾಗಣೆ ವಿಮಾನಯಾನ ಸಂಸ್ಥೆಗಳ ಮೂಲಕ 37 ಸರಕು ಸಾಗಣೆ ತಾಣಗಳಿಗೆ ಸಂಪರ್ಕ ಹೊಂದಿದೆ.

ಕೆಂಪೇಗೌಡ ವಿಮಾನ ನಿಲ್ದಾಣದಿಂದ ಹಾರಾಟ ನಡೆಸಿದ ವಿಮಾನ

ಸುದ್ದಿ 2 ನಿಮಿಷ

ಮತ ಕಳವಿನ ಮತ್ತೊಂದು ಅಧ್ಯಾಯ: ಸಿದ್ದರಾಮಯ್ಯ

ಬೆಂಗಳೂರು: ಬೃಹನ್ ಮುಂಬೈ ಮಹಾನಗರ ಪಾಲಿಕೆ ಚುನಾವಣೆಯು ಆಯೋಗದ ವಿಶ್ವಾಸಾರ್ಹತೆಯ ಕುರಿತು ಗಂಭೀರ ಆತಂಕ ಹುಟ್ಟಿಸಿದೆ. ಇಂತಹ ಆತಂಕಗಳು ದೇಶದ ಇತರ ಭಾಗಗಳಲ್ಲಿಯೂ ಪ್ರತಿಧ್ವನಿಸುತ್ತಿವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಈ ಕುರಿತು 'ಎಕ್ಸ್'ನಲ್ಲಿ, 'ಪ್ರಜಾಸತ್ತಾತ್ಮಕ ವ್ಯವಸ್ಥೆ ಜೀವಂತವಾಗಿರಲು ಪ್ರಾಮಾಣಿಕ ಮತ್ತು ಪವಿತ್ರವಾಗಿರಬೇಕು. ಅದರ ರಕ್ಷಣಾ ಕ್ರಮಗಳು ನಿಜವಾಗಿಯೂ ಪರಿಣಾಮಕಾರಿಯಾಗಿರಬೇಕು. ಮುಂಬೈ ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಮತದಾರರಿಗೆ ಹಾಕಿದ ಶಾಯಿಯನ್ನು ಸುಲಭವಾಗಿ ಅಳಿಸಬಹುದು ಎನ್ನುವುದನ್ನು ಮಾಧ್ಯಮ ವರದಿಗಳು ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿರುವ ವಿಡಿಯೊಗಳು ತೋರಿಸುತ್ತಿವೆ. ಇದು ತಾಂತ್ರಿಕ ದೋಷವಲ್ಲ, ಇದು ಮತಕಳವು ಕಥನದ ಮತ್ತೊಂದು ಕಳವಳಕಾರಿ ಅಧ್ಯಾಯ' ಎಂದು ಟೀಕಿಸಿದ್ದಾರೆ.

'ನೈಜ ಮತ್ತು ಸೂಕ್ತ ಪ್ರಶ್ನೆಗಳನ್ನು ಎತ್ತಿದಾಗ ಅವುಗಳಿಗೆ ನಿರಾಕರಣೆ, ದಾರಿ ತಪ್ಪಿಸುವ ಉತ್ತರಗಳು ಅಥವಾ ಮೌನವೇ ಎದುರಾಗುತ್ತಿದೆ. ಇದರ ಪರಿಣಾಮವಾಗಿ ಪ್ರಜಾಸತ್ತಾತ್ಮಕ ಸಂಸ್ಥೆಗಳ ಮೇಲಿನ ಜನರ ನಂಬಿಕೆ ಕ್ಷೀಣಿಸುತ್ತಿದೆ. ಜನರ ಆತಂಕಗಳನ್ನು ತಿರಸ್ಕರಿಸುವುದು ಪ್ರಜಾಪ್ರಭುತ್ವವನ್ನು ಹಾನಿಗೊಳಿಸುತ್ತದೆ. ಆಯೋಗವು ತಕ್ಷಣವೇ ಪಾರದರ್ಶಕ ಕ್ರಮ ತೆಗೆದುಕೊಳ್ಳಬೇಕು. ಹೊಣೆಗಾರಿಕೆ ತೋರಬೇಕು' ಎಂದು ಒತ್ತಾಯಿಸಿದ್ದಾರೆ.

ಒಂದೇ ಕುಟುಂಬದ ಏಳು ದಂಪತಿಯ ಷಷ್ಟ್ಯಬ್ದಿ

ಬೆಂಗಳೂರು: ನಗರ ಜಿಲ್ಲೆಯ ದಕ್ಷಿಣ ತಾಲ್ಲೂಕಿನಲ್ಲಿರುವ ತರಳು ಗ್ರಾಮದ ಒಂದೇ ಕುಟುಂಬ ಏಳು ದಂಪತಿಯು ಒಂದೇ ದಿನ ಷಷ್ಟ್ಯಬ್ದಿ ಆಚರಿಸಿಕೊಂಡಿದ್ದಾರೆ.

ಇಲ್ಲಿನ ದಿವಂಗತ ಶಂಕರನಾರಾಯಣ ರಾವ್ ಮತ್ತು ದಿವಂಗತ ಪಾರ್ವತಿ ಶಂಕರ್ ಅವರ ಆರು ಹೆಣ್ಣುಮಕ್ಕಳು ಮತ್ತು ಅಳಿಯಂದಿರು, ಒಬ್ಬ ಮಗ ಹಾಗೂ ಸೊಸೆ ಈಚೆಗೆ ಒಂದೇ ದಿನ ಷಷ್ಟ್ಯಬ್ದಿ ಆಚರಿಸಿದ್ದಾರೆ. ಶಂಕರನಾರಾಯಣ ರಾವ್ ಅವರು ಚಿಕ್ಕಮಗಳೂರಿನ ಕಡೂರಿನವರು.

'ಈ ಕುಟುಂಬದ 14 ಮಂದಿಗೂ 60 ವರ್ಷ ದಾಟಿದ್ದು ರಾಜ್ಯ, ದೇಶದ ವಿವಿಧೆಡೆ ಹಾಗೂ ವಿದೇಶಗಳಲ್ಲಿ ನೆಲಸಿದ್ದಾರೆ. ಎಲ್ಲರೂ ಪ್ರತ್ಯೇಕವಾಗಿ ಷಷ್ಟ್ಯಬ್ದಿ ಆಚರಿಸುವ ಬದಲಿಗೆ, ಒಂದೇ ಬಾರಿ ನಡೆಸಬೇಕು ಎಂದು ನಿರ್ಧರಿಸಲಾಗಿತ್ತು. ಅದರಂತೆ ಕುಟುಂಬದ ಎಲ್ಲರೂ ಜತೆಗೂಡಿ ಅಪರೂಪದ ಕ್ಷಣಕ್ಕೆ ಸಾಕ್ಷಿಯಾದೆವು' ಎಂದು ಡಾ.ಲಕ್ಷ್ಮೀನಾರಾಯಣಪ್ಪ ಅವರು ತಿಳಿಸಿದ್ದಾರೆ.

ರಂಗನಾಯಕಿ–ಲಕ್ಷ್ಮೀನಾರಾಯಣಪ್ಪ, ಸುಜಾತಾ–ಸುಧರ್ಮ, ಸುಧಾ–ರಂಗಸ್ವಾಮಿ, ಮಧುಮತಿ–ಮುರಳೀಧರ್, ಮೀನಾ–ಸುಬ್ಬುರಾವ್, ಕಲ್ಯಾಣಿ–ಸತೀಶ್ ಮತ್ತು ಲತಾ–ಜಗದೀಶ ರಾಜೇ ಅರಸ್ ಅವರು ಷಷ್ಟ್ಯಬ್ದಿ ಆಚರಿಸಿಕೊಂಡ ದಂಪತಿ.

ರೋರಿಚ್ ಎಸ್ಟೇಟ್ ಅಭಿವೃದ್ಧಿ ಸ್ಥಗಿತಗೊಳಿಸಿ: ಹೈಕೋರ್ಟ್ ತಾಕೀತು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನಕಪುರ ರಸ್ತೆಯಲ್ಲಿರುವ ತಾತಗುಣಿ ಎಸ್ಟೇಟ್‌ನಲ್ಲಿ ಯಾವುದೇ ರೀತಿಯ ಅಭಿವೃದ್ಧಿ ಚಟುವಟಿಕೆಗಳು ನಡೆಯುವುದಿಲ್ಲ ಎಂಬುದನ್ನು ಖಾತರಿಪಡಿಸಿ' ಎಂದು ಹೈಕೋರ್ಟ್, ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಗೆ ತಾಕೀತು ಮಾಡಿದೆ.

ಈ ಸಂಬಂಧ ರಾಜರಾಜೇಶ್ವರಿ ನಗರದ 'ಐ ಕೇರ್ ಟ್ರಸ್ಟ್'ನ ಸ್ಥಾಪಕ ಸದಸ್ಯೆ ನಿವೇದಿತಾ ಸುಂಕದ ಅವರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ವಿಚಾರಣೆ ವೇಳೆ ಅರ್ಜಿದಾರರ ಪರ ಹೈಕೋರ್ಟ್ ವಕೀಲ ಹರೀಶ್ ವಸಿಷ್ಠ ಅವರ ವಾದಕ್ಕೆ ಪ್ರತಿಯಾಗಿ, ಕೇಂದ್ರ ಸರ್ಕಾರದ ಪರ ಹಾಜರಿದ್ದ ಡೆಪ್ಯುಟಿ ಸಾಲಿಸಿಟರ್ ಜನರಲ್ ಎಚ್.ಶಾಂತಿಭೂಷಣ್ ಅವರು, 'ಯೋಜನೆಗೆ ಸಂಬಂಧಿಸಿದಂತೆ ಯಾವುದೇ ಪ್ರಸ್ತಾವವನ್ನು ಈತನಕ ಸ್ವೀಕರಿಸಿಲ್ಲ. ಈ ಹಂತದಲ್ಲಿ ಆಕ್ಷೇಪಾರ್ಹವಾದ ಯೋಜನೆಯನ್ನು ಜಾರಿಗೊಳಿಸಲಾಗದು' ಎಂದು ನ್ಯಾಯಪೀಠಕ್ಕೆ ಸ್ಪಷ್ಟಪಡಿಸಿದರು.

ರಾಜ್ಯ ಸರ್ಕಾರದ ಪರ ವಕೀಲರು 'ಅರ್ಜಿಗೆ ಸಂಬಂಧಿಸಿದಂತೆ ಆಕ್ಷೇಪಣೆ ಸಲ್ಲಿಸಲು ಕಾಲಾವಕಾಶ ನೀಡಬೇಕು' ಎಂದು ಕೋರಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ ವಿಚಾರಣೆಯನ್ನು ಫೆಬ್ರುವರಿ 16ಕ್ಕೆ ಮುಂದೂಡಿತು.

ಅರ್ಜಿಯಲ್ಲಿ ಏನಿದೆ?: ಬೆಂಗಳೂರು ನಗರ ಜಿಲ್ಲೆಯ ತಾತಗುಣಿಯಲ್ಲಿರುವ ರೋರಿಚ್ ಮತ್ತು ದೇವಿಕಾರಾಣಿ ಎಸ್ಟೇಟ್ ಅನ್ನು ಪರಿಸರ ಪ್ರವಾಸೋದ್ಯಮ ಮತ್ತು ಸಾಂಸ್ಕೃತಿಕ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸುವ ಯೋಜನೆಗೆ 50 ವರ್ಷಗಳ ಅಭಿವೃದ್ಧಿಗೆ ಬಡ್ಡಿರಹಿತ ಸಾಲದ ರೂಪದಲ್ಲಿ ₹99.17 ಕೋಟಿ ಒದಗಿಸಲಾಗಿದೆ. ಈ ಅಂದಾಜು ವೆಚ್ಚದಲ್ಲಿ ಪ್ರವಾಸೋದ್ಯಮ ಇಲಾಖೆಯ ಮುಖಾಂತರ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ (ಕೆಟಿಪಿಪಿ) ಕಾಯ್ದೆಯಡಿ ಟೆಂಡರ್ ಕರೆದು ಅನುಷ್ಠಾನಗೊಳಿಲು ತಾತ್ವಿಕ ಅನುಮೋದನೆ ನೀಡಿ ರಾಜ್ಯ ಸರ್ಕಾರ 2024ರ ಡಿಸೆಂಬರ್ 24ರಂದು ಆದೇಶಿಸಿತ್ತು.

ಇದನ್ನು ಪ್ರಶ್ನಿಸಿರುವ ಅರ್ಜಿದಾರರು, 'ರೋರಿಚ್ ಎಸ್ಟೇಟ್ ಜೀವವೈವಿಧ್ಯದ ತಾಣವಾಗಿದೆ. ಇಲ್ಲಿ ಅಭಿವೃದ್ಧಿ ಚಟುವಟಿಕೆಗೆ ಅವಕಾಶ ನೀಡಿದರೆ, ಅಗಣಿತ ಸಂಖ್ಯೆಯ ಜನರು ಇಲ್ಲಿಗೆ ಭೇಟಿ ನೀಡಲು ಅವಕಾಶ ಆಗುತ್ತದೆ. 450 ಕಾರುಗಳ ನಿಲುಗಡೆಗೆ ಸ್ಥಳ ಒದಗಿಸಲಾಗುತ್ತಿದೆ. ಆನೆಗಳ ಕಾರಿಡಾರ್ ಹೊಂದಿರುವ ಬನ್ನೇರುಘಟ್ಟ ಅರಣ್ಯ ವ್ಯಾಪ್ತಿಗೆ ಎಸ್ಟೇಟ್ ಒಳಪಡುತ್ತದೆ. ಆದೇಶದಿಂದ ಎಸ್ಟೇಟ್‌ನಲ್ಲಿ ಪರಿಸರಕ್ಕೆ ಹಾನಿ ಉಂಟಾಗಲಿದೆ' ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

'ಮಹಾ' ಗೆಲುವು: ಸಂಭ್ರಮ

5 ಪಾಲಿಕೆಗಳಲ್ಲೂ ನಾವೇ ಗೆಲ್ಲುತ್ತೇವೆ: ಅಶೋಕ ವಿಶ್ವಾಸ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಬೈ ಮಹಾನಗರದ ಜನತೆ ಬಿಜೆಪಿಯನ್ನು ಬೆಂಬಲಿಸಿದಂತೆ, ಜಿಬಿಎ ವ್ಯಾಪ್ತಿಯ ಎಲ್ಲ ಐದು ನಗರ ಪಾಲಿಕೆಗಳ ಚುನಾವಣೆಯಲ್ಲೂ ಬೆಂಗಳೂರಿನ ಜನತೆ ಬಿಜೆಪಿಗೆ ದೊಡ್ಡ ಮಟ್ಟದ ಆಶೀರ್ವಾದ ಮಾಡಲಿದ್ದಾರೆ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದ್ದಾರೆ.

ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆ ಮೂಲಕ ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷದ ಪತನದ ಹಾದಿ ಆರಂಭವಾಗುವುದು ನಿಶ್ಚಿತ ಎಂದು ಅವರು 'ಎಕ್ಸ್'ನಲ್ಲಿ ತಿಳಿಸಿದ್ದಾರೆ.

ಮಹಾರಾಷ್ಟ್ರದ ವಿಧಾನಸಭೆ ಚುನಾವಣೆಯಲ್ಲಿ ಅಭೂತಪೂರ್ವ ಗೆಲುವಿನ ನಂತರ ಈಗ ಮಹಾರಾಷ್ಟ್ರದ ಪ್ರತಿಷ್ಠಿತ ಬಿಎಂಸಿ, ಪುಣೆ, ನಾಗ್ಪುರ ಮತ್ತು ರಾಜ್ಯದ ಎಲ್ಲಾ ಪ್ರಮುಖ ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಬಿಜೆಪಿ ಮತ್ತು ಶಿವಸೇನೆ (ಏಕನಾಥ್ ಶಿಂಧೆ ಬಣ) ಮೈತ್ರಿಕೂಟ ಮತ್ತೊಮ್ಮೆ ಅಭೂತಪೂರ್ವ ಜಯಭೇರಿ ಬಾರಿಸಿದೆ ಎಂದು ಅವರು ಹೇಳಿದ್ದಾರೆ.

ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಮಾತನಾಡಿ, 'ಕೇಂದ್ರದ ಎನ್‌ಡಿಎ ಸರ್ಕಾರ ಮತ್ತು ಮಹಾರಾಷ್ಟ್ರದ ಬಿಜೆಪಿ ಸರ್ಕಾರದ ಜನಪರ ಕಾರ್ಯಗಳನ್ನು ಮೆಚ್ಚಿ ಜನತೆ ಗೆಲುವು ತಂದುಕೊಟ್ಟಿದ್ದಾರೆ' ಎಂದರು.

ಮಹಾರಾಷ್ಟ್ರ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಬಿಜೆಪಿ ಬಹುಮತ ಸಾಧಿಸಿದ ಕಾರಣ ಕಾರ್ಯಕರ್ತರು ವಿಜಯೋತ್ಸವ ಆಚರಿಸಿದರು

ಸಿಹಿ ಹಂಚಿ ಬಿಜೆಪಿ ವಿಜಯೋತ್ಸವ

ಮಹಾರಾಷ್ಟ್ರ ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಬಿಜೆಪಿ ಮತ್ತು ಮಿತ್ರಪಕ್ಷಗಳ ಜಯಭೇರಿ ಹಿನ್ನೆಲೆಯಲ್ಲಿ ಬೆಂಗಳೂರಿನ ರಾಜ್ಯ ಬಿಜೆಪಿ ಕಚೇರಿ ಬಳಿ ಪಟಾಕಿ ಸಿಡಿಸಿ, ಸಿಹಿ ಹಂಚಿ ವಿಜಯೋತ್ಸವ ಆಚರಿಸಲಾಯಿತು.

ಬಿಜೆಪಿಯ ಬೆಂಗಳೂರು ಉತ್ತರ ಜಿಲ್ಲಾ ಘಟಕದ ಅಧ್ಯಕ್ಷ ಎಸ್.ಹರೀಶ್ ಮಾತನಾಡಿ, 'ಮಹಾರಾಷ್ಟ್ರದ ಜನತೆ ಬಿಜೆಪಿ ಮತ್ತು ಮಿತ್ರ ಪಕ್ಷಗಳನ್ನು ಗೆಲ್ಲಿಸಿದ್ದಾರೆ. ಹೀನಾಯವಾಗಿ ಸೋತಿರುವ ಕಾಂಗ್ರೆಸ್ ಇವಿಎಂ ಹ್ಯಾಕ್ ಆಗಿದೆ ಎಂದು ಗೋಳಾಟ ಶುರು ಮಾಡಿದೆ. ಕೇರಳದ ತಿರುವನಂತಪುರದಲ್ಲೂ ನಾವು ಗೆದ್ದಿದ್ದೇವೆ. ದೇಶದ ಉದ್ದಗಲ ಜನತೆಗೆ ಬಿಜೆಪಿಗೆ ಮನ್ನಣೆ ನೀಡಿದ್ದಾರೆ' ಎಂದರು.

ಬಿಡಿಎ: 83 ನಿವೇಶನಗಳ ಹರಾಜು

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಹಲವು ವರ್ಷಗಳ ಹಿಂದೆ ಅಭಿವೃದ್ಧಿಪಡಿಸಿದ ಬಡಾವಣೆಗಳಲ್ಲಿನ 83 ನಿವೇಶನಗಳನ್ನು ಇ-ಹರಾಜು ಮೂಲಕ ಮಾರಾಟ ಮಾಡಲಿದೆ.

ವಸತಿ, ವಾಣಿಜ್ಯ ಮತ್ತು ಮಧ್ಯಂತರ ನಿವೇಶನಗಳ ಇ–ಹರಾಜು ಪ್ರಕ್ರಿಯೆ ಜನವರಿ 27ರಿಂದ ಆರಂಭವಾಗಲಿದ್ದು, ಹಾಲಿ ಯಾವ ಸ್ಥಿತಿಯಲ್ಲಿ ಇವೆಯೋ ಹಾಗೆಯೇ ನಿವೇಶನಗಳನ್ನು ಮಾರಾಟ ಮಾಡಲಾಗುತ್ತದೆ. ಆಸಕ್ತರು ಫೆಬ್ರವರಿ 13ರೊಳಗೆ ಅರ್ಜಿಗಳನ್ನು ಸಲ್ಲಿಸಬೇಕು. ಫೆಬ್ರವರಿ 17 ಮತ್ತು 18ರಂದು ಹರಾಜು ನಡೆಯಲಿದೆ.

ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ನಿವೇಶನಗಳು ಇರುವ ಸ್ಥಳಗಳ ವಿವರಗಳನ್ನು ಅವುಗಳ ಭೌಗೋಳಿಕ ಸಂಯೋಜನೆಗಳ ಜೊತೆಗೆ ಪ್ರಕಟಿಸಿದೆ. ಆರಂಭಿಕ ಬಿಡ್ ದರ ₹500 ಪ್ರತಿ ಚದರ ಮೀಟರ್‌ನಿಂದ ಇರಲಿದೆ. ಅರ್ಕಾವತಿ ಬಡಾವಣೆ, ಬನಶಂಕರಿ 6ನೇ ಹಂತ, ಜೆ.ಪಿ ನಗರ 9ನೇ ಹಂತ ಮತ್ತು ಅಂಜನಾಪುರ ಬಡಾವಣೆಗಳಲ್ಲಿ ನಿವೇಶನಗಳನ್ನು ಮಾರಾಟ ಮಾಡಲಾಗುತ್ತದೆ.

ಪ್ರಾಧಿಕಾರವು ತಿಂಗಳು ಅಥವಾ ಎರಡು ತಿಂಗಳಿಗೊಮ್ಮೆ ಇ–ಹರಾಜು ನಡೆಸುತ್ತದೆ.

ಕರಾವಳಿ ದೈವಗಳ ಕುರಿತ ಕೃತಿ ಜನಾರ್ಪಣೆ

ಬೆಂಗಳೂರು: ಅಲಯನ್ಸ್ ವಿಶ್ವವಿದ್ಯಾಲಯ ಮತ್ತು ತುಳು ವರ್ಲ್ಡ್ ಫೌಂಡೇಷನ್ ಜಂಟಿಯಾಗಿ ನಗರದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಲಕ್ಷ್ಮೀ ಜಿ. ಪ್ರಸಾದ್ ಅವರ 'ದಿ ಥೌಸಂಡ್ ಆ್ಯಂಡ್ ಒನ್ ದೈವಾಸ್ ಆಫ್ ಕರಾವಳಿ' ಪುಸ್ತಕ ಜನಾರ್ಪಣೆಯಾಯಿತು.

ಇದು 'ಕರಾವಳಿಯ ಸಾವಿರದೊಂದು ದೈವಗಳು' ಪುಸ್ತಕದ ಇಂಗ್ಲಿಷ್ ಆವೃತ್ತಿಯಾಗಿದೆ. ತುಳು ವರ್ಲ್ಡ್ ಫೌಂಡೇಷನ್‌ನ ಅಧ್ಯಕ್ಷ ಸರ್ವೋತ್ತಮ ಶೆಟ್ಟಿ ಅವರು ಪುಸ್ತಕ ಜನಾರ್ಪಣೆ ಮಾಡಿದರು. ಕಾರವಾರದಿಂದ ಕೊಟ್ಟಾಯಂವರೆಗಿನ ಕೊಡವ, ಕನ್ನಡ, ತುಳು, ಮಲಯಾಳ ಭಾಷಾ ಪರಿಸರದ 1,259 ದೈವಗಳ ಸಚಿತ್ರ ಮಾಹಿತಿಯುಳ್ಳ ಗ್ರಂಥವನ್ನು ಅಶ್ವಿನಿ ಭಟ್ ಇಂಗ್ಲಿಷ್‌ಗೆ ಅನುವಾದಿಸಿದ್ದಾರೆ.

ಗ್ರಂಥದ ಲೇಖಕಿ ಲಕ್ಷ್ಮೀ ಜಿ. ಪ್ರಸಾದ್, ಅನುವಾದಕಿ ಅಶ್ವಿನಿ ಭಟ್, ಬೋರ್ಲ ರತ್ನಾಕರ ಶೆಟ್ಟಿ ಮುಂಬೈ, ಮಂಜುಳಾ ಕಾಸರಗೋಡು, ಎ.ಎಂ. ಶ್ರೀಧರನ್, ವೈ.ಎನ್. ಶೆಟ್ಟಿ, ದೇವಾನಂದ ಶೆಟ್ಟಿ ಬಸ್ರೂರು, ಕಿಶೋರ್ ರೈ ಶೇಣಿ, ರಾಜೇಶ್ ಆಳ್ವ ಉಪಸ್ಥಿತರಿದ್ದರು.

ಬೆಂಗಳೂರು ಉತ್ತರ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಯಲಹಂಕ ವಲಯ–2, ದಾಸರಹಳ್ಳಿ ವಿಭಾಗ, ಎಂಇಐ ಲೇಔಟ್, ಹೆಸರಘಟ್ಟ ಮುಖ್ಯರಸ್ತೆ, ಬಾಗಲಗುಂಟೆ, ಟಿ. ದಾಸರಹಳ್ಳಿ, ಬೆಂಗಳೂರು – 560073.

ಸಂಖ್ಯೆ: ಬೆಂಉನಪಾ/ಕಾಅ/ದಾವಿ/ಟೆಂಡರ್/03/2025–26 ದಿನಾಂಕ: 16–01–2026

ಅಲ್ಪಾವಧಿ ಟೆಂಡರ್ ಅಧಿಸೂಚನೆ
(ದ್ವಿ–ಲಕೋಟೆ ಪದ್ಧತಿ) (ಜಿಟಿಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ದಾಸರಹಳ್ಳಿ ವಿಭಾಗ, ಯಲಹಂಕ ವಲಯ–2, ಬೆಂಉನಪಾ, ಬೆಂಗಳೂರು ಇವರು ಈ ಕೆಳಕಂಡ ಸೇವೆಗಾಗಿ ನೋಂದಾಯಿತ ಏಜೆನ್ಸಿದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಸೇವೆಯ ಹೆಸರು
1	ರಾಜರಾಜೇಶ್ವರಿನಗರ ಮತಕ್ಷೇತ್ರದ ವಾರ್ಡ್ ಸಂಖ್ಯೆ. 17, ಜೆ.ಪಿ. ಪಾರ್ಕ್ ಇಲ್ಲಿನ ಪುರುಷರು ಹಾಗೂ ಮಹಿಳೆಯರ ಜಿಮ್ ಕಟ್ಟಡದ (2ನೇ ಮತ್ತು 3ನೇ ಮಹಡಿ) ಯಲ್ಲಿ ಕಾರ್ಯಾಚರಣೆ, ಮೇಲ್ವಿಚಾರಣೆ ಮತ್ತು ನಿರ್ವಹಣೆ. **ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 97,800/–**

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಟಿಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ವೆಬ್‌ಸೈಟ್: **https://kppp.karnataka.gov.in** ನಲ್ಲಿ ದಿನಾಂಕ: **21–01–2026 ರ ನಂತರ** ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಟೆಂಡರ್ ವಿಚಾರಣೆಗಳಿಗೆ ಕೊನೆಯ ದಿನಾಂಕ ಮತ್ತು ಸಮಯ: **26–01–2026 ರಂದು ಸಂಜೆ 4.00 ಗಂಟೆವರೆಗೆ.** 3) ಬಿಡ್ ಪೂರ್ವಭಾವಿ ಸಭೆಯ ದಿನಾಂಕ: **27–01–2026 ರಂದು ಮಧ್ಯಾಹ್ನ 3.00 ಗಂಟೆಗೆ ಮುಖ್ಯ ಅಭಿಯಂತರರ ಕಛೇರಿ, ಯಲಹಂಕ ವಲಯ–2 ಇಲ್ಲಿ ನಡೆಯುವುದು.** 4) ಟೆಂಡರ್ ಡಾಕ್ಯೂಮೆಂಟ್‌ನ್ನು ಸಲ್ಲಿಸುವ ಕೊನೆಯ ದಿನಾಂಕ: **31–01–2026 ರಂದು ಸಂಜೆ 4.00 ಗಂಟೆವರೆಗೆ.** 5) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **02–02–2026 ರಂದು ಬೆಳಿಗ್ಗೆ 11.00 ಗಂಟೆಗೆ.** 6) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: **ತಾಂತ್ರಿಕವಾಗಿ ಅರ್ಹ ಬಿಡ್ಡುದಾರರಿಗೆ ತಿಳಿಸಲಾಗುವುದು.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು
ದಾಸರಹಳ್ಳಿ ವಿಭಾಗ, ಯಲಹಂಕ ವಲಯ–2, ಬೆಂಉನಪಾ.

ನಾಗವಾರ ಪ್ರಥಮ ಸ್ಮರಣೆ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿಯು (ಕೆಆರ್‌ಡಿಎಸ್‌ಎಸ್) ಇದೇ 18ರಂದು ಗಾಂಧಿ ಭವನದಲ್ಲಿ ಲಕ್ಷ್ಮೀನಾರಾಯಣ ನಾಗವಾರ ಅವರ ಪ್ರಥಮ ವರ್ಷದ ಸ್ಮರಣೆ ಅಂಗವಾಗಿ ಸಮಾನತೆಯ ಹಾದಿಯಲ್ಲಿ ಲಕ್ಷ್ಮೀನಾರಾಯಣ ನಾಗವಾರ–ಹೋರಾಟಗಾರನ ಅಳಿಯದ ನೆನಪು ಕಾರ್ಯಕ್ರಮ ಹಮ್ಮಿಕೊಂಡಿದೆ' ಎಂದು ಸಮಿತಿಯ ರಾಜ್ಯ ಕಾರ್ಯಕಾರಿ ಸಂಚಾಲಕ ಜೀವನಹಳ್ಳಿ ವೆಂಕಟೇಶ್ ಶುಕ್ರವಾರ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಲಕ್ಷ್ಮೀನಾರಾಯಣ ನಾಗವಾರ ಅಹಿಂದ ಚಳವಳಿಗೆ ಶಕ್ತಿ ತುಂಬಿದವರು. ಬೀದಿ ಸಂಘರ್ಷಕ್ಕಷ್ಟೇ ಸೀಮಿತವಾಗದೆ, ರಾಜಕೀಯ ನಾಯಕರು ಮತ್ತು ಚಳವಳಿ ನಡುವಿನ ಬಲಿಷ್ಠ ಕೊಂಡಿಯಾಗಿದ್ದರು. ದಲಿತರು ಮತ್ತು ಶೋಷಿತರ ಏಳಿಗೆಗೆ ನೀತಿಗಳು ರೂಪುಗೊಳ್ಳುವಲ್ಲಿ ಶ್ರಮಿಸಿದ್ದರು' ಎಂದು ಹೇಳಿದರು.

ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ
ಎಲ್.ಆರ್.ಡಿ.ಇ ಕಟ್ಟಡ, ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು – 560052
ದೂರವಾಣಿ ಸಂಖ್ಯೆ: 080–22263479

ಸಂಖ್ಯೆ: STRRPA/TP/CLU/123/2025-26 ದಿನಾಂಕ: 14–01–2026

"ಪ್ರಕಟಣೆ"

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **"ವ್ಯವಸಾಯ"** ವಲಯದಿಂದ **"ವಸತಿ"** ಭೂಉಪಯೋಗಕ್ಕೆ, ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತವೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು ಮತ್ತು ವಿಳಾಸ	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ.	ವಿಸ್ತೀರ್ಣ ಎ–ಗು	ಅನುಮೋದಿತ ಮಹಾ ಯೋಜನೆಯಂತೆ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	ಶ್ರೀಮತಿ ಪಾರ್ವತಮ್ಮ ಕೋಂ. ಲೇಟ್ ಚಂದ್ರಪ್ಪ, ಹೊನ್ನೇನಹಳ್ಳಿ, ಸೋಂಪುರ ಹೋಬಳಿ, ನೆಲಮಂಗಲ ತಾಲ್ಲೂಕು.	ನೆಲಮಂಗಲ	ಸೋಂಪುರ	ಹೊನ್ನೇನಹಳ್ಳಿ	65/2	3–12	ವ್ಯವಸಾಯ	ವಸತಿ
2	ಶ್ರೀ ಸಿದ್ದಗಂಗಪ್ಪ ಬಿನ್ ಮುದ್ದನಾಗಪ್ಪ, ಹೊನ್ನೇನಹಳ್ಳಿ, ಸೋಂಪುರ ಹೋಬಳಿ, ನೆಲಮಂಗಲ ತಾಲ್ಲೂಕು.	ನೆಲಮಂಗಲ	ಸೋಂಪುರ	ಹೊನ್ನೇನಹಳ್ಳಿ	65/8	0–28	ವ್ಯವಸಾಯ	ವಸತಿ

ಷರಾ:– ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನಿನಲ್ಲಿ ವಸತಿ ಬೆಳವಣಿಗೆಗಳು ಬಂದಿದ್ದು, ಸುತ್ತಮುತ್ತ ವಾಸದ ಉದ್ದೇಶಕ್ಕಾಗಿ ಬೇಡಿಕೆ ಇದ್ದು, ಪ್ರಸ್ತುತ ಜಮೀನಿನಲ್ಲಿ ಯೋಜಿತ ಬೆಳವಣಿಗೆಯ ಅಭಿವೃದ್ಧಿಪಡಿಸುವುದರಿಂದ ಸುತ್ತಮುತ್ತಲಿನ ನಿವಾಸಿಗಳಿಗೆ ಉದ್ಯೋಗಾವಕಾಶ ಕಲ್ಪಿಸಿದಂತಾಗುತ್ತದೆ, ಪ್ರಸ್ತುತ ಜಮೀನು ಭೂಉಪಯೋಗ ಬದಲಾವಣೆಗೊಂಡು ನಂತರ ವಸತಿ ಬಡಾವಣೆಯನ್ನು ಅಭಿವೃದ್ಧಿಗೊಳಿಸುವ ಸಂದರ್ಭದಲ್ಲಿ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರೆತಂತಾಗುತ್ತದೆ. ಪ್ರಸ್ತುತ ಜಮೀನುಗಳು ಭೂಉಪಯೋಗ ಬದಲಾವಣೆಗೊಂಡ ನಂತರ ವಸತಿ ಉದ್ದೇಶಕ್ಕೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಯಾದ ವಿನ್ಯಾಸದಲ್ಲಿ ನಿವೇಶನಗಳನ್ನು ಕಡಿಮೆ ದರದಲ್ಲಿ ತೆಗೆದುಕೊಳ್ಳಲು ಸಾರ್ವಜನಿಕರಿಗೆ ಅನುಕೂಲವಾಗುವುದು ಎಂದು ಸಾರ್ವಜನಿಕ ಹಿತಾಸಕ್ತಿ ಅಂಶವಾಗಿ ತಿಳಿಸಿರುತ್ತಾರೆ.

ಸಹಿ/–
ಸದಸ್ಯ ಕಾರ್ಯದರ್ಶಿಗಳು ಹಾಗೂ
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ,
ಬೆಂಗಳೂರು.

ವಾಸಾಸಂಇ/ವಾ.ಪ್ರ/5066/ಅಡ್ವರ್ಟೋ/2025–26

ನಗರದಲ್ಲಿ ಇಂದು

ಬೆಂಗಳೂರು ಹಬ್ಬದ ಭಾಗವಾಗಿ ಊಟ, ಆಟ, ಪಾಠ, ಡೇಟಾ: ಆಯೋಜನೆ ಹಾಗೂ ಸ್ಥಳ: ನ್ಯಾಷನಲ್ ಗ್ಯಾಲರಿ ಆಫ್ ಮಾಡರ್ನ್ ಆರ್ಟ್ (ಎನ್‌ಜಿಎಂಎ), ಬೆಳಿಗ್ಗೆ 10

ಕ್ಷೀರ ಸಂಜೀವಿನಿ ಯೋಜನೆಯ ದಶಮಾನೋತ್ಸವ ಪ್ರಯುಕ್ತ ಪ್ರಗತಿಪರ ಮಹಿಳಾ ಹೈನುಗಾರರ ಸಮಾವೇಶ ಮತ್ತು ತಾಂತ್ರಿಕ ವಿಚಾರಗೋಷ್ಠಿ: ಬೆಳಿಗ್ಗೆ 10ರಿಂದ ವಿವಿಧ ವಿಷಯಗಳ ಮೇಲೆ ವಿಚಾರಗೋಷ್ಠಿ, ಮಧ್ಯಾಹ್ನ 3.30ಕ್ಕೆ ಸಮಾರೋಪ ಸಮಾರಂಭ: ಉದ್ಘಾಟನೆ: ಸಿದ್ದರಾಮಯ್ಯ, ಪ್ರಗತಿಪರ ಮಹಿಳಾ ಹೈನುಗಾರರಿಗೆ ಸನ್ಮಾನ: ಡಿ.ಕೆ. ಶಿವಕುಮಾರ್, ಕಿರುಚಿತ್ರ ಬಿಡುಗಡೆ: ಶರಣಪ್ರಕಾಶ ಪಾಟೀಲ, ಕೃಷ್ಣ ಬೈರೇಗೌಡ, ಅಧ್ಯಕ್ಷತೆ: ಕೆ.ವೆಂಕಟೇಶ್, ಆಯೋಜನೆ: ಕೆಎಂಎಫ್, ಸಂಜೀವಿನಿ–ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನಾ ಸಂಸ್ಥೆ, ರಾಜ್ಯದ ಎಲ್ಲ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ, ಸ್ಥಳ: ಡಾ.ಬಾಬು ರಾಜೇಂದ್ರ ಪ್ರಸಾದ್ ಅಂತರರಾಷ್ಟ್ರೀಯ ಸಮ್ಮೇಳನ ಕೇಂದ್ರ, ಜಿಕೆವಿಕೆ

ಮನೆಯಂಗಳದಲ್ಲಿ ಮಾತುಕತೆ: ತಿಂಗಳ ಅತಿಥಿ: ಎಚ್. ಜನಾರ್ದನ್ (ಜನ್ನಿ), ಉಪಸ್ಥಿತಿ: ಕೆ.ಎಂ.ಗಾಯಿತ್ರಿ, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ.ರಸ್ತೆ, ಮಧ್ಯಾಹ್ನ 3

ಜನಾರ್ದನ್

ತಿಂಗಳ ನಾಟಕ ಸಂಭ್ರಮ: ಅತಿಥಿ: ಜಪ್ಪ, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ಮಹಾದೇವ ಹಡಪದ ಅವರ ನಿರ್ದೇಶನದಲ್ಲಿ 'ಗುಡಿಯ ನೋಡಿರಣ್ಣ' ನಾಟಕ ಪ್ರದರ್ಶನ, ಆಯೋಜನೆ: ಕರ್ನಾಟಕ ನಾಟಕ ಅಕಾಡೆಮಿ, ಸ್ಥಳ: ಸಮುಚ್ಚಯ ಭವನ, ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 6.30

'ಉದ್ಯೋಗ ಖಾತರಿ ಧ್ವಂಸದ ವಿಬಿ ಜಿ ರಾಮ್–ಜಿ ಕಾನೂನಿನ ಅಪಾಯ ಮತ್ತು ಮುನ್ನೆಚ್ಚರಿಕೆ' ರಾಜ್ಯಮಟ್ಟದ ವಿಚಾರ ಸಂಕಿರಣ: ಆಶಯ ನುಡಿ: ಎಸ್.ಜಿ. ಸಿದ್ಧರಾಮಯ್ಯ, ಭಾಗವಹಿಸುವವರು: ಕೆ.ಪಿ. ಸುರೇಶ್, ಶಾರದಾ ಗೋಪಾಲ, ದೇವಿ, ರೇಣುಕಾ, ಪುಟ್ಟಮಾದು, ಪರಶುರಾಮ್, ಮಹಾಂತೇಶ್, ಗುತ್ತೆಮ್ಮ ಸುಣಗಾರ್, ಕೆ.ಮಂಜುನಾಥ್, ಪ್ರಕಾಶ್ ಕಮ್ಮರಡಿ, ಚುಕ್ಕಿ ನಂಜುಂಡಸ್ವಾಮಿ, ವೀರಸಂಗಯ್ಯ, ಇಂಧೂದರ ಹೊನ್ನಾಪುರ, ಟಿ.ಯಶವಂತ್, ಸಿರಿಮನೆ ನಾಗರಾಜ್, ಜಿ.ಬಿ. ಶಿವರಾಜು, ಮೈತ್ರೇಯಿ ಕೃಷ್ಣನ್, ಬಿ.ಆರ್. ಪಾಟೀಲ, ಆಯೋಜನೆ: ಮನರೇಗಾ ರಕ್ಷಣಾ ಒಕ್ಕೂಟ–ಕರ್ನಾಟಕ, ಸ್ಥಳ: ಗಾಂಧಿಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10.30

ವಾರ್ಷಿಕ ಸಮಾರಂಭ: ಎಂ.ವಿ.ಷಡಕ್ಷರಿ ಅವರು ರಚಿಸಿರುವ 'ಮರಳಿ ಗೂಡಿಗೆ' ಪುಸ್ತಕ ಬಿಡುಗಡೆ ಹಾಗೂ ಪ್ರಶಸ್ತಿ ಪ್ರದಾನ, ಉದ್ಘಾಟನೆ: ಸತ್ಯಾನಂದ ಪಾತ್ರೋಟ, ಅಧ್ಯಕ್ಷತೆ: ಮನು ಬಳಿಗಾರ್, ಆಯೋಜನೆ: ಕಲ್ಪತರು ಸಾಹಿತ್ಯ ಕಲಾ ಟ್ರಸ್ಟ್, ಸ್ಥಳ: ಕೃಷ್ಣರಾಜ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಮಧ್ಯಾಹ್ನ 2.30

ಮನು ಬಳಿಗಾರ್

ರಾಜ್ಯಮಟ್ಟದ ಐದು ದಿನಗಳ ಜಾನಪದ ನಾಟಕಗಳ ಉತ್ಸವ: ಉಪನ್ಯಾಸ: ದರ್ಶಿನಿ ಎನ್., ರೇಖಾ, ಅಮರೇಶ್ವರ ವಿಜಯ ನಾಟಕ ಮಂಡಳಿಯಿಂದ 'ಸಾಲದ ಮಗು' ನಾಟಕ ಪ್ರದರ್ಶನ, ಆಯೋಜನೆ: ನಾಟ್ಯ ಸರಸ್ವತಿ ಶಾಂತಲಾ ಕನ್ನಡ ಕಲಾ ಸಂಘ, ಸ್ಥಳ: ಗಂಗಮ್ಮ ಪಟೇಲ್ ಮುದ್ದಬೈರಪ್ಪ ಸಭಾಂಗಣ, ನ್ಯೂ ಮಂಜುಳ ಪಬ್ಲಿಕ್ ಸ್ಕೂಲ್, ಗೃಹಲಕ್ಷ್ಮಿ ಬಡಾವಣೆ, ನೆಲಗದರನಹಳ್ಳಿ, ಮಧ್ಯಾಹ್ನ 1

ಗಣರಾಜ್ಯೋತ್ಸವ ಫಲಪುಷ್ಪ ಪ್ರದರ್ಶನದ ಪ್ರಯುಕ್ತ ಇಕೆಬಾನ, ಪುಷ್ಪಭಾರತಿ, ಪುಷ್ಪ ರಂಗೋಲಿ, ತರಕಾರಿ ಕೆತ್ತನೆ, ಡಚ್ ಹೂವಿನ ಜೋಡಣೆ, ಥಾಯ್ ಆರ್ಟ್, ಜಾನೂರು ಮತ್ತು ಬೋನ್ಸಾಯ್ ಗಿಡಗಳ ಪ್ರದರ್ಶನದ ಉದ್ಘಾಟನೆ: ಕೆ.ಪಿ. ಸುಶ್ಮಿತಾ, ಕೆ.ಪಿ.ಈಶಾನ್ಯೆ, ಉಪಸ್ಥಿತಿ: ವೈ.ಎಸ್.ಪಾಟೀಲ, ಎಂ.ಜಗದೀಶ್, ಆಯೋಜನೆ: ತೋಟಗಾರಿಕೆ ಇಲಾಖೆ, ಸ್ಥಳ: ತೋಟಗಾರಿಕೆ ಮಾಹಿತಿ ಕೇಂದ್ರ, ಲಾಲ್‌ಬಾಗ್, ಮಧ್ಯಾಹ್ನ 1

'ಸೀತಾಪಹಾರ' ಯಕ್ಷಗಾನ ತಾಳಮದ್ದಳೆ: ಹಿಮ್ಮೇಳ: ಬಾಲಕೃಷ್ಣ ಹಿಲ್ಲೋಡಿ, ನಂದನ್ ಹೆಗಡೆ ದಂಟಕಲ್, ಆಗ್ನೇಯ ಭಟ್ ಕ್ಯಾಸನೂರು, ನಾರಾಯಣ ಮೂರ್ತಿ ಹೊಸಬಾಳೆ, ಮಿತ್ರ ಮಧ್ಯಸ್ಥ, ಮುಮ್ಮೇಳ: ಶಶಾಂಕ್ ಆರ್ನಾಡಿ, ಮಿತ್ರ ಮಧ್ಯಸ್ಥ, ರವಿ ಐತುಮನೆ, ಚಂದನ್ ಕಲಾಹಂಸ, ಆನಂದ್ ಶೀಗೇಹಳ್ಳಿ, ಅಕ್ಷಯ್ ಹೆಗಡೆ ಹೂಡ್ಲಮನೆ, ಆಯೋಜನೆ: ನಿರ್ಮಾಣ್ ಯಕ್ಷಬಳಗ, ಸ್ಥಳ: ಸಂಕಷ್ಟಹರ ಗಣಪತಿ ದೇವಸ್ಥಾನ, ಹಂಪಿನಗರ, ಸಂಜೆ 4

ಐತಿಹಾಸಿಕ ರತ್ನ ಎಸ್.ಶ್ರೀಕಂಠಯ್ಯ ಸ್ಮಾರಕ ದತ್ತಿ ಉಪನ್ಯಾಸ: ಕ್ಯಾಥರೀನ್ ಇ. ಕ್ಯಾಸ್ಡಾರ್ಫ್, ಆಯೋಜನೆ ಹಾಗೂ ಸ್ಥಳ: ದಿ ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಸಂಜೆ 4

ಜೈನ ಸಾಹಿತ್ಯ ಸಿರಿ: 'ಜನ್ನನ ಯಶೋಧರ ಚರಿತೆ: ಒಂದು ವಿಶ್ಲೇಷಣೆ' ವಿಷಯದ ಬಗ್ಗೆ ಉಪನ್ಯಾಸ: ಶಾಂತಿನಾಥ ದಿಬ್ಬದ, ಅಧ್ಯಕ್ಷತೆ: ರತ್ನಾಕರ ಪಿ., ಉಪಸ್ಥಿತಿ: ಮಮತಾ ಕಾಂತರಾಜ್, ನಾಗಶ್ರೀ ಮುಪ್ಪಾನೆ, ಆಯೋಜನೆ: ಜೈನ್ ಮಿಲನ್ ಬೆಂಗಳೂರು ಸೆಂಟ್ರಲ್, ಚಕ್ರೇಶ್ವರಿ ಮಹಿಳಾ ಸಮಾಜ, ಸ್ಥಳ: ಚಕ್ರೇಶ್ವರಿ ಮಹಿಳಾ ಸಮಾಜ, ಆನೆಬಂಡೆ ರಸ್ತೆ, ಜಯನಗರ 3ನೇ ಬಡಾವಣೆ, ಸಂಜೆ 4.30

ಭರತನಾಟ್ಯ ರಂಗಪ್ರವೇಶ: ಸೋನಿಕಾ ಸತೀಶ್, ಆಯೋಜನೆ: ನಾಟ್ಯಾಂಜಲಿ ನೃತ್ಯ ಶಾಲೆ, ಸ್ಥಳ: ಡಾ.ಡಿ.ಪ್ರೇಮಚಂದ್ರ ಸಾಗರ್ ಸಭಾಂಗಣ, ಕುಮಾರಸ್ವಾಮಿ ಲೇಔಟ್, ಸಂಜೆ 5

ಬೆಂಗಳೂರು ಹಬ್ಬ: ಸಂಗೀತ ಕಾರ್ಯಕ್ರಮ, ಆಯೋಜನೆ: ಅನ್ ಬಾಕ್ಸಿಂಗ್ ಬಿಎಲ್‌ಆರ್, ಸ್ಥಳ: ಸ್ವಾತಂತ್ರ್ಯ ಉದ್ಯಾನ, ಸಂಜೆ 5.30

ಪಾವಗಡ ಪ್ರಕಾಶರಾವ್ ಅವರಿಂದ ಕವಿ ಲಕ್ಷ್ಮೀಶರ 'ಜೈಮಿನಿ ಭಾರತ' ಉಪನ್ಯಾಸ ಮಾಲಿಕೆ: ಅತಿಥಿಗಳು: ಕೆ.ಶ್ರೀಧರ್ ರಾವ್, ಎಸ್.ರಘುನಾಥ್, ಆಯೋಜನೆ: ಡಾ.ಪಾವಗಡ ಪ್ರಕಾಶರಾಯರ ಅಮೃತ ಮಹೋತ್ಸವ ಸಮಿತಿ, ಸ್ಥಳ: ಪತ್ತಿ ಸಭಾಂಗಣ, ಶ್ರೀರಾಮಮಂದಿರ, ಎನ್.ಆರ್. ಕಾಲೊನಿ, ಸಂಜೆ 5.45

ಮೃದಂಗ ವಿದ್ವಾನ್ ಬೆಂಗಳೂರು ರಾಮನಾಥ್ ಸ್ಮರಣಾರ್ಥ ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ: ಗಾಯನ: ಲಾವಣ್ಯ ಕೃಷ್ಣಮೂರ್ತಿ, ಪಿಟೀಲು: ಕಾರ್ತಿಕೇಯ ರಾಮಚಂದ್ರ, ಮೃದಂಗ: ಫಣೀಂದ್ರ ಭಾಸ್ಕರ್, ಘಟ: ಸ್ಕಂದ ಮಂಜುನಾಥ, ಆಯೋಜನೆ: ವಿದ್ವಾನ್ ಶ್ರೀ ಕೆ.ಎಸ್. ಕೃಷ್ಣಮೂರ್ತಿ ಗುರುವಂದನಾ ಸಮಿತಿ ಟ್ರಸ್ಟ್, ಸ್ಥಳ: ಜಯಮಾರುತಿ ಸೇವಾ ಸಮಿತಿ, ಕಮಲಾನಗರ ಮುಖ್ಯರಸ್ತೆ, ಬಸವೇಶ್ವರನಗರ, ಸಂಜೆ 6.15

ಸಿರಿಕಲಾ ಮಹಿಳಾ ಯಕ್ಷೋತ್ಸವ: 'ವೀರ ಅಭಿಮನ್ಯು' ಯಕ್ಷಗಾನ ಪ್ರದರ್ಶನ, ಅತಿಥಿಗಳು: ಚಂದ್ರಶೇಖರ್ ಹೆಬ್ಬಾರ್, ಆನಗಳ್ಳಿ ಕರುಣಾಕರ ಹೆಗ್ಡೆ, ದೀಪಕ್ ಶೆಟ್ಟಿ, ಎಂ.ಆರ್. ಭಟ್, ಪಿ.ಸಿ.ರಾವ್, ಅಮರನಾಥ ಶೆಟ್ಟಿ, ಅಂಪಾರು ದಿನೇಶ್ ವೈದ್ಯ, ರಾಜೇಶ್ ಶೆಟ್ಟಿ ಕುತ್ಯಾರು, ಶ್ಯಾಮಸುಂದರ ಹೆಗಡೆ, ರಾಘವೇಂದ್ರ ಹತ್ವಾರ್, ಆಯೋಜನೆ: ಸಿರಿಕಲಾ ಮೇಳ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಸಂಜೆ 6.30

ಪುರಂದರದಾಸರ ಆರಾಧನಾ ಸಂಗೀತೋತ್ಸವ: ಸಾನ್ನಿಧ್ಯ: ಸುವಿದ್ಯೇಂದ್ರತೀರ್ಥ ಸ್ವಾಮೀಜಿ, ಅತಿಥಿಗಳು: ಗುತ್ತಲ್ ರಂಗಚಾರ್, ಸತ್ಯಧ್ಯಾನಾಚಾರ್ ಕಟ್ಟಿ, ವಿದ್ಯಾಧೀಶಾಚಾರ್ಯ ಗುತ್ತಲ್, ಮುದ್ದುಮೋಹನ್, ಎಂ.ಆರ್.ವಿ. ಪ್ರಸಾದ್, 'ಮಧ್ವ ಪುರಂದರ ಪ್ರಶಸ್ತಿ' ಪ್ರದಾನ: ಕೃಷ್ಣ ಕೊಲ್ಹಾರ ಕುಲಕರ್ಣಿ, 'ಹರಿದಾಸ ಅನುಗ್ರಹ ಪ್ರಶಸ್ತಿ' ಪ್ರದಾನ: ಸ್ವಾಮಿರಾವ್ ಕುಲಕರ್ಣಿ, ರವೀಂದ್ರ ಕುಷ್ಟಗಿ, ರಾಘವೇಂದ್ರ ಗಣಪತಿ, ಆಯೋಜನೆ: ಶ್ರೀನಿವಾಸ ಉತ್ಸವ ಬಳಗ, ಸ್ಥಳ: ಪುರಂದರದಾಸರ ಬೃಹತ್ ಶಿಲಾವಿಗ್ರಹ ಸನ್ನಿಧಾನ, ದಿಗ್ವಿಜಯ ಲಕ್ಷ್ಮೀನರಸಿಂಹ ದೇವಸ್ಥಾನದ ಆವರಣ, ಉತ್ತರಾದಿಮಠ, ಬಸವನಗುಡಿ, ಸಂಜೆ 6.30

ಬೆಂಗಳೂರು ಹಬ್ಬ: ಏಕವ್ಯಕ್ತಿ ಗಿಟಾರ್ ಕಾರ್ಯಕ್ರಮ, ಆಯೋಜನೆ ಹಾಗೂ ಸ್ಥಳ: ಇಂಡಿಯನ್ ಹೆರಿಟೇಜ್ ಅಕಾಡೆಮಿ, ಕೋರಮಂಗಲ, ಸಂಜೆ 6.30

ಗಾಯನ ಮತ್ತು ನೃತ್ಯ: ದಾಸರ ಪದಗಳ ಗಾಯನ: ಅಪ್ರಮೇಯ, ಧೃತಿ ಆತ್ರೇಯ, ನೃತ್ಯ ಪ್ರದರ್ಶನ: ಧನ್ವಿ ಆತ್ರೇಯ, ವಾದ್ಯ ಸಹಕಾರ: ಟಿ.ಎಸ್. ರಮೇಶ್, ಬಿ.ಆರ್. ಪ್ರಕಾಶ್, ಆಯೋಜನೆ: ರಾಘವೇಂದ್ರ ಸೇವಾ ಸಮಿತಿ, ಸ್ಥಳ: ರಾಘವೇಂದ್ರ ಸ್ವಾಮಿಗಳ ಮಠ, 6ನೇ ಅಡ್ಡರಸ್ತೆ, ಈಜುಕೊಳದ ಬಡಾವಣೆ, ಸುಧೀಂದ್ರನಗರ, ಮಲ್ಲೇಶ್ವರ, ಸಂಜೆ 6.30

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560 020.

ಸಂಖ್ಯೆ:ಬಿಡಿಎ/ಇಇ/ಹೆಚ್‌ಪಿಡಿ–1/ಟಿಇಎನ್/ಟಿ–561&562/2025–26 ದಿನಾಂಕ:16.01.2026

ಟೆಂಡರ್ ಆಹ್ವಾನ ಪ್ರಕಟಣೆ (ಐಎಫ್‌ಟಿ)
(ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ)

ಬೆಂ.ಅ.ಪ್ರಾ.ವು ಕಣಮಿಣಿಕೆ ವಸತಿ ಯೋಜನೆಯ ಅಭಿವೃದ್ಧಿ ಕಾಮಗಾರಿಗಳಿಗಾಗಿ (ಇಂಡೆಂಟ್ ಸಂಖ್ಯೆ:ಬಿಡಿಎ/2025–26/ಓಡಬ್ಲ್ಯೂ/ವರ್ಕ್ ಇಂಡೆಂಟ್ 186 ಮತ್ತು ಬಿಡಿಎ/2025–26/ಓಡಬ್ಲ್ಯೂ/ವರ್ಕ್ ಇಂಡೆಂಟ್ 187) ಟೆಂಡರ್ ಆಹ್ವಾನಿಸಿದೆ.

ಟೆಂಡರ್ ದಿನಾಂಕಗಳು:
(1) ಇ–ಪೋರ್ಟಲ್‌ನಲ್ಲಿ ಟೆಂಡರ್ ದಸ್ತಾವೇಜುಗಳು ದೊರೆಯುವ ದಿನಾಂಕ: **16.01.2026** (2) ಟೆಂಡರ್ ಬಿಡ್ ಪೂರ್ವ ವಿಚಾರಣೆಗಳ ಸಲ್ಲಿಕೆಗಾಗಿ ಕಡೇ ದಿನಾಂಕ ಮತ್ತು ಸಮಯ: **19.01.2026, ಮಧ್ಯಾಹ್ನ 3.00 ಗಂಟೆಗೆ.** (3) ಟೆಂಡರ್ ಸಲ್ಲಿಸಲು ಕಡೇ ದಿನಾಂಕ ಮತ್ತು ಸಮಯ: **27.01.2026ರಂದು ಸಂಜೆ 4.00 ಗಂಟೆವರೆಗೆ.** (4) ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **28.01.2026ರಂದು ಸಂಜೆ 4.30 ಗಂಟೆಯ ನಂತರ.**

ಆಸಕ್ತಿಯುಳ್ಳ ಗುತ್ತಿಗೆದಾರರು ಹೆಚ್ಚಿನ ವಿವರಗಳನ್ನು **https://kppp.karnataka.gov.in** ಇಲ್ಲಿ ನೋಡಬಹುದು. ಹೆಚ್ಚಿನ ವಿವರಗಳಿಗಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವಸತಿ ಯೋಜನೆ ವಿಭಾಗ–1 ಅನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸೂಚನೆ: ಯಾವುದೇ ಕಾರಣದಿಂದಾಗಿ ಇ–ಪೋರ್ಟಲ್‌ನಲ್ಲಿ ಟೆಂಡರ್ ದಸ್ತಾವೇಜುಗಳನ್ನು ಅಪ್‌ಲೋಡ್ ಮಾಡುವಲ್ಲಿ ವಿಳಂಬವಾದರೆ, ಪರಿಷ್ಕೃತ/ಮಾರ್ಪಾಡು ಮಾಡಿದ ಟೆಂಡರ್ ದಿನಾಂಕಗಳನ್ನು ಇ–ಪೋರ್ಟಲ್‌ನಲ್ಲಿ ಪ್ರಕಟಿಸಲಾಗುವುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ವಯೋವಿ–1, ಬೆಂಅಪ್ರಾ, ಬೆಂಗಳೂರು.

ಬ್ಯಾಟರಾಯನಪುರ: ಇಂದಿನಿಂದ ಸುಗ್ಗಿ-ಹುಗ್ಗಿ

ಪ್ರಜಾವಾಣಿ ವಾರ್ತೆ

ಯಲಹಂಕ: ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ ಜಕ್ಕೂರಿನ ಅರ್ಕಾವತಿ ಬಡಾವಣೆಯ ಮೈದಾನದಲ್ಲಿ ಜನವರಿ 17 ಮತ್ತು 18ರಂದು ಸಂಕ್ರಾಂತಿ 'ಸುಗ್ಗಿ-ಹುಗ್ಗಿ ಸಾಂಸ್ಕೃತಿಕ ಸಂಭ್ರಮ ಆಚರಣೆಯ ಪ್ರಯುಕ್ತ ವಿವಿಧ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ ಎಂದು ಆಯೋಜಕಿ ಮೀನಾಕ್ಷಿ ಕೃಷ್ಣಬೈರೇಗೌಡ ತಿಳಿಸಿದ್ದಾರೆ.

ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರ ನೇತೃತ್ವದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಕೆಬಿಜಿ ಸ್ವಯಸೇವಕರ ಸಂಘದ ಆಶ್ರಯದಲ್ಲಿ ಈ ಕಾರ್ಯಕ್ರಮ ನಡೆಯಲಿದೆ.

ಶನಿವಾರ 'ಬರ್ಫಿ ಬ್ಯಾಂಡ್' ತಂಡದಿಂದ ಸಂಗೀತ ಕಾರ್ಯಕ್ರಮ, ಆಹಾರ ಮಳಿಗೆಗಳು ಮತ್ತು ವಾಸವಿ ಅವರೆಬೇಳೆ ಮೇಳ ಸೇರಿದಂತೆ ರಂಗೋಲಿ ಸ್ಪರ್ಧೆ, ಕಬಡ್ಡಿ ಪಂದ್ಯಗಳು, ಮಡಿಕೆ ಒಡೆಯುವ, ಚಿತ್ರಕಲೆ, ಜಾನಪದ ನೃತ್ಯ ಹಾಗೂ ಹಗ್ಗ-ಜಗ್ಗಾಟ ಸ್ಪರ್ಧೆಗಳ ಜೊತೆಗೆ ಎತ್ತಿನಗಾಡಿ ಸವಾರಿಯೂ ಇರಲಿದೆ.

ಭಾನುವಾರ ಸಂಜೆ 6 ಗಂಟೆಗೆ ಪ್ರಭಾತ್ ಆರ್ಟ್ಸ್ ಇಂಟರ್‌ನ್ಯಾಷನಲ್ ತಂಡದವರಿಂದ ಮಹಾಭಾರತದ ಕುರುಕ್ಷೇತ್ರ ಯುದ್ಧ ಆಧಾರಿತ '18 ದಿನಗಳು ಎಂಬ ನೃತ್ಯ ನಾಟಕ ಏರ್ಪಡಿಸಲಾಗಿದೆ. ಇದರಲ್ಲಿ ಕುರುಕ್ಷೇತ್ರದ ಮುಖ್ಯ ಘಟನೆಗಳನ್ನು 70ಕ್ಕೂ ಹೆಚ್ಚು ಕಲಾವಿದರು ವೇದಿಕೆಯ ಮೇಲೆ ತರಲಿದ್ದಾರೆ ಎಂದು ಅವರು ಮಾಹಿತಿ ನೀಡಿದರು.

ಮೀನಾಕ್ಷಿ

ಮೈಸೂರು ರಸ್ತೆ: ವಾಹನ ಸಂಚಾರ 'ಆಮೆಗತಿ'

ಸ್ಕೈ ವಾಕ್ ಬಳಸದ ಜನರು, ತಂಗುದಾಣದ ಬಳಿ ನಿಲ್ಲದ ಬಸ್‌ಗಳು

• ಕೆ.ಎಸ್.ಸುನಿಲ್

ಸಂಚಾರ ಸಂಕಟ

ಬೆಂಗಳೂರು: ಮೈಸೂರು ರಸ್ತೆಯು ಬೆಂಗಳೂರು ನಗರ ಪ್ರವೇಶಿಸುವ ಪ್ರಮುಖ ರಸ್ತೆಗಳಲ್ಲಿ ಒಂದು. ವಾಣಿಜ್ಯ ಸಂಕೀರ್ಣಗಳು, ವಸತಿ ಸಮುಚ್ಚಯಗಳು ಈ ಮಾರ್ಗದಲ್ಲಿ ತಲೆ ಎತ್ತಿದ್ದು, ಕಾರ್ಮಿಕರು ಮತ್ತು ಉದ್ಯೋಗಿಗಳ ಸಂಚಾರ ಹೆಚ್ಚಾಗಿದೆ. ಮೈಸೂರು, ಮಂಡ್ಯ, ಕೊಡಗಿನಿಂದ ನಗರಕ್ಕೆ ಬರುವವರಿಗೆ ಇದೇ ಪ್ರಮುಖ ಮಾರ್ಗ. ಹೀಗಾಗಿ ಈ ಮಾರ್ಗದಲ್ಲಿ ವಾಹನಗಳ ಸಂಖ್ಯೆಯೂ ಅಧಿಕವಾಗಿದ್ದು, ವಿಪರೀತ ದಟ್ಟಣೆ ಉಂಟಾಗುತ್ತಿದೆ.

ಮೈಸೂರು ರಸ್ತೆಯ ಬಾಲಗಂಗಾಧರನಾಥ ಮೇಲ್ಸೇತುವೆ, ಮೈಸೂರು ರಸ್ತೆ ಟೋಲ್, ಗುಡ್ಡದಹಳ್ಳಿ, ಸ್ಯಾಟಲೈಟ್ ಬಸ್ ನಿಲ್ದಾಣ, ರಾಜರಾಜೇಶ್ವರಿ ನಗರ, ಜ್ಞಾನಭಾರತಿ ಹಾಗೂ ಕೆಂಗೇರಿ ಬಸ್ ಟರ್ಮಿನಲ್ ಸಿಗ್ನಲ್‌ಗಳಲ್ಲಿ ವಿಪರೀತ ದಟ್ಟಣೆ ಆಗುತ್ತಿದೆ. ಅದರಲ್ಲೂ ವಾರಾಂತ್ಯ, ರಜಾ ದಿನಗಳು ಹಾಗೂ ದಟ್ಟಣೆ ಅವಧಿಯಾದ ಬೆಳಿಗ್ಗೆ 7ರಿಂದ 11, ಸಂಜೆ 4ರಿಂದ 8ರವರೆಗೆ ಈ ಮಾರ್ಗದಲ್ಲಿ ವಾಹನಗಳು ಸಾಲುಗಟ್ಟಿ ನಿಲ್ಲುತ್ತಿವೆ.

ಮೈಸೂರು ರಸ್ತೆಯಲ್ಲಿ 'ಪ್ರಜಾವಾಣಿ' ಪ್ರತಿನಿಧಿ ಸುತ್ತು ಹಾಕಿದಾಗ ಸಂಚಾರ ಸಮಸ್ಯೆಗಳು ಕಂಡುಬಂದವು.

ಸ್ಯಾಟಲೈಟ್ ಬಸ್ ನಿಲ್ದಾಣದಿಂದ ಚಲ್ಲಘಟ್ಟದವರೆಗೆ 12 ಕಿ.ಮೀ ಇದೆ. ಈ ದೂರ ಕ್ರಮಿಸಲು 55 ನಿಮಿಷ ಬೇಕಾಗುತ್ತದೆ. ಅಂದಾಜು 30 ನಿಮಿಷದಲ್ಲಿ ಕ್ರಮಿಸಬಹುದಾದ ದೂರ ತಲುಪಲು ಒಂದು ತಾಸು ಟ್ರಾಫಿಕ್‌ನಲ್ಲಿ ಕಳೆಯುವಂತ ಪರಿಸ್ಥಿತಿ ನಿರ್ಮಾಣವಾಗಿದೆ. ದಿನದ 24 ತಾಸು ಈ ಮಾರ್ಗದಲ್ಲಿ ವಾಹನ ಸಂಚಾರವಿದ್ದು, ಅದರಲ್ಲಿ ಎಂಟು ತಾಸು ದಟ್ಟಣೆಯಿಂದ ಕೂಡಿರುತ್ತದೆ. ಕೆಲವು ಜಂಕ್ಷನ್‌ಗಳನ್ನು ದಾಟುವುದಕ್ಕೆ ವಾಹನ ಸವಾರರು ಪ್ರತಿನಿತ್ಯ ಪರದಾಡಬೇಕಾದ ಪರಿಸ್ಥಿತಿಯಿದೆ.

ಸ್ಯಾಟಲೈಟ್ ಬಸ್ ನಿಲ್ದಾಣದಿಂದ ಮೈಸೂರು, ಕೇರಳ, ತಮಿಳುನಾಡಿಗೆ ಬಸ್‌ಗಳು ಹೊರಡುತ್ತವೆ. ಓಣಂ, ಪೊಂಗಲ್ ಸಂದರ್ಭದಲ್ಲೂ ಪ್ರಯಾಣಿಕರ ಸಂಖ್ಯೆ ಅಧಿಕ. ಅಲ್ಲದೇ ನಿಲ್ದಾಣದ ಮುಂದೆ ಖಾಸಗಿ ಬಸ್‌ಗಳು ಪ್ರಯಾಣಿಕರನ್ನು ಹತ್ತಿಸಿಕೊಳ್ಳಲು ನಿಲ್ಲುತ್ತವೆ.

ಮೈಸೂರು ರಸ್ತೆಯ ಗಾಳಿ ಆಂಜನೇಯಸ್ವಾಮಿ ದೇವಸ್ಥಾನದ ಬಳಿ ವಾಹನ ದಟ್ಟಣೆ

ಚಿತ್ರಗಳು: ಎಂ.ಎಸ್. ಮಂಜುನಾಥ್

ಸ್ಯಾಟಲೈಟ್ ಬಸ್ ನಿಲ್ದಾಣದ ಬಳಿ ರಸ್ತೆ ದಾಟಲು ಪರದಾಡುತ್ತಿದ್ದ ವೃದ್ಧೆ

ದಟ್ಟಣೆ ಅವಧಿಯಲ್ಲಿ ಬಾಪೂಜಿನಗರ ಜಂಕ್ಷನ್ ಬಂದ್ ಮಾಡಲಾಗುತ್ತದೆ. ಶಾಮಣ್ಣ ಗಾರ್ಡನ್, ಬಾಪೂಜಿ ನಗರಕ್ಕೆ ತೆರಳಬೇಕಾದವರು ಸುತ್ತುಹಾಕಿಕೊಂಡು ಹೋಗಬೇಕಾಗುತ್ತದೆ. ಇಲ್ಲಿ ಸ್ಕೈವಾಕ್ ನಿರ್ಮಿಸಿದ್ದರೂ ಜನರು ಬಳಸುವುದು ಕಡಿಮೆ. ರಸ್ತೆ ದಾಟುವುದೇ ಹೆಚ್ಚು. ಕೆಂಗೇರಿ ಬಸ್ ಟರ್ಮಿನಲ್ ಬಳಿಯೂ ಇದೇ ಸಮಸ್ಯೆ.

ಗಾಳಿ ಆಂಜನೇಯ ದೇವಸ್ಥಾನ ಬಳಿ ಶನಿವಾರ ಮತ್ತು ಅಮಾವಾಸ್ಯೆ ದಿನ ವಾಹನಗಳು ಕಿಲೋ ಮೀಟರ್‌ಗಟ್ಟಲೆ ಸಾಲುಗಟ್ಟಿ ನಿಲ್ಲುತ್ತವೆ. ನಾಯಂಡಹಳ್ಳಿ ಕಡೆಯಿಂದ ಮೈಸೂರು ರಸ್ತೆಯಲ್ಲಿ ಬಿಎಚ್‌ಇಎಲ್ ಜಂಕ್ಷನ್ ಮೂಲಕ ಮೇಲ್ಸೇತುವೆಯಿಂದ ಗಾಳಿ ಆಂಜನೇಯ ದೇವಸ್ಥಾನದವರೆಗೆ ಏಕಮುಖ ಸಂಚಾರವಿದೆ. ಗಾಳಿ ಆಂಜನೇಯ ದೇವಸ್ಥಾನದಿಂದ ಬಿಎಚ್‌ಇಎಲ್ ಜಂಕ್ಷನ್‌ವರೆಗೂ ಏಕಮುಖ ಸಂಚಾರವಿದೆ. ಆದರೆ, ದೀಪಾಂಜಲಿ ನಗರದ ಕಡೆಗೆ ಹೋಗುವಾಗ ಎರಡೂ ಬದಿಯ ವಾಹನಗಳು ಜಂಕ್ಷನ್‌ನಲ್ಲಿ ಒಂದೆಡೆ ಸೇರುವುದರಿಂದ ಇಲ್ಲಿ ಅತಿಹೆಚ್ಚಿನ ದಟ್ಟಣೆ ಉಂಟಾಗುತ್ತಿದೆ. ಅಲ್ಲದೆ, ಮೈಸೂರು ರಸ್ತೆ ಸ್ಯಾಟಲೈಟ್ ಬಸ್ ನಿಲ್ದಾಣದ ಬಳಿ ಉಂಟಾಗುವ ವಾಹನ ದಟ್ಟಣೆಯಿಂದ ಎರಡೂ ಏಕಮುಖ ರಸ್ತೆಗಳಲ್ಲಿ ವಾಹನಗಳು ನಿಲ್ಲುತ್ತಿವೆ.

ಕೆಂಗೇರಿ ಬಸ್ ಟರ್ಮಿನಲ್ ಬಳಿ ಬಸ್ ತಂಗುದಾಣದ ಬಳಿ ಸಾರಿಗೆ ಸಂಸ್ಥೆ ಬಸ್‌ಗಳನ್ನು ನಿಲ್ಲಿಸದೇ ರಸ್ತೆಯಲ್ಲೇ ನಿಲ್ಲಿಸಲಾಗುತ್ತದೆ. ಹಾಗಾಗಿ ಪ್ರಯಾಣಿಕರು ರಸ್ತೆಯಲ್ಲೇ ನಿಲ್ಲುವ ಕಾರಣ ವಾಹನ ದಟ್ಟಣೆ ಆಗುತ್ತದೆ

ಲಕ್ಷ್ಮಿ, ಆಟೊ ಚಾಲಕಿ, ಮೈಲಸಂದ್ರ

ಮೈಸೂರು ರಸ್ತೆಯಲ್ಲಿ ವಾಹನಗಳ ಸಂಖ್ಯೆ ಅಧಿಕವಾಗಿರುವ ಕಾರಣ ಸಂಚಾರ ದಟ್ಟಣೆ ಉಂಟಾಗುತ್ತದೆ. ವಾಹನಗಳು ಕಿಲೋ ಮೀಟರ್ ಉದ್ದ ಸಾಲುಗಟ್ಟಿ ನಿಲ್ಲುವುದರಿಂದ ಕಾಯುವ ಸಮಯವೂ ಹೆಚ್ಚು

ಕಿರಣ್, ಖಾಸಗಿ ಕಂಪನಿ ಉದ್ಯೋಗಿ

'ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್‌ವೇ ಆರಂಭವಾದ ಬಳಿಕ ಮೈಸೂರು–ಬೆಂಗಳೂರು ನಡುವೆ ಸಂಚರಿಸುವವರ ಪ್ರಮಾಣವೂ ಹೆಚ್ಚಾಗಿದೆ. ಕೆಂಗೇರಿ ಸಮೀಪಿಸುತ್ತಿದ್ದಂತೆ ದಟ್ಟಣೆಯಲ್ಲಿ ಸಿಲುಕಿ ವಾಹನ ಸವಾರರು ಪರದಾಡುವುದು ತಪ್ಪುವುದಿಲ್ಲ. ದಟ್ಟಣೆ ಅವಧಿಯಾದ ಬೆಳಿಗ್ಗೆ ಮತ್ತು ಸಂಜೆ ವಾಹನಗಳು ಸಾಲುಗಟ್ಟಿ ನಿಲ್ಲಲಾರಂಭಿಸುತ್ತವೆ. ಅದರಲ್ಲೂ ಶನಿವಾರ, ಭಾನುವಾರ ಸೇರಿ ರಜೆ ದಿನಗಳಲ್ಲಿ ಕಿಲೋ ಮೀಟರ್‌ಗಳ ಉದ್ದಕ್ಕೂ ವಾಹನಗಳು ನಿಲ್ಲುತ್ತವೆ. ಕಾಯುವ ಸಮಯವೂ ಹೆಚ್ಚುತ್ತದೆ' ಎನ್ನುತ್ತಾರೆ ಸಂಚಾರ ಪೊಲೀಸರು.

ಮೈಸೂರು– ಬೆಂಗಳೂರು ಎಕ್ಸ್‌ಪ್ರೆಸ್‌ವೇ ಆರಂಭದವರೆಗೆ ತಲುಪಲು ಪ್ರಯಾಣಿಕರು ಪ್ರಯಾಸಪಡಬೇಕು. ಟೋಲ್ ತಪ್ಪಿಸುವ ಉದ್ದೇಶದಿಂದ ಕೆಂಗೇರಿಯಿಂದ ಮೈಸೂರು ಕಡೆಗೆ ತೆರಳುವ ಹೆಚ್ಚಿನ ಸಂಖ್ಯೆಯ ವಾಹನಗಳು, ಸರ್ವಿಸ್ ರಸ್ತೆ ಪ್ರವೇಶಿಸುತ್ತವೆ. ಇದರಿಂದ ಚಲ್ಲಘಟ್ಟ ಮೆಟ್ರೊ ನಿಲ್ದಾಣದ ಎದುರಿನ ರಾಜರಾಜೇಶ್ವರಿ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆಯ ಜಂಕ್ಷನ್‌ನಲ್ಲಿ ವಿಪರೀತ ವಾಹನಗಳು ಸೇರಿ, ಸಂಚಾರ ಸಮಸ್ಯೆ ಉಂಟಾಗುತ್ತಿದೆ.

'ವಾರಾಂತ್ಯ, ರಜಾ ದಿನಗಳು ಹಾಗೂ ಹಬ್ಬಗಳ ಸಂದರ್ಭದಲ್ಲಿ ಊರು, ಪ್ರವಾಸಕ್ಕೆಂದು ಪ್ರಯಾಣಿಕರು ಖಾಸಗಿ ಬಸ್ ಹಾಗೂ ಕ್ಯಾಬ್ ಬುಕ್ ಮಾಡಿಕೊಂಡಿರುತ್ತಾರೆ. ಖಾಸಗಿ ಬಸ್‌ಗಳನ್ನು ನಿಗದಿತ ಸಮಯಕ್ಕೂ ಮೊದಲೇ ರಸ್ತೆಬದಿಗೆ ತಂದು ನಿಲುಗಡೆ ಮಾಡಿರುತ್ತಾರೆ. ಇದರಿಂದ ಬಿಎಂಟಿಸಿ ಹಾಗೂ ಕೆಎಸ್‌ಆರ್‌ಟಿಸಿ ಬಸ್ ಹಾಗೂ ಸಾರ್ವಜನಿಕರ ಇತರೆ ವಾಹನಗಳ ಸಂಚಾರಕ್ಕೆ ಅಡ್ಡಿ ಉಂಟಾಗುತ್ತಿದೆ. ರಸ್ತೆಯ ಬದಿಯಲ್ಲೇ ಪ್ರಯಾಣಿಕರನ್ನು ಹತ್ತಿಸಿಕೊಳ್ಳಲು ವಾಹನಗಳನ್ನು ನಿಲುಗಡೆ ಮಾಡುತ್ತಿರುವುದರಿಂದ ಹಿಂಬದಿಯ ವಾಹನಗಳು ಸಾಲುಗಟ್ಟಿ ನಿಲ್ಲುತ್ತಿವೆ' ಎನ್ನುತ್ತಾರೆ ಸ್ಥಳೀಯರು.

ಎಲ್ಲೆಲ್ಲಿ ಅಪಾಯ?

- ಸ್ಯಾಟಲೈಟ್ ಬಸ್ ನಿಲ್ದಾಣ
- ದೀಪಾಂಜಲಿ ನಗರ
- ಪಂತರಪಾಳ್ಯ–ನಾಯಂಡಹಳ್ಳಿ ಜಂಕ್ಷನ್
- ಜ್ಞಾನಭಾರತಿ ಮೆಟ್ರೊ ನಿಲ್ದಾಣ ಸುತ್ತಮುತ್ತ
- ಕೆಂಗೇರಿ ಮೆಟ್ರೊ ನಿಲ್ದಾಣ

ಬಿಎಂಟಿಸಿ ಚಾಲಕರಿಗೆ ತರಬೇತಿ

ಸಂಚಾರ ದಟ್ಟಣೆ ಆಗದಂತೆ ಕ್ರಮ ವಹಿಸುವುದು, ಅಪಘಾತವಾಗದ ರೀತಿಯಲ್ಲಿ ವಾಹನ ಚಾಲನೆ, ಪ್ರಯಾಣಿಕರು ಹಾಗೂ ಎದುರಿನ ವಾಹನಗಳ ಚಾಲಕರ ಜತೆಗೆ ಸಂಯಮದಿಂದ ವರ್ತನೆ ಮಾಡಬೇಕು ಎಂಬುದರ ಕುರಿತು ಬಿಎಂಟಿಸಿ ಬಸ್ ಚಾಲಕರಿಗೆ ಸಂಚಾರ ನಿರ್ವಹಣಾ ಕೇಂದ್ರದಲ್ಲಿ ತರಬೇತಿ ನೀಡಲಾಗುತ್ತಿದೆ. ನಾಲ್ಕು ವರ್ಷಗಳಲ್ಲಿ 20 ಸಾವಿರ ಮಂದಿಗೆ ತರಬೇತಿ ನೀಡಲಾಗಿದೆ ಎಂದು ಸಂಚಾರ ವಿಭಾಗದ ಪೊಲೀಸರು ತಿಳಿಸಿದರು.

ಮಾಗಡಿ ಮುಖ್ಯರಸ್ತೆಯ ಅಂಜನಾನಗರದಲ್ಲಿ ಹಮ್ಮಿಕೊಂಡಿದ್ದ "ಸುಗ್ಗಿ ಸಂಭ್ರಮ 2026" ಕಾರ್ಯಕ್ರಮಕ್ಕೆ ಶಾಸಕ ಎಸ್‌.ಟಿ.ಸೋಮಶೇಖರ್ ಅವರು ದವಸಧಾನ್ಯಗಳ ರಾಶಿಗೆ ಪೂಜೆ ಸಲ್ಲಿಸಿ ಚಾಲನೆ ನೀಡಿದರು. ರೇವಣ್ಣ ಸಿದ್ದಯ್ಯ, ಎಂ.ಗಂಗರಾಜು, ಹೇರೋಹಳ್ಳಿ ಸೂರಿ, ದೇವರಾಜು, ಕಾಚೋಹಳ್ಳಿ ಲೋಕೇಶ್, ಚೇತನ್‌ಗೌಡ, ಆರ್.ಶಿವಮಾದಯ್ಯ, ಸುಮಜನಾರ್ಧನ್, ಲಕ್ಷ್ಮಿಪ್ರಭುದೇವ್, ಅಮೃತ್‌ಗೌಡ, ಎಂ.ನಾಗರಾಜು ಇದ್ದಾರೆ

ಅದ್ದೂರಿಯಾಗಿ ನಡೆದ 'ಸುಗ್ಗಿ ಸಂಭ್ರಮ'

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಸುತ್ತಮುತ್ತಲ ಬಡಾವಣೆಗಳ ಸಾವಿರಾರು ಜನರು 'ಸುಗ್ಗಿ ಸಂಭ್ರಮ 2026' ಅನ್ನು ಅದ್ದೂರಿಯಾಗಿ ಆಚರಿಸಿದರು.

ಮಾಗಡಿ ಮುಖ್ಯರಸ್ತೆಯ ಅಂಜನಾನಗರದಲ್ಲಿ 'ಸುಗ್ಗಿ ಸಂಭ್ರಮ 2026' ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಹಿಳೆಯರು ಎಳ್ಳು-ಬೆಲ್ಲ ವಿನಮಯ ಮಾಡಿಕೊಂಡರು. ಪೊಂಗಲ್ ಹಂಚಿದರು. ಶಾಸಕ ಎಸ್.ಟಿ.ಸೋಮಶೇಖರ್ ಗೋವುಗಳಿಗೆ ಪೂಜೆ ಸಲ್ಲಿಸಿ, ಸಾವಿರಾರು ಜನರಿಗೆ ಕಡಲೆಕಾಯಿ, ಅವರೇಕಾಯಿ, ಕಬ್ಬು, ಗೆಣಸು ವಿತರಿಸಿದರು.

ಜಾನಪದ ಕಲೆಗಳ ಪ್ರದರ್ಶನವನ್ನು ಜನರು ವೀಕ್ಷಿಸಿದರೆ, ಹಾಡು, ನೃತ್ಯ, ತಮಟೆ, ನಗಾರಿ ಸದ್ದಿಗೆ ಕುಣಿದು ಕುಪ್ಪಳಿಸಿದರು.

ಎಸ್.ಟಿ. ಸೋಮಶೇಖರ್ ಮಾತನಾಡಿ, 'ಸಂಸ್ಕೃತಿ, ಪರಂಪರೆ, ಕಾಪಾಡುವಲ್ಲಿ ರೈತರು ನೇರ ಕಾರಣರಾಗಿದ್ದು. ಅವರ ಸರ್ವಾಂಗೀಣ ಅಭಿವೃದ್ಧಿಗೆ ದೃಢ ಸಂಕಲ್ಪ ಮಾಡಲಾಗಿದೆ' ಎಂದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಎಚ್. ಶ್ರೀಧರ್, ರೇವಣ್ಣ ಸಿದ್ದಯ್ಯ, ಮೈಲಸಂದ್ರ ನಾಗರಾಜು, ಗ್ಯಾರಂಟಿ ಯೋಜನೆಗಳ ಪ್ರಾಧಿಕಾರದ ಎಂ.ಸತೀಶ್, ಲಕ್ಷ್ಮಿ ಸುಮಾ ಜನಾರ್ದನ್, ಶೃತಿ, ಅಂಜನಾನಗರ ಎಂ.ಗಂಗರಾಜು, ಬೆಂಗಳೂರು ನಗರ ಜಿಲ್ಲಾ ಕಾಂಗ್ರೆಸ್ ಸಮಿತಿ ಮಾಜಿ ಪ್ರಧಾನ ಕಾರ್ಯದರ್ಶಿ ಆರ್.ಶಿವಮಾದಯ್ಯ, ಕೆ.ಎಸ್.ಪರ್ವೀಜ್, ರಾಜ್ಯ ಯುವ ಕಾಂಗ್ರೆಸ್ ಮಾಜಿ ಪ್ರಧಾನ ಕಾರ್ಯದರ್ಶಿ ಅಮೃತ್‌ಗೌಡ, ಮುಖಂಡರಾದ ಜಬೀನಾತಾಜ್ ಪರ್ವೀಜ್, ಲತಾ ಮಂಜುನಾಥ್, ಸಿ.ಎನ್.ಮೂರ್ತಿ, ಕೆ.ಎನ್.ದೇವರಾಜ್, ಕಾಚೋಹಳ್ಳಿ ಲೋಕೇಶ್, ಹೇರೋಹಳ್ಳಿ ಸೂರಿ ಮತ್ತಿತರರು ಇದ್ದರು.

ನಗರದಲ್ಲಿ ಎರಡು ಆಸ್ಪತ್ರೆ ನಿರ್ಮಾಣ

ಎರಡನೇ ಮುಖಪುಟದಿಂದ...

ಈ ಮೊದಲು ಬಜೆಟ್ ಘೋಷಣೆ ಅನುಸಾರ, 200 ಹಾಸಿಗೆಗಳ ಆಸ್ಪತ್ರೆ ನಿರ್ಮಾಣಕ್ಕೆ ಬೆಂಗಳೂರು ಉತ್ತರ ತಾಲ್ಲೂಕಿನ ಜಾಲ ಹೋಬಳಿಯ ಉತ್ತನಹಳ್ಳಿ ಗ್ರಾಮದಲ್ಲಿ 7 ಎಕರೆ ಸರ್ಕಾರಿ ಜಮೀನನ್ನು ಕಾಯ್ದಿರಿಸಲಾಗಿತ್ತು. ಕಂದಾಯ ಸಚಿವ ಕೃಷ್ಣ ಬೈರೇಗೌಡ ಹಾಗೂ ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಅವರು ಎರಡು ಪ್ರತ್ಯೇಕ ಆಸ್ಪತ್ರೆ ನಿರ್ಮಾಣದ ಪ್ರಸ್ತಾವವನ್ನು ಸರ್ಕಾರಕ್ಕೆ ಸಲ್ಲಿಸಿದ್ದರು. ಈ ಪ್ರಸ್ತಾವಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅನುಮೋದನೆ ನೀಡಿದ್ದರಿಂದ ಎರಡು ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಗಳನ್ನು ನಿರ್ಮಿಸಲಾಗುತ್ತಿದೆ. ಈ ಆಸ್ಪತ್ರೆಗಳು ಎರಡು ಮಹಡಿಗಳನ್ನು ಹೊಂದಿರಲಿವೆ. ಭವಿಷ್ಯದಲ್ಲಿ ಮತ್ತೆರಡು ಮಹಡಿಗಳನ್ನು ನಿರ್ಮಿಸಿ, ಹಾಸಿಗೆಗಳ ಸಂಖ್ಯೆಯನ್ನು 200ಕ್ಕೆ ಏರಿಸಲಾಗುವುದು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಪುತ್ರಿ ಕೊಂದು ತಾಯಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಸಂಜಯನಗರದ ಕೃಷ್ಣಪ್ಪ ಲೇಔಟ್‌ನಲ್ಲಿ ಮಗಳ ಮೇಲೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ಕೊಲೆ ಮಾಡಿ, ತಾಯಿಯೂ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ನೇಪಾಳದ ಮನಿಷಾ (29) ಅವರು ನಾಲ್ಕು ವರ್ಷದ ಮಗಳು ಸೃಷ್ಟಿಯನ್ನು ಕೊಲೆ ಮಾಡಿ, ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಗುರುವಾರ ರಾತ್ರಿ ಕೃತ್ಯ ನಡೆದಿದೆ. ಪತಿ ಮತ್ತು ಮಗಳ ಜತೆ ಎಂಟು ತಿಂಗಳ ಹಿಂದೆಯಷ್ಟೇ ನಗರಕ್ಕೆ ಬಂದಿದ್ದ ಮನಿಷಾ ಅವರು ಕೃಷ್ಣಪ್ಪ ಲೇಔಟ್‌ನಲ್ಲಿ ಬಾಡಿಗೆ ಮನೆ ಪಡೆದು ನೆಲಸಿದ್ದರು. ದಂಪತಿ ಕೂಲಿ ಕೆಲಸ ಮಾಡಿಕೊಂಡು ಜೀವನ ನಡೆಸುತ್ತಿದ್ದರು.

'ಪತ್ನಿಯೊಂದಿಗೆ ಜಗಳವಾಡಿಕೊಂಡು ಗೋವಿಂದ ಬಹದ್ದೂರ್ ವಾಪಸ್ ನೇಪಾಳಕ್ಕೆ ಹೋಗಿದ್ದ. ಮನಿಷಾ ಅವರು ಪತಿಗೆ ಕರೆ ಮಾಡಿ ವಾಪಸ್ ಬರುವಂತೆ ಕೇಳಿಕೊಂಡಿದ್ದರು. ಆದರೂ, ಆತ ವಾಪಸ್ ಬಂದಿರಲಿಲ್ಲ. ಇದರಿಂದ ಒಂಟಿಯಾಗಿದ್ದ ಮನಿಷಾ ಅವರು ಜೀವನ ನಿರ್ವಹಣೆಗೆ ಕಷ್ಟಪಡುತ್ತಿದ್ದರು. ಮಗಳನ್ನು ಸಾಕಲು ಪರದಾಡುತ್ತಿದ್ದರು. ಗುರುವಾರ ರಾತ್ರಿ ಸಹ ಪತಿಗೆ ಕರೆ ಮಾಡಿ ಬೆಂಗಳೂರಿಗೆ ಬರುವಂತೆ ಕರೆದಿದ್ದರು. ಅದಕ್ಕೆ ಆತ ಒಪ್ಪಿರಲಿಲ್ಲ. ನಿಂದನೆ ಮಾಡಿದ್ದ' ಎಂದು ಪೊಲೀಸರು ಹೇಳಿದರು.

'ಪತಿಯ ವರ್ತನೆಯಿಂದ ಬೇಸರಗೊಂಡಿದ್ದ ಮನಿಷಾ ಅವರು ಪುತ್ರಿಯ ಮೇಲೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ಕೊಲೆ ಮಾಡಿದ್ದರು. ಬಳಿಕ, ಅವರೂ ಮೈ ಮೇಲೆ ಪೆಟ್ರೋಲ್ ಸುರಿದುಕೊಂಡು ಬೆಂಕಿ ಹಚ್ಚಿಕೊಂಡಿದ್ದಾರೆ' ಎಂದು ಪೊಲೀಸರು ಹೇಳಿದರು.

'ಗುರುವಾರ ರಾತ್ರಿ ಮನೆ ಎದುರಿನ ರಸ್ತೆಯಲ್ಲಿ ಹೋಗುತ್ತಿದ್ದ ವ್ಯಕ್ತಿಯೊಬ್ಬರು ಮನೆಯಿಂದ ಹೊಗೆ ಬರುತ್ತಿರುವುದನ್ನು ಗಮನಿಸಿ ಪೊಲೀಸರಿಗೆ ಕರೆ ಮಾಡಿ ಮಾಹಿತಿ ತಿಳಿಸಿದ್ದರು. ಸ್ಥಳಕ್ಕೆ ಬಂದ ಸಂಜಯನಗರ ಠಾಣೆ ಪೊಲೀಸರು, ಬಾಗಿಲು ಒಡೆದು ನೋಡಿದಾಗ ತಾಯಿ ಸಜೀವ ದಹನವಾಗಿರುವುದು ಗೊತ್ತಾಯಿತು. ಪುತ್ರಿ ಸೃಷ್ಟಿ ಗಂಭೀರವಾಗಿ ಗಾಯಗೊಂಡಿದ್ದಳು. ಆಕೆಯನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅಲ್ಲಿ ಮೃತಪಟ್ಟಿದ್ದಾಳೆ' ಎಂದು ಪೊಲೀಸರು ಹೇಳಿದರು. ಇಬ್ಬರ ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ರವಾನಿಸಲಾಗಿದೆ. ಅವರ ಸಂಬಂಧಿಕರಿಗೆ ಮಾಹಿತಿ ನೀಡಲಾಗಿದೆ ಎಂದು ಪೊಲೀಸರು ಹೇಳಿದರು.

'ಕನ್ನಡ ವಾತಾವರಣ ನಿರ್ಮಾಣ ನಮ್ಮದೇ ಹೊಣೆ'

ಎರಡನೇ ಮುಖಪುಟದಿಂದ...

ಅಲ್ಲದೇ 'ಹೊರಗಿನಿಂದ ಇಲ್ಲಿಗೆ ಬಂದಿರುವವರಿಗೆ ಅವುಗಳನ್ನು ಪರಿಚಯಿಸಲು ಕನ್ನಡಿಗರಿಗೆ ಸುಸಂದರ್ಭ ಬಂದೊದಗಿದೆ. ಇದನ್ನು ಸರಿಯಾಗಿ ಬಳಸಿಕೊಳ್ಳಬೇಕು' ಎಂದು ಕರೆ ನೀಡಿದರು.

'ಬೆಂಗಳೂರಿನ ಸಂಸ್ಕೃತಿಯನ್ನು ಹೊರಗಿನವರಿಗೆ ಪರಿಚಯಿಸಬೇಕು ಎಂದು ಪದ್ಮಿನಿ ರವಿ ಮತ್ತು ನಂದಿನಿ ಆಳ್ವ ಅವರು ಬೆಂಗಳೂರು ಹಬ್ಬ ಆರಂಭಿಸಿದ್ದರು. ಈಗ ವಿ. ರವಿಚಂದರ್ ಮತ್ತು ಪ್ರಶಾಂತ್ ಪ್ರಕಾಶ್ ಅದನ್ನು ಮುಂದುವರೆಸಿಕೊಂಡು ಹೋಗುತ್ತಿದ್ದು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಸಹಯೋಗ ನೀಡುತ್ತಿದೆ. ಭಿನ್ನ ಭಾಷೆ, ಧರ್ಮ, ಸಂಸ್ಕೃತಿಯ ಜನರು ಒಂದಾಗಲು ಈ ಹಬ್ಬ ವೇದಿಕೆ ಒದಗಿಸುತ್ತದೆ' ಎಂದರು.

'ಎಲ್ಲ ಊರುಗಳಲ್ಲಿ ನಡೆಯುವ ಜಾತ್ರೆ–ಉತ್ಸವಗಳು ಮನುಷ್ಯರು ಒಂದಾಗಬೇಕು ಎಂಬ ಸಂದೇಶವನ್ನು ಸಾರುತ್ತವೆ. ಮನುಷ್ಯರು ಪರಸ್ಪರ ಪ್ರೀತಿಸಬೇಕೆ ಹೊರತು, ದ್ವೇಷಿಸಬಾರದು. ಹೊರರಾಜ್ಯಗಳಿಂದ ಇಲ್ಲಿಗೆ ಬಂದು ನೆಲಸಿರುವವರಿಗೆ ಪ್ರೀತಿಯಿಂದ ಕನ್ನಡ ಕಲಿಸಬೇಕು' ಎಂದರು. ಕಾರ್ಯಕ್ರಮದ ನಂತರ ಡೊಳ್ಳು, ತಮಟೆ, ಅರೆ ಮೊದಲಾದ ಚರ್ಮವಾದ್ಯಗಳ ಕುಣಿತ ತಂಡಗಳು, ಪೂಜಾ ಕುಣಿತ ತಂಡಗಳ ಮೆರವಣಿಗೆಗೆ ನಡೆಯಿತು.

ಆರು ಪಿ.ಜಿ ಗಳಿಗೆ ಬೀಗ ₹1.96 ಲಕ್ಷ ದಂಡ

ಬೆಂಗಳೂರು: ಕೇಂದ್ರ ನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಶುಚಿತ್ವವಿಲ್ಲದ ಆರು ಪಿ.ಜಿ.ಗಳಿಗೆ ಬೀಗ ಮುದ್ರೆ ಹಾಕಲಾಗಿದೆ ಎಂದು ಕೇಂದ್ರ ನಗರ ಪಾಲಿಕೆಯ ಆಯುಕ್ತ ರಾಜೇಂದ್ರ ಚೋಳನ್ ತಿಳಿಸಿದ್ದಾರೆ.

204 ಪೇಯಿಂಗ್ ಗೆಸ್ಟ್‌ಗಳನ್ನು ಆರೋಗ್ಯಾಧಿಕಾರಿ ಡಾ. ಶಿವಕುಮಾರ್ ನೇತೃತ್ವದಲ್ಲಿ ಚಿಕ್ಕಪೇಟೆ ಮತ್ತು ಶಿವಾಜಿನಗರ ಆರೋಗ್ಯ ವೈದ್ಯಾಧಿಕಾರಿಗಳ ಉಪಸ್ಥಿತಿಯಲ್ಲಿ ಶುಕ್ರವಾರ ತಪಾಸಣೆ ನಡೆಸಲಾಯಿತು. ಶುಚಿತ್ವ ಕಾಪಾಡದ 6 ಪಿ.ಜಿ.ಗಳಿಗೆ ಬೀಗ ಮುದ್ರೆ ಹಾಕಲಾಯಿತು. ನ್ಯೂನ್ಯತೆಗಳಿರುವ ಪಿ.ಜಿ.ಗಳಿಗೆ ₹ 1.96 ಲಕ್ಷ ದಂಡ ವಿಧಿಸಲಾಯಿತು.

ಶುದ್ಧ ಕುಡಿಯುವ ನೀರು, ಶುಚಿತ್ವ, ಅಡುಗೆ ಕೋಣೆ ನೈರ್ಮಲ್ಯ, ಸುರಕ್ಷತೆ, ಉತ್ತಮ ಶೌಚಾಲಯ ವ್ಯವಸ್ಥೆ, ಅಗ್ನಿಶಾಮಕ ಸಾಧನಗಳು ಹಾಗೂ ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಕೆ ಮತ್ತು ಎಫ್‌ಎಸ್‌ಎಸ್‌ಎಐ ಆಹಾರ ಸುರಕ್ಷತಾ ಪ್ರಮಾಣ ಪತ್ರ ಇತ್ಯಾದಿ ಮೂಲ ಸೌಕರ್ಯಗಳ ಬಗ್ಗೆ ತಪಾಸಣೆ ನಡೆಸಲಾಯಿತು.

ಇದೇ ಸಂದರ್ಭದಲ್ಲಿ ಕಂದಾಯ ಇಲಾಖೆಯ ಅಧಿಕಾರಿ, ಸಿಬ್ಬಂದಿ ಪೇಯಿಂಗ್ ಗೆಸ್ಟ್ ಕಟ್ಟಡದ ಆಸ್ತಿ ತೆರಿಗೆ ಮತ್ತು ಇತರೆ ತೆರಿಗೆಗಳ ವಿಷಯವಾಗಿ ಪರಿಶೀಲನೆ ನಡೆಸಿದರು.

ನಿಧನ ವಾರ್ತೆ

ನಿವೃತ್ತ ನ್ಯಾ.ಬಿ.ಕೆ.ಸೋಮಶೇಖರ್

ಬೆಂಗಳೂರು: ಕರ್ನಾಟಕ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಬಿ.ಕೆ. ಸೋಮಶೇಖರ್ (90) ಗುರುವಾರ ಮಧ್ಯಾಹ್ನ 3 ಗಂಟೆಗೆ ನಿಧನರಾದರು. ಅವರಿಗೆ ಪತ್ನಿ ಮತ್ತು ಇಬ್ಬರು ಪುತ್ರರು ಇದ್ದಾರೆ.

ಬಾಣಾವರ ಕೃಷ್ಣಮೂರ್ತಿ ಸೋಮಶೇಖರ್ ಅವರು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರದವರು. ಇವರ ತಂದೆ ಕೃಷ್ಣಮೂರ್ತಿ ದೊಡ್ಡಬಳ್ಳಾಪುರ ಜೆಎಂಎಫ್‌ಸಿ ಕೋರ್ಟ್‌ನಲ್ಲಿ ಸರ್ಕಾರಿ ಪ್ಲೀಡರ್ ಆಗಿದ್ದರು.

ಬಿ.ಕೆ.ಸೋಮಶೇಖರ್ ಅವರು ಬೆಂಗಳೂರಿನ ನ್ಯಾಷನಲ್ ಕಾಲೇಜಿನಲ್ಲಿ ವಿಜ್ಞಾನ ಪದವಿ ಮತ್ತು ಬೆಂಗಳೂರಿನ ಸರ್ಕಾರಿ ಕಾನೂನು ಕಾಲೇಜಿನಲ್ಲಿ (ಈಗ ವಿಶ್ವವಿದ್ಯಾಲಯ ಕಾನೂನು ಕಾಲೇಜು) ಕಾನೂನು ಪದವಿ ಪಡೆದು ಸನ್ನದು ನೋಂದಾಯಿಸಿ ವಕೀಲಿಕೆ ಆರಂಭಿಸಿದರು. 1965ರಲ್ಲಿ ಮುನ್ಸಿಫ್ ಆಗಿ ಆಯ್ಕೆಗೊಂಡ ಅವರು ದೇವದುರ್ಗದಲ್ಲಿ ಮೊದಲಿಗೆ ನ್ಯಾಯಾಧೀಶರಾಗಿ ಸೇವೆ ಆರಂಭಿಸಿ ನಂತರ ಬೆಳಗಾವಿ, ಚಿತ್ರದುರ್ಗ, ಕಾರವಾರ ಸೇರಿದಂತೆ ರಾಜ್ಯದ ವಿವಿಧೆಡೆ ಕಾರ್ಯನಿರ್ವಹಿಸಿದರು. 1994ರಲ್ಲಿ ಹೈಕೋರ್ಟ್ ನ್ಯಾಯಮೂರ್ತಿಯಾಗಿ ಬಡ್ತಿ ಪಡೆದಿದ್ದರು. ಕರ್ನಾಟಕ ಹೈಕೋರ್ಟ್‌ನಲ್ಲಿ ಆರು ತಿಂಗಳು ಕಾರ್ಯನಿರ್ವಹಿಸಿದ್ದ ಅವರು, ಬಳಿಕ ಆಂಧ್ರಪ್ರದೇಶ ಹೈಕೋರ್ಟ್ ನ್ಯಾಯಮೂರ್ತಿಯಾಗಿ ವರ್ಗಾವಣೆಗೊಂಡು, 2003ರಲ್ಲಿ ಅಲ್ಲೇ ನಿವೃತ್ತಿಯಾಗಿದ್ದರು.

ಕರ್ನಾಟಕದಲ್ಲಿ 2008ರ ಅವಧಿಯಲ್ಲಿ ನಡೆದಿದ್ದ ಚರ್ಚ್‌ಗಳ ಮೇಲಿನ ದಾಳಿಗೆ ಸಂಬಂಧಿಸಿದ ಪ್ರಕರಣಗಳ ವಿಚಾರಣಾ ಆಯೋಗದ ಮುಖ್ಯಸ್ಥರಾಗಿಯೂ ಅವರು ಕಾರ್ಯನಿರ್ವಹಿಸಿದ್ದರು.

'ಶನಿವಾರ (ಜ.17) ಸಂಜೆ 4 ಗಂಟೆಗೆ ಸುಮನಹಳ್ಳಿಯ ಚಿತಾಗಾರದಲ್ಲಿ ಅಂತ್ಯ ಸಂಸ್ಕಾರ ನೆರವೇರಲಿದೆ' ಎಂದು ಕುಟುಂಬದ ಮೂಲಗಳು ತಿಳಿಸಿವೆ. ಹೆಚ್ಚಿನ ಸಂಪರ್ಕಕ್ಕಾಗಿ ಕುಟುಂಬದ ಸದಸ್ಯ ಕುಮಾರ್ ಅವರನ್ನು ಸಂಪರ್ಕಿಸಬಹುದು. ಸಂಖ್ಯೆ: 99860–24219

ಕೊಲೆ ಅಪರಾಧಿಗೆ ಆಜೀವ ಜೈಲು ಶಿಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕುಂಬಳಗೋಡು ಪೊಲೀಸ್ ಠಾಣಾ ವ್ಯಾಪ್ತಿಯ ವಿಜಯಶ್ರೀ ಲೇಔಟ್‌ನ ಶೆಡ್‌ನಲ್ಲಿ ನಡೆದಿದ್ದ ಕೊಲೆ ಪ್ರಕರಣದ ಅಪರಾಧಿಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ 6ನೇ ಹೆಚ್ಚುವರಿ ಜಿಲ್ಲಾ ಹಾಗೂ ಸೆಷನ್ಸ್ ನ್ಯಾಯಾಲಯ ಆಜೀವ ಜೈಲು ಶಿಕ್ಷೆ ಹಾಗೂ ದಂಡ ವಿಧಿಸಿ, ಆದೇಶಿಸಿದೆ.

ಜಾರ್ಖಂಡ್ ರಾಜ್ಯದ ಬಾರ್ಕೆಲ್ ಗ್ರಾಮದ ಒಡೆಯ ಬೋಯಿಪ್ಪೈ ಅಲಿಯಾಸ್ ಸಂಜಯ್ (35) ಶಿಕ್ಷೆಗೆ ಗುರಿಯಾದ ಅಪರಾಧಿ. ಹನುಮಂತರಾಜು ಅವರನ್ನು ಅಪರಾಧಿ ಕೊಲೆ ಮಾಡಿದ್ದ. ಕುಂಬಳಗೋಡಿನ ನಿವಾಸಿ ಬಸವರಾಜು ಅವರು ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಾಗಿತ್ತು. ಬೋಯಿಪ್ಪೈ ಹಾಗೂ ಹನುಮಂತರಾಜು ಶೆಡ್‌ನಲ್ಲಿ ಗಲಾಟೆ ಮಾಡಿಕೊಂಡಿದ್ದರು. ಹನುಮಂತರಾಜು ಅವರು ದೊಣ್ಣೆಯಿಂದ ಅಪರಾಧಿ ಬೋಯಿಪ್ಪೈ ಮೇಲೆ ಹಲ್ಲೆ ನಡೆಸಿದ್ದರು. ಅದೇ ದೊಣ್ಣೆಯನ್ನು ಬೋಯಿಪ್ಪೈ ಕಸಿದುಕೊಂಡು ಹಲ್ಲೆ ನಡೆಸಿದ್ದ. ಹಲ್ಲೆಯಿಂದ ಗಂಭೀರವಾಗಿ ಗಾಯಗೊಂಡಿದ್ದ ಹನುಮಂತರಾಜು ಅವರು ಮೃತಪಟ್ಟಿದ್ದರು. ಇನ್‌ಸ್ಪೆಕ್ಟರ್ ಆರ್.ವಿಜಯಕುಮಾರ್ ನೇತೃತ್ವದ ತಂಡ ತನಿಖೆ ನಡೆಸಿ, ಎರಡನೇ ಜೆಎಂಎಫ್‌ಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿತ್ತು. ಬೋಯಿಪ್ಪೈ ಕೃತ್ಯ ಎಸಗಿರುವುದು ಸಾಬೀತಾಗಿದೆ ಎಂದು ಪಟ್ಟಿಯಲ್ಲಿ ಉಲ್ಲೇಖಿಸಲಾಗಿತ್ತು. ಬಳಿಕ, ಪ್ರಕರಣವು ಆರನೇ ಹೆಚ್ಚುವರಿ ಜಿಲ್ಲಾ ಹಾಗೂ ಸೆಷನ್ಸ್ ನ್ಯಾಯಾಲಯಕ್ಕೆ ವರ್ಗಾವಣೆಗೊಂಡಿತ್ತು. ಅಲ್ಲಿ ವಾದ–ಪ್ರತಿವಾದ ನಡೆದು, ಅಪರಾಧಿಗೆ ಆಜೀವ ಜೈಲು ಶಿಕ್ಷೆ ₹15 ಸಾವಿರ ದಂಡ ಹಾಗೂ ದಂಡ ಪಾವತಿಸಲು ಸಾಧ್ಯ ಆಗದಿದ್ದರೆ ಮೂರು ವರ್ಷ ಜೈಲು ಶಿಕ್ಷೆ ಅನುಭವಿಸುವಂತೆ ನ್ಯಾಯಾಲಯವು ಆದೇಶಿಸಿದೆ.

ದೇವಸ್ಥಾನದಲ್ಲಿ ಕಳ್ಳತನ: ಬಂಧನ

ಬೆಂಗಳೂರು: ದೇವಸ್ಥಾನಕ್ಕೆ ನುಗ್ಗಿ ಕಳ್ಳತನ ಮಾಡುತ್ತಿದ್ದ ಆರೋಪಿಯನ್ನು ಪರಪ್ಪನ ಅಗ್ರಹಾರ ಠಾಣೆಯ ಪೊಲೀಸರು ಬಂಧಿಸಿದ್ದಾರೆ. ಆನೇಕಲ್ ತಾಲ್ಲೂಕಿನ ಕೊಮ್ಮಸಂದ್ರದ ವೆಂಕಟೇಶ್ ಅಲಿಯಾಸ್ ಜಾಕಿ (45) ಬಂಧಿತ.

ಆರೋಪಿಯಿಂದ ₹10 ಲಕ್ಷ ಮೌಲ್ಯದ 23 ಗ್ರಾಂ ಚಿನ್ನಾಭರಣ, 2 ಕೆ.ಜಿ 600 ಗ್ರಾಂ ಬೆಳ್ಳಿಯ ವಸ್ತು ಜಪ್ತಿ ಮಾಡಲಾಗಿದೆ. ಸಿಂಗಸಂದ್ರದ ದೇವಸ್ಥಾನದಲ್ಲಿ ಕಳ್ಳತನ ನಡೆದಿತ್ತು. ಅರ್ಚಕರು ನೀಡಿದ ದೂರಿನ ಮೇರೆಗೆ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಯಿತು.

ಈ ಮೂಲಕ ಪರಪ್ಪನ ಅಗ್ರಹಾರ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಎರಡು, ಬಾಗಲಗುಂಟೆ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಒಂದು ಪ್ರಕರಣ ಪತ್ತೆಯಾಗಿದೆ ಎಂದು ಪೊಲೀಸರು ಹೇಳಿದರು.

AstraZeneca

ಆಸ್ಟ್ರಾಜೆನೆಕ ಫಾರ್ಮಾ ಇಂಡಿಯಾ ಲಿಮಿಟೆಡ್

(CIN: L24231KA1979PLC003563)

ರಿಜಿಸ್ಟರ್ಡ್ ಆಫೀಸ್: ಬ್ಲಾಕ್ ಎನ್1, 12ನೇ ಮಹಡಿ, ಮಾನ್ಯತಾ ಎಂಬಸಿ ಬಿಸಿನೆಸ್ ಪಾರ್ಕ್, ರಾಚೇನಹಳ್ಳಿ, ಔಟರ್ ರಿಂಗ್ ರೋಡ್, ಬೆಂಗಳೂರು – 560 045

ಈಮೇಲ್: comp.secy@astrazeneca.com, ವೆಬ್: www.astrazeneca.com/india

ದೂ.: +91 80 6774 8000, ಫ್ಯಾಕ್ಸ್: 080 6774 8857

ಷೇರು ಪ್ರಮಾಣಪತ್ರ ಕಳೆದಿರುವ ಬಗ್ಗೆ ಸೂಚನೆ

ಈ ಮೂಲಕ ಸೂಚನೆ ನೀಡಲಾಗುತಿರುವುದೇನೆಂದರೆ: ಕಂಪನಿಯ ಈ ಕೆಳಗಿನ ಷೇರು ಪ್ರಮಾಣಪತ್ರ ಕಳೆದುಹೋಗಿವೆ ಎಂದು ವರದಿಯಾಗಿದೆ ಮತ್ತು ಷೇರುದಾರರು/ ಮೃತ ಷೇರುದಾರರ ಕಾನೂನು ಪ್ರತಿನಿಧಿಗಳು ತಲಾ ರೂ.2/– ಮುಖಬೆಲೆಯ ನಕಲಿ ಷೇರು ಪ್ರಮಾಣಪತ್ರಗಳನ್ನು ನೀಡುವಂತೆ ಕಂಪನಿಯನ್ನು ಕೋರಿದ್ದಾರೆ.

ಖಾತೆಪುಟ ಸಂಖ್ಯೆ	ಷೇರುಗಳ ಸಂಖ್ಯೆ (ಮುಖ ಬೆಲೆ ರೂ.2/–)	ಕಳೆದು ಹೋಗಿರುವ ಷೇರು ಪ್ರಮಾಣಪತ್ರಗಳ ವಿವರಗಳು		ಷೇರುದಾರರ ಹೆಸರು
		ಷೇರು ಪ್ರಮಾಣಪತ್ರ ಸಂಖ್ಯೆ	ವಿಶಿಷ್ಟ ಸಂಖ್ಯೆಗಳು	
K000892	500	1523	14160751 - 14161250	ಕೀರಂಕುಜ್ಮಿಯಾ ಗೀವರ್ಗೀಸ್ ಜಾರ್ಜ್ (ಮೃತ)

ಈ ಸೂಚನೆಯನ್ನು ಪ್ರಕಟಿಸಿದ ದಿನಾಂಕದಿಂದ ಹದಿನೈದು ದಿನಗಳ ಒಳಗಾಗಿ ಸಾರ್ವಜನಿಕರಿಂದ ಯಾವುದೇ ಆಕ್ಷೇಪಣೆಯು ಸ್ವೀಕರಿಸದಿದ್ದಲ್ಲಿ, ಕಂಪನಿಯು ದಿನಾಂಕ 25ನೇ ಜನವರಿ 2022ರ ಸೆಬಿ ಸುತ್ತೋಲೆ ಸಂಖ್ಯೆ SEBI/HO/MIRSD/MIRSD_RTAMB/P/CIR/2022/8ರಂತೆ ದೃಢಿಕರಣ ಪತ್ರವನ್ನು ನೀಡಲು ಮುಂದುವರೆಯುತ್ತದೆ.

ಆಸ್ಟ್ರಾಜೆನೆಕ ಫಾರ್ಮಾ ಇಂಡಿಯಾ ಲಿಮಿಟೆಡ್ ಪರವಾಗಿ

ಸ್ಥಳ: ಬೆಂಗಳೂರು
ದಿನಾಂಕ: 16.01.2026

ಭಾವನಾ ಅಗ್ರವಾಲ್
ಮುಖ್ಯ ಹಣಕಾಸು ಅಧಿಕಾರಿ ಮತ್ತು ನಿರ್ದೇಶಕರು
ಡಿನ್: 10485441

ನಗರಸಭಾ ಕಾರ್ಯಾಲಯ, ದೊಡ್ಡಬಳ್ಳಾಪುರ

ನಗರಸಭೆ, ದೊಡ್ಡಬಳ್ಳಾಪುರ –561203
ಇ–ಮೇಲ್: itstaff_ulb_doddaballapur@yahoo.com
ವೆಬ್‌ಸೈಟ್: www.doddaballapurcity.mrc.gov.in

ನಸದೊ/ಕಂದಾಯ ಶಾಖೆ/ಸಿಆರ್/01/2022–23 ದಿನಾಂಕ: 09.01.2026

"ಪ್ರಕಟಣೆ"

ಈ ಮೂಲಕ ಸಾರ್ವಜನಿಕ/ನಗರವಾಸಿಗಳಿಗೆ ತಿಳಿಯಪಡಿಸುವುದೇನೆಂದರೆ, ಶ್ರೀ ಕೊಂಗಾಡಿಯಪ್ಪನವರು ದೊಡ್ಡಬಳ್ಳಾಪುರಕ್ಕೆ ವಿದ್ಯುತ್, ಕೊಳವೆ ಬಾವಿ, ಪ್ರೌಢಶಾಲೆ, ಆಸ್ಪತ್ರೆ, ಪಶುವೈದ್ಯ ಶಾಲೆ. ಕೈಮಗ್ಗ ಮತ್ತು ಗೃಹ ಕೈಗಾರಿಕಾ ತರಬೇತಿ ಶಾಲೆಯನ್ನು ಮಂಜೂರು ಮಾಡಿಸಿ ನಗರದ ಅಭಿವೃದ್ಧಿಗೆ ತಮ್ಮದೇ ಆದ ಕೊಡುಗೆಯನ್ನು ನೀಡಿರುತ್ತಾರೆ. ಇವರ ಸ್ಮರಣಾರ್ಥ ದೊಡ್ಡಬಳ್ಳಾಪುರ ನಗರಸಭಾ ನೂತನ ಕಛೇರಿಯ ಆವರಣದಲ್ಲಿ ಪುಣ್ಯ ಪುರುಷ **"ಲೋಕಸೇವಾ ನಿರತ ಡಿ. ಕೊಂಗಾಡಿಯಪ್ಪರವರ"** ಪ್ರತಿಮೆಯನ್ನು ಸ್ಥಾಪಿಸಲು **ದಿನಾಂಕ: 29.12.2025** ರಂದು ಕಛೇರಿಯಲ್ಲಿ ನಡೆದ ಕೌನ್ಸಿಲ್ ಸಾಮಾನ್ಯ ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ. ಆದುದರಿಂದ ಈ ಕುರಿತು ಸಾರ್ವಜನಿಕ ಪ್ರಕಟಣೆಯನ್ನು ಪ್ರಚುರಪಡಿಸಲಾಗುತ್ತಿದ್ದು, ಪ್ರತಿಮೆ ಸ್ಥಾಪಿಸುವ ಕುರಿತು ಯಾವುದೇ ಆಕ್ಷೇಪಣೆಗಳು ಹಾಗೂ ಸಲಹೆಗಳು ಇದ್ದಲ್ಲಿ ಪ್ರಕಟಣೆ ಹೊರಡಿಸಿದ ದಿನಾಂಕದಿಂದ **30 ದಿನಗಳೊಳಗಾಗಿ** ಲಿಖಿತ ದಾಖಲಾತಿ ಮುಖಾಂತರ ಈ ಕಛೇರಿಗೆ ಸಲ್ಲಿಸಬಹುದು. ಅವಧಿ ಮೀರಿ ಬಂದ ಆಕ್ಷೇಪಣೆಗಳ ಹಾಗೂ ಸಲಹೆಗಳನ್ನು ಪರಿಗಣಿಸಲಾಗುವುದಿಲ್ಲವೆಂದು ತಿಳಿಯುವುದು.

ಸಹಿ/–
ಪೌರಾಯುಕ್ತರು,
ನಗರಸಭೆ, ದೊಡ್ಡಬಳ್ಳಾಪುರ

ವಾ.ಸಾ.ಸಂ.ಇ/ವಾಪ್ರ/5054/ಎಸ್‌ಎಸ್‌ಸಿ/2025–26

ಆರೋಪಿಗಳ ಬಂಧನ, ಸಂಪಿಗೆಹಳ್ಳಿ ಠಾಣೆಯ ಪೊಲೀಸರ ಕಾರ್ಯಾಚರಣೆ

ಪುರುಷರ ವೇಷಧರಿಸಿ ಮನೆ ಕಳ್ಳತನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪುರುಷರ ರೀತಿಯಲ್ಲಿ ಬಟ್ಟೆ ಧರಿಸಿಕೊಂಡು ಮನೆಗೆ ನುಗ್ಗಿ ಕಳ್ಳತನ ಮಾಡುತ್ತಿದ್ದ ಜಾಲವನ್ನು ಪತ್ತೆಹಚ್ಚಿರುವ ಸಂಪಿಗೆಹಳ್ಳಿ ಠಾಣೆಯ ಪೊಲೀಸರು, ಮಹಿಳೆ ಹಾಗೂ ಇಬ್ಬರು ಬಾಲಕಿಯರನ್ನು ಬಂಧಿಸುವಲ್ಲಿ ಯಶಸ್ವಿ ಆಗಿದ್ದಾರೆ.



ರೇಷ್ಮಾ

ಅಮರಜ್ಯೋತಿ ಲೇಔಟ್ ಎರಡನೇ ಕ್ರಾಸ್‌ನ ನಿವಾಸಿ ರೇಷ್ಮಾ (45) ಹಾಗೂ ಇಬ್ಬರು ಬಾಲಕಿಯರನ್ನು ಪೊಲೀಸರು ಬಂಧಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಬಂಧಿತರಿಂದ 30 ಗ್ರಾಂ ಚಿನ್ನಾಭರಣ, 80 ಗ್ರಾಂ ಬೆಳ್ಳಿಯ ಸಾಮಗ್ರಿ ಹಾಗೂ ಕೃತ್ಯಕ್ಕೆ ಬಳಸುತ್ತಿದ್ದ ಒಂದು ಬೈಕ್ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಯಲಹಂಕದ ಅಗ್ರಹಾರ ಲೇಔಟ್‌ನ 4ನೇ ಮುಖ್ಯರಸ್ತೆಯ 19ನೇ ಕ್ರಾಸ್ ನಿವಾಸಿ ಸಂಗಮೇಶ್ವರ ಅವರು ನೀಡಿದ ದೂರಿನ ಮೇರೆಗೆ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಸಂಗಮೇಶ್ವರ ಅವರು ಜ.13ರಂದು ಮಕ್ಕಳನ್ನು ಶಾಲೆಗೆ ಕಳುಹಿಸಿ, ಆಟೊ ಓಡಿಸಲು ಹೋಗಿದ್ದರು. ಅವರ ಪತ್ನಿ ಗಾರ್ಮೆಂಟ್ಸ್ ಕೆಲಸಕ್ಕೆ ತೆರಳಿದ್ದರು. ಅಂದೇ ಸಂಜೆ ಮನೆಗೆ ವಾಪಸ್ ಬಂದು ನೋಡಿದಾಗ ಮನೆಯ ಬಾಗಿಲು ಒಡೆದು ಕಳ್ಳತನ ಮಾಡಿರುವುದು ಗೊತ್ತಾಗಿತ್ತು. ಮನೆಯಲ್ಲಿದ್ದ 30 ಗ್ರಾಂ ಚಿನ್ನ, 60 ಗ್ರಾಂ ಬೆಳ್ಳಿಯ ಸಾಮಗ್ರಿ ಹಾಗೂ ₹15 ಸಾವಿರ ನಗದು ಕಳ್ಳತನ ಮಾಡಲಾಗಿತ್ತು. ಕೃತ್ಯ ಎಸಗಿದವರ ಪತ್ತೆಗೆ ವಿಶೇಷ ತಂಡ ರಚಿಸಲಾಗಿತ್ತು. ಅಮರಜ್ಯೋತಿ ಲೇಔಟ್‌ನಲ್ಲಿ ರೇಷ್ಮಾ ಹಾಗೂ ಇಬ್ಬರು ಬಾಲಕಿಯರನ್ನು ವಶಕ್ಕೆ ಪಡೆದುಕೊಳ್ಳಲಾಯಿತು ಎಂದು ಪೊಲೀಸರು ಹೇಳಿದರು.

ಠಾಣೆಗೆ ಕರೆತಂದಾಗ ಬಣ್ಣ ಬಯಲಿಗೆ

ಕೃತ್ಯ ನಡೆದ ಮನೆಯ ಅಕ್ಕಪಕ್ಕದಲ್ಲಿದ್ದ ಸಿ.ಸಿ.ಟಿ.ವಿ ಕ್ಯಾಮೆರಾಗಳಲ್ಲಿ ಸೆರೆಯಾದ ದೃಶ್ಯಾವಳಿ ಪರಿಶೀಲನೆ ನಡೆಸಲಾಯಿತು. ದೃಶ್ಯದಲ್ಲಿ ಆರೋಪಿಗಳ ಚಲನವಲನಗಳು ಸೆರೆಯಾಗಿದ್ದವು. ಅದನ್ನು ಆಧರಿಸಿ ತನಿಖೆ ನಡೆಸಿದಾಗ ಆರೋಪಿಗಳು, ಪುರುಷರ ಮಾದರಿಯಲ್ಲಿ ಪ್ಯಾಂಟ್, ಅಂಗಿ ಧರಿಸಿ, ತಲೆಗೆ ಟೋಪಿ ಹಾಕಿಕೊಂಡು ಕಳ್ಳತನ ಮಾಡಿರುವುದು ಗೊತ್ತಾಯಿತು ಎಂದು ಪೊಲೀಸರು ಹೇಳಿದರು. ಆರೋಪಿಗಳು ಬಳಸಿದ್ದ ಸ್ಕೂಟರ್‌ನ ನಂಬರ್ ಪ್ಲೇಟ್ ಸಿ.ಸಿ.ಟಿ.ವಿ ಕ್ಯಾಮೆರಾ ಸೆರೆ ಆಗಿತ್ತು. ಸ್ಕೂಟರ್ ನೋಂದಣಿ ಸಂಖ್ಯೆ ಪರಿಶೀಲನೆ ನಡೆಸಿದಾಗ ನಕಲಿ ನಂಬರ್ ಪ್ಲೇಟ್ ಎಂಬುದು ಪತ್ತೆ ಆಯಿತು ಎಂದು ಪೊಲೀಸರು ಹೇಳಿದರು.

ರೇಷ್ಮಾ ಅವರ ಸೂಚನೆಯ ಮೇರೆಗೆ ಇಬ್ಬರು ಬಾಲಕಿಯರು ವೇಷಭೂಷಣ ಬದಲಾವಣೆ ಮಾಡಿಕೊಂಡು ಕೃತ್ಯ ಎಸಗುತ್ತಿದ್ದರು ಎಂದು ಪೊಲೀಸರು ಹೇಳಿದರು.

SOBHA

SOBHA LIMITED
CIN : L45201KA1995PLC018475
Regd. Office: 'SOBHA' Sarjapur – Marathahalli Outer Ring Road (ORR), Devarabisanahalli, Bellandur Post, Bangalore - 560 103
Ph: +91-80-49320000, Email: investors@sobha.com, Website: www.sobha.com

UNAUDITED STANDALONE AND CONSOLIDATED FINANCIAL RESULTS FOR THE QUARTER ENDED DECEMBER 31, 2025

The Unaudited Standalone and Consolidated Financial Results of Sobha Limited ("the Company") along with the Limited Review Reports of the Statutory Auditors of the Company for the Quarter ended December 31, 2025 have been reviewed by the Audit Committee and approved by Board of Directors of the Company at their Meeting held on January 16, 2026, in terms of Regulation 33 of SEBI (Listing Obligations and Disclosure Requirements) Regulations, 2015.

The aforementioned Financial Results along with the Limited Review Reports of the Statutory Auditors thereon are available on the website of BSE Limited (BSE) (www.bseindia.com) and National Stock Exchange of India Limited (NSE) (www.nseindia.com) and on the Company's website at https://www.sobha.com/investor-relations/. The same can also be accessed by scanning the QR Code provided below:

Date : January 17, 2026
Place: Bangalore

For Sobha Limited
On Behalf of the Board of Directors
Sd/-
Bijan Kumar Dash
Company Secretary & Compliance Officer

2009ರಲ್ಲಿ ಬೆಂಗಳೂರಿನಲ್ಲಿ ನಡೆದ ವೀರಶೈವ ಲಿಂಗಾಯತ ಭವನದ ಉದ್ಘಾಟನಾ ಸಮಾರಂಭದಲ್ಲಿ ನಾಡಿನ ಸ್ವಾಮೀಜಿಗಳು, ರಾಜಕೀಯ ಮುಖಂಡರೊಂದಿಗೆ ವೇದಿಕೆ ಹಂಚಿಕೊಂಡಿದ್ದ ಭೀಮಣ್ಣ ಖಂಡ್ರೆ (ಎಡ ಚಿತ್ರ). ವೀರಶೈವ ಲಿಂಗಾಯತಕ್ಕೆ ಸ್ವತಂತ್ರ ಧರ್ಮದ ಮಾನ್ಯತೆಗೆ ಒತ್ತಾಯಿಸಿ ಸೋನಿಯಾ ಗಾಂಧಿ ಬಳಿ ನಿಯೋಗ ಕರೆದೊಯ್ದು ಭೇಟಿ ಮಾಡಿಸಿದ್ದ ಭೀಮಣ್ಣ ಖಂಡ್ರೆ

ಬೀಜ ಆಂದೋಲನ, ಕರ್ನಾಟಕ ಏಕೀಕರಣ ಹೋರಾಟದ ರೂವಾರಿ; ಹಾವನೂರು ವರದಿ ಸುಟ್ಟು ಹಾಕಿ ಆಕ್ರೋಶ

ಹೋರಾಟದ ಕೆಚ್ಚು, ಸ್ವಾಭಿಮಾನದ ಕಿಚ್ಚು

● ಶಶಿಕಾಂತ ಎಸ್. ಶೆಂಬೆಳ್ಳಿ

ಬೀದರ್: ಹೋರಾಟದ ಕೆಚ್ಚು, ಸ್ವಾಭಿಮಾನದ ಕಿಚ್ಚು...

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆಯ ಮಾಜಿ ಅಧ್ಯಕ್ಷರೂ ಆದ ಮಾಜಿಸಚಿವ ಭೀಮಣ್ಣ ಖಂಡ್ರೆಯವರ ಇಡೀ ವ್ಯಕ್ತಿತ್ವವನ್ನು ವರ್ಣಿಸಲು ಈ ಮೇಲಿನ ಸಾಲು ಸಾಕು.

ಸಮಾಜವಾದಿ ವಿಚಾರಧಾರೆಯ ಜಯಪ್ರಕಾಶ ನಾರಾಯಣ, ರಾಮ ಮನೋಹರ್ ಲೋಹಿಯಾ, ಅಶೋಕ್ ಮೆಹ್ತಾ ಅವರಿಂದ ಸಾಕಷ್ಟು ಪ್ರಭಾವಿತರಾಗಿದ್ದ ಖಂಡ್ರೆಯವರು ಅದನ್ನೇ ಮೈಗೂಡಿಸಿಕೊಂಡಿದ್ದರು. ಜೀವನದುದ್ದಕ್ಕೂ ಅದರಂತೆ ಬದುಕಿ ತೋರಿಸಿದರು.

ಯೌವನಾವಸ್ಥೆಯಲ್ಲಿ ಸ್ವಾತಂತ್ರ್ಯ ಸಂಗ್ರಾಮದಿಂದ ಪ್ರೇರಣೆಗೊಂಡಿದ್ದ ಅವರು, ಅಂದಿನ ಹೈದರಾಬಾದ್ ಕರ್ನಾಟಕದ ರಜಾಕಾರರ ದೌರ್ಜನ್ಯದ ವಿರುದ್ಧ ಸೆಟೆದು ನಿಂತು, ಹೋರಾಟದಲ್ಲಿ ಧುಮುಕಿದರು.

ಅದೇ ಅವರಿಗೆ ಆನಂತರ ಪ್ರಜಾ ಸಮಾಜವಾದಿ ಪಕ್ಷದಲ್ಲಿ ತೊಡಗಿಸಿಕೊಳ್ಳುವಂತೆ ಮಾಡಿತು. 1953ರಲ್ಲಿ ಭಾಲ್ಕಿ ಪುರಸಭೆಯ ಮೊದಲ ಚುನಾಯಿತ ಅಧ್ಯಕ್ಷರಾಗಿ ಸಕ್ರಿಯ ರಾಜಕಾರಣದಲ್ಲಿ ತೊಡಗಿಸಿಕೊಂಡರು. ಆನಂತರ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾದರು. 1962, 1967, 1978 ಹಾಗೂ 1983ರಲ್ಲಿ ಭಾಲ್ಕಿ ಕ್ಷೇತ್ರದಲ್ಲಿ ನಾಲ್ಕು ಸಲ ಶಾಸಕರಾಗಿ ಆಯ್ಕೆಯಾದರು. 1988 ಮತ್ತು 1994ರಲ್ಲಿ ವಿಧಾನ ಪರಿಷತ್ ಸದಸ್ಯರಾಗಿ ಕೆಲಸ ನಿರ್ವಹಿಸಿದರು.

1992ರಿಂದ 1994ರಲ್ಲಿ ಮುಖ್ಯಮಂತ್ರಿ ಎಂ. ವೀರಪ್ಪ ಮೊಯ್ಲಿ ಅವರ ಸಂಪುಟದಲ್ಲಿ ಸಾರಿಗೆ ಸಚಿವರಾಗಿ ಕೆಲಸ ಮಾಡಿದರು. ಆನಂತರ ಅವರು ಸಕ್ರೀಯ ರಾಜಕಾರಣದಿಂದ ಹಿಂದೆ ಸರಿದು, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆಯ ಜವಾಬ್ದಾರಿ ವಹಿಸಿಕೊಂಡು, ನಾಡಿನಾದ್ಯಂತ ಸಂಚರಿಸಿ ಮಹಾಸಭೆಗೆ ಮೊದಲ ಬಾರಿಗೆ ಸದಸ್ಯತ್ವ ಅಭಿಯಾನ ಆರಂಭಿಸಿ ಬಲಪಡಿಸಿದರು. ಬೆಂಗಳೂರಿನ ಅರಮನೆ ರಸ್ತೆಯಲ್ಲಿ ಮಹಾಸಭೆಯ ಕಚೇರಿ ಆರಂಭಿಸಿ, ರಾಜಧಾನಿಯಲ್ಲಿ ಸಂಘಟನೆಯ ಚಟುವಟಿಕೆಗಳಿಗೆ ಇಂಬು ಕೊಟ್ಟರು.

ನಾಡಿಗೆ ಪರಿಚಯಿಸಿದ ಘಟನೆಗಳು...

ದೇವರಾಜ ಅರಸು ಕಾಲದಲ್ಲಿ ನಡೆದ ಎರಡು ಘಟನೆಗಳು ಭೀಮಣ್ಣ ಖಂಡ್ರೆ ಅವರನ್ನು ಇಡೀ ನಾಡಿಗೆ ಪರಿಚಯಿಸಿದವು. ಮಳೆಗಾಲ ಆರಂಭಗೊಂಡರೂ ಸರ್ಕಾರ ರೈತರಿಗೆ ಬೀಜ ವಿತರಿಸಿರಲಿಲ್ಲ. ಈ ವಿಷಯ ಗೊತ್ತಾದ ನಂತರ ಬೀಜ ಸಂಗ್ರಹಿಸಿದ ಗೋದಾಮುಗಳ ಬೀಗ ಒಡೆದು, ರೈತರಿಗೆ ವಿತರಿಸಿದರು. ಇದಕ್ಕಾಗಿ ಅವರ ಬಂಧನವಾಯಿತು. ಆದರೆ, ಇಡೀ ರೈತ ಕುಲ ಅವರ ಪರ ನಿಂತಿದ್ದರಿಂದ ಸರ್ಕಾರ ತಲೆಬಾಗಬೇಕಾಯಿತು.

ಇನ್ನೊಂದು ಪ್ರಮುಖ ಘಟನೆಯೆಂದರೆ ವಿಧಾನಸಭೆಯಲ್ಲಿಯೇ ಹಾವನೂರು ವರದಿಯನ್ನು ವಿರೋಧಿಸಿ, ಅದರ ಕರಡು ಪ್ರತಿಗಳನ್ನು ಹರಿದು, ಅಲ್ಲಿಯೇ ಸುಟ್ಟು ಹಾಕಿದರು. ಹಿಂದುಳಿದವರಿಗೆ ಜಾತಿ ಆಧರಿಸಿ ಮೀಸಲಾತಿ ಕೊಡುವುದು ಸರಿಯಲ್ಲ. ಅವರ ಆರ್ಥಿಕ ಪರಿಸ್ಥಿತಿ ನೋಡಿಕೊಂಡು ಮೀಸಲಾತಿ ಕೊಡಬೇಕೆನ್ನುವುದು ಖಂಡ್ರೆಯವರ ಬಲವಾದ ವಾದವಾಗಿತ್ತು. ಸದನದಲ್ಲಿ ಮುಖ್ಯಮಂತ್ರಿ ದೇವರಾಜ ಅರಸು ಅವರ ಕುರ್ಚಿ ಮೇಲೆ ಕುಳಿತು ಗಮನ ಸೆಳೆದಿದ್ದರು.

ಲಿಂಗೈಕ್ಯ ಚನ್ನಬಸವ ಪಟ್ಟದ್ದೇವರು, ಜಯದೇವಿ ತಾಯಿ ಲಿಗಾಡೆ, ಪ್ರಭುರಾವ ಕಂಬಳಿವಾಲೆ ಅವರೊಂದಿಗೆ ಕರ್ನಾಟಕ ಏಕೀಕರಣ ಚಳವಳಿಯಲ್ಲಿ ಪಾಲ್ಗೊಂಡು ಪ್ರಮುಖ ಪಾತ್ರ ವಹಿಸಿದ್ದರು. ಮರಾಠಿ ಭಾಷಿಕರು ಭಾಲ್ಕಿ ಸೇರಿದಂತೆ ಬೀದರ್ ಜಿಲ್ಲೆಯ ಕೆಲವು ಭಾಗಗಳನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕೆಂದು ಆಗ್ರಹಿಸಿ ಹೋರಾಟ ಆರಂಭಿಸಿದ್ದರು. ಇದಕ್ಕೆ ಪ್ರತಿಯಾಗಿ ಹೋರಾಟ ಆರಂಭಿಸಿ, ಭಾಲ್ಕಿಯನ್ನು ಕರ್ನಾಟಕದಲ್ಲಿಯೇ ಉಳಿಯುವಂತೆ ಮಾಡಿದ್ದರು. ಜಿಲ್ಲೆಯ ಜೀವನಾಡಿ ಕಾರಂಜಾ ಜಲಾಶಯ ಕಟ್ಟುವುದರಲ್ಲೂ ಮುಖ್ಯ ಪಾತ್ರ ವಹಿಸಿದ ಅವರು, ಬಿಎಸ್‌ಎಸ್‌ಕೆ ಹಾಗೂ ಎಂಜಿಎಸ್‌ಎಸ್‌ಕೆ ಅಧ್ಯಕ್ಷರಾಗಿ ಸಹಕಾರ ಕ್ಷೇತ್ರದಲ್ಲೂ ತೊಡಗಿಸಿಕೊಂಡಿದ್ದರು.

‘ಬಸವಣ್ಣನವರಂತೆ ಬದುಕಬೇಕು, ಸಂಕಷ್ಟ ಎದುರಾದಾಗ ಛತ್ರಪತಿ ಶಿವಾಜಿ ಮಹಾರಾಜರಂತೆ ಹೋರಾಟ ನಡೆಸಬೇಕು’ ಎಂದು ಎಲ್ಲ ಸಭೆ, ಸಮಾರಂಭಗಳಲ್ಲಿ ಗಟ್ಟಿ ದನಿಯಲ್ಲಿ ಹೇಳುತ್ತಿದ್ದರು. ಸಾತ್ವಿಕ ಬದುಕು ಮೈಗೂಡಿಸಿಕೊಂಡಿದ್ದ ಅವರು ತುಂಬು ಜೀವನ ನಡೆಸಿ, ಈಗ ಇಹಲೋಕ ತ್ಯಜಿಸಿದ್ದಾರೆ.

‘ಮಿತ ಆಹಾರ ಸೇವನೆ, ಮೃದು ಸ್ವಭಾವದ ವ್ಯಕ್ತಿತ್ವ ಹೊಂದಿದ್ದ ಭೀಮಣ್ಣ ಖಂಡ್ರೆ ಅವರು ನೇರ, ನಿಷ್ಠುರ ಹಾಗೂ ಸ್ವಾಭಿಮಾನದ ವ್ಯಕ್ತಿಯಾಗಿದ್ದರು. ಯಾವುದೇ ಜನಪರ ಹೋರಾಟವಿದ್ದರೂ ಸದಾ ಮುಂಚೂಣಿಯಲ್ಲಿರುತ್ತಿದ್ದರು. ರಜಾಕಾರರ ವಿರುದ್ಧದ ಹೋರಾಟ, ಕರ್ನಾಟಕ ಏಕೀಕರಣ, ಬೀಜ ಆಂದೋಲನ, ಹಾವನೂರು ವರದಿಯ ಅನುಷ್ಠಾನದ ವಿರುದ್ಧದ ಹೋರಾಟದ ಮೂಲಕ ನಾಡಿಗೆ ಪರಿಚಯವಾದರು. ರಾಜಿ ಮಾಡಿಕೊಂಡು ರಾಜಕೀಯ ಮಾಡಿಕೊಳ್ಳುವ ಸ್ವಭಾವ ಅವರದಾಗಿರಲಿಲ್ಲ. ಎಲ್ಲರನ್ನೂ ಪ್ರೀತಿ ಗೌರವಾದರಗಳಿಂದ ಕಾಣುತ್ತಿದ್ದರು. ಪತ್ನಿ ಹಾಗೂ ಮಕ್ಕಳಿಗೂ ಬಹುವಚನ ಬಳಸಿ ಮಾತನಾಡುತ್ತಿದ್ದರು. ಇದರಿಂದ ಅವರ ವ್ಯಕ್ತಿತ್ವ ಮನಗಾಣಬಹುದು’ ಎನ್ನುತ್ತಾರೆ ಅವರನ್ನು ಹತ್ತಿರದಿಂದ ಬಲ್ಲ ನಿವೃತ್ತ ಪ್ರಾಚಾರ್ಯ ವಿಠ್ಠಲದಾಸ್ ಪ್ಯಾಗೆ, ಮುಖಂಡ ಬಸವರಾಜ ಬುಳ್ಳಾ ಅವರು.



ರಾಜ್ಯಮಟ್ಟದ ದ್ವಿತೀಯ ರೈತ ಸಮ್ಮೇಳನದಲ್ಲಿ ಅಂದಿನ ಪ್ರಧಾನಿ ರಾಜೀವ್ ಗಾಂಧಿ, ಮುಖ್ಯಮಂತ್ರಿ ಆರ್. ಗುಂಡೂರಾವ್ ಅವರೊಂದಿಗೆ ಭೀಮಣ್ಣ ಖಂಡ್ರೆ

ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದ ಚುನಾವಣೆಯಲ್ಲಿ ಇಂದಿರಾ ಗಾಂಧಿ ಅವರೊಂದಿಗೆ ವೇದಿಕೆ ಹಂಚಿಕೊಂಡು ಅವರ ಪರ ಪ್ರಚಾರ ಕೈಗೊಂಡಿದ್ದ ಭೀಮಣ್ಣ ಖಂಡ್ರೆ

ಸಂಗ್ರಹ ಚಿತ್ರಗಳು

> ಭೀಮಣ್ಣ ಖಂಡ್ರೆಯವರು ಲಿಂಗೈಕ್ಯ ಚನ್ನಬಸವ ಪಟ್ಟದ್ದೇವರ ಕಟ್ಟಾ ಶಿಷ್ಯರಾಗಿದ್ದರು. ಗುರುವಿನ ನೆಚ್ಚಿನ ಶಿಷ್ಯರಾಗಿ ಸಮಾಜೋಧಾರ್ಮಿಕ ಕೆಲಸ ಮಾಡಿದ್ದರು
>
> **ಬಸವಲಿಂಗ ಪಟ್ಟದ್ದೇವರು**
> ಅಧ್ಯಕ್ಷ, ಬಸವಕಲ್ಯಾಣ ಅನುಭವ ಮಂಟಪ

> ಭೀಮಣ್ಣ ಖಂಡ್ರೆಯವರು ಲಿಂಗಾಯತ ಸಮಾಜ ಹಾಗೂ ಈ ನಾಡಿಗೆ ಕೊಟ್ಟ ಕೊಡುಗೆ ಬಹಳ ದೊಡ್ಡದು. ಅವರು ಭೌತಿಕ ಇಲ್ಲವಾದರೂ ಅವರ ಕೆಲಸದಿಂದ ಸದಾ ಜೀವಂತವಾಗಿರುತ್ತಾರೆ
>
> **ಗುರುಬಸವ ಪಟ್ಟದ್ದೇವರು**
> ಪೀಠಾಧಿಪತಿ, ಭಾಲ್ಕಿ ಹಿರೇಮಠ ಸಂಸ್ಥಾನ

> ಭೀಮಣ್ಣ ಖಂಡ್ರೆ ಹಾಗೂ ಅವರ ಕುಟುಂಬದ ಕೊಡುಗೆ ಈ ನಾಡಿಗೆ ಬಹಳ ದೊಡ್ಡದಿದೆ. ಅವರ ಋಣ ಸಮಾಜ ಎಂದಿಗೂ ಮರೆಯಲಾರದು
>
> **ತಡೋಳಾ ರಾಜೇಶ್ವರ ಶಿವಾಚಾರ್ಯರು**

> ಭೀಮಣ್ಣ ಖಂಡ್ರೆಯವರು ಅವರ ಕೆಲಸಗಳ ಮೂಲಕ ಸಮಾಜದಲ್ಲಿ ಚಿರಸ್ಥಾಯಿಯಾಗಿದ್ದಾರೆ. ನಾಡು ನುಡಿಗಾಗಿ ಸಲ್ಲಿಸಿದ ಅವರ ಸೇವೆ ಸದಾ ಸ್ಮರಣೀಯ
>
> **ಶಿವಾನಂದ ಸ್ವಾಮೀಜಿ**
> ಪೀಠಾಧಿಪತಿ, ಗುರುಬಸವೇಶ್ವರ ಸಂಸ್ಥಾನ ಮಠ ಹುಲಸೂರು

ಪುತ್ರ ಈಶ್ವರ ಖಂಡ್ರೆ ಅವರೊಂದಿಗೆ ಭೀಮಣ್ಣ ಖಂಡ್ರೆ

ನಾಲ್ಕು ಭಾಷೆಗಳ ಮೇಲೆ ಹಿಡಿತ

ಭಾಲ್ಕಿ ಹಿರೇಮಠದಿಂದ ಕನ್ನಡ ಶಿಕ್ಷಣ, ಶರಣತ್ವದ ದೀಕ್ಷೆ ಪಡೆದಿದ್ದ ಭೀಮಣ್ಣ ಖಂಡ್ರೆ ಅವರು, ಉರ್ದು, ಪಾರ್ಸಿ, ಮರಾಠಿ ಹಾಗೂ ಇಂಗ್ಲಿಷ್ ಭಾಷೆಗಳನ್ನು ಚೆನ್ನಾಗಿ ಅರಿತಿದ್ದರು.

ಬಿಎ ಎಲ್‌ಎಲ್‌ಬಿ ಪದವಿ ಪೂರೈಸಿದ್ದ ಅವರು ಕೆಲಕಾಲ ವಕೀಲರಾಗಿಯೂ ಕಾರ್ಯ ನಿರ್ವಹಿಸಿದ್ದರು. ರೈತ ಚಳವಳಿ, ರಾಜಕೀಯ, ಸಹಕಾರ ರಂಗಕ್ಕೆ ಪದಾರ್ಪಣೆ ಮಾಡಿದ ನಂತರ ವಕೀಲಿ ವೃತ್ತಿಯಿಂದ ದೂರ ಉಳಿದಿದ್ದರು. ಆದರೆ, ಕಾನೂನು ವಿಷಯದಲ್ಲಿ ಪಾರಂಗತರಾಗಿದ್ದರು.

ಅನುಭವ ಮಂಟಪಕ್ಕೆ ಹೆಗಲು ಕೊಟ್ಟರು

80ರ ದಶಕದಲ್ಲಿ ಬಸವಕಲ್ಯಾಣದಲ್ಲಿ ಅನುಭವ ಮಂಟಪದ ನಿರ್ಮಾಣದಲ್ಲಿ ಭೀಮಣ್ಣ ಖಂಡ್ರೆ ಕೂಡ ಪ್ರಮುಖ ಪಾತ್ರ ವಹಿಸಿದ್ದರು. ಲಿಂಗೈಕ್ಯ ಚನ್ನಬಸವ ಪಟ್ಟದ್ದೇವರ ಹೆಗಲಿಗೆ ಹೆಗಲು ಕೊಟ್ಟು ಕೆಲಸ ಮಾಡಿದ್ದರು.

ಪಟ್ಟದ್ದೇವರ ಕಟ್ಟಾ ಶಿಷ್ಯರಾಗಿದ್ದ ಅವರು, ಅವರ ನಡೆ ನುಡಿಯಿಂದ ಬಹಳ ಪ್ರಭಾವಿತರಾಗಿದ್ದರು. ಕನ್ನಡದ ಮಠವೆಂದೇ ಗುರುತಿಸಿಕೊಂಡಿರುವ ಭಾಲ್ಕಿ ಹಿರೇಮಠ ಸಂಸ್ಥಾನದ ಎಲ್ಲಾ ಕೆಲಸಗಳಿಗೆ ಒತ್ತಾಸೆಯಾಗಿ ನಿಂತು, ಗಡಿಯಲ್ಲಿ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ಕನ್ನಡ ಉಳಿಸಿ, ಬೆಳೆಸುವ ಕೆಲಸ ಮಾಡಿದ್ದರು. ಈಗ ಹಳೆಯ ಅನುಭವ ಮಂಟಪದ ಮಗ್ಗುಲಲ್ಲಿ ರಾಜ್ಯ ಸರ್ಕಾರವು ₹750 ಕೋಟಿ ವೆಚ್ಚದಲ್ಲಿ ನೂತನ ಅನುಭವ ಮಂಟಪ ನಿರ್ಮಿಸುತ್ತಿದೆ.

ಗಾಂಧಿ ಕುಟುಂಬಕ್ಕೆ ಪರಮಾಪ್ತರು

ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರು ಜಾರಿಗೆ ತಂದಿದ್ದ ಸಂತಾನ ಶಕ್ತಿಹರಣ ಶಸ್ತ್ರಚಿಕಿತ್ಸೆ ಅಭಿಯಾನವನ್ನು ಬೀದರ್ ಜಿಲ್ಲೆಯಲ್ಲಿ ಯಶಸ್ಸುಗೊಳಿಸಲು ಟೊಂಕ ಕಟ್ಟಿ ನಿಂತುಕೊಂಡು ಕೆಲಸ ಮಾಡಿದವರು ಭೀಮಣ್ಣ ಖಂಡ್ರೆ.

ಈ ವಿಷಯ ಅರಿತ ಇಂದಿರಾ ಗಾಂಧಿ ಹಾಗೂ ಅವರ ಮಗ ಸಂಜಯ್ ಗಾಂಧಿ ಅವರು ಭೀಮಣ್ಣ ಖಂಡ್ರೆಯವರ ಕೆಲಸಕ್ಕೆ ಮೆಚ್ಚುಗೆ ಸೂಚಿಸಿದ್ದರು. ಗಾಂಧಿ ಕುಟುಂಬಕ್ಕೆ ಆರಂಭದಿಂದಲೂ ನಿಷ್ಠರಾಗಿದ್ದ ಅವರು, ಆನಂತರ ರಾಜೀವ್ ಗಾಂಧಿ, ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಅವರೊಂದಿಗೂ ಉತ್ತಮ ಒಡನಾಟ ಹೊಂದಿದ್ದರು. ಈ ಎಲ್ಲ ನಾಯಕರನ್ನು ಭಾಲ್ಕಿಗೆ ಕರೆಸಿದ್ದು ವಿಶೇಷ.

ತಂದೆ ನಾಲ್ಕು ಸಲ, ಮಕ್ಕಳು ಆರು ಸಲ

ಭಾಲ್ಕಿ ವಿಧಾನಸಭಾ ಕ್ಷೇತ್ರದ ಮೇಲೆ ಭೀಮಣ್ಣ ಖಂಡ್ರೆ ಕುಟುಂಬ ಆರಂಭದಿಂದಲೂ ಹಿಡಿತ ಸಾಧಿಸಿದೆ.

ಭೀಮಣ್ಣ ಖಂಡ್ರೆಯವರು ಕ್ಷೇತ್ರವನ್ನು ನಾಲ್ಕು ಸಲ ಪ್ರತಿನಿಧಿಸಿದರೆ, ಇವರ ಹಿರಿಯ ಮಗ ದಿವಂಗತ ವಿಜಯಕುಮಾರ್ ಖಂಡ್ರೆ ಎರಡು ಸಲ ಹಾಗೂ ಪರಿಸರ, ಅರಣ್ಯ ಸಚಿವರೂ ಆದ ಈಶ್ವರ ಬಿ. ಖಂಡ್ರೆ ನಾಲ್ಕನೇ ಸಲ ಚುನಾಯಿತರಾಗಿದ್ದಾರೆ. ಕಿರಿಯ ಮಗ ಅಮರಕುಮಾರ್ ಖಂಡ್ರೆ ಡಿಸಿಸಿ ಬ್ಯಾಂಕಿನ ಚುಕ್ಕಾಣಿ ಹಿಡಿದಿದ್ದಾರೆ.

ಇವರ ಮೊಮ್ಮಗ ಸಾಗರ್ ಖಂಡ್ರೆ ಬೀದರ್ ಲೋಕಸಭಾ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದಾರೆ. ಹೀಗೆ ಭಾಲ್ಕಿ ಹಾಗೂ ಬೀದರ್ ಜಿಲ್ಲೆಯ ಮೇಲೆ ಹಿಡಿತ ಸಾಧಿಸಿದ್ದು, ಗಾಢವಾದ ಪ್ರಭಾವ ಹೊಂದಿದ್ದಾರೆ.

ಸ್ವತಂತ್ರ ಧರ್ಮದ ಮಾನ್ಯತೆಗೆ ಹೋರಾಟ

ವೀರಶೈವ ಲಿಂಗಾಯತ ಧರ್ಮಕ್ಕೆ ಸಂವಿಧಾನಾತ್ಮಕವಾಗಿ ಸ್ವತಂತ್ರ ಧರ್ಮದ ಮಾನ್ಯತೆ ಸಿಗಲು ಶ್ರಮಿಸಿದವರಲ್ಲಿ ಮುಂಚೂಣಿಯಲ್ಲಿದ್ದವರು ಭೀಮಣ್ಣ ಖಂಡ್ರೆ ಕೂಡ ಒಬ್ಬರು.

ಕೇಂದ್ರದಲ್ಲಿ ಯುಪಿಎ ಸರ್ಕಾರವಿದ್ದಾಗ ನಿಯೋಗ ತೆಗೆದುಕೊಂಡು ಹೋಗಿ, ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರಿಗೆ ಮನವರಿಕೆ ಮಾಡಿಕೊಟ್ಟಿದ್ದರು. ಬಸವ ಪರಂಪರೆಯ ವಿರಕ್ತ ಮಠಾಧೀಶರು ಹಾಗೂ ಪಂಚಾಚಾರ್ಯರ ನಡುವೆ ಸಮನ್ವಯ ಸಾಧಿಸಿ, ಸಮಾಜವನ್ನು ಒಗ್ಗೂಡಿಸಲು ಪ್ರಯತ್ನಿಸಿದ್ದರು. ಹೋರಾಟದಲ್ಲಿ ನಿರಂತರವಾಗಿ ಸಕ್ರಿಯರಾಗಿದ್ದರು.

‘ಅಣ್ತಮ್ಮಗೆ ಲೂಟಿಯ ಚಪಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೆಲವರಿಗೆ ದುಡ್ಡು ಮಾಡುವ ಚಪಲ. ನನಗೆ, ಜನರ ಜತೆ ನಿಂತು ಅವರ ಸೇವೆ ಮಾಡುವ ಚಪಲ’ ಎಂದು ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ಕುಮಾರಸ್ವಾಮಿ ಬಾಯಿ ಚಪಲಕ್ಕೆ ಮಾತನಾಡುತ್ತಾರೆ ಎಂದು ಬಮೂಲ್ ಅಧ್ಯಕ್ಷ ಡಿ.ಕೆ. ಸುರೇಶ್ ಅವರ ಹೇಳಿಕೆ ಬಗ್ಗೆ ಸುದ್ದಿಗಾರರ ಕೇಳಿದ ಪ್ರಶ್ನೆಗೆ ಅವರು, ‘ನಾನೆಂದೂ ಬಾಯಿ ಚಪಲಕ್ಕೆ ಮಾತನಾಡುವುದಿಲ್ಲ. ಈ ಸೋದರರು ಮಾಡುವ ಅಕ್ರಮಗಳನ್ನು ತಲುಪಿಸುವ ಕೆಲಸ ಮಾಡುತ್ತೇನೆ. ಅದೂ ಸಹ ಜನ ಸೇವೆಯೇ’ ಎಂದು ಉತ್ತರಿಸಿದರು.

ಕುಮಾರ ಸ್ವಾಮಿ

‘ನನ್ನ ಚಪಲ ನನ್ನದು, ಅವರ ಚಪಲ ಅವರದ್ದು. ದಿನ ಬೆಳಗಾದರೆ ಯಾರ ಜಮೀನಿಗೆ ಬೇಲಿ ಹಾಕಬೇಕು, ಯಾರ ತಲೆ ಒಡೆಯಬೇಕು, ದುಡ್ಡು ಹೇಗೆ ಲೂಟಿ ಮಾಡಬೇಕು ಎಂದು ಯೋಚಿಸುವುದೇ ಕೆಲವರಿಗೆ ಚಪಲ. ಅಂತಹ ಚಪಲ ನನಗಿಲ್ಲ. ಅವರಿಗೂ ನನಗೂ ಇರುವ ವ್ಯತ್ಯಾಸ ಇಷ್ಟೆ. ಆ ಅಣ್ಣತಮ್ಮಂದಿರ ಇಂತಹ ಚಪಲಗಳ ಬಗ್ಗೆ ಇನ್ನಷ್ಟು ಮಾತನಾಡುವುದು’ ಎಂದರು.

‘ಸ್ವಜಾತಿಯವರೇ ತಮಗೆ ಅನ್ಯಾಯ ಮಾಡುತ್ತಿದ್ದಾರೆ ಎಂದು ಆ ವ್ಯಕ್ತಿ ಹೇಳಿಕೊಂಡಿದ್ದಾರೆ. ಆ ವ್ಯಕ್ತಿ ತಮ್ಮ ಸಮುದಾಯದ ಜನರಿಗಾಗಿ ಏನು ಮಾಡಿದ್ದಾರೆ ಎಂಬುದನ್ನು ಮೊದಲು ಯೋಚಿಸಲಿ. ಅಕ್ರಮವಾಗಿ ಏನೆಲ್ಲಾ, ಹೇಗೆಲ್ಲಾ ಸಂಪಾದನೆ ಮಾಡಬೇಕು ಎಂದು ಯೋಚಿಸುವ ವ್ಯಕ್ತಿಯು ಜಾತಿ ಹೆಸರು ಹೇಳಿಕೊಂಡು ಬಂದರೆ, ಬೆಂಬಲ ಕೊಡಬೇಕೇ’ ಎಂದು ಪ್ರಶ್ನಿಸಿದರು.

ಕರ್ನಾಟಕ ಬ್ಯಾಡ್ಮಿಂಟನ್ ಸಂಸ್ಥೆ ಅಧ್ಯಕ್ಷ ಕುಮಾರ್ ಬಂಗಾರಪ್ಪ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಶುಕ್ರವಾರ ಭೇಟಿಯಾಗಿ, ಬ್ಯಾಡ್ಮಿಂಟನ್ ತರಬೇತಿಗೆ ಅತ್ಯಾಧುನಿಕ ಮೂಲಸೌಕರ್ಯ ಒದಗಿಸುವಂತೆ ಮನವಿ ಮಾಡಿದರು

ವರ್ಷದ ಹಿಂದಷ್ಟೇ ಪ್ರಯಾಣ ದರವನ್ನು ಶೇ 71.5ರಷ್ಟು ಏರಿಕೆ ಮಾಡಿದ್ದ ಬಿಎಂಆರ್‌ಸಿಎಲ್

ಸದ್ಯಕ್ಕಿಲ್ಲ ಮೆಟ್ರೊ ಪ್ರಯಾಣ ದರ ಏರಿಕೆ

● ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಬಿಎಂಆರ್‌ಸಿಎಲ್ ಪ್ರತಿ ವರ್ಷ ಶೇ 5ರಷ್ಟು ಪ್ರಯಾಣದರ ಹೆಚ್ಚಳ ಮಾಡಬಹುದು ಎಂದು ದರ ನಿಗದಿ ಸಮಿತಿ (ಎಫ್‌ಎಫ್‌ಸಿ) ಶಿಫಾರಸು ಮಾಡಿದ್ದರೂ ಸದ್ಯಕ್ಕೆ ಮೆಟ್ರೊ ಪ್ರಯಾಣ ದರ ಏರಿಸುವ ಚಿಂತನೆ ಇಲ್ಲ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಇಂಧನ ವೆಚ್ಚ, ಸಿಬ್ಬಂದಿ ವೆಚ್ಚ, ನಿರ್ವಹಣೆ ವೆಚ್ಚ, ಇತರ ವೆಚ್ಚಗಳನ್ನು ಹಿಂದಿನ ವರ್ಷಕ್ಕೆ ಹೋಲಿಸಿ ಎಷ್ಟು ಹೆಚ್ಚಾಗಿದೆ ಎಂಬುದನ್ನು ಲೆಕ್ಕಾಚಾರ ಮಾಡಿ ಅದರ ಸರಾಸರಿಯಂತೆ ಪ್ರಯಾಣ ದರ ಹೆಚ್ಚಿಸಬೇಕು. ಇಲ್ಲವೇ ವಾರ್ಷಿಕ ಶೇ 5ರಷ್ಟು ಹೆಚ್ಚಳ ಮಾಡಬೇಕು. ಈ ಎರಡರಲ್ಲಿ ಕಡಿಮೆ ಯಾವುದೋ ಅದನ್ನೇ ಪಾಲಿಸಬೇಕು ಎಂದು ದರ ನಿಗದಿ ಸಮಿತಿ ತನ್ನ ವರದಿಯಲ್ಲಿ ತಿಳಿಸಿತ್ತು.

‘ದರ ನಿಗದಿ ಸಮಿತಿ ಶಿಫಾರಸು ಮಾಡಿರುವುದು ನಿಜ. ಆದರೆ, ದರ ಏರಿಕೆಗೆ ಸಂಬಂಧಿಸಿದ ಯಾವುದೇ ಪ್ರಕ್ರಿಯೆಯನ್ನು ಆರಂಭಿಸಿಲ್ಲ. ಸದ್ಯಕ್ಕೆ ಏರಿಕೆ ಮಾಡುವುದಿಲ್ಲ. ಮುಂದೆ ಏರಿಕೆ ಮಾಡಲು ನಿರ್ಧರಿಸಿದಾಗ ಮಾಹಿತಿ ನೀಡಲಾಗುವುದು’ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಪ್ರತಿಕ್ರಿಯಿಸಿದ್ದಾರೆ.

‘ನಿಲ್ಲಲು ಜಾಗವಿಲ್ಲದಿರುವುದೇ ಐಷಾರಾಮಿ’

ಸುರಕ್ಷಿತ, ಸಮಯ ಪಾಲನೆ ಮತ್ತು ಐಷಾರಾಮಿ ಪ್ರಯಾಣಕ್ಕೆ ನಮ್ಮ ಮೆಟ್ರೊದಲ್ಲಿ ಸಂಚರಿಸಿ ಎಂದು ಅಧಿಕಾರಿಗಳು ಹೇಳುತ್ತಾರೆ. ಆದರೆ, ರಜಾ ದಿನಗಳನ್ನು ಹೊರತುಪಡಿಸಿ ಉಳಿದ ದಿನಗಳಲ್ಲಿ ಬೆಳಿಗ್ಗೆ ಮತ್ತು ಸಂಜೆ ಮೆಟ್ರೊದಲ್ಲಿ ಕಾಲಿರಿಸಲು ಜಾಗವಿಲ್ಲದಷ್ಟು ಜನ ಇರುತ್ತಾರೆ. ಇದನ್ನೇ ಸುರಕ್ಷಿತ ಮತ್ತು ಐಷಾರಾಮಿ ಪ್ರಯಾಣ ಎಂದು ಕರೆದಿರಬೇಕು. ಸಮಯ ಪಾಲನೆ ಒಂದೇ ಸರಿ ಇರುವುದು. ಬೆಂಗಳೂರು ನಗರದ ವಾಹನ ಸಂಚಾರ ದಟ್ಟಣೆಯಲ್ಲಿ ಸಿಲುಕಿಕೊಳ್ಳುವುದರಿಂದ ಪಾರಾಗಲು ಮಾತ್ರ ಜನರು ಮೆಟ್ರೊದಲ್ಲಿ ದುಬಾರಿ ದರ ಪಾವತಿಸಿ ಸಂಚರಿಸುತ್ತಿದ್ದಾರೆ. ಮತ್ತೆ ಪ್ರಯಾಣ ದರ ಏರಿಕೆ ಮಾಡುವುದು ಸರಿಯಲ್ಲ ಎಂದು ಐಟಿ ಉದ್ಯೋಗಿ ಪ್ರಜ್ವಲ್ ಕುಮಾರ್ ಪ್ರತಿಕ್ರಿಯಿಸಿದರು.

ಪ್ರಜ್ವಲ್ ಕುಮಾರ್

‘ಶಿಫಾರಸು ಪಾಲನೆಯಾಗಿರಲಿಲ್ಲ’

ಶೇ 105.5ರಷ್ಟು ಹೆಚ್ಚಳ ಮಾಡಬೇಕು ಎಂದು ದರ ನಿಗದಿ ಸಮಿತಿಯ ಮುಂದೆ ಬಿಎಂಆರ್‌ಸಿಎಲ್ ಬೇಡಿಕೆ ಮುಂದಿಟ್ಟಿತ್ತು. 12 ಸ್ಲ್ಯಾಬ್ ಮಾಡಬೇಕು. ಕನಿಷ್ಠದರ ₹21 ಹಾಗೂ ಗರಿಷ್ಠ ದರ ₹123ಕ್ಕೆ ಏರಿಸಬೇಕು ಎಂದು ತಿಳಿಸಿತ್ತು. ದೇಶದ ವಿವಿಧ ಮೆಟ್ರೊಗಳಲ್ಲಿ ಇರುವ ದರ, ವಿದೇಶಗಳಲ್ಲಿ ಇರುವ ದರ ಪರಿಷ್ಕರಣೆ ವ್ಯವಸ್ಥೆ ಎಲ್ಲವನ್ನೂ ಅಧ್ಯಯನ ನಡೆಸಿದ ದರ ನಿಗದಿ ಸಮಿತಿಯು 12 ಸ್ಲ್ಯಾಬ್‌ಗಳ ಬದಲು 10 ಸ್ಲ್ಯಾಬ್‌ಗಳನ್ನು ಶಿಫಾರಸು ಮಾಡಿತ್ತು. ಕನಿಷ್ಠ ದರವನ್ನು ₹10 ಇರುವುದನ್ನು ಹಾಗೇ ಉಳಿಸಿಕೊಂಡು ಗರಿಷ್ಠ ದರವನ್ನು ₹90ಕ್ಕೆ ನಿಗದಿ ಮಾಡಿತ್ತು. ಶೇ 51.55ರಷ್ಟು ಹೆಚ್ಚಳ ಮಾಡಲು ಶಿಫಾರಸು ಮಾಡಿತ್ತು.

ಬಿಎಂಆರ್‌ಸಿಎಲ್ ಆಡಳಿತ ಮಂಡಳಿಯು 2025ರ ಫೆ.9ರಂದು ಪರಿಷ್ಕೃತ ದರ ಜಾರಿಗೆ ತರುವಾಗ ಕೆಲವು ಶಿಫಾರಸುಗಳನ್ನು ಪಾಲಿಸಿರಲಿಲ್ಲ. ಶೇ 51.55 ರಷ್ಟು ಹೆಚ್ಚಳದ ಶಿಫಾರಸಿನ ಬದಲು ಶೇ 100ಕ್ಕೂ ಅಧಿಕ ದರ ವಿಧಿಸಿತ್ತು. ಪ್ರಯಾಣಿಕರಿಂದ ಪ್ರತಿಭಟನೆ ಎದುರಾದ ಬಳಿಕ ಸುಮಾರು ಶೇ 30ರಷ್ಟು ಇಳಿಸಿತ್ತು. ಕೊನೆಗೆ ಶೇ 71.5ರಷ್ಟು ಏರಿಕೆಯಾಗಿತ್ತು.

ದರ ಏರಿಕೆ ತಡೆಗೆ ತೇಜಸ್ವಿ ಸೂರ್ಯ ಪತ್ರ: ನಮ್ಮ ಮೆಟ್ರೊ ಪ್ರಯಾಣದರ ಶೇ 5ರಷ್ಟು ಹೆಚ್ಚಳ ಮಾಡುವುದನ್ನು ತಡೆ ಹಿಡಿಯಬೇಕು ಎಂದು ಸಂಸದ ತೇಜಸ್ವಿ ಸೂರ್ಯ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವ ಮನೋಹರ್ ಲಾಲ್ ಖಟ್ಟರ್ ಅವರಿಗೆ ಪತ್ರ ಬರೆದಿದ್ದಾರೆ.

ತೇಜಸ್ವಿ ಸೂರ್ಯ

ದರ ನಿಗದಿ ಸಮಿತಿ ಕಳೆದ ವರ್ಷ ದರ ಪರಿಷ್ಕರಣೆಗೆ ಸಂಬಂಧಿಸಿದಂತೆ ವರದಿ ನೀಡಿತ್ತು. ಅದರಲ್ಲಿ ಪರಿಷ್ಕರಣೆಗೆ ಸಂಬಂಧಿಸಿದಂತೆ ಲೆಕ್ಕಾಚಾರದ ದೋಷಗಳು ಕಂಡು ಬಂದಿವೆ. ಅಲ್ಲದೇ 2016ರ ದರ ನಿಗದಿಯ ಸೂತ್ರದ ಆಧಾರದಲ್ಲಿ ಮಾಡಿರುವುದರಿಂದ ದರ ಅತಿ ಹೆಚ್ಚಳವಾಗಲು ಕಾರಣವಾಗಿದೆ. ಮತ್ತೆ ಶೇ 5ರಷ್ಟು ಹೆಚ್ಚಳ ಮಾಡಿದರೆ ಪ್ರಯಾಣಿಕರಿಗೆ ಹೊರೆಯಾಗಲಿದೆ. ಅದನ್ನು ತಡೆ ಹಿಡಿಯಬೇಕು. ಹೊಸದಾಗಿ ದರ ನಿಗದಿ ಸಮಿತಿಯನ್ನು ರಚಿಸಿ ತಪ್ಪುಗಳನ್ನು ಸರಿಪಡಿಸಲು ಕ್ರಮ ಕೈಗೊಳ್ಳಬೇಕು ಎಂದು ಪತ್ರದಲ್ಲಿ ಆಗ್ರಹಿಸಿದ್ದಾರೆ.

ಪ್ರಯಾಣಿಕರನ್ನು ದಂಡಿಸುವ ಕ್ರಮ: ನಮ್ಮ ಮೆಟ್ರೊ ಪ್ರಯಾಣ ದರವನ್ನು ಶೇ 5ರಷ್ಟು ಏರಿಸುವ ನಿರೀಕ್ಷೆ ಇದ್ದು, ಇದು ಪ್ರಯಾಣಿಕರನ್ನು ದಂಡಿಸುವ ಕ್ರಮವಾಗಿದೆ ಎಂದು ಬೆಂಗಳೂರು ಉಳಿಸಿ ಸಮಿತಿ ಹೇಳಿದೆ.

ವಿವಿಧ ಮೂಲಗಳಿಂದ ಸಂಪನ್ಮೂಲ ಕ್ರೋಢೀಕರಣ ಮಾಡುವಲ್ಲಿ ಬಿಎಂಆರ್‌ಸಿಎಲ್ ಆಡಳಿತ ಮಂಡಳಿ ವಿಫಲ ಆಗಿರುವುದರಿಂದ ಪ್ರಯಾಣಿಕರ ಮೇಲೆ ಹೊರೆ ಹೊರಿಸುತ್ತಿದೆ ಎಂದು ಸಮಿತಿಯ ಸಂಚಾಲಕ ಜೆ. ಶಶಿಕುಮಾರ್ ಆರೋಪಿಸಿದ್ದಾರೆ.

ಈ ಹೆಚ್ಚಳವು ಜಾರಿಯಾದರೆ, ಈಗಾಗಲೇ ವಾಹನ ದಟ್ಟಣೆಯಿಂದ ನಲುಗುತ್ತಿರುವ ನಗರದ ರಸ್ತೆಗಳಿಗೆ ಅನೇಕರು ಹಿಂತಿರುಗುವಂತೆ ಮಾಡಲಿದೆ. ಸಂಚಾರ ದಟ್ಟಣೆ ಮತ್ತು ಮಾಲಿನ್ಯ ಇನ್ನಷ್ಟು ಹೆಚ್ಚಳವಾಗಲಿದೆ. ಅಗ್ಗದ ಸಮೂಹ ನಗರ ಸಾರಿಗೆ ವ್ಯವಸ್ಥೆಯನ್ನು ಒದಗಿಸಬೇಕು ಎಂಬ ಗುರಿಗಳನ್ನು ಇಟ್ಟುಕೊಂಡು ಸ್ಥಾಪನೆಯಾದ ನಮ್ಮ ಮೆಟ್ರೊದ ಮೂಲ ಉದ್ದೇಶವೇ ಸೋಲಲಿದೆ ಎಂದು ಸಹ ಸಂಚಾಲಕ ರಾಜೇಶ್ ಭಟ್ ತಿಳಿಸಿದ್ದಾರೆ.

ಈ ಅನ್ಯಾಯದ ಏರಿಕೆಯ ವಿರುದ್ಧ ಹೋರಾಡಲು ಸಾರ್ವಜನಿಕ ಅಭಿಪ್ರಾಯವನ್ನು ಮೂಡಿಸಲಾಗುತ್ತಿದೆ. ಜನತಾಂತ್ರಿಕ ಮಾರ್ಗಗಳ ಮೂಲಕ ಹೋರಾಟ ನಡೆಸಲಾಗುವುದು ಎಂದು ಸಮಿತಿ ಸದಸ್ಯರು ಎಚ್ಚರಿಕೆ ನೀಡಿದ್ದಾರೆ.

ಒಂದು ವರ್ಷ ಪೂರ್ಣಗೊಂಡ ಕೂಡಲೇ ಮತ್ತೆ ದರ ಹೆಚ್ಚಿಸಿದರೆ ಪ್ರಯಾಣಿಕರಿಂದ ವಿರೋಧ ವ್ಯಕ್ತವಾಗಬಹುದು ಎಂಬ ಕಾರಣಕ್ಕೆ ಕಾದು ನೋಡುವ ತಂತ್ರವನ್ನು ಬಿಎಂಆರ್‌ಸಿಎಲ್ ಅನುಸರಿಸುತ್ತಿದೆ. ಒಂದೆರಡು ತಿಂಗಳ ಬಳಿಕ ಮತ್ತೆ ದರ ಏರಿಕೆಗೆ ಮುಂದಾಗಬಹುದು ಎಂದು ಬಿಎಂಆರ್‌ಸಿಎಲ್ ಸಿಬ್ಬಂದಿಯೊಬ್ಬರು ಮಾಹಿತಿ ನೀಡಿದರು.

ಭಾವಪೂರ್ಣ ಶ್ರದ್ಧಾಂಜಲಿ

ಶತಾಯುಷಿ ಡಾ. ಭೀಮಣ್ಣ ಖಂಡ್ರೆಯವರು

ಗೌರವಾಧ್ಯಕ್ಷರು ಹಾಗೂ ಮಾಜಿ ಸಚಿವರು

ಮಹಾಸಭೆಯ ಮಾಜಿ ರಾಷ್ಟ್ರೀಯ ಅಧ್ಯಕ್ಷರು ಹಾಗೂ ಹಾಲಿ ಗೌರವಾಧ್ಯಕ್ಷರಾಗಿದ್ದ

ಶತಾಯುಷಿ ಡಾ. ಭೀಮಣ್ಣ ಖಂಡ್ರೆಯವರು

ದಿನಾಂಕ 16.01.2026 ರ ಶುಕ್ರವಾರ ರಾತ್ರಿ 10.50 ರ ಸುಮಾರಿನಲ್ಲಿ ಲಿಂಗೈಕ್ಯರಾಗಿದ್ದಾರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರ ಆತ್ಮಕ್ಕೆ ಚಿರಶಾಂತಿ ದೊರೆಯಲೆಂದು ಹಾಗೂ ಅವರ ಅಗಲುವಿಕೆಯಿಂದ ಸಮಾಜ ಮತ್ತು ಅವರ ಕುಟುಂಬಕ್ಕಾಗಿರುವ ಅಗಾಧ ದುಃಖವನ್ನು ಭರಿಸುವ ಶಕ್ತಿ ನೀಡಲೆಂದು ರೇಣುಕಾದಿ ಆಚಾರ್ಯರಲ್ಲಿ ಮತ್ತು ಬಸವಾದಿ ಪ್ರಮಥರಲ್ಲಿ ಪ್ರಾರ್ಥಿಸುತ್ತೇವೆ. ಶನಿವಾರ ಬೆಳಗ್ಗೆ ಭೀಮಣ್ಣ ಖಂಡ್ರೆ ಅವರ ಪಾರ್ಥಿವ ಶರೀರವನ್ನು ಭಾಲ್ಕಿಯ ಗಾಂಧಿ ಗಂಜ್ ನಲ್ಲಿರುವ ಅವರ ಮನೆಯ ಆವರಣದಲ್ಲಿ ಸಾರ್ವಜನಿಕ ದರ್ಶನಕ್ಕೆ ಇಡಲಾಗುವುದು, ಸಂಜೆ 5.00 ಗಂಟೆಗೆ ಭಾಲ್ಕಿಯ ಚಿಕಲ್ ಚಂದ ರಸ್ತೆಯಲ್ಲಿನ ಶಾಂತಿಧಾಮದಲ್ಲಿ ಭೀಮಣ್ಣ ಖಂಡ್ರೆ ಅವರ ಶ್ರೀಮತಿ ಲಿಂಗೈಕ್ಯ ಲಕ್ಷ್ಮೀಬಾಯಿ ಸಮಾಧಿಯ ಪಕ್ಕದಲ್ಲೇ ವೀರಶೈವ ಲಿಂಗಾಯತ ಸಂಪ್ರದಾಯದಂತೆ ಅಂತಿಮ ವಿಧಿ ವಿಧಾನಗಳು ನರವೇರಲಿವೆ.

ದುಃಖದಿಂದ ಪ್ರಕಟಿಸುತ್ತಿರುವವರು

ಶ್ರೀ ಈಶ್ವರ ಖಂಡ್ರೆ, ಮಾನ್ಯ ಸಚಿವರು
ಹಿರಿಯ ಉಪಾಧ್ಯಕ್ಷರು ಮತ್ತು ಮಹಾಪ್ರಧಾನ ಕಾರ್ಯದರ್ಶಿಗಳು

ಶ್ರೀ ಶಂಕರ ಬಿದರಿ
ಅಧ್ಯಕ್ಷರು, ಕರ್ನಾಟಕ ರಾಜ್ಯ ಘಟಕ

ಹಾಗೂ ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಸಮಿತಿ ಸದಸ್ಯರು

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ (ರಿ.)

ಮೇಜರ್ ಸ್ವಾತಿ ಶಾಂತಕುಮಾರ್

ವಿಶ್ವ ಅಂಗಳದಲ್ಲೊಂದು 'ಸ್ವಾತಿ' ಮುತ್ತು

ಭಾರತೀಯ ಸೇನೆಯ ಪ್ರತಿನಿಧಿಯಾಗಿ ವಿಶ್ವಸಂಸ್ಥೆಯ ಶಾಂತಿಪಾಲನಾ ಪಡೆಯ ಒಂದು ತಂಡವನ್ನು ಮುನ್ನಡೆಸುತ್ತಿದ್ದಾರೆ ಬೆಂಗಳೂರಿನ ಮೇಜರ್ ಸ್ವಾತಿ ಶಾಂತಕುಮಾರ್. ದಕ್ಷಿಣ ಸುಡಾನ್ ಮಹಿಳೆಯರ ಅಭ್ಯುದಯಕ್ಕಾಗಿ ಸಲ್ಲಿಸುತ್ತಿರುವ ಅನುಪಮ ಸೇವೆಗಾಗಿ ವಿಶ್ವಸಂಸ್ಥೆಯ ಪ್ರತಿಷ್ಠಿತ ಪ್ರಶಸ್ತಿ ಅವರಿಗೆ ಒಲಿದಿದೆ.



• ಚಂದ್ರಹಾಸ ಹಿರೇಮಳಲಿ

ಬಾಲ್ಯದಲ್ಲೇ ಚಿಗುರೊಡೆಯುವ ಸಾಧನೆಯ ಕನಸುಗಳನ್ನು ಭವಿಷ್ಯದಲ್ಲಿ ನನಸಾಗಿಸಿಕೊಳ್ಳುವವರ ಸಂಖ್ಯೆ ತೀರಾ ವಿರಳ. ಭಾರತೀಯ ಸೇನೆ ಸೇರುವ ಬಗ್ಗೆ ಪ್ರೌಢಶಾಲಾ ಹಂತದಲ್ಲಿ ಕಂಡ ತಮ್ಮ ಕನಸನ್ನು ಪದವಿ ಪೂರೈಸಿದ ಒಂದೂವರೆ ವರ್ಷದಲ್ಲೇ ಸಾಕಾರಗೊಳಿಸಿಕೊಳ್ಳುವುದರ ಜತೆಗೆ, ತನ್ನಂಥ ಹಲವಾರು ಯುವತಿಯರಲ್ಲಿ ದೇಶಸೇವೆಯ ಕನಸನ್ನು ಬಿತ್ತಿದ್ದಾರೆ ಬೆಂಗಳೂರಿನ ಮೇಜರ್ ಸ್ವಾತಿ ಶಾಂತಕುಮಾರ್.

ಭಾರತೀಯ ಸೇನೆಯ ಪ್ರತಿನಿಧಿಯಾಗಿ ವಿಶ್ವಸಂಸ್ಥೆಯ ಶಾಂತಿಪಾಲನಾ ಪಡೆಯ ಒಂದು ತಂಡದ ನಾಯಕಿಯಾಗಿರುವ ಸ್ವಾತಿ, ಪ್ರಸ್ತುತ ಕಲಹಪೀಡಿತ ದಕ್ಷಿಣ ಸುಡಾನ್‌ನಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. 'ತಾಯಿ ಮತ್ತು ದೇಶದ ಸೇವೆಯು ದೇವರ ಸೇವೆಗೆ ಸಮ' ಎಂದು ನಂಬಿರುವ ಅವರು, ತನ್ನಂತೆ ದೇಶದ ಹೆಣ್ಣುಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಸೇನೆಗೆ ಸೇರಬೇಕೆಂದು ಆಶಿಸುತ್ತಾರೆ.

ಬೆಂಗಳೂರಿನ ಲಿಂಗರಾಜಪುರದ ಸೇಂಟ್ ಪಾಲ್ಸ್ ಕಾನ್ವೆಂಟ್‌ನಲ್ಲಿ ಬಾಲ್ಯದ ಶಿಕ್ಷಣವನ್ನು ಪೂರೈಸಿದ ಅವರು ಪ್ರೌಢಶಾಲಾ ಹಂತದಲ್ಲಿ ಪಠ್ಯದ ಜತೆಗೆ ಕ್ರೀಡೆ, ಸಾಂಸ್ಕೃತಿಕ ಕಾರ್ಯಕ್ರಮ, ಚರ್ಚಾಸ್ಪರ್ಧೆ, ಲಘು ನಾಟಕ ಸೇರಿದಂತೆ ಪಠ್ಯೇತರ ಚಟುವಟಿಕೆಗಳಲ್ಲೂ ಸೈ ಎನಿಸಿಕೊಂಡಿದ್ದರು. ಚಳಿ, ಮಳೆ, ಬಿಸಿಲು ಲೆಕ್ಕಿಸದೆ ದೇಶದ ಜನರ ನೆಮ್ಮದಿಗಾಗಿ ತಮ್ಮ ಜೀವವನ್ನು ಪಣಕ್ಕಿಟ್ಟು ಗಡಿಗಳಲ್ಲಿ ಗಸ್ತು ತಿರುಗುವ ಭಾರತೀಯ ಸೈನಿಕರೇ ಅವರ ಪಾಲಿಗೆ ನಿಜವಾದ ಹೀರೊಗಳು.

ಕ್ರೈಸ್ಟ್ ಕಾಲೇಜಿನಲ್ಲಿ ದ್ವಿತೀಯ ಪಿಯು ಮುಗಿಸಿದ ನಂತರ ಪೋಷಕರ ಒತ್ತಾಸೆಯಂತೆ ನ್ಯೂ ಹೊರೈಜನ್ ಕಾಲೇಜಿನಲ್ಲಿ ಎಂಜಿನಿಯರಿಂಗ್‌ಗೆ ಪ್ರವೇಶ ಪಡೆದರು. ತಮ್ಮ ಸಹಪಾಠಿಗಳು ಪದವಿ ಬಳಿಕ ಉದ್ಯೋಗದ ಕನಸು ಕಾಣುತ್ತಿದ್ದರೆ, ಸ್ವಾತಿ ಮಾತ್ರ ತಮ್ಮೊಳಗೆ ದೇಶಸೇವೆಯ ಕಿಚ್ಚು ಬೆಳೆಸಿಕೊಳ್ಳುತ್ತಲೇ ಹೋದರು. 'ಯಾವುದೋ ಒಂದು ವೃತ್ತಿ ಮಾಡಿ, ನೆಮ್ಮದಿಯ ಜೀವನ ಅರಸುವ ಬದಲು ನನ್ನ ಭೂಮಿಗೆ ಏನಾದರೂ ಸೇವೆ ಸಲ್ಲಿಸಬೇಕು ಎಂಬ ಹಂಬಲ ನನಗಿತ್ತು. ಅದಕ್ಕಾಗಿ ಸೇನಾ ಅಧಿಕಾರಿ ಹುದ್ದೆಗಳ ಪರೀಕ್ಷೆ ಬರೆಯಲು ನಿರ್ಧರಿಸಿದೆ' ಎಂಬ ಸ್ವಾತಿ ಅವರ ಮಾತು ಅವರೊಳಗಿದ್ದ ಸ್ಪಷ್ಟ ಗುರಿಗೆ ನಿದರ್ಶನ.

ಎಂಜಿನಿಯರಿಂಗ್ ಪದವಿಯ ನಂತರ ಒಂದೂವರೆ ವರ್ಷ ಐಬಿಎಂ ಕಂಪನಿಯಲ್ಲಿ ಕೆಲಸ ಮಾಡಿದರು. ಭಾರತೀಯ ಸೇನೆಯಲ್ಲಿ ಗಡಿ ರಕ್ಷಣಾ ಶಸ್ತ್ರಾಸ್ತ್ರ ಪಡೆಯ ಅಧಿಕಾರಿಗಳ ನೇಮಕಾತಿಗಾಗಿ ಸೇವಾ ಆಯ್ಕೆ ಮಂಡಳಿ (ಎಸ್‌ಎಸ್‌ಬಿ) ನಡೆಸುವ ಪರೀಕ್ಷೆ ಬರೆದು, ಸಂದರ್ಶನ ಪ್ರಕ್ರಿಯೆ ಮೂಲಕ ಆಯ್ಕೆಯಾದರು. 2018ರಲ್ಲಿ ಚೆನ್ನೈನ ಅಧಿಕಾರಿಗಳ ತರಬೇತಿ ಕೇಂದ್ರದಲ್ಲಿ ಒಂದು ವರ್ಷ ಕಠಿಣ ತರಬೇತಿ ಪಡೆದು, ನಂತರ ಎರಡು ವರ್ಷ ಪಶ್ಚಿಮ ಬಂಗಾಳದ ಬಾಂಗ್ಲಾ ಗಡಿಯಲ್ಲಿ, ಬಳಿಕ ಕಾಶ್ಮೀರ, ಗುಜರಾತ್‌ನಲ್ಲಿ ಮೂರು ವರ್ಷ ಕ್ಯಾಪ್ಟನ್ ಆಗಿ ಸೇವೆ ಸಲ್ಲಿಸಿದರು. 2024ನೇ ಸೆಪ್ಟೆಂಬರ್‌ನಿಂದ ದಕ್ಷಿಣ ಸುಡಾನ್‌ನಲ್ಲಿ ಸೇವೆ ಸಲ್ಲಿಸುತ್ತಿರುವ ಅವರು, ಅಲ್ಲಿ ತಮ್ಮ ಸಾಮರ್ಥ್ಯ ಸಾಬೀತು ಮಾಡಿ, ವಿಶ್ವಸಂಸ್ಥೆಯ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದ್ದಾರೆ. ಜಗತ್ತೇ ಮೆಚ್ಚುವ ಸೇನಾ ನಾಯಕಿಯಾಗಿ ಹೊರಹೊಮ್ಮಿದ್ದಾರೆ.

ತಮ್ಮ ಕಾರ್ಯಾಚರಣೆ ವೇಳೆ ತಳಮಟ್ಟದ ಸಂವಹನ ಹಾಗೂ ಚುರುಕಾದ ಗಸ್ತಿನ ಮೂಲಕ ಸ್ವಾತಿ ವಿಶ್ವಸಂಸ್ಥೆಯ ಮೆಚ್ಚುಗೆ ಗಳಿಸಿದ್ದಾರೆ. ಅವರ ಅನನ್ಯ ಸೇವೆಯ ಫಲವಾಗಿ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ನೀಡುವ 'ಲಿಂಗ ಸಮಾನತೆ ಪ್ರತಿಪಾದಕ ಪ್ರಶಸ್ತಿ–2025'ಕ್ಕೆ ಭಾಜನರಾಗಿದ್ದಾರೆ. ವಿಶ್ವದಾದ್ಯಂತ ಇರುವ ಎಲ್ಲ ಶಾಂತಿ ರಕ್ಷಣಾ ಕಾರ್ಯಾಚರಣೆ ಪಡೆಗಳು ಹಾಗೂ ವಿಶ್ವಸಂಸ್ಥೆಯಿಂದ ಬಂದ ನಾಮನಿರ್ದೇಶನಗಳಲ್ಲಿ ಸ್ವಾತಿ ಪರವಾದ ಆಯ್ಕೆ ಮೇಲುಗೈ ಸಾಧಿಸಿದೆ. ನಾಲ್ವರು ಅಂತಿಮ ಸ್ಪರ್ಧಿಗಳ ನಡುವೆ ನಡೆದ ಮತದಾನದಲ್ಲಿ ಅತ್ಯಧಿಕ ಮತಗಳನ್ನು ಪಡೆದು ಈ ಗೌರವಕ್ಕೆ ಪಾತ್ರರಾಗಿದ್ದಾರೆ.

'ದಕ್ಷಿಣ ಸುಡಾನ್‌ನಲ್ಲಿ ಮಹಿಳೆಯರ ರಕ್ಷಣೆ, ಸಮುದಾಯದ ನೆಮ್ಮದಿಗಾಗಿ ಕೈಗೊಂಡ ಸಂವೇದನಾಶೀಲ ಕ್ರಮಗಳು ಸವಾಲಿನಿಂದ ಕೂಡಿದ್ದವು. 'ಸಮಾನ ಪಾಲುದಾರಿಕೆ–ಶಾಶ್ವತ ಶಾಂತಿ' ಎನ್ನುವುದು ಧ್ಯೇಯವಾಗಿತ್ತು. ಅಲ್ಲಿನ ಜನರಿಗೆ ಶಿಕ್ಷಣ, ವಸತಿ, ಆಹಾರ, ಶುದ್ಧ ಕುಡಿಯುವ ನೀರಿನಂತಹ ಮೂಲಸೌಕರ್ಯಗಳನ್ನು ಒದಗಿಸುವುದರಜತೆಗೆ ಅವರ ರಕ್ಷಣೆಯ ಹೊಣೆಯೂ ನಮ್ಮ ತಂಡದ ಮೇಲಿದೆ. ಸುಡಾನ್ ಅಷ್ಟೇ ಅಲ್ಲ, ವಿಶ್ವದ ಎಲ್ಲ ಜನರೂ ಶಾಂತಿ, ನೆಮ್ಮದಿಯಿಂದ ಬದುಕು ಸಾಗಿಸಬೇಕು' ಎನ್ನುವುದು ಸ್ವಾತಿ ಅವರ ಕಳಕಳಿ.

ಯುವತಿಯರಿಗೆ ಸ್ಫೂರ್ತಿಯಾಗಲಿ

'ಸುಡಾನ್ ಅತೀವ ಸಂಕಷ್ಟದಲ್ಲಿರುವ ದೇಶ. ಯುದ್ಧ, ಹಿಂಸಾಚಾರ ಮತ್ತು ದೌರ್ಜನ್ಯಗಳಿಂದ ಅಲ್ಲಿನ ಮಹಿಳೆಯರು ಮಾನಸಿಕವಾಗಿ ಹಾಗೂ ದೈಹಿಕವಾಗಿ ತೀವ್ರವಾಗಿ ಬಾಧಿತರಾಗಿದ್ದಾರೆ. ಸಮುದಾಯದ ನಿರ್ಧಾರಗಳಲ್ಲಿ ಅವರ ಧ್ವನಿಗೆ ಮನ್ನಣೆ ಇಲ್ಲ. ಅಲ್ಲಿನ ಜನರಿಗೆ ತಮ್ಮ ಜೀವನವನ್ನು ಪುನರ್ ಕಟ್ಟಿಕೊಳ್ಳಲು ವಿಶ್ವಸಂಸ್ಥೆಯ ನೆರವು ಅತ್ಯಂತ ಅಗತ್ಯ. ಇಂತಹ ಪರಿಸ್ಥಿತಿಯಲ್ಲಿ ಸಮುದಾಯಗಳ ಪುನರ್ ನಿರ್ಮಾಣ ಮತ್ತು ಉನ್ನತಿಗಾಗಿ ಕೆಲಸ ಮಾಡುತ್ತಿದ್ದೇವೆ. ಸ್ತ್ರೀ ಗೌರವ ಮರಳಿ ದೊರೆಯುವಂತೆ ನೋಡಿಕೊಂಡಿದ್ದೇವೆ' ಎನ್ನುವುದು ಸ್ವಾತಿ ಅವರ ಮನದಾಳದ ಮಾತು.

'ಪ್ರಶಸ್ತಿಯ ನಿರೀಕ್ಷೆ ಇರಲಿಲ್ಲ. ಪ್ರಶಸ್ತಿಗಳನ್ನು ಗೆಲ್ಲುವ ಉದ್ದೇಶ ನಮ್ಮದಾಗಿರಲಿಲ್ಲ. ವಿಶ್ವಸಂಸ್ಥೆ ನೀಡಿದ ಗುರಿ, ಜವಾಬ್ದಾರಿಯನ್ನು ಅತ್ಯಂತ ಸಮರ್ಥವಾಗಿ ನಿಭಾಯಿಸಿದ್ದೇವೆ. ಈ ಪ್ರಶಸ್ತಿ ನನ್ನಂತೆ ಸೇನೆಗೆ ಸೇರುವ ಕನಸು ಕಾಣುತ್ತಿರುವ ಭಾರತೀಯ ಯುವತಿಯರಿಗೆ ಸ್ಫೂರ್ತಿಯಾದರೆ ಅದೇ ಸಾರ್ಥಕ' ಎನ್ನುವ ಭಾವ ವ್ಯಕ್ತಪಡಿಸಿದರು.

'ದೇಶಸೇವೆಯ ಬಗ್ಗೆ ನಿಜವಾದ ಆಸಕ್ತಿ ಮತ್ತು ಉತ್ಸಾಹ ಇದ್ದರೆ ಖಂಡಿತವಾಗಿ ಮುಂದೆ ಬನ್ನಿ. ಇಲ್ಲಿ ಅದಕ್ಕೆ ಪೂರಕವಾದ ವಾತಾವರಣ ಇದೆ. ನಿಮ್ಮನ್ನು ಯಾರೂ ತಡೆಯುವುದಿಲ್ಲ. ನೀವು ಕಠಿಣ ಪರಿಶ್ರಮಕ್ಕೆ ಸಿದ್ಧರಾಗಿದ್ದರೆ, ಎಲ್ಲವೂ ಸಾಧ್ಯ' ಎನ್ನುವ ಸಂದೇಶ ನೀಡಿದ್ದಾರೆ.

ಪ್ರಶಸ್ತಿ ಘೋಷಣೆಯ ಸಮಯದಲ್ಲಿ ಸ್ವಾತಿ ಅವರ ಕಾರ್ಯವನ್ನು ಮುಕ್ತಕಂಠದಿಂದ ಶ್ಲಾಘಿಸಿರುವ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆ್ಯಂಟೊನಿಯೊ ಗುಟೆರಸ್, 'ಸುಡಾನ್‌ನ 5,000ಕ್ಕೂ ಹೆಚ್ಚು ಮಹಿಳೆಯರಿಗೆ ಮೇಜರ್ ಸ್ವಾತಿ ಮತ್ತು ಅವರ ತಂಡ ಸುರಕ್ಷಿತ ವಾತಾವರಣ ನಿರ್ಮಾಣ ಮಾಡಿದೆ. ಅವರು ಗಳಿಸಿದ ಸಮುದಾಯದ ವಿಶ್ವಾಸವು ವಿಶ್ವಸಂಸ್ಥೆಯ ಮುಂದಿನ ಕೆಲಸಗಳಿಗೂ ಪ್ರೇರಣೆಯಾಗಿದೆ' ಎಂದಿರುವುದು ಕರ್ನಾಟಕ ಅಷ್ಟೇ ಅಲ್ಲ, ಭಾರತ ಹಾಗೂ ವಿಶ್ವದ ಎಲ್ಲ ಮಹಿಳೆಯರಿಗೂ ಹೆಮ್ಮೆಯ ಸಂದೇಶ.

'ಸೇನೆಯ ಪರೀಕ್ಷೆಗಳು ಮತ್ತು ಆಯ್ಕೆ ಪ್ರಕ್ರಿಯೆಗಾಗಿ ಸ್ವಾತಿ ತಿಂಗಳಾನುಗಟ್ಟಲೆ ಕಠಿಣ ಪರಿಶ್ರಮದ ತರಬೇತಿ ಪಡೆದಳು. ವಿಶ್ವಸಂಸ್ಥೆಯ ತಂಡಕ್ಕೆ ಆಯ್ಕೆಯಾಗುವ ಹಾದಿಯೂ ಕಠಿಣವಾಗಿತ್ತು. ಅನೇಕ ಅಭ್ಯರ್ಥಿಗಳ ನಡುವೆ, ಜ್ಞಾನ, ಅನುಭವ, ಸಮರ್ಪಣೆ ಮತ್ತು ಕೆಲಸದ ನೈತಿಕತೆಯು ಆಯ್ಕೆಯ ಫಲ ಕೊಟ್ಟವು' ಎಂದು ಸ್ಮರಿಸಿದರು ಶಿಕ್ಷಕಿಯಾಗಿರುವ ಅವರ ತಾಯಿ ರಾಜಮಣಿ.

'ಸೇನೆಗೆ ಸೇರುತ್ತಾಳೆಂದು ನಾವು ನಿರೀಕ್ಷಿಸಿರಲಿಲ್ಲ. ಅದರಲ್ಲೂ ವಿಶ್ವಸಂಸ್ಥೆಯ ಭಾಗವಾಗಿದ್ದಕ್ಕೆ ಹೆಮ್ಮೆ ಇದೆ. ಅವರ ತಾತ, ಚಿಕ್ಕಪ್ಪ, ದೊಡ್ಡಪ್ಪ ಅವರ ಕನಸುಗಳನ್ನೂ ಅವಳು ನನಸು ಮಾಡಿದಳು' ಎನ್ನುತ್ತಲೇ ಭಾವುಕರಾದರು ಖಾಸಗಿ ಕಂಪನಿ ಉದ್ಯೋಗಿಯಾದ ತಂದೆ ಶಾಂತಕುಮಾರ್.

ಸೇನೆಯಲ್ಲಿ ಇಲ್ಲ ತಾರತಮ್ಯ

ಸೇನೆಯಲ್ಲಿ ಎದುರಾಗುವ ಅಪಾಯಗಳು ಮತ್ತು ಸವಾಲುಗಳ ಬಗ್ಗೆ ಚಿಂತೆ ಇತ್ತು. ಆದರೆ, ದೇಶಸೇವೆ ಮಾಡಬೇಕೆಂಬ ಬಗ್ಗೆ ಸ್ವಾತಿ ದೃಢನಿಶ್ಚಯ ಹೊಂದಿದ್ದಳು. ಅವಳ ಸಾಮರ್ಥ್ಯದ ಬಗ್ಗೆ ನಮಗೆ ಸದಾ ನಂಬಿಕೆ ಇತ್ತು. ನಾವು ಸಂಪೂರ್ಣ ಬೆಂಬಲ ನೀಡಲು ತೀರ್ಮಾನಿಸಿದೆವು.

ಭಾರತೀಯ ಸೇನೆಯಲ್ಲಿ ಮಹಿಳೆಯರಿಗೆ ಸಮಾನ ಸ್ಥಾನಮಾನ, ಗೌರವಭಾವ ದೊರೆಯುತ್ತಿದೆ. ಅವರನ್ನು ಪುರುಷ ಅಧಿಕಾರಿಗಳಂತೆಯೇ ಸಮಾನವಾಗಿ ಕಾಣಲಾಗುತ್ತದೆ ಎನ್ನುವುದೇ ಅತ್ಯಂತ ಸಮಾಧಾನದ, ಸಾರ್ಥಕತೆಯ ಭಾವ ಮೂಡಿಸುತ್ತದೆ.

ರಾಜಮಣಿ, ಶಾಂತಕುಮಾರ್, ಮೇಜರ್ ಸ್ವಾತಿ ಅವರ ತಾಯಿ–ತಂದೆ

ಉದುರುವ ಕೂದಲಿಗೆ ಮಾಡಿ ಮದ್ದು

• ಸೀತಾ ಎಸ್. ನಾರಾಯಣ

ತಲೆಗೂದಲು ಉದುರುವುದು ಅಥವಾ ತಲೆ ಬೋಳಾಗುವುದು ಇತ್ತೀಚೆಗೆ ಸಾಮಾನ್ಯ ಸಮಸ್ಯೆಯಾಗಿದೆ. ಈ ಸಮಸ್ಯೆ ಪುರುಷರಲ್ಲಿ ಮಾತ್ರವಲ್ಲದೆ ಮಹಿಳೆಯರಲ್ಲೂ ಕಾಣಿಸುತ್ತಿದೆ. ದಿನಕ್ಕೆ 50-100 ಕೂದಲಿಗಿಂತ ಹೆಚ್ಚಿಗೆ ಉದುರಿದಲ್ಲಿ ಅದು ಸಮಸ್ಯೆ ಎನಿಸಿಕೊಳ್ಳುತ್ತದೆ. ಅದನ್ನು ತಡೆಗಟ್ಟಲು ಕೆಲವು ಮನೆಮದ್ದುಗಳು ಇಲ್ಲಿವೆ:

- ಮೆಂತ್ಯಸೊಪ್ಪು, ಕರಿಬೇವು ಹಾಗೂ ದಾಸವಾಳ ಎಲೆ/ಹೂವು ಸಮಪ್ರಮಾಣ, ಬೇಕಿದ್ದಲ್ಲಿ ಸ್ವಲ್ಪ ತುಳಸಿ, ಲೋಳೆಸರವನ್ನೂ ಸೇರಿಸಿಕೊಂಡು ರುಬ್ಬಿ. ಈ ಮಿಶ್ರಣಕ್ಕೆ ಅರ್ಧ ಹೋಳು ನಿಂಬೆರಸ ಸೇರಿಸಿ ಕಲಸಿ ಕೂದಲಿನ ಬುಡಕ್ಕೆ ಹಚ್ಚಿ. 2-3 ಗಂಟೆ ಬಿಟ್ಟು ತೊಳೆದುಕೊಳ್ಳಿ. ಇದು ತಲೆಹೊಟ್ಟು ನಿವಾರಣೆಗೆ, ಶಿಲೀಂಧ್ರ ಸೋಂಕು ತಡೆಗಟ್ಟಲು, ಕೂದಲು ಹೇರಳವಾಗಿ ಬೆಳೆಯಲು ಹಾಗೂ ಕಪ್ಪಾಗಲು ಸಹಕಾರಿ.
- ಮೆಹೆಂದಿಪುಡಿ, ತುಳಸಿಪುಡಿ, ಮೆಂತ್ಯಪುಡಿಯನ್ನು ಸಮಪ್ರಮಾಣದಲ್ಲಿ ಬೆರೆಸಿ ನಿಂಬೆರಸ ಸೇರಿಸಿ, ಸ್ವಲ್ಪ ನೀರು ಹಾಕಿ ಕಲಸಿ ಲೇಪನವನ್ನು ತಯಾರಿಸಿ. ಮೆಹೆಂದಿ ಬಣ್ಣ ಬೇಡದಿದ್ದಲ್ಲಿ ಬಾದಾಮಿ ಎಣ್ಣೆ ಸೇರಿಸಬಹುದು. ಕೂದಲಿನ ಬುಡದಿಂದ ಕೊನೆಯವರೆಗೂ ಲೇಪಿಸಿ 2-3 ಗಂಟೆಗಳ ನಂತರ ತೊಳೆದುಕೊಳ್ಳಿ. ಇದು ತಲೆಹೊಟ್ಟು ನಿವಾರಣೆಗೆ ಮತ್ತು ಕೂದಲಿನ ಬೆಳವಣಿಗೆಗೆ ಸಹಕಾರಿ.
- ಕೊಬ್ಬರಿಎಣ್ಣೆಯಿಂದ ಕೂದಲಿನ ಬುಡ ಹಾಗೂ ಕೂದಲಿಗೆ ವಾರಕ್ಕೊಮ್ಮೆ ಎರಡು ಬಾರಿ ಮಸಾಜ್ ಮಾಡಿದರೆ ತಲೆಗೂದಲು ಬಲವಾಗುತ್ತದೆ.
- ಲೋಳೆಸರ ಅಥವಾ ಈರುಳ್ಳಿ ರಸದ ಲೇಪನ ಹಚ್ಚಿ ಒಂದು ಗಂಟೆಯ ನಂತರ ತೊಳೆಯಬಹುದು.
- ಮೆಂತ್ಯ ಕಾಳನ್ನು ರಾತ್ರಿಯಿಡೀ ನೆನೆಸಿ ಬೆಳಿಗ್ಗೆ ಅರೆದು ತಲೆಗೆ ಲೇಪಿಸಿ, ಒಂದು ಗಂಟೆಯ ನಂತರ ತೊಳೆದುಕೊಳ್ಳಿ. ಮೆಂತ್ಯದ ಮೊಳಕೆಕಾಳಿನ ಸೇವನೆಯೂ ಕೂದಲಿನ ಬೆಳವಣಿಗೆಗೆ ಸಹಕಾರಿ.
- ತೆಂಗಿನಕಾಯಿ ತುರಿಯನ್ನು ರುಬ್ಬಿ ಹಾಲನ್ನು ತೆಗೆದು ಕೂದಲಿನ ಬುಡಕ್ಕೆ ಲೇಪಿಸಿ ಒಂದು ಗಂಟೆಯ ನಂತರ ತೊಳೆಯಿರಿ.
- ಮೊಳಕೆ ಬಂದ ಅಗಸೆ ಕಾಳುಗಳ ಸೇವನೆಯು ದೇಹಕ್ಕೆ ಅತ್ಯಗತ್ಯವಾದ ಒಮೇಗ–3 ಕೊಬ್ಬಿನಾಮ್ಲವನ್ನು ಒದಗಿಸಿ ಕೂದಲು ಉದುರುವ ಸಮಸ್ಯೆಯನ್ನು ನಿವಾರಿಸುತ್ತದೆ.
- ತಣ್ಣೀರು ಅಥವಾ ಉಗುರುಬೆಚ್ಚಗಿನ ನೀರಿನಲ್ಲಿ ತಲೆಸ್ನಾನ ಮಾಡುವುದು ಒಳ್ಳೆಯದು.

ಶೀರ್ಷಾಸನ, ಸರ್ವಾಂಗಾಸನ, ಹಲಾಸನ ಉಪಯುಕ್ತ

ಬಿಳಿಮುಟ್ಟು ಕ್ಯಾನ್ಸರ್ ಸೂಚಕವೇ?

ಸ್ಪಂದನ

ಡಾ. ವೀಣಾ ಎಸ್. ಭಟ್

• **ನನಗೆ 36 ವರ್ಷ. ಇಬ್ಬರು ಮಕ್ಕಳಿದ್ದು, ಸಂತಾನಶಕ್ತಿ ನಿಯಂತ್ರಣ ಶಸ್ತ್ರಚಿಕಿತ್ಸೆ ಆಗಿದೆ. ಆಗಾಗ್ಗೆ ಸ್ವಲ್ಪ ಬಿಳಿಮುಟ್ಟು ಆಗುತ್ತದೆ. ವೈದ್ಯರಿಗೆ ತೋರಿಸಿದಾಗ, ತೊಂದರೆಯಿಲ್ಲ ಎಂದು ಮಾತ್ರೆ ಕೊಟ್ಟಿದ್ದಾರೆ. ಆದರೆ, ನನ್ನ ಸಹೋದ್ಯೋಗಿಯೊಬ್ಬರಿಗೆ ಬಿಳಿಮುಟ್ಟು ಆಗುತ್ತಿದ್ದು, ಅವರಿಗೆ ವೈದ್ಯರು 'ಸರ್ವೈಕಲ್ ಕ್ಯಾನ್ಸರ್' ಇದೆ ಎಂದಿದ್ದಾರೆ. ನನಗೆ ಭಯವಾಗುತ್ತಿದೆ. ನಾನು ಯಾವ ರೀತಿ ಮುಂಜಾಗ್ರತೆ ವಹಿಸಲಿ? ಗರ್ಭಕೋಶದ ಕ್ಯಾನ್ಸರ್‌ಗೆ ನಾನು ವ್ಯಾಕ್ಸಿನ್ ಹಾಕಿಸಿಕೊಳ್ಳಬೇಕೆ?**

ಅನುರಾಧ, ಮಾಗಡಿ

ಅನುರಾಧ ಅವರೆ, ಪ್ರತಿ ಮಹಿಳೆಯಲ್ಲೂ ಸ್ವಲ್ಪ ಪ್ರಮಾಣದ ಬಿಳಿಮುಟ್ಟು ಆಗುವುದು ಸಹಜ. ಆ ಸಹಜ ಸ್ರಾವವು ನೀರಿನ ಹಾಗಿದ್ದು, ಯಾವುದೇ ವಾಸನೆ ಹೊಂದಿರುವುದಿಲ್ಲ ಮತ್ತು ಯೋನಿಯ ತೇವಾಂಶ ಕಾಯ್ದುಕೊಳ್ಳಲು, ಸ್ವಚ್ಛತೆ ಕಾಪಾಡಲು ಈ ಸ್ರಾವ ಅಗತ್ಯ. ಕಣ್ಣನ್ನು ರಕ್ಷಿಸುವ ಕಣ್ಣೀರು ಹಾಗೂ ಬಾಯಿಯ ಜೊಲ್ಲು ರಸದ ಹಾಗೆ ಈ ಸ್ರಾವ ಕೂಡ.

ಮುಟ್ಟಾಗುವ ಮುನ್ನ ಅಂಡೋತ್ಪತ್ತಿಯಾಗುವ ಸಂದರ್ಭದಲ್ಲಿ, ಅಂದರೆ ಹಿಂದಿನ ಬಾರಿ ಮುಟ್ಟಾದ 12ರಿಂದ 15 ದಿನಗಳಲ್ಲಿ ಲೈಂಗಿಕವಾಗಿ ಉದ್ರೇಕಗೊಂಡ ಸಮಯದಲ್ಲೆಲ್ಲ ಸ್ವಲ್ಪಮಟ್ಟಿಗೆ ಈ ಸಹಜ ಸ್ರಾವ ಹೆಚ್ಚಾಗಬಹುದು. ಚಿಂತಿಸಬೇಡಿ, ಆದರೆ ಬಿಳಿಮುಟ್ಟು ತುಂಬಾ ದಪ್ಪನಾಗಿದ್ದು ವಾಸನೆಯುಕ್ತವಾಗಿದ್ದರೆ, ಪುಡಿ ಪುಡಿ ರೀತಿ ಇದ್ದು, ಹಸಿರು, ಹಳದಿ ರಕ್ತಮಿಶ್ರಿತವಾಗಿದ್ದರೆ ಜೊತೆಗೆ ತುರಿಕೆಯೂ ಇದ್ದರೆ ಅದು ಬ್ಯಾಕ್ಟೀರಿಯಾ ಈಸ್ಟ್ ಅಥವಾ ಪ್ರೋಟೊಜೋವಾದಂತಹ ಸೋಂಕಿನಿಂದ ಆಗಿರಬಹುದು. ಇಂತಹ ಸ್ಥಿತಿ ಇದ್ದರೆ ನೀವು ಸೂಕ್ತ ತಜ್ಞರಿಂದ ತಪಾಸಣೆಗೆ ಒಳಗಾಗಿ ಚಿಕಿತ್ಸೆ ಪಡೆಯಲೇಬೇಕು.

ಇನ್ನು ನೀವು ಗರ್ಭಕೋಶದ ಕ್ಯಾನ್ಸರ್ ಬಗ್ಗೆ ಭಯ ಹೊಂದಿದ್ದೀರಿ. ಗರ್ಭಕೋಶದ ಒಳಾವರಣದ ಕ್ಯಾನ್ಸರ್‌ನಲ್ಲಿ ಅತಿ ರಕ್ತಸ್ರಾವ ಅಥವಾ ಮುಟ್ಟು ನಿಂತ ಮೇಲೆ ರಕ್ತಸ್ರಾವ ಕಂಡುಬರಬಹುದು. ಬಿಳಿಮುಟ್ಟು ಹೆಚ್ಚಿನ ಸಂದರ್ಭದಲ್ಲಿ ಇರುವುದಿಲ್ಲ. ಆದರೆ ಗರ್ಭಕಂಠ ಅಥವಾ ಗರ್ಭ ಕೊರಳಿನ ಅಂದರೆ ಸರ್ವೈಕಲ್ ಕ್ಯಾನ್ಸರ್‌ನಲ್ಲಿ ಕೆಲವೊಮ್ಮೆ ರಕ್ತಮಿಶ್ರಿತ ಬಿಳಿಸ್ರಾವ ಕಂಡುಬರಬಹುದು. ಇನ್ನು ಕೆಲವೊಮ್ಮೆ ಸಂಭೋಗದ ನಂತರ ರಕ್ತಸ್ರಾವ ಆಗಬಹುದು. ಇಂತಹ ಸಂದರ್ಭಗಳಲ್ಲಿ ಯಾವುದೇ ಕಾರಣಕ್ಕೂ ನಿರ್ಲಕ್ಷಿಸದೆ ಸೂಕ್ತ ತಪಾಸಣೆಗೆ ಒಳಗಾಗಬೇಕು. ಗರ್ಭಕೋಶದ ಕ್ಯಾನ್ಸರ್ ಬಾರದಂತೆ ತಡೆಯಲು ಲಸಿಕೆ ಇಲ್ಲ. ಆದರೆ, ಗರ್ಭಕೊರಳಿನ ಕ್ಯಾನ್ಸರ್‌ಗೆ ಲಸಿಕೆ ಇದೆ. ಚಿಕ್ಕ ವಯಸ್ಸಿನಲ್ಲಿಯೇ ಲೈಂಗಿಕ ಚಟುವಟಿಕೆಗಳಲ್ಲಿ ತೊಡಗುವುದು, ಬಹುಲೈಂಗಿಕ ಸಂಗಾತಿಗಳನ್ನು ಹೊಂದುವುದು, ಧೂಮಪಾನ, ಅಂತರವಿಲ್ಲದ ಹೆರಿಗೆಯಂತಹ ಕಾರಣಗಳಿಂದ ಗರ್ಭಕೊರಳಿನ ಕ್ಯಾನ್ಸರ್ ಉಂಟಾಗಬಹುದು. ನಿಯಮಿತವಾಗಿ ಪ್ಯಾಪ್ ಸ್ಮಿಯರ್ ಎಂಬ ಸ್ಕ್ರೀನಿಂಗ್ ಪರೀಕ್ಷೆ ಮಾಡಿಸಿಕೊಳ್ಳಿ. ಗರ್ಭಕೊರಳಿನ ಕ್ಯಾನ್ಸರ್ ನಿರ್ಮೂಲನೆಗೆ ಸಂಬಂಧಪಟ್ಟಂತೆ 9ರಿಂದ 15 ವರ್ಷದೊಳಗಿನ ಬಾಲಕಿಯರಿಗೆ ಎಚ್‌ಪಿವಿ ಲಸಿಕೆ ಹಾಕಿಸುವ ಬಗ್ಗೆ ವಿಶ್ವ ಆರೋಗ್ಯ ಸಂಸ್ಥೆಯು ಕಾರ್ಯಸೂಚಿ ಹೊರಡಿಸಿದೆ. 26 ವರ್ಷದ ನಂತರ ಲಸಿಕೆ ತೆಗೆದುಕೊಳ್ಳುವುದು ಅಷ್ಟೇನೂ ಪ್ರಯೋಜನಕಾರಿ ಅಲ್ಲ. ಆದರೂ ರೋಗನಿರೋಧಕ ಶಕ್ತಿ ಕಡಿಮೆ ಇರುವವರಿಗೆ ಕ್ಯಾನ್ಸರ್‌ನ ತೀವ್ರತೆ ತಡೆಯಲು ಸ್ವಲ್ಪ ಮಟ್ಟಿಗೆ ಅದರಿಂದ ಸಹಾಯವಾಗಬಹುದು.

ಇಲ್ಲಿದೆ ಪೋರ್ಕ್ ವೈವಿಧ್ಯ

ಭಾನುವಾರದ ಬಾಡೂಟಕ್ಕೆ ಕುರಿಮಾಂಸ, ಕೋಳಿ ಮಾಂಸದ ಖಾದ್ಯಗಳಷ್ಟೇ ಏಕೆ? ಹಂದಿಮಾಂಸ ಪ್ರಿಯರು ಈ ಸ್ವಾದಿಷ್ಟ ರೆಸಿಪಿಗಳನ್ನೂ ಟ್ರೈ ಮಾಡಿ ನೋಡಬಹುದು.

• ಎಂ.ಎಸ್.ಧರ್ಮೇಂದ್ರ

ರಸಾಸ್ವಾದ

ಕ್ಯಾಪ್ಸಿಕಂ ಡ್ರೈ

ಬೇಕಾಗುವ ಸಾಮಗ್ರಿ: ಪೋರ್ಕ್ 1/2 ಕೆ.ಜಿ., ಈರುಳ್ಳಿ 1, ಬೆಳ್ಳುಳ್ಳಿ 1 ಉಂಡೆ, ಶುಂಠಿ- ಬೆಳ್ಳುಳ್ಳಿ ಪೇಸ್ಟ್ 1 ಚಮಚ, ಕೊತ್ತಂಬರಿ ಸೊಪ್ಪು ಸ್ವಲ್ಪ, ಪುದೀನಾ ಸ್ವಲ್ಪ, ಹಸಿಮೆಣಸಿನಕಾಯಿ 5, ಕ್ಯಾಪ್ಸಿಕಂ 1, ಕರಿಬೇವು 1 ಕಡ್ಡಿ, ಮೆಣಸಿನಕಾಯಿ ಪುಡಿ, ಪೋರ್ಕ್ ಮಸಾಲೆ ತಲಾ 1 ಚಮಚ, ಪೆಪ್ಪರ್ ಪುಡಿ ಸ್ವಲ್ಪ, ಸೋಯಾ ಸಾಸ್, ಚಿಲ್ಲಿ ಸಾಸ್, ವಿನೆಗರ್, ಎಣ್ಣೆ, ಅರಸಿನ ಪುಡಿ, ಸಾಸಿವೆ, ಉಪ್ಪು.

ತಯಾರಿಸುವ ವಿಧಾನ: ಚೆನ್ನಾಗಿ ತೊಳೆದ ಹಂದಿಮಾಂಸಕ್ಕೆ ಅರಸಿನ ಪುಡಿ, ಮೆಣಸಿನಕಾಯಿ ಪುಡಿ ಮತ್ತು ಸ್ವಲ್ಪ ಉಪ್ಪನ್ನು ಬೆರೆಸಿ ಕುಕ್ಕರ್‌ನಲ್ಲಿ ಬೇಯಿಸಿಕೊಳ್ಳಿ.

ಪಾತ್ರೆಗೆ ಎಣ್ಣೆ ಹಾಕಿ ಕಾದ ನಂತರ ಸಾಸಿವೆ ಸಿಡಿಸಿ, ಕತ್ತರಿಸಿದ ಹಸಿಮೆಣಸಿನಕಾಯಿ, ಕರಿಬೇವು, ಜಜ್ಜಿದ ಬೆಳ್ಳುಳ್ಳಿ, ಈರುಳ್ಳಿ, ಕ್ಯಾಪ್ಸಿಕಂ ಹಾಕಿ ಕಂದು ಬಣ್ಣ ಬರುವವರೆಗೆ ಫ್ರೈ ಮಾಡಿ. ನಂತರ ಉಪ್ಪು, ಶುಂಠಿ- ಬೆಳ್ಳುಳ್ಳಿ ಪೇಸ್ಟ್ ಹಾಕಿ ಸ್ವಲ್ಪ ಹುರಿದುಕೊಂಡ ಮೇಲೆ ಬೆಂದ ಪೋರ್ಕ್, ಪೆಪ್ಪರ್ ಪುಡಿ, ಪೋರ್ಕ್ ಮಸಾಲೆ, ಸೋಯಾ ಸಾಸ್, ಚಿಲ್ಲಿ ಸಾಸ್, ವಿನೆಗರ್ ಹಾಕಿ ಮುಚ್ಚಳ ಮುಚ್ಚಿ ಚೆನ್ನಾಗಿ ಬೇಯಿಸಿ. ನಂತರ ಕತ್ತರಿಸಿದ ಕೊತ್ತಂಬರಿ ಸೊಪ್ಪು ಮತ್ತು ಪುದೀನಾ ಹಾಕಿ ಮುಚ್ಚಳ ಮುಚ್ಚಿ ಸ್ವಲ್ಪ ಹೊತ್ತು ಬೇಯಿಸಿ.

ಚಿಲ್ಲಿ ಫ್ರೈ

ಬೇಕಾಗುವ ಸಾಮಗ್ರಿ: ಪೋರ್ಕ್ 1/2 ಕೆ.ಜಿ. (ಮಾಂಸ ಮತ್ತು ಚರ್ಬಿ), ಶುಂಠಿ 2 ಇಂಚು, ಬೆಳ್ಳುಳ್ಳಿ 2 ಉಂಡೆ, ಕೊತ್ತಂಬರಿ ಸೊಪ್ಪು ಸ್ವಲ್ಪ, ಪುದೀನ ಸೊಪ್ಪು ಸ್ವಲ್ಪ, ಮೆಣಸಿನಕಾಯಿ ಪುಡಿ 1 ಚಮಚ, ಅರಸಿನ ಸ್ವಲ್ಪ, ಪೋರ್ಕ್ ಮಸಾಲೆ 1 ಚಮಚ, ಈರುಳ್ಳಿ 2, ಹಸಿಮೆಣಸಿನಕಾಯಿ 4, ನಿಂಬೆಹಣ್ಣು 1/2 ಹೋಳು, ಎಣ್ಣೆ, ಉಪ್ಪು.

ತಯಾರಿಸುವ ವಿಧಾನ: ಶುಂಠಿ, ಬೆಳ್ಳುಳ್ಳಿ, 1 ಈರುಳ್ಳಿ, ಸ್ವಲ್ಪ ಕೊತ್ತಂಬರಿ ಸೊಪ್ಪಿಗೆ ಸ್ವಲ್ಪ ನೀರು ಹಾಕಿ ರುಬ್ಬಿಕೊಳ್ಳಿ. ಫ್ರೈ ಪ್ಯಾನ್‌ಗೆ ಪೋರ್ಕ್, ಉಪ್ಪು, ಅರಸಿನ ಪುಡಿ ಹಾಕಿ ಉಪ್ಪು ಹಿಡಿಯುವ ತನಕ ಹುರಿಯಿರಿ. ಆಮೇಲೆ ಈರುಳ್ಳಿ, ಕೊತ್ತಂಬರಿ ಸೊಪ್ಪು, ಪುದೀನಾ, ಹಸಿಮೆಣಸಿನಕಾಯಿ, ಮೆಣಸಿನಕಾಯಿ ಪುಡಿ, ರುಬ್ಬಿದ ಪೇಸ್ಟ್ ಹಾಕಿ ಮಿಕ್ಸ್ ಮಾಡಿ ಮುಚ್ಚಳ ಮುಚ್ಚಿ ಚೆನ್ನಾಗಿ ಬೇಯಿಸಿ. ಆಗಾಗ ಚೆನ್ನಾಗಿ ತಿರುಗಿಸುತ್ತಿರಿ. ಬೇಕೆಂದರೆ ನೀರನ್ನು ಸೇರಿಸುತ್ತಿರಿ.

ಪೋರ್ಕ್ ಮಸಾಲೆ ಹಾಕಿ ಸ್ವಲ್ಪ ಫ್ರೈ ಮಾಡಿ ಕೊನೆಗೆ ನಿಂಬೆಹಣ್ಣಿನ ರಸವನ್ನು ಸೇರಿಸಿ.

ರುಚಿ ರುಚಿ ಗ್ರೇವಿ

ಬೇಕಾಗುವ ಸಾಮಗ್ರಿ: ಪೋರ್ಕ್ 1/2 ಕೆ.ಜಿ. (ಮಾಂಸ ಮತ್ತು ಚರ್ಬಿ), ಶುಂಠಿ 2 ಇಂಚು, ಬೆಳ್ಳುಳ್ಳಿ 1 ಉಂಡೆ, ಹಸಿಮೆಣಸಿನಕಾಯಿ 4, ಕೊತ್ತಂಬರಿ ಸೊಪ್ಪು ಸ್ವಲ್ಪ, ಪುದೀನಾ ಸೊಪ್ಪು ಸ್ವಲ್ಪ, ಕರಿಬೇವು 1 ಕಡ್ಡಿ, ಬ್ಯಾಡಗಿ ಮೆಣಸಿನಕಾಯಿ 4, ಮೆಣಸಿನಕಾಯಿ ಪುಡಿ 1 ಚಮಚ, ದನಿಯಾ ಪುಡಿ 1 ಚಮಚ, ಅರಸಿನ ಸ್ವಲ್ಪ, ಗರಂಮಸಾಲೆ ಸ್ವಲ್ಪ, ಪೆಪ್ಪರ್ ಪುಡಿ ಸ್ವಲ್ಪ, ಗಸಗಸೆ ಸ್ವಲ್ಪ, ಈರುಳ್ಳಿ 1, ನಿಂಬೆಹಣ್ಣು 1/2 ಹೋಳು, ಕೊಬ್ಬರಿಎಣ್ಣೆ, ಸಾಸಿವೆ, ಉಪ್ಪು.

ತಯಾರಿಸುವ ವಿಧಾನ: ಬೆಳ್ಳುಳ್ಳಿ, ಶುಂಠಿ, ಬ್ಯಾಡಗಿಮೆಣಸಿನಕಾಯಿ ಮತ್ತು ಹಸಿಮೆಣಸಿನಕಾಯಿಯನ್ನು ತರಿಯಾಗಿ ರುಬ್ಬಿಟ್ಟುಕೊಳ್ಳಿ. ಕುಕ್ಕರ್‌ಗೆ ಕೊಬ್ಬರಿಎಣ್ಣೆ ಹಾಕಿ, ಸಾಸಿವೆ ಸಿಡಿಸಿ, ಕರಿಬೇವು, ಈರುಳ್ಳಿ ಹಾಕಿ. ಸ್ವಲ್ಪ ಫ್ರೈ ಮಾಡಿದ ಮೇಲೆ ರುಬ್ಬಿದ ಪೇಸ್ಟ್, ತೊಳೆದ ಮಾಂಸ, ಪುದೀನಾ, ಉಪ್ಪು, ಅರಸಿನ ಪುಡಿ ಹಾಕಿ ಚೆನ್ನಾಗಿ ಹುರಿಯಿರಿ. ನಂತರ ಮೆಣಸಿನಕಾಯಿ ಪುಡಿ, ಪೆಪ್ಪರ್ ಪುಡಿ, ಗರಂಮಸಾಲೆ ಪುಡಿ, ಗಸಗಸೆ ಮತ್ತು ಸ್ವಲ್ಪ ನೀರು ಹಾಕಿ ಮುಚ್ಚಳ ಮುಚ್ಚಿ ಮುಕ್ಕಾಲು ಭಾಗದಷ್ಟು ಬೇಯಿಸಿ. ಬಳಿಕ ಮುಚ್ಚಳ ತೆಗೆದು ದನಿಯಾ ಪುಡಿ ಹಾಕಿ ಚೆನ್ನಾಗಿ ಬೇಯಿಸಿ. ಕೊನೆಗೆ ನಿಂಬೆರಸ ಹಾಕಿ ಕೊತ್ತಂಬರಿ ಸೊಪ್ಪು ಉದುರಿಸಿ.

ಬಯಸಿದ ಬದುಕಿಗಾಗಿ ಗಟ್ಟಿಯಾಗಿ

• ಸುಷ್ಮಾ ಸವಸುದ್ದಿ

ಭಾವಯಾನ

ಕೆಲ ವರ್ಷಗಳ ಹಿಂದೆ, ಸ್ನೇಹಿತೆ ಸಹನಾಳ ತಂದೆ ಬಸ್‌ನಲ್ಲಿ ಸಿಕ್ಕಿದ್ದರು. ನಾನು ಒಳ್ಳೆ ಉದ್ಯೋಗದಲ್ಲಿ ಇರುವುದನ್ನು ತಿಳಿದು ಸಂತಸಪಟ್ಟರು. ಮರುಕ್ಷಣವೇ ವಿಷಾದದಿಂದ 'ನಾನು ತಪ್ಪು ಮಾಡಿದ್ನಮ್ಮ. ಸಹನಾಗೆ ಓದುವ ಆಸೆ ಇತ್ತು. ಜಾಣೆಯೂ ಆಗಿದ್ಲು. ಆದರೆ ಓದಿಸದೇ ಮದುವೆ ಮಾಡಿಬಿಟ್ಟೆ. ಮದುವೆ ನಂತರ ಓದಿಸುವುದಾಗಿ ಹೇಳಿದ್ದ ಗಂಡನ ಮನೆಯವರು ಮಾತಿನಂತೆ ನಡಕೊಳ್ಳಲಿಲ್ಲ' ಎಂದು ಬೇಸರಪಟ್ಟರು. ನನಗೆ ಹೇಗೆ ಸಮಾಧಾನ ಮಾಡಬೇಕೆಂದೇ ಗೊತ್ತಾಗಲಿಲ್ಲ. 'ಹೌದು ಅಂಕಲ್ ತಪ್ಪು ಮಾಡಿದ್ರಿ' ಅಂತ ಮನಸ್ಸಿನಲ್ಲೇ ಅಂದುಕೊಂಡು, ಕೃತಕ ನಗೆ ಬೀರಿದ್ದೆ.

ಸಹನಾ ತನ್ನ ಹೆಸರಿಗೆ ತಕ್ಕಂತೆಯೇ ಸಹನಾಶೀಲಳಾಗಿ ಇದ್ದ ಹುಡುಗಿ. ನೋಡಲು ಚಂದ, ಓದಿನಲ್ಲಿ ಮುಂದೆ. ಡಿಗ್ರಿ ಮುಗಿಯುತ್ತಿದ್ದಂತೆ ಮನೆಯವರ ಒತ್ತಾಯಕ್ಕೆ ಮಣಿದು ಮದುವೆಯಾದಳು. ಅವಳಿಗೆ ಸ್ನಾತಕೋತ್ತರ ಪದವಿ ಪಡೆಯಬೇಕೆಂಬ ಕನಸಿತ್ತು. ಆದರೆ, ತಾನು ಸಾಯುವುದರಲ್ಲಿ ಮೊಮ್ಮಗಳ ಮದುವೆ ನೋಡಬೇಕೆನ್ನುವ ಅಜ್ಜಿಯ ಭಾವನಾತ್ಮಕ ಒತ್ತಾಯಕ್ಕೆ ಎದುರಾಡಲು ಅವಳಿಂದ ಸಾಧ್ಯವಾಗಲಿಲ್ಲ. ಕೊನೇಪಕ್ಷ ಮದುವೆ ಮಾಡುವಾಗಲಾದರೂ ಅವಳ ಅಭಿಪ್ರಾಯವನ್ನು ಮನೆಯವರು ಯಾರೂ ಕೇಳಲಿಲ್ಲ, ಅವಳೂ ಹೇಳಲಿಲ್ಲ.

ಮದುವೆಯಾದ ಎರಡು ತಿಂಗಳ ನಂತರ ಕರೆ ಮಾಡಿದ್ದ ಸಹನಾ, 'ಬದುಕು ಮುಗಿದು ಹೋಯಿತೇನೋ ಅನ್ನಿಸುತ್ತಿದೆ. ಮದುವೆ ನಂತರ ಓದಬಹುದು ಅಂದಿದ್ದರು. ಆದರೆ ಈಗ 'ಓದಿ ಏನ್ ಮಾಡಬೇಕಿದೆ' ಅಂತ ಕೇಳ್ತಾ ಇದ್ದಾರೆ. ತವರಿನವರ ಒತ್ತಾಯಕ್ಕೆ ಮದುವೆ ಮಾಡಿಕೊಂಡು ತಪ್ಪು ಮಾಡಿದೆ. ಒಮ್ಮೆ ಅಪ್ಪನೊಂದಿಗೆ ಕೂತು ಮಾತನಾಡಿದ್ದರೆ, ಓದುವೆ ಅಂತ ಅವರಿಗೆ ಮನವರಿಕೆ ಮಾಡಿಕೊಟ್ಟಿದ್ದರೆ ಬದುಕು ಬದಲಾಗುತ್ತಿತ್ತೇನೊ' ಎಂದೆಲ್ಲಾ ಸಂಕಟ ಪಟ್ಟಿದ್ದಳು.

ನಾವು ನಮ್ಮ ಪರವಾಗಿ ಗಟ್ಟಿಯಾಗಿ ನಿಲ್ಲದೆ, ನಮ್ಮ ಬದುಕಿನ ಯೋಜನೆಗಳನ್ನು ನಮ್ಮವರ ಭಾವನಾತ್ಮಕ ಸುಳಿಗೆ ಸಿಲುಕಿಸಿ, ನಾವು ಬಯಸದ ಬದುಕನ್ನು ಬದುಕುವುದರಲ್ಲಿ ಯಾವ ಅರ್ಥವಿದೆ? 'ನಾನು ಇನ್ನೂ ಓದುವೆ', 'ನಾನು ನನ್ನ ಇಷ್ಟದ ಕೋರ್ಸನ್ನೇ ಮಾಡುವೆ', 'ನನಗೆ ಈಗಲೇ ಮದುವೆ ಬೇಡ', 'ನಾನು ಪ್ರೀತಿಸಿದ ಹುಡುಗನನ್ನೇ ಮದುವೆಯಾಗುವೆ' ಎಂದೆಲ್ಲ ಪಾಲಕರಿಗೆ ಹೇಳುವುದು, ಮನವರಿಕೆ ಮಾಡಿಕೊಡುವುದು, ಅವರ ಸಲಹೆಯನ್ನೂ ಪರಿಗಣಿಸಿ, ನಮ್ಮ ನಿರ್ಧಾರಕ್ಕೆ, ನಮ್ಮ ಕನಸಿಗೆ, ನಮ್ಮ ಬದುಕಿಗೆ ನಾವು ಬದ್ಧರಾಗಿ ನಿಲ್ಲುವುದು ಖಂಡಿತ ನಾವು ಪಾಲಕರಿಗೆ ತೋರುವ ಅಗೌರವ ಅಲ್ಲ. ತಪ್ಪನ್ನು ತಪ್ಪು ಎಂದು ಹೇಳುವ, ಇಷ್ಟವಿಲ್ಲದ್ದನ್ನು ಇಷ್ಟವಿಲ್ಲ ಎನ್ನುವ, ತಮ್ಮ ಅಭಿಮತವನ್ನು ಸ್ಪಷ್ಟವಾಗಿ ನಮೂದಿಸುವ ಧೈರ್ಯ ಹೆಣ್ಣುಮಕ್ಕಳಲ್ಲಿ ಜಾಗೃತವಾಗಬೇಕಿದೆ.

* * *

ಸಹನಾ ಈಗ ಒಂದು ಮಗುವಿನ ತಾಯಿ. ಅವಳು ಓದುವ ತನ್ನ ಆಸೆಯನ್ನು ತಡವಾಗಿಯಾದರೂ ತನ್ನ ಅತ್ತೆ, ಮಾವನಿಗೆ ಮನವರಿಕೆ ಮಾಡಿಕೊಟ್ಟಿದ್ದಾಳೆ. ಸ್ನಾತಕೋತ್ತರ ಪದವಿಗೆ ಪ್ರವೇಶ ಪಡೆದಿದ್ದಾಳೆ. ಕರೆ ಮಾಡಿದಾಗಲೆಲ್ಲ ಗೋಳುಗಳನ್ನೇ ಹೇಳಿಕೊಳ್ಳುತ್ತಿದ್ದ ಗೆಳತಿ, ಈಗ ತಾನು ಓದುತ್ತಿರುವ ಸಾಹಿತ್ಯ, ರಾಜಕೀಯ ಸಂಗತಿಗಳು, ಸಾಮಾಜಿಕ ಬದಲಾವಣೆ ಕುರಿತೆಲ್ಲ ಮಾತನಾಡುತ್ತಾಳೆ.

ಸ್ಪೀಕರ್ ನಿರ್ಧಾರ ಪ್ರಶ್ನಿಸಿದ್ದ ಅರ್ಜಿ ವಜಾ

ಸಂಸದೀಯ ಸಮಿತಿ ರಚಿಸಿದ್ದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದ ನ್ಯಾ.ಯಶವಂತ್ ವರ್ಮಾ

ನವದೆಹಲಿ (ಪಿಟಿಐ): ತಮ್ಮ ವಿರುದ್ಧದ ಭ್ರಷ್ಟಾಚಾರ ಆರೋಪಗಳ ತನಿಖೆಗೆ ಲೋಕಸಭಾ ಸ್ಪೀಕರ್ ಸಂಸದೀಯ ಸಮಿತಿ ರಚಿಸಿದ ನಿರ್ಧಾರವನ್ನು ಮತ್ತು ಅದರ ಕಾನೂನಿನ ಮಾನ್ಯತೆಯನ್ನು ಪ್ರಶ್ನಿಸಿ ಅಲಹಾಬಾದ್ ಹೈಕೋರ್ಟ್‌ನ ನ್ಯಾಯಮೂರ್ತಿ ಯಶವಂತ್ ವರ್ಮಾ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಶುಕ್ರವಾರ ವಜಾಗೊಳಿಸಿದೆ.

ಈ ಕುರಿತು ಅರ್ಜಿ ವಿಚಾರಣೆಯನ್ನು ಜ. 8ರಂದು ನಡೆಸಿದ್ದ ನ್ಯಾಯಮೂರ್ತಿಗಳಾದ ದೀಪಂಕರ್ ದತ್ತ ಮತ್ತು ಎಸ್.ಸಿ.ಶರ್ಮಾ ಅವರ ಪೀಠವು ಕಾಯ್ದಿರಿಸಿದ್ದ ತೀರ್ಪನ್ನು ಶುಕ್ರವಾರ ಪ್ರಕಟಿಸಿತು. ರಾಷ್ಟ್ರಪತಿ ಅನುಪಸ್ಥಿತಿಯಲ್ಲಿ ಉಪ ರಾಷ್ಟ್ರಪತಿಯಾದವರು ರಾಷ್ಟ್ರಪತಿಯ ಕಾರ್ಯಗಳನ್ನು ನಿರ್ವಹಿಸಬಹುದು ಎಂದರೆ, ರಾಜ್ಯಸಭೆಯ ಸಭಾಪತಿಯ ಅನುಪಸ್ಥಿತಿಯಲ್ಲಿ ಉಪಸಭಾಪತಿ ಅವರ ಕಾರ್ಯಗಳನ್ನು ಏಕೆ ನಿರ್ವಹಿಸಬಾರದು ಎಂದು ಸುಪ್ರೀಂಕೋರ್ಟ್ ಹಿಂದಿನ ವಿಚಾರಣೆ ವೇಳೆ ಪ್ರಶ್ನಿಸಿತ್ತು.

ನ್ಯಾಯಮೂರ್ತಿಗಳ ವಿಚಾರಣಾ ಕಾಯ್ದೆ- 1968ರ ಪ್ರಕಾರ, ವಾಗ್ದಂಡನೆ ಕುರಿತ ನಿರ್ಣಯವನ್ನು ರಾಜ್ಯಸಭೆಯ ಉಪ ಸಭಾಪತಿಗೆ ತಿರಸ್ಕರಿಸುವ ಅಧಿಕಾರವಿಲ್ಲ, ಇಂಥ ನಿರ್ಣಯವನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರ ಲೋಕಸಭಾ ಸ್ಪೀಕರ್ ಮತ್ತು ರಾಜ್ಯಸಭಾ ಸಭಾಪತಿಗೆ ಮಾತ್ರ ಇರುತ್ತದೆ ಎಂದು ನ್ಯಾಯಮೂರ್ತಿ ವರ್ಮಾ ಪರ ವಕೀಲರು ಮಾಡಿದ್ದ ವಾದಕ್ಕೆ ಪೀಠ ಸಮ್ಮತಿ ನೀಡಿರಲಿಲ್ಲ. ಇಂಥಹದ್ದಕ್ಕೆ ಕಾಯ್ದೆಯಡಿ ಯಾವುದೇ ನಿರ್ಬಂಧವಿಲ್ಲ ಎಂದು ಪೀಠ ಹೇಳಿತ್ತು.

ನವದೆಹಲಿಯಲ್ಲಿ ನ್ಯಾಯಮೂರ್ತಿ ವರ್ಮಾ ಅವರ ನಿವಾಸದಲ್ಲಿ ಮಾರ್ಚ್ 4ರಂದು ಸುಟ್ಟ ನೋಟುಗಳ ಕಂತೆ ಪತ್ತೆಯಾದ ಬೆನ್ನಲ್ಲೇ, ಅವರನ್ನು ದೆಹಲಿ ಹೈಕೋರ್ಟ್‌ನಿಂದ ಅಲಹಾಬಾದ್ ಹೈಕೋರ್ಟ್‌ಗೆ ವರ್ಗಾಯಿಸಲಾಯಿತು.

ಹೆಚ್ಚು ಅಂಕ ಪಡೆದ ಅಭ್ಯರ್ಥಿ ಸಾಮಾನ್ಯ ವರ್ಗಕ್ಕೆ: ‘ಸುಪ್ರೀಂ’

ಸಾಮಾನ್ಯ ವರ್ಗದ ಕೋಟಾದ ಕಟ್–ಆಫ್ ಅಂಕಗಳಿಗಿಂತ ಹೆಚ್ಚಿನ ಅಂಕಗಳನ್ನು ಪಡೆದ ಮೀಸಲು ವರ್ಗದ ಅಭ್ಯರ್ಥಿಗಳನ್ನು ಕಡ್ಡಾಯವಾಗಿ ಸಾಮಾನ್ಯ ಪ್ರವರ್ಗದಡಿ ಪರಿಗಣಿಸಬೇಕು ಎಂದು ಸುಪ್ರೀಂ ಕೋರ್ಟ್ ಶುಕ್ರವಾರ ಹೇಳಿದೆ.

ನ್ಯಾಯಮೂರ್ತಿಗಳಾದ ಎಂ.ಎಂ. ಸುಂದರೇಶ್ ಮತ್ತು ಸತೀಶ್ ಚಂದ್ರ ಶರ್ಮಾ ಅವರ ಪೀಠವು, ‘ಸಾಮಾನ್ಯ ವರ್ಗದ ಕಟ್–ಆಫ್ ಅಂಕಗಳಿಗಿಂತ ಹೆಚ್ಚಿನ ಅಂಕಗಳನ್ನು ಗಳಿಸಿದ ಮೀಸಲು ವರ್ಗಕ್ಕೆ (ಎಸ್‌ಸಿ, ಎಸ್‌ಟಿ ಮತ್ತು ಒಬಿಸಿ) ಸೇರಿದ ಅಭ್ಯರ್ಥಿಯನ್ನು ಸಾಮಾನ್ಯ ಪ್ರವರ್ಗದಡಿ ಖಾಲಿ ಹುದ್ದೆಗೆ ಅರ್ಹತೆ ಪಡೆದಿದ್ದಾರೆ ಎಂದು ಪರಿಗಣಿಸಬೇಕು ಎಂಬುದು ಕಾನೂನಿನ ಸ್ಥಾಪಿತ ತತ್ವ’ ಎಂದು ಹೇಳಿದೆ.

ಕೇರಳ ಹೈಕೋರ್ಟ್ 2020ರಲ್ಲಿ ನೀಡಿದ್ದ ತೀರ್ಪನ್ನು ರದ್ದುಗೊಳಿಸುವಾಗ ಪೀಠವು ಈ ಹೇಳಿಕೆ ನೀಡಿದೆ. ಮೀಸಲು ಪ್ರವರ್ಗದ ಅಭ್ಯರ್ಥಿ ಹೆಚ್ಚಿನ ಅಂಕಗಳನ್ನು ಪಡೆದಿದ್ದರೂ, ಆತನ ಬದಲು ಸಾಮಾನ್ಯ ವರ್ಗದ ಕೋಟಾದಡಿ ಸಾಮಾನ್ಯ ವರ್ಗದ ಅಭ್ಯರ್ಥಿಯನ್ನು ನೇಮಕ ಮಾಡಿಕೊಳ್ಳುವಂತೆ ಕೇರಳ ಹೈಕೋರ್ಟ್ ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರಕ್ಕೆ (ಎಎಐ) ನಿರ್ದೇಶನ ನೀಡಿತ್ತು.

‘ಮೀಸಲಾತಿ ರಹಿತ’ ಪ್ರವರ್ಗವು ಸಾಮಾನ್ಯ ಅಭ್ಯರ್ಥಿಗಳಿಗೆ ಇರುವ ‘ಕೋಟಾ’ ಅಲ್ಲ. ಬದಲಾಗಿ, ಅರ್ಹತೆಯ ಆಧಾರದ ಮೇಲೆ ಎಲ್ಲರಿಗೂ ಲಭ್ಯವಿರುವ ‘ಮುಕ್ತ’ ಪ್ರವರ್ಗ ಆಗಿದೆ ಎಂದು ತೀರ್ಪು ನೀಡಿದ ನ್ಯಾಯಮೂರ್ತಿ ಶರ್ಮಾ ಹೇಳಿದ್ದಾರೆ.

ಮೀಸಲು ವರ್ಗದ ಅಭ್ಯರ್ಥಿಯು ಯಾವುದೇ ರಿಯಾಯಿತಿ ಗಳನ್ನು (ವಯಸ್ಸು ಅಥವಾ ಶುಲ್ಕ ಸಡಿಲಿಕೆ) ಪಡೆಯದೆ ಸಾಮಾನ್ಯ ಪ್ರವರ್ಗದ ಅಭ್ಯರ್ಥಿಗಳಿಗಿಂತ ಹೆಚ್ಚಿನ ಸಾಧನೆ ಮಾಡಿದರೆ, ಅವರನ್ನು ಸಾಮಾನ್ಯ ವರ್ಗದ ಅಭ್ಯರ್ಥಿ ಎಂದೇ ಪರಿಗಣಿಸಬೇಕು ಎಂದು ಪೀಠ ಹೇಳಿದೆ.

ಅನರ್ಹತೆ: ತೀರ್ಪಿಗೆ ತಡೆ

ಪಶ್ಚಿಮ ಬಂಗಾಳದ ಹಿರಿಯ ನಾಯಕ ಮುಕುಲ್ ರಾಯ್ ಅವರನ್ನು ಪಕ್ಷಾಂತರ ನಿಷೇಧ ಕಾಯ್ದೆಯಡಿ ಶಾಸಕ ಸ್ಥಾನದಿಂದ ಅನರ್ಹಗೊಳಿಸಿದ್ದ ಕೋಲ್ಕತ್ತ ಹೈಕೋರ್ಟ್ ತೀರ್ಪಿಗೆ ಸುಪ್ರೀಂ ಕೋರ್ಟ್ ಶುಕ್ರವಾರ ತಡೆ ನೀಡಿದೆ.

ಹೈಕೋರ್ಟ್ 2025ರ ನವೆಂಬರ್ 13ರಂದು ನೀಡಿದ್ದ ತೀರ್ಪಿಗೆ ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಮತ್ತು ನ್ಯಾಯಮೂರ್ತಿ ಜಾಯ್‌ಮಾಲ್ಯ ಬಾಗ್ಚಿ ಅವರು ಇದ್ದ ಪೀಠವು ತಡೆ ನೀಡಿತು. ಮುಕುಲ್ ರಾಯ್ ಅವರು ಅನಾರೋಗ್ಯದಿಂದ ಬಳಲುತ್ತಿರುವ ಕಾರಣ ಅವರ ಮಗ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.

ಗೌರಿ ಲಂಕೇಶ್ ಹತ್ಯೆ ಆರೋಪಿಗೆ ಜಯ

ಪ್ರಜಾವಾಣಿ ವಾರ್ತೆ

ಮುಂಬೈ: ಪತ್ರಕರ್ತೆ ಗೌರಿ ಲಂಕೇಶ್ ಹತ್ಯೆ ಪ್ರಕರಣದಲ್ಲಿ ಆರೋಪಿಯಾಗಿರುವ ಶ್ರೀಕಾಂತ ಪಾಂಗಾರಕರ್, ಮಹಾರಾಷ್ಟ್ರದ ಜಾಲ್ನಾ ನಗರ ಪಾಲಿಕೆ ಚುನಾವಣೆಯಲ್ಲಿ ಜಯ ಗಳಿಸಿದ್ದಾರೆ. ಮತ ಎಣಿಕೆ ಶುಕ್ರವಾರ ನಡೆಯಿತು.

ಅವರು ವಾರ್ಡ್ ನಂ.13ರಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು. ಬಿಜೆಪಿಯ ಅಭ್ಯರ್ಥಿ ಸಮೀಪದ ಪ್ರತಿ-ಸ್ಪರ್ಧಿಯಾಗಿದ್ದರು. ಉಪಮುಖ್ಯಮಂತ್ರಿ ಏಕನಾಥ ಶಿಂದೆ ನೇತೃತ್ವದ ಶಿವಸೇನಾ ಪಕ್ಷ ತನ್ನ ಅಭ್ಯರ್ಥಿಯನ್ನು ಕಣಕ್ಕೆ ಇಳಿಸಿರಲಿಲ್ಲ.

ನಾಲಾ ಸೋಪಾರದಲ್ಲಿ ಶಸ್ತ್ರಾಸ್ತ್ರ ಸಿಕ್ಕಿದ್ದ ಪ್ರಕರಣದಲ್ಲಿಯೂ ಪಾಂಗಾರಕರ್ ಆರೋಪಿಯಾಗಿದ್ದಾರೆ.

ಶ್ರೀಕಾಂತ ಪಾಂಗಾರಕರ್

ಪಾಂಗಾರಕರ್ ಅವರಿಗೆ ಕರ್ನಾಟಕ ಹೈಕೋರ್ಟ್ 2024ರ ಸೆಪ್ಟೆಂಬರ್ 4ರಂದು ಜಾಮೀನು ನೀಡಿತ್ತು. ಅದೇ ವರ್ಷ ಅಕ್ಟೋಬರ್‌ನಲ್ಲಿ ಮಹಾರಾಷ್ಟ್ರ ವಿಧಾನಸಭೆಗೆ ಚುನಾವಣೆ ನಡೆಯುವುದಕ್ಕೂ ಮುನ್ನ ಪಾಂಗಾರಕರ್ ಶಿವಸೇನಾ ಸೇರಿದ್ದರು. ಬಳಿಕ ಅವರನ್ನು ಜಾಲ್ನಾ ವಿಧಾನಸಭಾ ಕ್ಷೇತ್ರದ ಪ್ರಚಾರ ಸಮಿತಿ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿತ್ತು.

ಈ ಕುರಿತು ವ್ಯಾಪಕ ಟೀಕೆಗಳು ವ್ಯಕ್ತವಾದ ಕಾರಣ, ಆಗ ಮುಖ್ಯಮಂತ್ರಿ ಆಗಿದ್ದ ಏಕನಾಥ ಶಿಂದೆ ಅವರು, ಪಾಂಗಾರಕರ್ ನೇಮಕವನ್ನು ರದ್ದು ಮಾಡಿದ್ದರು.

ಮೈಸೂರಿನ ಶಾಯಿ ಬಳಕೆ

ಮುಂಬೈ: ಮಹಾರಾಷ್ಟ್ರದ ಮಹಾನಗರ ಪಾಲಿಕೆ ಚುನಾವಣೆಗಳಲ್ಲಿ ಮತದಾರರ ಕೈ ಬೆರಳಿನ ಮೇಲೆ ‘ಮಾರ್ಕರ್ ಪೆನ್’ ಬಳಸಿ ಗುರುತು ಹಾಕಿದ ಬಳಿಕ ಅಳಿಸಿಹೋದ ಹಲವು ಪ್ರಕರಣಗಳು ವರದಿಯಾದ ಬೆನ್ನಲ್ಲೇ, ಮತ್ತೆ ಹಳೆಯ ಪದ್ಧತಿಯನ್ನೇ ಅನುಸರಿಸಲು ರಾಜ್ಯ ಚುನಾವಣಾ ಆಯೋಗ ನಿರ್ಧರಿಸಿದೆ.

ಇದೇ ಫೆಬ್ರುವರಿಯಲ್ಲಿ ನಡೆಯಲಿರುವ ಜಿಲ್ಲಾ ಪರಿಷತ್, ಪಂಚಾಯತ್ ಸಮಿತಿ ಚುನಾವಣೆ-ಗಳಲ್ಲಿ ಮೈಸೂರಿನ ಶಾಯಿ ಬಳಸಲು ಮುಂದಾಗಿದೆ.

ಅಳಿಸಲಾಗದ ಶಾಯಿ ಪೂರೈಸುವ ಕರ್ನಾಟಕ ಸರ್ಕಾರ ಒಡೆತನದ ‘ಮೈಸೂರು ಬಣ್ಣ ಹಾಗೂ ಅರಗು ಕಾರ್ಖಾನೆ’ಯಿಂದಲೇ (ಮೈಲಾಕ್) ಖರೀದಿಸಲು ನಿರ್ಧರಿಸಿದೆ ಎಂದು ಆಯೋಗ ತಿಳಿಸಿದೆ.

ಮಹಾರಾಷ್ಟ್ರ ಚುನಾವಣೆಯಲ್ಲಿ ಶಾಯಿ ಗುಣಮಟ್ಟ ಕುರಿತ ವಿವಾದ

‘ಜನರನ್ನು ಕತ್ತಲಲ್ಲಿಟ್ಟಿರುವ ಆಯೋಗ’

ನವದೆಹಲಿ (ಪಿಟಿಐ): ಮಹಾರಾಷ್ಟ್ರದ ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಬಳಸಿದ ‘ಮಾರ್ಕರ್ ಪೆನ್ನು’ಗಳಲ್ಲಿನ ಶಾಯಿಯ ಗುಣಮಟ್ಟದ ಕುರಿತು ವಾಗ್ವಾದ ತೀವ್ರವಾಗಿರುವ ನಡುವೆಯೇ, ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು, ‘ಚುನಾವಣಾ ಆಯೋಗವು ಪ್ರಜೆಗಳ ಮೇಲೆ ಮಾನಸಿಕವಾಗಿ ಒತ್ತಡ ಹೇರುವ ಮೂಲಕ ಅವರನ್ನು ಕತ್ತಲಿನಲ್ಲಿ ಇಡುತ್ತಿದೆ’ ಎಂದು ಆರೋಪಿಸಿದ್ದಾರೆ.

ರಾಹುಲ್ ಗಾಂಧಿ

ಅಲ್ಲದೆ ‘ಮತಕಳವು ಎಂಬುದು ರಾಷ್ಟ್ರ ವಿರೋಧಿ ಕೃತ್ಯವಾಗಿದೆ’ ಎಂದೂ ಅವರು ದೂರಿದ್ದಾರೆ.

‘ಪ್ರಜೆಗಳನ್ನು ಕತ್ತಲಲ್ಲಿ ಇಡುವಂತೆ ಮಾಡುವ ಮೂಲಕ ಚುನಾವಣಾ ಆಯೋಗವು ಪ್ರಜಾಪ್ರಭುತ್ವದ ಮೇಲೆ ಜನರ ನಂಬಿಕೆ ಕುಸಿಯುವಂತೆ ಮಾಡುತ್ತಿದೆ’ ಎಂದು ಅವರು ‘ಎಕ್ಸ್’ನಲ್ಲಿ ಕಿಡಿಕಾರಿದ್ದಾರೆ.

ಅಮಾನತಿಗೆ ಆಗ್ರಹ: ‘ಬೆರಳಿಗೆ ಹಚ್ಚಿದ ಶಾಯಿಯನ್ನು ಸುಲಭವಾಗಿ ಅಳಿಸಬಹುದು ಎಂಬುದು ಆಘಾತಕಾರಿ ವಿಷಯ. ರಾಜ್ಯ ಚುನಾವಣಾ ಆಯುಕ್ತರು ಆಡಳಿತಾರೂಢ ಬಿಜೆಪಿ ನೇತೃತ್ವದ ಮೈತ್ರಿಯ ಪರ ಇದ್ದಾರೆ. ಅವರನ್ನು ಕೂಡಲೇ ಅಮಾನತುಗೊಳಿಸಬೇಕು’ ಎಂದು ಶಿವಸೇನಾ (ಯುಬಿಟಿ) ಮುಖ್ಯಸ್ಥ ಉದ್ಧವ್ ಠಾಕ್ರೆ ಆಗ್ರಹಿಸಿದ್ದಾರೆ.

ರಾಹುಲ್ ‘ಖಾಂದಾನಿ ಚೋರ್’: ಬಿಜೆಪಿ

ನವದೆಹಲಿ (ಪಿಟಿಐ): ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರ ಆರೋಪಕ್ಕೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿರುವ ಬಿಜೆಪಿ, ರಾಹುಲ್ ಅವರನ್ನು ‘ಖಾಂದಾನಿ ಚೋರ್’ (ವಂಶಪಾರಂಪರ್ಯ ಕಳ್ಳ) ಎಂದು ಜರಿದಿದೆ.

‘ರಾಹುಲ್ ಅವರು ಮಹಾರಾಷ್ಟ್ರದಲ್ಲಿ ಮತಎಣಿಕೆ ಪ್ರಕ್ರಿಯೆ ಚಾಲ್ತಿಯಿದ್ದಾಗಲೇ ಅದನ್ನು ಅಪಖ್ಯಾತಿಗೊಳಿಸುವ ಮೂಲಕ ಜನರನ್ನು ತಪ್ಪು ದಾರಿಗೆಳೆಯುತ್ತಿದ್ದಾರೆ’ ಎಂದು ಆರೋಪಿಸಿದೆ.

‘ನೆಪ ಹೇಳುವವರು ಮತ್ತೆ ಬಂದಿದ್ದಾರೆ. ಎಣಿಕೆ ಮುಗಿಯುವ ಮೊದಲೇ ಅವರು ಸೋಲನ್ನು ಒಪ್ಪಿಕೊಂಡಿದ್ದಾರೆಯೇ?’ ಎಂದು ಬಿಜೆಪಿ ರಾಷ್ಟ್ರೀಯ ವಕ್ತಾರ ಶೆಹಜಾದ್ ಪೂನವಾಲಾ ಅವರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

‘ಚುನಾವಣಾ ವ್ಯವಸ್ಥೆಯನ್ನು ಅಪಖ್ಯಾತಿಗೊಳಿಸುವ ಜತೆಗೆ ತಪ್ಪು ಮಾಹಿತಿ ಹರಡುವ ಕೆಲಸವನ್ನು ರಾಹುಲ್ ಮತ್ತೆ ಮಾಡುತ್ತಿದ್ದಾರೆ. ಈಗ ಠಾಕ್ರೆಗಳ ಹೇಳಿಕೆ ಪುನರುಚ್ಚರಿಸುತ್ತಿದ್ದಾರೆ’ ಎಂದರು.

ಠಾಕ್ರೆ ಭದ್ರಕೋಟೆ ಭೇದಿಸಿದ ಬಿಜೆಪಿ

ಒಂದನೇ ಪುಟದಿಂದ...

ಎನ್‌ಸಿಪಿಯ ಭದ್ರಕೋಟೆ ಎಂದೇ ಕರೆಯಲಾಗುತ್ತಿದ್ದ ಪುಣೆಯಲ್ಲಿ ಕೂಡ ಬಿಜೆಪಿ ಭರ್ಜರಿ ಜಯ ಸಾಧಿಸಿದೆ. ಚುನಾವಣೆಗೂ ಮುನ್ನ ಎನ್‌ಸಿಪಿಯ ಎರಡೂ ಬಣಗಳು (ಅಜಿತ್ ಪವಾರ್ ಹಾಗೂ ಶರದ್ ಪವಾರ್ ಬಣ) ಮೈತ್ರಿ ಮಾಡಿಕೊಂಡಿದ್ದವು. ಆ ಮೈತ್ರಿಯನ್ನೂ ಮಣಿಸುವ ಮೂಲಕ ಕೇಸರಿ ಪಕ್ಷ ವಿಜಯದ ನಗೆ ಬೀರಿದೆ.

ಬಿಎಂಸಿ: ಬಿಎಂಸಿ ಚುನಾವಣೆಗಾಗಿ ಎರಡು ದಶಕಗಳ ವೈಮನಸ್ಸು ಮರೆತು ಶಿವಸೇನಾ (ಯುಬಿಟಿ) ನಾಯಕ ಉದ್ಧವ್ ಠಾಕ್ರೆ ಹಾಗೂ ಎಂಎನ್‌ಎಸ್‌ನ ರಾಜ್ ಠಾಕ್ರೆ ಒಂದಾಗಿದ್ದರು. ಆದರೂ, ಅವರ ಒಗ್ಗಟ್ಟು ನಿರೀಕ್ಷಿತ ಫಲ ನೀಡಲಿಲ್ಲ.

ಮುಂಬೈ ರಾಜಕಾರಣವು ಸಾಂಪ್ರದಾಯಿಕವಾದ ‘ಮರಾಠಿ ಅಸ್ಮಿತೆ’ ಆಧರಿಸಿದ್ದು ಎಂಬ ಸಂಕಥನದಿಂದ, ಬಿಜೆಪಿ ಪ್ರತಿಪಾದಿಸುವ ‘ಅಭಿವೃದ್ಧಿ ಮತ್ತು ನಗರ ಮೂಲಸೌಕರ್ಯ’ ಘೋಷಣೆಯತ್ತ ವಾಲಿದೆ ಎಂಬುದನ್ನು ಆ ಪಕ್ಷಕ್ಕೆ ದೊರೆತ ಅಭೂತಪೂರ್ವ ಗೆಲುವು ಸಾರುತ್ತದೆ ಎಂದು ವಿಶ್ಲೇಷಿಸಲಾಗುತ್ತಿದೆ.

ಪುಣೆ ಹಾಗೂ ಪಿಸಿಎಂಸಿ: ‘ಹೈವೋಲ್ಟೇಜ್’ ಹಣಾಹಣಿಯಿಂದಾಗಿ ಪುಣೆ ಮಹಾನಗರ ಪಾಲಿಕೆ ಹಾಗೂ ಪಿಂಪ್ರಿ-ಚಿಂಚವಾಡ್ ಮಹಾನಗರ ಪಾಲಿಕೆ(ಪಿಸಿಎಂಸಿ) ಕೂಡ ಗಮನ ಸೆಳೆದಿದ್ದವು.

ಈ ಪಾಲಿಕೆಗಳು ಎನ್‌ಸಿಪಿಯ ಭದ್ರಕೋಟೆಗಳಾಗಿದ್ದವು. ಇಲ್ಲಿ ಕೂಡ, ಎನ್‌ಸಿಪಿಯ ಅಜಿತ್ ಪವಾರ್ ಹಾಗೂ ಶರದ್ ಪವಾರ್ ಬಣಗಳು ಒಂದಾಗಿ ಚುನಾವಣೆ ಎದುರಿಸಿದ್ದವು. ಈ ಎರಡೂ ಪಾಲಿಕೆಗಳಲ್ಲಿ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರ ‘ತಂತ್ರಗಾರಿಕೆ’ ಫಲ ನೀಡಿದ್ದು, ಮಹಾಯುತಿ ಜಯಭೇರಿ ಬಾರಿಸಿದೆ. ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಹಾಗೂ ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರ ತವರು, ನಾಗ್ಪುರ ಮಹಾನಗರ ಪಾಲಿಕೆಯಲ್ಲಿ ಕೂಡ ಬಿಜೆಪಿ ಉತ್ತಮ ಸಾಧನೆ ಮಾಡಿದೆ. ದೊಡ್ಡ ಪ್ರಚಾರದ ಹೊರತಾಗಿಯೂ ಕಾಂಗ್ರೆಸ್ ಪಕ್ಷ ಇಲ್ಲಿ ಹೆಚ್ಚು ಸೀಟುಗಳನ್ನು ಗೆಲ್ಲಲು ವಿಫಲವಾಗಿದೆ.

ಭಿವಂಡಿ, ಕೊಲ್ಹಾಪುರ ಹಾಗೂ ಚಂದ್ರಾಪುರ ಪಾಲಿಕೆಗಳಲ್ಲಿ ಕಾಂಗ್ರೆಸ್ ಹಾಗೂ ಮಾಲೇಗಾಂವ್‌ನಲ್ಲಿ ಎಐಎಂಐಎಂ ಮುನ್ನಡೆ ಸಾಧಿಸಿದೆ.

ಪ್ರಕಾಶ್ ಅಂಬೇಡ್ಕರ್ ನೇತೃತ್ವದ ವಂಚಿತ ಬಹುಜನ ಅಘಾಡಿ (ಬಿವಿಎ) ಅಭ್ಯರ್ಥಿಗಳು ನಾಂದೇಡ, ಲಾತೂರ್ ಹಾಗೂ ಅಕೋಲಾದಲ್ಲಿ ಗೆಲುವು ಸಾಧಿಸಿದ್ದಾರೆ. ಈ ಮೂಲಕ, ರಾಜ್ಯದ ಮರಾಠವಾಡ ಮತ್ತು ವಿದರ್ಭ ಭಾಗದಲ್ಲಿ ತನಗಿರುವ ಶಕ್ತಿಯ ಪ್ರದರ್ಶನವನ್ನು ಬಿವಿಎ ಮಾಡಿದೆ.

ಬಿಎಂಸಿ ಸೇರಿ ಮಹಾರಾಷ್ಟ್ರದ 29 ನಗರ ಪಾಲಿಕೆಗಳಿಗೆ ಜನವರಿ 15ರಂದು ಚುನಾವಣೆ ನಡೆದಿತ್ತು. ಈ ಪೈಕಿ 9 ಪಾಲಿಕೆಗಳು ಮುಂಬೈ ಮೆಟ್ರೊಪಾಲಿಟನ್ ಪ್ರದೇಶ (ಎಂಎಂಆರ್) ವ್ಯಾಪ್ತಿಯ-ಲ್ಲಿಯೇ ಇವೆ. ಇವುಗಳಲ್ಲಿ ಬಹುತೇಕ ಪಾಲಿಕೆಗಳ ಅವಧಿಯು 2020ರಿಂದ 2023ರ ನಡುವೆಯೇ ಅಂತ್ಯಗೊಂಡಿತ್ತು.

ಭಿನ್ನಮತಕ್ಕೆ ಬೆಲೆ ತೆತ್ತ ಎಂವಿಎ

ಮುಂಬೈ(ಪಿಟಿಐ): ಬಹುಕೋನ ಸ್ಪರ್ಧೆ ಹಾಗೂ ವಿಪಕ್ಷಗಳ ಮೈತ್ರಿಕೂಟ ಮಹಾ ವಿಕಾಸ ಅಘಾಡಿ(ಎಂವಿಎ)ಯ ಅಂಗಪಕ್ಷಗಳಲ್ಲಿನ ಭಿನ್ನಮತ ಹಾಗೂ ಪರಿಣಾಮಕಾರಿ ಯೋಜನೆ ಇಲ್ಲದಿರುವುದೇ ಬೃಹನ್ ಮುಂಬೈ ಮಹಾನಗರ ಪಾಲಿಕೆ(ಬಿಎಂಸಿ) ಚುನಾವಣೆಯಲ್ಲಿ ವಿರೋಧ ಪಕ್ಷಗಳ ಕಳಪೆ ಸಾಧನೆಗೆ ಕಾರಣ ಎನ್ನಲಾಗುತ್ತಿದೆ. ಎಂವಿಎ ಅಂಗಪಕ್ಷಗಳಾದ ಶಿವಸೇನಾ(ಯುಬಿಟಿ) ಹಾಗೂ ಕಾಂಗ್ರೆಸ್ ಪ್ರತ್ಯೇಕವಾಗಿ ಸ್ಪರ್ಧಿಸಿದ್ದವು. ಹೆಚ್ಚು ಸ್ಥಾನಗಳಲ್ಲಿ ಗೆಲ್ಲುವಲ್ಲಿಯೂ ವಿಫಲವಾದವು. ಈ ಫಲಿತಾಂಶವು ಶಿವಸೇನಾ(ಯುಬಿಟಿ) ಹಾಗೂ ಕಾಂಗ್ರೆಸ್‌ಗಳು ಸಂಘಟನಾತ್ಮಕವಾಗಿ ಎಷ್ಟು ದುರ್ಬಲವಾಗಿವೆ ಎಂಬುದನ್ನು ಬಹಿರಂಗಪಡಿಸಿದೆ.

ಲಾತೂರ್ ಪಾಲಿಕೆ ಕಾಂಗ್ರೆಸ್ ವಶಕ್ಕೆ

ಲಾತೂರ್: ಲಾತೂರ್ ಮಹಾ ನಗರ ಪಾಲಿಕೆಯಲ್ಲಿ ಕಾಂಗ್ರೆಸ್ ಜಯಭೇರಿ ಬಾರಿಸಿದೆ. ಒಟ್ಟು 70 ಸ್ಥಾನಗಳಲ್ಲಿ 43ರಲ್ಲಿ ಗೆಲುವು ಸಾಧಿಸುವ ಮೂಲಕ ಕಾಂಗ್ರೆಸ್ ಸ್ಪಷ್ಟ ಬಹುಮತ ಪಡೆದಿದೆ. ಬಿಜೆಪಿ 22 ಸ್ಥಾನಗಳನ್ನು, ವಂಚಿತ್ ಬಹುಜನ ಅಘಾಡಿ 4 ಸ್ಥಾನ ಹಾಗೂ ನ್ಯಾಷನಲಿಸ್ಟ್ ಕಾಂಗ್ರೆಸ್ ಪಾರ್ಟಿ 1 ಸ್ಥಾನ ಗೆದ್ದುಕೊಂಡಿದೆ.

‘ಟೈಗರ್ ಜಿಂದಾ ಹೈ’

ಪ್ರಜಾವಾಣಿ ವಾರ್ತೆ

ಮುಂಬೈ: ತಮ್ಮ ಸೋದರ ಸಂಬಂಧಿ ರಾಜ್ ಠಾಕ್ರೆ ಅವರ ಜೊತೆ ಕೈಜೋಡಿಸಿ ಚುನಾವಣೆ ಎದುರಿಸಿರುವ ಉದ್ಧವ್ ಠಾಕ್ರೆ, ತಾವಿಬ್ಬರೂ ಬಾಳಾಸಾಹೇಬ ಠಾಕ್ರೆ ಅವರ ನಿಜವಾದ ಉತ್ತರಾಧಿಕಾರಿ-ಗಳು ಎಂಬ ಸಂದೇಶ ರವಾನಿಸಿದ್ದಾರೆ.

ಬಾಳಾಸಾಹೇಬ ಠಾಕ್ರೆ ಅವರ 100ನೇ ಜಯಂತಿ ಇದೇ 23ಕ್ಕೆ ಇದೆ. ಪಕ್ಷದ ವಜ್ರ ಮಹೋತ್ಸವಕ್ಕೆ ಇನ್ನೂ 6 ತಿಂಗಳು ಬಾಕಿ ಇವೆ. ಈ ಸಂದರ್ಭದಲ್ಲಿ ಬಿಎಂಸಿ ಚುನಾವಣೆಯಲ್ಲಿ ಪಕ್ಷಕ್ಕೆ ತೀವ್ರ ಹಿನ್ನಡೆಯಾಗಿದೆ.

ಕಳೆದ ಮೂರು ವರ್ಷಗಳಿಂದಲೂ, ತಾವೇ ಬಾಳಾಸಾಹೇಬರ ಪರಂಪರೆ ಮುಂದುವರಿಸಿಕೊಂಡು ಹೋಗುವವರು ಎಂದು ಬಿಜೆಪಿ ನಾಯಕರು ಹಾಗೂ ಏಕನಾಥ ಶಿಂದೆ ಹೇಳುತ್ತಾ ಬಂದಿದ್ದರು. ಕೆಲವೆಡೆ ಪಕ್ಷಕ್ಕೆ ಹಿನ್ನಡೆಯಾಗಿದ್ದರೂ ‘ಟೈಗರ್ ಜಿಂದಾ ಹೈ’ ಎಂಬ ಮಾತನ್ನು ಈ ಫಲಿತಾಂಶ ಉದ್ಧವ್ ಠಾಕ್ರೆ ಪಾಲಿಗೆ ಹೇಳಿದಂತಿದೆ.

ಫಲಿಸಿದ ‘ದೇವು’ ತಂತ್ರಗಾರಿಕೆ

ಪ್ರಜಾವಾಣಿ ವಾರ್ತೆ/ಪಿಟಿಐ

ಮುಂಬೈ: ಮಹಾರಾಷ್ಟ್ರದ 29 ನಗರ ಸ್ಥಳೀಯ ಸಂಸ್ಥೆಗಳ ಪೈಕಿ 20ಕ್ಕೂ ಅಧಿಕ ಪಾಲಿಕೆಗಳಲ್ಲಿ ಬಿಜೆಪಿ ಹಾಗೂ ಶಿವಸೇನಾ(ಶಿಂದೆ) ಮೈತ್ರಿಕೂಟವಾದ ‘ಮಹಾಯುತಿ’ ಗೆಲುವು ಸಾಧಿಸಿದೆ.

ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರ ತಂತ್ರಗಾರಿಕೆ-ಯಿಂದ ಬಿಜೆಪಿ ಅಭೂತಪೂರ್ವ ಜಯ ಸಾಧಿಸಿದೆ. ಈ ಮೂಲಕ, ತಾವು ರಾಜ್ಯ ರಾಜಕಾರಣದಲ್ಲಿ ಪ್ರಶ್ನಾತೀತ ನಾಯಕ ಎಂಬುದನ್ನು ಅವರು ಮತ್ತೊಮ್ಮೆ ಸಾಬೀತುಪಡಿಸಿದ್ದಾರೆ.

ಪಕ್ಷದ ವಲಯದಲ್ಲಿ ‘ಧುರಂದರ್ ದೇವೇಂದ್ರಜಿ’, ‘ದೇವ ಭಾವು’ ಎಂದು ಕರೆಯಲಾಗುವ ಫಡಣವೀಸ್, ಬಿಜೆಪಿಯ ‘ಟ್ರಬಲ್ ಶೂಟರ್’ ಎಂದೂ ಖ್ಯಾತರು. ಚುನಾವಣೆ ಸಮೀಪಿಸುತ್ತಿದ್ದಾಗ, ಶರದ್ ಪವಾರ್ ಜೊತೆ ಕೈಜೋಡಿಸಿದ್ದ ಡಿಸಿಎಂ ಅಜಿತ್ ಪವಾರ್ ಅವರಿಗೂ ಫಡಣವೀಸ್ ಈ ಫಲಿತಾಂಶದ ಮೂಲಕ ತಕ್ಕ ಉತ್ತರ ನೀಡಿದ್ದಾರೆ ಎಂದು ವಿಶ್ಲೇಷಿಸಲಾಗುತ್ತಿದೆ.

ಗಮನ ಸೆಳೆದ ಎಐಎಂಐಎಂ: ಸಂಸದ ಅಸಾದುದ್ದೀನ್ ಒವೈಸಿ ನೇತೃತ್ವದ ಎಐಎಂಐಎಂ ಪಕ್ಷವು 100ಕ್ಕೂ ಹೆಚ್ಚು ಸ್ಥಾನಗಳಲ್ಲಿ ಮುನ್ನಡೆ ಸಾಧಿಸುವ ಮೂಲಕ ಗಮನಾರ್ಹ ಸಾಧನೆ ಮಾಡಿದೆ. ಛತ್ರಪತಿ ಸಂಭಾಜಿನಗರ ಪಾಲಿಕೆಯಲ್ಲಿ 33 ಸ್ಥಾನಗಳನ್ನು ಗೆದ್ದಿರುವ ಪಕ್ಷವು, ನಾಸಿಕ್ ಜಿಲ್ಲೆಯ ಮಾಲೆಗಾಂವ್ ಪಾಲಿಕೆಯಲ್ಲಿ 20 ಸ್ಥಾನಗಳನ್ನು ಗೆದ್ದು ಬೀಗಿದೆ.

ಕಂದಾಯ ಇಲಾಖೆ

ಅಟಲ್‌ಜೀ ಜನಸ್ನೇಹಿ ನಿರ್ದೇಶನಾಲಯ,

ಎಸ್.ಎಸ್.ಎಲ್.ಆರ್ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು–560001.

ಸಂ: ಎಜೆಎಸ್‌ಕೆ/ಟೆಂಡರ್/ಆಡಳಿತ–2/2025/ಇ–1676226 ದಿನಾಂಕ: 16.01.2026

ಇ–ಟೆಂಡರ್ ಅಧಿಸೂಚನೆ

ಅಟಲ್‌ಜೀ ಜನಸ್ನೇಹಿ ನಿರ್ದೇಶನಾಲಯಕ್ಕೆ ಹೊರಗುತ್ತಿಗೆ ಆಧಾರದ ಮೇಲೆ ಜಿಲ್ಲಾ ಸಮಾಲೋಚಕರ ಸೇವೆಯನ್ನು ಪಡೆಯಲು ಆಸಕ್ತಿ ಇರುವ ಸಂಸ್ಥೆಗಳಿಂದ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ದಾಖಲಾತಿಗಳು ಹಾಗೂ ಇದಕ್ಕೆ ಸಂಬಂಧಿಸಿದ ಇತರೆ ಮಾಹಿತಿಯನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ನಲ್ಲಿ ದಿನಾಂಕ: 17/01/2026 ರಿಂದ ಪಡೆಯಬಹುದಾಗಿದೆ.

ಸಹಿ/– ಅಪರ ನಿರ್ದೇಶಕರು,
ಅಟಲ್‌ಜೀ ಜನಸ್ನೇಹಿ ನಿರ್ದೇಶನಾಲಯ, ಬೆಂಗಳೂರು

DIPR/CP/SPAN/ 5063/2025-26

ಪುರಸಭೆ ಕಾರ್ಯಾಲಯ ಚಿಕ್ಕೋಡಿ

ಕ್ರ.ಸಂ:ಪುಸಚಿ:ಲೋಇ:ಸಿಎಮ್ಐಡಿಪಿ:2025–26 ದಿನಾಂಕ:–14.01.2026.

(“ಕೆಪಿಪಿ ಪೋರ್ಟಲ್”) ಟೆಂಡರ ಪ್ರಕಟಣೆ
(Notice inviting tender through KPP Portal)

ಚಿಕ್ಕೋಡಿ ಪುರಸಭೆಗೆ ಮಾನ್ಯ ಮುಖ್ಯಮಂತ್ರಿಯವರ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆಯಡಿ (ಸಿಎಮ್ಐಡಿಪಿ) ಅನುದಾನದಲ್ಲಿ ಅಭಿವೃಧ್ಧಿ ಕಾಮಗಾರಿಗಳನ್ನು ಕೈಕೋಳ್ಳುವ ಸಲುವಾಗಿ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಲ್ಪಟ್ಟ ಅರ್ಹ ದರ್ಜೆ ಗುತ್ತಿಗೆದಾರರಿಂದ ಐಟಂವಾರು ಶೀಲ ಬಂದ ಟೆಂಡರಗಳನ್ನು KW-2 & KW-3 ನಮೂನೆಯಲ್ಲಿ ಆಹ್ವಾನಿಸಲಾಗಿದೆ. ಒಟ್ಟು ಕಾಮಗಾರಿಗಳ ಸಂಖ್ಯೆ 9, ವಿವರಗಳು 1)ಇಂಡೆಂಟ್ ಸಂಖ್ಯೆ:54005 ರೂ. 56.00 ಲಕ್ಷ (CAT-I), 2)ಇಂಡೆಂಟ್ ಸಂಖ್ಯೆ :54034 ರೂ. 57.00 ಲಕ್ಷ (SC), 3) ಇಂಡೆಂಟ್ ಸಂಖ್ಯೆ:54040 ರೂ. 67.00 ಲಕ್ಷ (CAT-II(A), 4) ಇಂಡೆಂಟ್ ಸಂಖ್ಯೆ: 54048 ರೂ.64.00 ಲಕ್ಷ (SC), 5) ಇಂಡೆಂಟ್ ಸಂಖ್ಯೆ:54049 ರೂ. 54.00 ಲಕ್ಷ (Others), 6) ಇಂಡೆಂಟ್ ಸಂಖ್ಯೆ:54051 ರೂ. 50.00 ಲಕ್ಷ (Others), 7) ಇಂಡೆಂಟ್ ಸಂಖ್ಯೆ :54052 ರೂ. 85.30 ಲಕ್ಷ (ST), 8) ಇಂಡೆಂಟ್ ಸಂಖ್ಯೆ:54054 ರೂ. 63.00 ಲಕ್ಷ (Others), 9) ಇಂಡೆಂಟ್ ಸಂಖ್ಯೆ:54055 ರೂ. 21.00 ಲಕ್ಷ (Others), ಈ ಮೇಲೆ ತಿಳಿಸಿದ ಕಾಮಗಾರಿಗಳ ಕಾಲಮಿತಿ 3 ತಿಂಗಳು.

ಅ.ನಂ:1:ವಿವರ:ಖಾಲಿ ಟೆಂಡರಗಳನ್ನು On line ಮುಖಾಂತರ ಡೌನಲೋಡ ಮಾಡುವ ದಿನಾಂಕ:14.01.2026, ಅ.ನಂ:2:ವಿವರ:ಭರ್ತಿ ಮಾಡಿದ ಟೆಂಡರಗಳನ್ನು On line ಮುಖಾಂತರ ಸ್ವೀಕರಿಸುವ ಕೊನೆಯ ದಿನಾಂಕ:29.01.2026 @ 4.00 PM, ಅ.ನಂ:3:ವಿವರ:Technical Bidನ್ನು ತೆರೆಯುವ ದಿನಾಂಕ:31.01.2026 @ 4.00 PM, ಅ.ನಂ:4: ವಿವರ:Financial Bidನ್ನು ತೆರೆಯುವ ದಿನಾಂಕ:02.02.2026 @ 11.00 AM, ಅ.ನಂ:5:ವಿವರ:Number of days to extend: 2 ದಿನಗಳು

ಮೇಲ್ಕಾಣಿಸಿದ ಕಾಮಗಾರಿಗಳ ಎಲ್ಲಾ ವಿವರಗಳಿಗಾಗಿ ಈ–ಪ್ರೋಕ್ಯೂರಮೆಂಟ ವೇಬ ಸ್ಯೆಟ www.eproc.karnataka.gov.in ನಲ್ಲಿ ಅಥವಾ ಪುರಸಭೆ ವೇಬ ಸ್ಯೆಟ www.chikkoditown.mrc.gov.in ರಿಂದ ಮಾಹಿತಿ ಪಡೆಯಬಹುದಾಗಿದೆ.

ಸಹಿ/–ಆಡಳಿತಾಧಿಕಾರಿ, ಪುರಸಭೆ, ಚಿಕ್ಕೋಡಿ
ಸಹಿ/–ಮುಖ್ಯಾಧಿಕಾರಿ, ಪುರಸಭೆ, ಚಿಕ್ಕೋಡಿ

DIPR/BGM/RO-NO-1644/KSMCA/2025-26

ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ,

ಪೋಡಿಯಂ ಬ್ಲಾಕ್, ವಿ.ವಿ.ಕೇಂದ್ರ, ನೆಲಮಹಡಿ, ಡಾ: ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು–560001 ದೂರವಾಣಿ ಸಂಖ್ಯೆ: 080–22866066, 080–22866046
ಇ–ಮೇಲ್ ವಿಳಾಸ: dirdwdscka@gmail.com, dir-dwdsc-ka@nic.in

ಸಂಖ್ಯೆ: DEDASC/2025-26/IND0120 Dated: 16.01.2026

ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ವೇದಿಕೆ ಮುಖಾಂತರ)

2025–26ನೇ ಸಾಲಿನಲ್ಲಿ ತೀವ್ರತರನಾದ ದೈಹಿಕ ವಿಕಲಚೇತನರಿಗೆ ನೀಡಲಾಗುವ ರೆಟ್ರೋಫಿಟೆಡ್ ಯಂತ್ರಚಾಲಿತ ದ್ವಿಚಕ್ರವಾಹನ ಖರೀದಿಸಿ ವಿತರಿಸಲು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಅಹ್ವಾನಿಸಲಾಗಿದೆ (ಅಂದಾಜು ಬಿಡ್ ಮೊತ್ತ ರೂ.433.00 ಲಕ್ಷಗಳು). ಬಿಡ್‌ಗಳನ್ನು ವಾಹನಗಳ/ಸಲಕರಣೆಗಳ ಮೂಲ ತಯಾರಕರು ಅಥವಾ ಅಧಿಕೃತ ಡೀಲರ್‌ಗಳಿಂದ ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ 12.02.2026ರಂದು ಸಾಯಂಕಾಲ 05.00ಗಂಟೆಯವರೆಗೆ, ಪ್ರಿ–ಬಿಡ್ ದಿನಾಂಕ: 03.02.2026ರಂದು ಅಪರಾಹ್ನ 03.30ಗಂಟೆ ಹಾಗೂ ದಿನಾಂಕ: 13.02.2026ರಂದು ಸಾಯಂಕಾಲ 05.30 ಗಂಟೆಗೆ, ತಾಂತ್ರಿಕ ಬಿಡ್ ಮತ್ತು ದಿನಾಂಕ:16.02.2026 ರಂದು ಅಪರಾಹ್ನ 04.30 ಗಂಟೆಗೆ ಆರ್ಥಿಕ ಬಿಡ್‌ನ್ನು ತೆರೆಯಲಾಗುವುದು.

ಯಾವುದೇ ಕಾರಣ ನೀಡದೇ ಎಲ್ಲಾ ಬಿಡ್‌ಗಳನ್ನು ಸ್ವೀಕರಿಸುವ, ತಿರಸ್ಕರಿಸುವ, ಮಾರ್ಪಡಿಸುವ ಮತ್ತು ಮರು ಟೆಂಡರ್ ಕರೆಯುವ ಹಕ್ಕನ್ನು ಇಲಾಖೆಯು ಕಾಯ್ದಿರಿಸಿಕೊಂಡಿದೆ. ವಿವರಗಳನ್ನು www.kppp.karnataka.gov.in ಜಾಲ ತಾಣದಿಂದ ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಪೋಡಿಯಂ ಬ್ಲಾಕ್, ವಿ.ವಿ.ಗೋಪುರ, ಡಾ॥ ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು–560001 ಇವರನ್ನು ದೂರವಾಣಿ ಸಂಖ್ಯೆ:080–22860907, ಸಂಪರ್ಕಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಇಲಾಖೆಯ ಜಾಲತಾಣ ವಿಳಾಸ : www.dwdsc.karnataka.gov.in ನ್ನು ವೀಕ್ಷಿಸಬಹುದಾಗಿದೆ.

ಸಹಿ/–
ನಿರ್ದೇಶಕರು,
ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು.

DIPR/CP/5061/Zen/2025-26

ಕರ್ನಾಟಕ ಸರ್ಕಾರ

ಕರ್ನಾಟಕ ಪರೀಕ್ಷಾ ಪ್ರಾಧಿಕಾರ

ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560 012. ದೂರವಾಣಿ: 080–23 460 460 (5 ಲೈನ್‌ಗಳು)
ವೆಬ್‌ಸೈಟ್: http://cetonline.karnataka.gov.in/kea/ ಇ–ಮೇಲ್:keauthority-ka@nic.in

ಸಂಖ್ಯೆ: ಇಡಿ/ಕೆಇಎ/ಆಡಳಿತ/ಸಿ.ಆರ್.04/2026–27 ದಿನಾಂಕ: 16–01–2026

ಅಧಿಸೂಚನೆ

2026–27 ನೇ ಸಾಲಿಗೆ ಕರ್ನಾಟಕದ ರಾಜ್ಯದಲ್ಲಿನ ವೃತ್ತಿಪರ ಕೋರ್ಸುಗಳಿಗೆ ಪ್ರವೇಶ

ವೃತ್ತಿಪರ ಶಿಕ್ಷಣ ಸಂಸ್ಥೆಗಳಲ್ಲಿನ ಸರ್ಕಾರಿ ಸೀಟುಗಳ ಪ್ರವೇಶಕ್ಕಾಗಿ ಕರ್ನಾಟಕ ಅಭ್ಯರ್ಥಿಗಳ ಆಯ್ಕೆ, 2006 ನಿಯಮಗಳು (ತಿದ್ದುಪಡಿಗಳು) ನಿಯಮ 3, ನಿಯಮ 6 (3) ಮತ್ತು ನಿಯಮ (7) ರ ಅನ್ವಯ ಹಾಗು ಸರ್ಕಾರದ ಆದೇಶದ ಅನುಸಾರವಾಗಿ, ಕರ್ನಾಟಕ ಪರೀಕ್ಷಾ ಪ್ರಾಧಿಕಾರವು, ಕರ್ನಾಟಕ **ಸಾಮಾನ್ಯ ಪ್ರವೇಶ ಪರೀಕ್ಷೆ–2026ಕ್ಕೆ,** ಅರ್ಹತೆ / ಮೆರಿಟ್‌ಅನ್ನು ಆಧರಿಸಿ, ಕರ್ನಾಟಕ ರಾಜ್ಯದಲ್ಲಿರುವ ಸರ್ಕಾರಿ / ವಿಶ್ವವಿದ್ಯಾಲಯ / ಖಾಸಗಿ ಅನುದಾನಿತ / ಖಾಸಗಿ ಅನುದಾನರಹಿತ ವೃತ್ತಿ ಶಿಕ್ಷಣ ಸಂಸ್ಥೆಗಳಲ್ಲಿರುವ ಇಂಜಿನಿಯರಿಂಗ್, ಯೋಗ ಮತ್ತು ನ್ಯಾಚುರೋಪತಿ, ಪಶು ವೈದ್ಯಕೀಯ ಮತ್ತು ಪಶುಸಂಗೋಪನೆ (ಬಿ.ವಿ.ಎಸ್.ಸಿ & ಎ ಹೆಚ್), ಕೃಷಿ ವಿಜ್ಞಾನ ಕೋರ್ಸುಗಳು ಅಂದರೆ – ಬಿ.ಎಸ್‌ಸಿ. (ಆನರ್ಸ್) ಕೃಷಿ, ಬಿ.ಎಸ್‌ಸಿ. (ಆನರ್ಸ್) ಅರಣ್ಯ ವಿಜ್ಞಾನ, ಬಿ.ಎಸ್‌ಸಿ. (ಆನರ್ಸ್) ರೇಷ್ಮೆಕೃಷಿ, ಬಿ.ಎಸ್‌ಸಿ. (ಆನರ್ಸ್) ತೋಟಗಾರಿಕೆ, ಬಿ.ಎಸ್‌ಸಿ. (ಆನರ್ಸ್) ಸಮುದಾಯ ವಿಜ್ಞಾನ, ಬಿ.ಟೆಕ್. (ಕೃಷಿ ಇಂಜಿನಿಯರಿಂಗ್), ಬಿ.ಟೆಕ್. (ಬಯೋಟೆಕ್ನಾಲಜಿ), ಬಿ.ಟೆಕ್. (ಹೈನುಗಾರಿಕೆ ತಂತ್ರಜ್ಞಾನ), ಬಿ.ಎಫ್.ಎಸ್‌ಸಿ. (ಮೀನುಗಾರಿಕೆ), ಬಿ.ಟೆಕ್. (ಆಹಾರ ತಂತ್ರಜ್ಞಾನ), ಬಿ.ಎಸ್‌ಸಿ. (ಆನರ್ಸ್) ಕೃಷಿ ವ್ಯವಹಾರ ನಿರ್ವಹಣೆ, ಬಿ.ಎಸ್‌ಸಿ. (ನರ್ಸಿಂಗ್) ಬಿ–ಫಾರ್ಮ, ಎರಡನೇ ವರ್ಷದ ಬಿ.ಫಾರ್ಮ, ಫಾರ್ಮಾ–ಡಿ ಕೋರ್ಸುಗಳಲ್ಲಿ ಲಭ್ಯವಿರುವ ಸರ್ಕಾರದ ಪಾಲಿನ ಸೀಟುಗಳಿಗೆ ಸಂಬಂಧಿಸಿದಂತೆ, ಪೂರ್ಣಾವಧಿ ಕೋರ್ಸುಗಳ ಮೊದಲನೇ ವರ್ಷಕ್ಕೆ ಅಥವಾ ಮೊದಲನೇ ಸೆಮಿಸ್ಟರ್‌ಗೆ ಸರ್ಕಾರವು ನೀಡುವ ಸೀಟ್ ಮ್ಯಾಟ್ರಿಕ್ಸ್ ನಂತೆ 2026–27ನೇ ಸಾಲಿಗೆ ಅನ್ವಯಿಸುವಂತೆ ಪ್ರವೇಶ ನೀಡುವುದಕ್ಕೆ ಅರ್ಹ ಕರ್ನಾಟಕದ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

1. ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮುಖಾಂತರ ಈ ಮೇಲಿನ ವೃತ್ತಿಪರ ಕೋರ್ಸುಗಳಿಗೆ ಪ್ರವೇಶ ಪಡೆಯುವುದಕ್ಕೆ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ನೊಂದಾಯಿಸಿಕೊಂಡು, ಆನ್‌ಲೈನ್ ಅರ್ಜಿ ಸಲ್ಲಿಸಿ, ಅರ್ಜಿ ಶುಲ್ಕ ಪಾವತಿಸಿ, ಪ್ರವೇಶ ಪತ್ರ ಡೌನ್‌ಲೋಡ್ ಮಾಡಿಕೊಂಡು ನಂತರ ಕೆಇಎ ನಡೆಸುವ **ಸಾಮಾನ್ಯ ಪ್ರವೇಶ ಪರೀಕ್ಷೆ 2026ಕ್ಕೆ** ಹಾಜರಾಗಬೇಕಿರುತ್ತದೆ. ಆನ್‌ಲೈನ್ ಅರ್ಜಿ ಸಲ್ಲಿಸುವಿಕೆಯು Application-Cum-Verification Module ಆಗಿರುವುದರಿಂದ ಅಭ್ಯರ್ಥಿಗಳು ಎಲ್ಲಾ ವಿವರಗಳನ್ನು ಕಡ್ಡಾಯವಾಗಿ ಎಚ್ಚರಿಕೆಯಿಂದ ಭರ್ತಿ ಮಾಡಲು ಮತ್ತು ಅಗತ್ಯವಿರುವ ಆರ್‌ಡಿ ಸಂಖ್ಯೆಗಳನ್ನು ದಾಖಲಿಸಲು ಸೂಚಿಸಲಾಗಿದೆ. ಅರ್ಜಿಯಲ್ಲಿ ಅಭ್ಯರ್ಥಿಯು ಕ್ಲೇಮ್ ಮಾಡಿರುವ ವಿವರಗಳನ್ನು (ಕ್ಲೇಮ್ಸ್ ಸರ್ಟಿಫಿಕೇಟ್) ಮುದ್ರಿಸಲಾಗುವುದು.
2. ಅರ್ಹತಾ ಕಂಡಿಕೆ ‘ಎ’ ಎಂದು ನಮೂದಿಸಿ ಸರ್ಕಾರಿ ಸೀಟುಗಳನ್ನು ಪಡೆಯಲು ನಿಗದಿಪಡಿಸಿರುವ ಏಳು ವರ್ಷಗಳ ವ್ಯಾಸಂಗದ ವಿವರಗಳನ್ನು (10ನೇ ತರಗತಿ ಅಥವಾ 2ನೇ ಪಿಯುಸಿ/ 12ನೇ ತರಗತಿ ಒಳಗೊಂಡಂತೆ) ಖಚಿತ ಪಡಿಸಿಕೊಂಡು Claims Certificate ನಲ್ಲಿ “Successfully Verified” ಎಂದು ನಮೂದಿಸಲಾಗುತ್ತದೆ ಮತ್ತು ಸಿಇಟಿ–2026 ರ ಅರ್ಜಿಯನ್ನು ಅಭ್ಯರ್ಥಿಯ ಪೋರ್ಟಲ್ ನಲ್ಲಿ ಮುದ್ರಿಸಿಕೊಳ್ಳಲು ಅವಕಾಶ ನೀಡಲಾಗುತ್ತದೆ. ಅಂತಹ ಅಭ್ಯರ್ಥಿಗಳು ದಾಖಲೆ ಪರಿಶೀಲನೆಗೆ ಯಾವುದೇ ಕಚೇರಿಗೆ / ಕಾಲೇಜಿಗೆ ಹೋಗುವ ಅವಶ್ಯಕತೆ ಇರುವುದಿಲ್ಲ. ಸಿಇಟಿ–2026 ಫಲಿತಾಂಶದ ನಂತರ ವೆರಿಫಿಕೇಶನ್ ಸ್ಲಿಪ್ ಅನ್ನು ಡೌನ್‌ಲೋಡ್ ಮಾಡಿಕೊಳ್ಳಲು ಅವಕಾಶ ನೀಡಲಾಗುವುದು.
3. ಕರ್ನಾಟಕದಲ್ಲಿ ಒಂದರಿಂದ ಹತ್ತನೇ ತರಗತಿಯವರೆಗೆ ಕನ್ನಡ ಮಾಧ್ಯಮ ವ್ಯಾಸಂಗ – ಗ್ರಾಮೀಣ ಪ್ರದೇಶದಲ್ಲಿ ಓದಿರುವ ಮೀಸಲಾತಿ; ಒಂದರಿಂದ ಹನ್ನೆರಡನೇ ತರಗತಿಯವರೆಗೆ ಹತ್ತುವರ್ಷ ಓದಿ ತುಳು, ತಮಿಳು, ತೆಲುಗು, ಕೊಡವ ಭಾಷಾ ಅಲ್ಪ ಸಂಖ್ಯಾತ ಮೀಸಲಾತಿ; ಧಾರ್ಮಿಕ ಅಲ್ಪ ಸಂಖ್ಯಾತ (ಮುಸ್ಲಿಂ / ಕ್ರಿಶ್ಚಿಯನ್) ಮೀಸಲಾತಿ ಕ್ಲೇಮ್ ಮಾಡುವ ಅಭ್ಯರ್ಥಿಗಳಿಗೆ ಅರ್ಜಿ ಸಲ್ಲಿಸಿದ ನಂತರ ಕ್ಲೇಮ್ ಸ್ಲಿಪ್ ಮಾತ್ರ ಡೌನ್‌ಲೋಡ್ ಆಗುತ್ತದೆ. (Claimed Verified OR Claimed not verified OR not Claimed” ಎಂದು Claims Certificate ನಲ್ಲಿ ಮುದ್ರಿತವಾಗುತ್ತದೆ.) ಈ ಹಂತದಲ್ಲಿ ಅರ್ಜಿ ಮುದ್ರಣವಾಗುವುದಿಲ್ಲ. ಇಂತಹ ಅಭ್ಯರ್ಥಿಗಳು ಅವರುಗಳ ಕಾಲೇಜು ಅಥವಾ ಯಾವುದೇ ಸರ್ಕಾರಿ ಕಾಲೇಜಿನಲ್ಲಿ ಎಲ್ಲಾ ದಾಖಲೆಗಳನ್ನು ಸಲ್ಲಿಸಿ ಪರಿಶೀಲನೆ ಮಾಡಿಕೊಳ್ಳಬೇಕು. ಆಯಾ ಕಾಲೇಜಿನಲ್ಲಿ ಪರಿಶೀಲನೆ ಮಾಡಿದ ನಂತರ ಅಭ್ಯರ್ಥಿಗಳ ಪೋರ್ಟಲ್‌ನಲ್ಲಿ ಲಾಗಿನ್ ಮಾಡಿಕೊಂಡು ಅರ್ಜಿ ನಮೂನೆ ಮುದ್ರಿಸಿಕೊಳ್ಳಬಹುದು.
4. ವಿವಿಧ ವೃತ್ತಿಪರ ಕೋರ್ಸುಗಳ ಪ್ರವೇಶಕ್ಕಾಗಿ ಸಿಇಟಿ–2026 ರ ಪರೀಕ್ಷೆಗೆ ಹಾಜರಾಗಬೇಕಾದ ವಿಷಯಗಳ ವಿವರ

ಕ್ರ. ಸಂ.	ಮೊದಲನೇ ವರ್ಷದ ಪ್ರವೇಶ ಕೋರ್ಸುಗಳು	ಸಿಇಟಿ–2026 ರ ಯಾವ ವಿಷಯಗಳಿಗೆ ಹಾಜರಾಗಬೇಕು
i	ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನ	ಭೌತಶಾಸ್ತ್ರ, ರಸಾಯನ ಶಾಸ್ತ್ರ, ಗಣಿತ (PCM)
ii	ಕೃಷಿ ವಿಜ್ಞಾನ ಕೋರ್ಸುಗಳು [ಬಿ.ಎಸ್‌ಸಿ. (ಆನರ್ಸ್) ಕೃಷಿ, ಬಿ.ಎಸ್‌ಸಿ. (ಆನರ್ಸ್) ಅರಣ್ಯ ವಿಜ್ಞಾನ, ಬಿ.ಎಸ್‌ಸಿ. (ಆನರ್ಸ್) ರೇಷ್ಮೆಕೃಷಿ, ಬಿ.ಎಸ್‌ಸಿ. (ಆನರ್ಸ್) ತೋಟಗಾರಿಕೆ, ಬಿ.ಎಸ್‌ಸಿ. (ಆನರ್ಸ್) ಸಮುದಾಯ ವಿಜ್ಞಾನ, ಬಿ.ಟೆಕ್. (ಕೃಷಿ ಇಂಜಿನಿಯರಿಂಗ್), ಬಿ.ಟೆಕ್. (ಬಯೋಟೆಕ್ನಾಲಜಿ), ಬಿ.ಟೆಕ್. (ಹೈನುಗಾರಿಕೆ ತಂತ್ರಜ್ಞಾನ), ಬಿ.ಎಫ್.ಎಸ್‌ಸಿ. (ಮೀನುಗಾರಿಕೆ), ಬಿ.ಟೆಕ್. (ಆಹಾರ ತಂತ್ರಜ್ಞಾನ), ಬಿ.ಎಸ್‌ಸಿ. (ಆನರ್ಸ್) ಕೃಷಿ ವ್ಯವಹಾರ ನಿರ್ವಹಣೆ]	ಭೌತಶಾಸ್ತ್ರ, ರಸಾಯನ ಶಾಸ್ತ್ರ, ಗಣಿತ, ಜೀವಶಾಸ್ತ್ರ (PCMB)
iii	ಪಶು ವೈದ್ಯಕೀಯ ಮತ್ತು ಪಶುಸಂಗೋಪನೆ, ಯೋಗ ಮತ್ತು ನ್ಯಾಚುರೋಪತಿ, ಬಿ.ಎಸ್.ಸಿ (ನರ್ಸಿಂಗ್)	ಭೌತಶಾಸ್ತ್ರ, ರಸಾಯನ ಶಾಸ್ತ್ರ, ಜೀವಶಾಸ್ತ್ರ (PCB)
iv	ಬಿ.ಫಾರ್ಮ, 2ನೇ ವರ್ಷದ ಬಿ–ಫಾರ್ಮ ಮತ್ತು ಫಾರ್ಮಾ–ಡಿ	(PCM or PCB)

5. **ಇತರೆ ಕೋರ್ಸುಗಳಿಗೆ ಅಭ್ಯರ್ಥಿಗಳು ಹಾಜರಾಗಬೇಕಾದ ಪ್ರವೇಶ ಪರೀಕ್ಷೆಗಳು–2026**

i	ವೈದ್ಯಕೀಯ, ದಂತವೈದ್ಯಕೀಯ ಮತ್ತು ಆಯುಷ್ ಕೋರ್ಸುಗಳು	ಯುಜಿನೀಟ್ (UGNEET)	ಅಭ್ಯರ್ಥಿಗಳು ಕೆಇಎ ಮೂಲಕ ಸೀಟು ಹಂಚಿಕೆಯಲ್ಲಿ ಭಾಗವಹಿಸಲು ಸಿಇಟಿ–2026ಕ್ಕೆ ಆನ್‌ಲೈನ್ ಮೂಲಕ ನೊಂದಾಯಿಸಿಕೊಂಡು, ಆನ್‌ಲೈನ್ ಅರ್ಜಿ ಸಲ್ಲಿಸಿ, ಅರ್ಜಿ ಶುಲ್ಕ ಪಾವತಿಸುವುದು ಕಡ್ಡಾಯವಾಗಿರುತ್ತದೆ.
ii	ಆರ್ಕಿಟೆಕ್ಚರ್	ನಾಟಾ (NATA)	

iii	**ಡಿ–ಫಾರ್ಮ, ಬಿಪಿಟಿ, ಬಿಪಿಒ, ಬಿಎಸ್‌ಸಿ ಅಲೈಡ್ ಹೆಲ್ತ್ ಸೈನ್ಸ್ ಕೋರ್ಸುಗಳ ಪ್ರವೇಶಾತಿಗೆ ಅರ್ಹತೆ ಪಿಯು ಅಂಕಗಳ ಆಧಾರದ ಮೇಲೆ.**	**ಯಾವುದೇ ಪ್ರವೇಶ ಪರೀಕ್ಷೆ ಇಲ್ಲ – ಆದರೆ** ಅಭ್ಯರ್ಥಿಗಳು ಸಿಇಟಿ–2026ಕ್ಕೆ ಆನ್‌ಲೈನ್ ಮೂಲಕ ನೊಂದಾಯಿಸಿಕೊಂಡು, ಆನ್‌ಲೈನ್ ಅರ್ಜಿ ಸಲ್ಲಿಸಿ, ಅರ್ಜಿ ಶುಲ್ಕ ಪಾವತಿಸುವುದು ಕಡ್ಡಾಯವಾಗಿರುತ್ತದೆ.

6. ಸರ್ಕಾರದ ಆದೇಶ ಸಂಖ್ಯೆ ಎಂಇಡಿ 51 ಆರ್‌ಜಿಯು 2023 ದಿನಾಂಕ 13–04–2023 ರ ಅನ್ವಯ ಬಿ.ಎಸ್.ಸಿ (ನರ್ಸಿಂಗ್) ಕೋರ್ಸುಗಳ ಪ್ರವೇಶಕ್ಕೂ ಸಹ ಕರ್ನಾಟಕ ಮತ್ತು ಕರ್ನಾಟಕೇತರ ಅಭ್ಯರ್ಥಿಗಳು ಪ್ರಾಧಿಕಾರವು ನಡೆಸುವ 2026ರ ಸಾಮಾನ್ಯ ಪ್ರವೇಶ ಪರೀಕ್ಷೆಗೆ ಹಾಜರಾಗಬೇಕಿರುತ್ತದೆ. ಕರ್ನಾಟಕೇತರ ಅಭ್ಯರ್ಥಿಗಳು ಇಂಜಿನಿಯರಿಂಗ್ ಮುಂತಾದ ಕೋರ್ಸುಗಳ ಪ್ರವೇಶಕ್ಕೆ ಅರ್ಹರಾಗುವುದಿಲ್ಲ ಮತ್ತು ಕರ್ನಾಟಕೇತರ ಅಭ್ಯರ್ಥಿಗಳಿಗೆ ಯಾವುದೇ ಮೀಸಲಾತಿಯ ಸವಲತ್ತುಗಳು ಅನ್ವಯಿಸುವುದಿಲ್ಲ.

ಕರ್ನಾಟಕ ರಾಜ್ಯದಲ್ಲಿ ಯಾವುದೇ ವೃತ್ತಿಪರ ಕೋರ್ಸುಗಳ ಪ್ರವೇಶಕ್ಕಾಗಿ ಅನ್‌ಲೈನ್ ಮೂಲಕ ನೊಂದಾಯಿಸುವ ಮೊದಲು, ಅಭ್ಯರ್ಥಿಗಳು ಮಾಹಿತಿ ಪುಸ್ತಕವನ್ನು ಓದಲು, ಮತ್ತು ಅರ್ಹತಾ ಷರತ್ತುಗಳು, ಸೀಟುಗಳ ವರ್ಗೀಕರಣ (ವಿವಿಧ ವರ್ಗದ ಸೀಟುಗಳು) ಮತ್ತು ಅಂತಹ ಸೀಟುಗಳನ್ನು ಪಡೆಯಲು ಇರುವ ಅರ್ಹತೆಗಳನ್ನು ಅರ್ಥ ಮಾಡಿಕೊಳ್ಳಲು ಈ ಮೂಲಕ ತಿಳಿಸಲಾಗಿದೆ.

ಅರ್ಹತೆ: ನಿಯಮ 5 (1) ರ Karnataka Selection of Candidates for Admission to Government seats in Professional Educational Institutions Rules, 2006, ಅನ್ವಯ ಅರ್ಜಿ ಸಲ್ಲಿಸುವ ಅಭ್ಯರ್ಥಿಯು ಭಾರತೀಯ ಪ್ರಜೆಯಾಗಿರಬೇಕು ಮತ್ತು ನಿಗದಿಪಡಿಸಿರುವ ಅರ್ಹತಾ ಕಂಡಿಕೆಗಳಲ್ಲಿ ಯಾವುದಾದರು ಒಂದರಲ್ಲಿ ಅರ್ಹತೆ ಹೊಂದಿರಬೇಕು, ಇಲ್ಲದಿದ್ದಲ್ಲಿ ಅಂತಹ ಅಭ್ಯರ್ಥಿಗಳು ಸರ್ಕಾರಿ ಕೋಟದ ಸೀಟುಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ಪಡೆಯಲು ಅರ್ಹತೆಯನ್ನು ಹೊಂದುವುದಿಲ್ಲ. Eligibility for OCI / PIO candidates for Government seats shall be as per the orders of Hon'ble Supreme Court in WP No.891 /2021.

7. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ವಿಧಾನ, ಅರ್ಹತಾ ಕಂಡಿಕೆಗಳು, ಶೈಕ್ಷಣಿಕ ಅರ್ಹತೆ ಹಾಗು ಇತರೆ ವಿವರಗಳನ್ನು ಒಳಗೊಂಡ “ಯುಜಿಸಿಇಟಿ–2026–ಮಾಹಿತಿ ಪುಸ್ತಕ” ವನ್ನು ಪ್ರಾಧಿಕಾರದ ವೆಬ್‌ಸೈಟ್ https://cetonline.karnataka.gov.in/kea/ ನಲ್ಲಿ ಪ್ರಚುರಪಡಿಸಲಾಗುವುದು. ಅಭ್ಯರ್ಥಿಗಳು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.
8. ಸಿಇಟಿ–2026ಕ್ಕೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಕೆ – ಶುಲ್ಕ ಪಾವತಿ – ವೇಳಾಪಟ್ಟಿ.

i	ನೊಂದಣಿ ಹಾಗು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಪ್ರಾರಂಭಿಕ ದಿನಾಂಕ	**17–01–2026 – ಬೆ. 11.00 ರ ನಂತರ**
ii.	ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ	**16–02–2026 – ರಾ. 11.59 ರ ವರೆಗೆ**
iii.	ಶುಲ್ಕವನ್ನು ಪಾವತಿ ಮಾಡಲು ಕೊನೆಯ ದಿನಾಂಕ	**18–02–2026**
iv.	ಪ್ರವೇಶ ಪತ್ರಗಳನ್ನು ಡೌನ್‌ಮಾಡಿಕೊಳ್ಳುವುದು	**10–04–2026 ಬೆಳಿಗ್ಗೆ 11.00 ರ ನಂತರ**

ಸಾಮಾನ್ಯ ಪ್ರವೇಶ ಪರೀಕ್ಷೆ 2026ರ ವೇಳಾಪಟ್ಟಿ

ದಿನಾಂಕ	ದಿನ	ಸಮಯ	ವಿಷಯ	ಅಂಕಗಳು / ಪ್ರಶ್ನೆಗಳು
23–04–2026	ಗುರುವಾರ	ಬೆಳಿಗ್ಗೆ 10–30 ರಿಂದ 11–50ರವರೆಗೆ	ಭೌತಶಾಸ್ತ್ರ Physics	60
		ಮಧ್ಯಾಹ್ನ 2–30 ರಿಂದ 3–50ರವರೆಗೆ	ರಸಾಯನಶಾಸ್ತ್ರ Chemistry	60
24–04–2026	ಶುಕ್ರವಾರ	ಬೆಳಿಗ್ಗೆ 10–30 ರಿಂದ 11–50ರವರೆಗೆ	ಗಣಿತಶಾಸ್ತ್ರ Mathematics	60
		ಮಧ್ಯಾಹ್ನ 2–30 ರಿಂದ 3–50ರವರೆಗೆ	ಜೀವಶಾಸ್ತ್ರ Biology	60

ಹೊರನಾಡು ಹಾಗೂ ಗಡಿನಾಡು ಕನ್ನಡಿಗ ಅಭ್ಯರ್ಥಿಗಳಿಗೆ ಕನ್ನಡ ಭಾಷಾ ಪರೀಕ್ಷೆ
(ಬೆಂಗಳೂರು, ಬೆಳಗಾವಿ, ವಿಜಯಪುರ ಮತ್ತು ಮಂಗಳೂರು ಜಿಲ್ಲಾ ಕೇಂದ್ರಗಳಲ್ಲಿ ಮಾತ್ರ)

22–04–2026	ಬುಧವಾರ	ಬೆಳಿಗ್ಗೆ 10.30 ರಿಂದ 11.30ರ ವರೆಗೆ	4ನೇ ತರಗತಿಯ ಮಟ್ಟದ	50

ಸೂಚನೆ:
1. ಸಾಮಾನ್ಯ ಪ್ರವೇಶ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳು ಕರ್ನಾಟಕ ರಾಜ್ಯದ ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ಇವರು ನಿರ್ಧರಿಸುವ ಮೊದಲನೇ ಮತ್ತು ಎರಡನೇ ಪಿಯುಸಿ ಪಠ್ಯಕ್ರಮವನ್ನು ಅವಲಂಬಿಸಿರುತ್ತದೆ. ಸಿಇಟಿ–2026 ರ ಸಾಮಾನ್ಯ ಪ್ರವೇಶ ಪರೀಕ್ಷೆಗೆ ಅಳವಡಿಸಿಕೊಳ್ಳುವ ಪಠ್ಯಕ್ರಮದ ಕುರಿತು ಶಾಲಾ ಶಿಕ್ಷಣ (ಪದವಿ ಪೂರ್ವ) ಇಲಾಖೆಯ ವಿಷಯ ತಜ್ಞರು ಕರ್ನಾಟಕ ರಾಜ್ಯದ ಪ್ರಥಮ ಮತ್ತು ದ್ವಿತೀಯ ಪಿಯು ತರಗತಿಗಳಿಗೆ ಅಳವಡಿಸಿಕೊಂಡಿರುವ ಪಿಸಿಎಂಬಿ (PCMB) ವಿಷಯಗಳ ಪಠ್ಯಕ್ರಮವನ್ನು ಪರಿಶೀಲಿಸಿ, ಸಿಇಟಿ 2026ಕ್ಕೆ ಅಳವಡಿಸಿಕೊಳ್ಳುವ ಪಠ್ಯಕ್ರಮವನ್ನು ವಿದ್ಯಾರ್ಥಿಗಳ ಮಾಹಿತಿಗಾಗಿ ವೆಬ್‌ಸೈಟಿನಲ್ಲಿ ಪ್ರಕಟಿಸಲಾಗುವುದು.
2. ಅಭ್ಯರ್ಥಿಗಳು ಆನ್‌ಲೈನ್ ಅರ್ಜಿಯನ್ನು ಭರ್ತಿ ಮಾಡುವ ಬಗ್ಗೆ ಸಂದೇಹಗಳಿದ್ದಲ್ಲಿ, ಅವರು ಕರ್ನಾಟಕದಲ್ಲಿ ವ್ಯಾಸಂಗ ಮಾಡುತ್ತಿರುವ ಆಯಾ ಕಾಲೇಜುಗಳಲ್ಲಿ ಸಂಪರ್ಕಿಸಿ ಸಂದೇಹಗಳನ್ನು ಪರಿಹರಿಸಿಕೊಳ್ಳಬಹುದಾಗಿದೆ.
3. ಸಿಇಟಿ–2026 ರ ಬಗ್ಗೆ ಸಂಕ್ಷಿಪ್ತ ಮಾಹಿತಿಯನ್ನು ಕ್ರೋಢೀಕರಿಸಿ ಸಿದ್ಧಪಡಿಸಿರುವ “ಸಿಇಟಿ–2026 ದಿಕ್ಸೂಚಿ”ಯನ್ನು ರಾಜ್ಯದಲ್ಲಿನ ಪ್ರತಿ ವಿದ್ಯಾರ್ಥಿಗೂ ಅವರುಗಳ ಕಾಲೇಜಿನಲ್ಲಿಯೇ ವಿತರಿಸಲಾಗುವುದು.

ಸಹಿ/– (ಹೆಚ್. ಪ್ರಸನ್ನ ಭಾ.ಆ.ಸೇ.)
ಕಾರ್ಯನಿರ್ವಾಹಕ ನಿರ್ದೇಶಕರು

ವಾಸಾಸಂಇ/ವಾಪ್ರ/5067/2025–26

http://cetonline.karnataka.gov.in/kea/ keaauthority.ka@nic.in
https://x.com/kea_karnataka https://www.youtube.com/@keavikasana
ಕೆಇಎ ಸಹಾಯವಾಣಿ ಸಂಖ್ಯೆಗಳು: 080–23460460 (8 ಲೈನುಗಳು–ಬೆ. 8.00 ರಿಂದ ರಾ. 8.00 – ಸಾರ್ವತ್ರಿಕ ರಜಾ ದಿನಗಳನ್ನು ಹೊರತುಪಡಿಸಿ)

ಅಭಿಮತ ವಿಭಾಗ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸುಭಾಷಿತ

ಸಜ್ಜನರ ಕೋಪ ನೀರಿನ ಮೇಲೆ ಗೆರೆ ಇದ್ದಂತೆ. ಕ್ಷಣದಲ್ಲಿಯೇ ಮಾಯವಾಗಿ ಬಿಡುತ್ತದೆ.

–ರಾಮಕೃಷ್ಣ ಪರಮಹಂಸ

ಸಂಪಾದಕೀಯ

ಗಿಗ್ ಕಾರ್ಮಿಕರ ಸುರಕ್ಷತೆಗೆ ಒತ್ತು ಕಾರ್ಮಿಕ ನೀತಿ ಪರಿಷ್ಕಾರ ಅಗತ್ಯ

ಬೇಡಿಕೆ ಸಲ್ಲಿಸಿದ ಹತ್ತು ನಿಮಿಷದಲ್ಲಿ ಗ್ರಾಹಕರ ಮನೆ ಬಾಗಿಲಿಗೆ ಉತ್ಪನ್ನವನ್ನು ತಲುಪಿಸುತ್ತೇವೆ ಎನ್ನುವ ಬದ್ಧತೆಯಿಂದ ಹೊರಬರುವ ಕ್ವಿಕ್-ಕಾಮರ್ಸ್ ವಲಯದ ನಿರ್ಧಾರ, ಗಿಗ್ ಕಾರ್ಮಿಕರ ಮೇಲೆ ಉಂಟಾಗುತ್ತಿದ್ದ ಅತೀವ ಒತ್ತಡವನ್ನು ಕಡಿಮೆ ಮಾಡಬೇಕೆಂದು ನಡೆಯುತ್ತಿದ್ದ ಅಭಿಯಾನಕ್ಕೆ ಸಂದಿರುವ ಗಮನಾರ್ಹ ಯಶಸ್ಸು. ಕಳೆದ ತಿಂಗಳು ಗಿಗ್ ಕಾರ್ಮಿಕರು ನಡೆಸಿದ್ದ ಮುಷ್ಕರ, ಅವರು ಕೆಲಸ ಮಾಡುತ್ತಿರುವ ಕ್ಷೇತ್ರದ ಅಪಾಯಗಳ ಬಗ್ಗೆ ಗಮನಸೆಳೆದಿತ್ತು. ಇದರ ಪರಿಣಾಮವಾಗಿ, ಗ್ರಾಹಕರಿಗೆ ಅಗತ್ಯ ಉತ್ಪನ್ನಗಳನ್ನು ಕೇವಲ ನಿಮಿಷಗಳಲ್ಲಿ ಮನೆ ಬಾಗಿಲಿಗೆ ತಲುಪಿಸುವ ಹೆಸರಾಂತ ಕಂಪನಿಗಳ ಜೊತೆ ಕೇಂದ್ರ ಕಾರ್ಮಿಕ ಸಚಿವ ಮನ್ಸುಖ್ ಮಾಂಡವೀಯ ಮಾತುಕತೆ ನಡೆಸಿದ್ದರು. ನಿಗದಿತ ಸಮಯದಲ್ಲಿ ಸೇವೆ ಒದಗಿಸುವ ಬದ್ಧತೆಯಿಂದ ಉಂಟಾಗುವ ಅಪಾಯಗಳ ಬಗ್ಗೆ ಪ್ರಸ್ತಾಪಿಸಿದ ಸಚಿವರು, ಮಾರ್ಕೆಟಿಂಗ್ ಮತ್ತು ಬ್ರಾಂಡಿಂಗ್ ಅಭಿಯಾನಗಳಿಂದ 'ನಿಗದಿತ ಸಮಯ'ದ ಬದ್ಧತೆಯನ್ನು ಕೈಬಿಡುವಂತೆ ಒತ್ತಾಯಿಸಿದ್ದರು. ಕಾಲಮಿತಿ ಬದ್ಧತೆಯ ಪರಿಣಾಮ ಉತ್ಪನ್ನಗಳನ್ನು ಪೂರೈಸುವ ಕಾರ್ಮಿಕರ ಮೇಲೆ ಆಗುವುದರ ಬಗ್ಗೆಯೂ ವ್ಯಾಪಕ ಕಳವಳ ವ್ಯಕ್ತವಾಗಿತ್ತು. ಸಂಚಾರ ದಟ್ಟಣೆಯ ನಡುವೆ ನಿರ್ದಿಷ್ಟ ಸಮಯದೊಳಗೆ ಉತ್ಪನ್ನಗಳನ್ನು ತಲುಪಿಸುವ ಒತ್ತಡ ಹಾಗೂ ವಿಳಂಬದ ಸೇವೆಯಿಂದ ಎದುರಿಸಬೇಕಾದ ಪರಿಣಾಮಗಳು ಕಾರ್ಮಿಕರನ್ನು ಒತ್ತಡಕ್ಕೆ ದೂಡುತ್ತಿತ್ತು.

ಈ ಒತ್ತಡ ಕಾರ್ಮಿಕರಿಗೆ ಮಾತ್ರವಲ್ಲದೆ, ರಸ್ತೆಗಳಲ್ಲಿ ಸಂಚರಿಸುವ ಇತರರಿಗೂ ಅಪಾಯ ಉಂಟುಮಾಡುವ ಸಾಧ್ಯತೆ ನಿರ್ಲಕ್ಷಿಸುವಂತಹದಲ್ಲ. ಅಪಘಾತಗಳು ಸಂಭವಿಸುವುದನ್ನು ಗಮನಿಸಬಹುದು.

ತ್ವರಿತ ಸೇವೆಯ ಬದ್ಧತೆಯಿಂದ ಹೊರಬರುವುದಾಗಿ ಪ್ರಮುಖ ಕ್ವಿಕ್-ಕಾಮರ್ಸ್ ಸಂಸ್ಥೆಗಳು ಹೇಳಿದ್ದರೂ, ಪರಿಸ್ಥಿತಿಯಲ್ಲಿ ಗಮನಾರ್ಹ ಬದಲಾವಣೆ ಆಗಿದೆಯೆಂದು ಭಾವಿಸಲಾಗದು. ಕಾಲಮಿತಿಯೊಳಗೆ ಉತ್ಪನ್ನ ಪೂರೈಸುವ ಘೋಷಣೆಯನ್ನು ತಮ್ಮ ಪ್ರಚಾರ ವೇದಿಕೆಗಳಿಂದ ಸಂಸ್ಥೆಗಳು ನಿಲ್ಲಿಸಬಹುದು. ಬ್ರಾಂಡಿಂಗ್ ಸಂಪರ್ಕ, ಜಾಹೀರಾತುಗಳು ಮತ್ತು ಸಾಮಾಜಿಕ ಜಾಲತಾಣಗಳಲ್ಲಿನ ಅಭಿಯಾನಗಳಲ್ಲಿ ಗಟ್ಟಿ ಧ್ವನಿಯಲ್ಲಿ ಬಿತ್ತರಗೊಳ್ಳುತ್ತಿದ್ದ 'ತ್ವರಿತ ಡೆಲಿವರಿ' ಎನ್ನುವ ಘೋಷಣೆ ಪ್ರಸ್ತುತ ಬದಲಾಗಲಿದೆ. ಆದರೆ, ಈ ಕಂಪನಿಗಳು ಇದುವರೆಗೂ ತಾವು ಗೊತ್ತುಪಡಿಸುತ್ತಿದ್ದ ಅವಾಸ್ತವಿಕ ಕಾಲಮಿತಿಯು ಗಿಗ್ ಕಾರ್ಮಿಕರ ಮೇಲೆ ಅಪಾರ ಒತ್ತಡ ಉಂಟುಮಾಡುತ್ತಿದೆ ಹಾಗೂ ನಗರ ಸಾರಿಗೆ ವ್ಯವಸ್ಥೆಯನ್ನು ಅಸ್ತವ್ಯಸ್ತಗೊಳಿಸುತ್ತದೆ ಎನ್ನುವುದನ್ನು ಒಪ್ಪಿಕೊಂಡಿಲ್ಲ. ಇದಕ್ಕೆ ಬದಲಾಗಿ, ತಮ್ಮ ವಾಣಿಜ್ಯ ಮಾದರಿಯು ಡೆಲಿವರಿ ಸಹವರ್ತಿಗಳ ಚಲನೆಯ ವೇಗವನ್ನು ಅವಲಂಬಿಸಿಲ್ಲ, ಆನ್‌ಲೈನ್ ಶಾಪಿಂಗ್ ವ್ಯವಸ್ಥೆಗೆ ಪೂರಕವಾದ ಉಗ್ರಾಣಗಳ (ಡಾರ್ಕ್ ಸ್ಟೋರ್) ಇರುವ ಸ್ಥಳವನ್ನು ಅವಲಂಬಿಸಿದೆ ಎಂದು ಹೇಳಲಾಗುತ್ತಿದೆ. ಡಾರ್ಕ್ ಸ್ಟೋರ್‌ಗಳ ಸಂಖ್ಯೆ, ಡೆಲಿವರಿ ಪಾಲುದಾರರ ಲಭ್ಯತೆ, ತಂತ್ರಜ್ಞಾನ ಮತ್ತು ಆರ್ಡರ್ ಬ್ಯಾಚಿಂಗ್‌ಗಳು ಡೆಲಿವರಿ ಸಮಯದ ಮೇಲೆ ಪ್ರಭಾವ ಬೀರುವ ಪ್ರಮುಖ ಸಂಗತಿಗಳಾಗಿವೆ ಎಂದೂ ವಾದಿಸಲಾಗುತ್ತಿದೆ. ಆದರೆ, ಈ ಎಲ್ಲ ಸಂಗತಿಗಳನ್ನು ಮೀರಿಕೊಂಡು ಡೆಲಿವರಿ ಏಜೆಂಟರಿಗೆ ಅತ್ಯಂತ ಒತ್ತಡದ ಕಾಲಮಿತಿ ವಿಧಿಸಲಾಗುತ್ತಿರುವುದು ಗೊತ್ತಾಗುತ್ತಿದೆ.

ಗ್ರಾಹಕರಿಗೆ ಹತ್ತು ನಿಮಿಷಗಳಲ್ಲಿ ಉತ್ಪನ್ನಗಳನ್ನು ತಲುಪಿಸುವ ಭರವಸೆ ಬಹಿರಂಗವಾಗಿ ಕೊನೆಗೊಳ್ಳಬಹುದು. ಆದರೆ, ನೈಜ ಬದಲಾವಣೆಯು ಕಾರ್ಮಿಕ ಕಲ್ಯಾಣ ನೀತಿಯ ಸಮಗ್ರ ಪರಿಷ್ಕರಣೆಯಲ್ಲಿ ಆಗಬೇಕಿದೆ.

ಇಡೀ ಸಮಸ್ಯೆಯ ಕೇಂದ್ರದಲ್ಲಿ ಬೇಡಿಕೆ ಮತ್ತು ಪೂರೈಕೆಯ ಸಮೀಕರಣವಿದೆ. ತ್ವರಿತವಾಗಿ ಉತ್ಪನ್ನಗಳನ್ನು ಪಡೆಯುವ ಗ್ರಾಹಕರ ನಿರೀಕ್ಷೆಗಳು ಹಾಗೂ ಅಪೇಕ್ಷೆಗಳನ್ನು ಪೂರೈಸುವ ಸಿದ್ಧತೆಯೊಂದಿಗೆ ಹಣಕಾಸಿನ ಮುಗ್ಗಟ್ಟಿನಿಂದ ಬಳಲುತ್ತಿರುವ ಕಾರ್ಮಿಕರಿಂದಾಗಿ ಈ ತ್ವರಿತ ಡೆಲಿವರಿ ವಹಿವಾಟು ಜೀವಂತವಾಗಿದೆ. ಯುರೋಪ್‌ನ ಕೆಲವು ದೇಶಗಳಲ್ಲಿ ಇರುವಂತೆ ಡಾರ್ಕ್ ಸ್ಟೋರ್‌ಗಳನ್ನು ವಸತಿ ಪ್ರದೇಶಗಳಿಂದ ದೂರ ಇರಿಸುವುದನ್ನು ಕಡ್ಡಾಯಗೊಳಿಸುವುದರಿಂದ ಪರಿಸ್ಥಿತಿಯಲ್ಲಿ ಸುಧಾರಣೆ ಆಗಬಹುದು ಎನ್ನುವ ವಿಶ್ಲೇಷಣೆಯೂ ಇದೆ. ಆದರೆ, ಇಂಥ ಬೆಳವಣಿಗೆಗಳಿಂದ ಗಿಗ್ ಕಾರ್ಮಿಕರ ಜೀವನ ಸುಧಾರಿಸಬಹುದು ಎನ್ನುವುದಕ್ಕೆ ಯಾವ ಖಾತರಿಯೂ ಇಲ್ಲ. ಇನ್ನುಮುಂದೆ, ತ್ವರಿತ ಪೂರೈಕೆಯ ಘೋಷಣೆಗಳು ಸಾರ್ವಜನಿಕವಾಗಿ ಪ್ರಕಟಗೊಳ್ಳದಿರಬಹುದಾದರೂ, ಉತ್ಪನ್ನಗಳನ್ನು ಕ್ಷಿಪ್ರವಾಗಿ ತಲಪಿಸುವ ವಿಧಾನದಲ್ಲಿ ಬದಲಾವಣೆ ಆಗುತ್ತದೆಂದು ಹೇಳಲಾಗದು. ಈ ಎಲ್ಲ ಬೆಳವಣಿಗೆಗಳ ಒಟ್ಟಾರೆ ಪರಿಣಾಮ, ಗಿಗ್ ಕಾರ್ಮಿಕರ ಸಮಸ್ಯೆಗಳನ್ನು ಅಧಿಕೃತವಾಗಿ ಗುರ್ತಿಸಿ ಒಪ್ಪಿಕೊಂಡಿರುವುದು. ಪ್ರಸಕ್ತ ವಿದ್ಯಮಾನ, ಕಾರ್ಮಿಕರ ಕಲ್ಯಾಣವನ್ನು ಗಮನದಲ್ಲಿ ಇರಿಸಿಕೊಂಡ ಸಮಗ್ರ ನೀತಿ ರೂಪುಗೊಳ್ಳಲು ಕಾರಣವಾಗುತ್ತದೆಯೇ ಎನ್ನುವುದನ್ನು ಕಾದು ನೋಡಬೇಕು.

ಚಾಟಿ

ಕಥೆಗಳಿಗಿದು ಕಾಲವಲ್ಲ

ಇದು ಕಥೆ ಕೇಳುವ ಕಾಲವಲ್ಲ. ಘೋಷಣೆಗಳು ಹಾಗೂ ಬೋಧನೆಗಳ ಕಾಲ. ನಾಟಕಗಳು ಸಾಯುತ್ತಿವೆ. ಸುಮ್ಮನೆ ನೋಡುತ್ತಿರಬೇಕಷ್ಟೇ.

ರಾಜೇಶ್ ಬಸವಣ್ಣ, 'ಫೇಸ್‌ಬುಕ್'ನಿಂದ

ಕಿಡಿನುಡಿ

ಕೇಂದ್ರ ಸರ್ಕಾರವು 'ಮನರೇಗಾ' ಯೋಜನೆ ಬದಲಿಸಿ ಬಡವರು, ಕೃಷಿ ಕಾರ್ಮಿಕರ ಕೆಲಸಕ್ಕೆ ತಡೆಯೊಡ್ಡುವ ಕಾಯ್ದೆ ರೂಪಿಸಿದೆ. ಸಾರ್ವಜನಿಕ ಟೀಕೆಗಳಿಂದ ತಪ್ಪಿಸಿಕೊಳ್ಳಲು ಇದರಲ್ಲಿ ಅನಗತ್ಯವಾಗಿ ರಾಮನ ಹೆಸರನ್ನು ಸೇರಿಸಿದೆ.

ಶರಣಪ್ರಕಾಶ ಆರ್. ಪಾಟೀಲ, ವೈದ್ಯಕೀಯ ಶಿಕ್ಷಣ ಸಚಿವ

25 ವರ್ಷಗಳ ಹಿಂದೆ

ಬುಧವಾರ, 17-1-2001

• ದೇವನಹಳ್ಳಿ ವಿಮಾನ ನಿಲ್ದಾಣ: 19ರಂದು ಶಂಕುಸ್ಥಾಪನೆ

ನವದೆಹಲಿ, ಜ. 16– ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಇದೇ 19ರಂದು ಬೆಂಗಳೂರಿನಲ್ಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಶಂಕುಸ್ಥಾಪನೆ ನೆರವೇರಿಸಲಿದ್ದು, ಕರ್ನಾಟಕದ ಬಹುದಿನಗಳ ಪ್ರಯತ್ನ ಫಲಪ್ರದವಾಗಲಿದೆ.

ಇದೇ ಸಂದರ್ಭದಲ್ಲಿ ರಾಜ್ಯ ಸರ್ಕಾರ ಇಂದು ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರಾಧಿಕಾರದ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯಾಗಿ ಹಿರಿಯ ಐಎಎಸ್ ಅಧಿಕಾರಿ ಕೆ. ಜೈರಾಜ್‌ರನ್ನು ನೇಮಕ ಮಾಡಿದೆ. ಇತ್ತೀಚೆಗಷ್ಟೇ ರಾಜ್ಯ ಸರ್ಕಾರ ಇನ್‌ಫೋಸಿಸ್ ಮುಖ್ಯಸ್ಥ ಎನ್.ಆರ್. ನಾರಾಯಣ ಮೂರ್ತಿ ಅಧ್ಯಕ್ಷತೆಯಲ್ಲಿ ನೂತನ ಕಂಪನಿ ಸ್ಥಾಪಿಸಿತ್ತು. ದೇವನಹಳ್ಳಿಯಲ್ಲಿ ಸುಮಾರು ಎರಡು ಸಾವಿರ ಎಕರೆ ಪ್ರದೇಶದಲ್ಲಿ ಸ್ಥಾಪನೆಗೊಳ್ಳಲಿರುವ ವಿಮಾನ ನಿಲ್ದಾಣ ಕಾರ್ಯದ ಹೊಣೆ ಈ ನೂತನ ಕಂಪನಿಯದ್ದಾಗಿದೆ.

• ವಿಮಾನ ನಿಲ್ದಾಣದ ಮೇಲೆ ದಾಳಿ: 11 ಸಾವು

ಶ್ರೀನಗರ, ಜ. 16 (ಪಿಟಿಐ)– ಶ್ರೀನಗರದ ಗರಿಷ್ಠ ಭದ್ರತೆಯ ವಿಮಾನ ನಿಲ್ದಾಣದ ಮೇಲೆ ದಾಳಿ ಮಾಡಲು ಫಿದಾಯಿನ್ (ಆತ್ಮಹತ್ಯಾ) ದಳ ಇಂದು ಯತ್ನಿಸಿದಾಗ ಉಗ್ರಗಾಮಿಗಳು ಹಾಗೂ ಭದ್ರತಾ ಪಡೆಗಳ ಮಧ್ಯೆ ನಡೆದ ಭೀಕರ ಗುಂಡಿನ ಕಾಳಗದಲ್ಲಿ ಎಲ್ಲಾ 6 ಉಗ್ರಗಾಮಿಗಳು, ಮೂವರು ಸಿಆರ್‌ಪಿಎಫ್ ಸಿಬ್ಬಂದಿ ಹಾಗೂ ಇಬ್ಬರು ನಾಗರಿಕರು ಸತ್ತಿದ್ದಾರೆ.

ಪಾಕಿಸ್ತಾನ ಮೂಲದ ಲಷ್ಕರ್–ಇ–ತೊಯಿಬಾ ಸಂಘಟನೆಗೆ ಸೇರಿದ ಈ ಉಗ್ರಗಾಮಿಗಳು ಮಾರುತಿ ಜಿಪ್ಸಿಯಲ್ಲಿ ಆಗಮಿಸಿ ನಿಲ್ದಾಣದ ಪ್ರವೇಶ ದ್ವಾರದಲ್ಲಿ ಗ್ರೆನೇಡ್‌ಗಳನ್ನು ಎಸೆದು ಗುಂಡಿನ ದಾಳಿ ಆರಂಭಿಸಿದರು. ಮಧ್ಯಾಹ್ನ ಸುಮಾರು 2.45ರಲ್ಲಿ ಈ ದಾಳಿ ನಡೆಯಿತು.

75 ವರ್ಷಗಳ ಹಿಂದೆ

ಬುಧವಾರ, 17-1-1951

• ಗ್ರಹಗಳಿಗೆ ಯಾತ್ರೆ ಸಾಧ್ಯ

ಮಾಸ್ಕೋ, ಜ. 16– ಚಂದ್ರ ಮತ್ತು ಇತರ ಗ್ರಹಗಳ ಲೋಕಕ್ಕೆ ಭೂ ಮಂಡಲದಿಂದ ಪ್ರವಾಸ ಮಾಡುವ ಪ್ರಶ್ನೆ ಈಗ ಭಾವನಾಲೋಕದ ಊಹೆಯಾಗಿ ಉಳಿದಿಲ್ಲ ಎಂದು ಸೋವಿಯತ್ ವಿಜ್ಞಾನಿ ಲೆಖ್ವ ಹೇಳಿದ್ದಾರೆ.

ಗ್ರಹಗಳ ಮಧ್ಯಂತರದ ಸ್ಥಳವನ್ನು ಪ್ರವೇಶಿಸುವ ಶಕ್ತಿ ಮನುಷ್ಯನಿಗೆ ದಕ್ಕುವ ಕಾಲ ದೂರವಿಲ್ಲ ಎಂಬುದಾಗಿ ಮಾಸ್ಕೋ ಕೊಮ್ಸೊವೇಲ್ ಎಂಬ ಯುವಕರ ಪತ್ರಿಕೆಯಲ್ಲಿ ಬರೆದಿದ್ದಾರೆ.

ವಿಶ್ವಯಾನದ ನಾನಾ ಮಾರ್ಗಗಳನ್ನು ಪರಮಾಣು ಶಕ್ತಿ ತೋರಿಸಿದೆ. ಪರಮಾಣು ಶಕ್ತಿಯ ಯಾನಗಳು ಎಲ್ಲೂ ನಿಲ್ಲದೆ ಸೌರವ್ಯೂಹದ ಯಾವ ಗ್ರಹದಿಂದ ಯಾವ ಗ್ರಹಕ್ಕೆ ಬೇಕಾದರೂ ಹಾರಬಹುದು ಎಂಬುದಾಗಿ ವಿವರಿಸಿದ್ದಾರೆ.

ಕಿರುಸಮರ: ನಾಲ್ಕೂ ನಿಟ್ಟಿನಿಂದ

ವಿಶ್ಲೇಷಣೆ

ಬಿ.ಎಸ್. ಅರುಣ್

ಪಶ್ಚಿಮ ಬಂಗಾಳ, ಅಸ್ಸಾಂ, ತಮಿಳುನಾಡು ಹಾಗೂ ಪುದುಚೇರಿಯಲ್ಲಿ ಈ ವರ್ಷದ ಮೊದಲ ಭಾಗದಲ್ಲಿ ಚುನಾವಣೆ ನಡೆಯಲಿದೆ. ಈ 'ಮಿನಿ ಮಹಾಸಮರ' 2029ರ ಲೋಕಸಭಾ ಚುನಾವಣೆಯ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ. 'ಇಂಡಿಯಾ' ಮೈತ್ರಿಕೂಟಕ್ಕೆ ತನ್ನ ಒಗ್ಗಟ್ಟನ್ನು ಸಾಬೀತುಪಡಿಸುವ ಅವಕಾಶವಾಗಿಯೂ ಈ ಚುನಾವಣೆ ಮಹತ್ವದ್ದಾಗಿದೆ.

ಕಳೆದ 2024ರ ಲೋಕಸಭೆ ಚುನಾವಣೆಯ ನಂತರದಲ್ಲಿ ಬಹುದೊಡ್ಡ ಚುನಾವಣಾ ಪ್ರಕ್ರಿಯೆ ಏಪ್ರಿಲ್–ಮೇ ತಿಂಗಳಲ್ಲಿ ನಡೆಯಲಿದ್ದು, ಆ ಮಿನಿ ಮಹಾ ಸಮರಕ್ಕೆ ವೇದಿಕೆ ಸಜ್ಜಾಗುತ್ತಿದೆ. ದೇಶದ ಸುಮಾರು ಶೇ 17ರಷ್ಟು ಜನಸಂಖ್ಯೆ ಪ್ರತಿನಿಧಿಸುವ ಪಶ್ಚಿಮ ಬಂಗಾಳ, ಅಸ್ಸಾಂ, ತಮಿಳುನಾಡು, ಕೇರಳ ಹಾಗೂ ಕೇಂದ್ರಾಡಳಿತ ಪ್ರದೇಶವಾದ ಪುದುಚೇರಿಯಲ್ಲಿ ಈ ಕದನ ನಡೆಯಲಿದೆ.

ನಾಲ್ಕು ದೊಡ್ಡ ರಾಜ್ಯಗಳ ಪೈಕಿ ಮೂರರಲ್ಲಿ ಬಿಜೆಪಿ ವಿರೋಧಿ 'ಇಂಡಿಯಾ' ಗುಂಪಿನ ಪಕ್ಷಗಳು ಅಧಿಕಾರದಲ್ಲಿವೆ. ಈಶಾನ್ಯ ರಾಜ್ಯವಾದ ಅಸ್ಸಾಂನಲ್ಲಿ ಆಡಳಿತ ನಡೆಸುತ್ತಿರುವ ಬಿಜೆಪಿ ಮತ್ತೆ ಅಧಿಕಾರದ ಚುಕ್ಕಾಣಿ ಹಿಡಿಯುವ ತವಕದಲ್ಲಿದೆ. ಬಂಗಾಳದಲ್ಲಿ ಮಮತಾ ಬ್ಯಾನರ್ಜಿ ಅವರನ್ನು ಮಣಿಸಲು ಶತಾಯಗತಾಯ ಪ್ರಯತ್ನಕ್ಕೆ ಬಿಜೆಪಿ ಮುಂದಾಗಿದೆ. ಸದ್ಯದ ಚುನಾವಣೆಗಳ ಮುಖ್ಯ ಹೋರಾಟ ಬಂಗಾಳವೇ ಆಗಿದೆ. ಕೇರಳದಲ್ಲಿ ವಿರೋಧಿ ಮೈತ್ರಿಕೂಟವನ್ನು ಮುನ್ನಡೆಸುತ್ತಿರುವ ಕಾಂಗ್ರೆಸ್ ಅಲ್ಲಿ ಮತ್ತು ಅಸ್ಸಾಂನಲ್ಲಿ ತನ್ನ ಆಳ್ವಿಕೆಯನ್ನು ಎದುರು ನೋಡುತ್ತಿದೆ. ತಮಿಳುನಾಡಿನಲ್ಲಿ ಡಿಎಂಕೆ ಮತ್ತು ಕಾಂಗ್ರೆಸ್ ಆಧಿಪತ್ಯ ಮುಂದುವರಿಸಲು ಕಾತರದಲ್ಲಿದೆ.

ಈ ನಾಲ್ಕು ರಾಜ್ಯಗಳು ಹಾಗೂ 2027ರಲ್ಲಿ ಉತ್ತರ ಪ್ರದೇಶದಲ್ಲಿ ನಡೆಯುವ ಚುನಾವಣೆಗಳು, 2029ರ ಲೋಕಸಭೆ ಚುನಾವಣೆಯ ಮೇಲೆ ಪ್ರಭಾವ ಬೀರುವ ಸಾಧ್ಯತೆ ಹೆಚ್ಚು. ವಿರೋಧಿ ಬಣಕ್ಕೆ ಈ ಹಣಾಹಣಿ ಮಹತ್ವದ್ದಾಗಿದೆ. ಈ ರಾಜ್ಯಗಳಲ್ಲಿ ಜಯಗಳಿಸುವುದರ ಮೂಲಕ 'ಇಂಡಿಯಾ' ಕೂಟದ ಪಕ್ಷಗಳೆಲ್ಲಾ ಒಗಟ್ಟಾಗಿದ್ದೇವೆಂದು ಸಾರಲು ಮತ್ತು ಬಿಜೆಪಿಗೆ ತಾವು ವಿಶ್ವಾಸಾರ್ಹ ವಿರೋಧಿ ಬಣವೆಂದು ಮತದಾರರಿಗೆ ಮನವರಿಕೆ ಮಾಡಲು ಇದು ಮುಖ್ಯ.

ಅಸ್ಸಾಂನಲ್ಲಿ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮ ಬಿಟ್ಟರೆ, ಬಿಜೆಪಿಗೆ ಉಳಿದ ಮೂರೂ ರಾಜ್ಯಗಳಲ್ಲಿ ಮತ ಸೆಳೆಯಬಲ್ಲ ಪ್ರಮುಖ ರಾಜ್ಯ ನಾಯಕರಿಲ್ಲ. ಹಾಗಾಗಿ, ಕೇಸರಿ ಪಕ್ಷ ಪ್ರಧಾನಿ ನರೇಂದ್ರ ಮೋದಿ ವರ್ಚಸ್ಸನ್ನು ಹೆಚ್ಚು ಅವಲಂಬಿಸಬೇಕಾಗುತ್ತದೆ. ಈ ಎಲ್ಲಾ ರಾಜ್ಯಗಳಲ್ಲಿ ಸದ್ಯದಲ್ಲೇ ಮಹಿಳೆಯರೂ ಸೇರಿದಂತೆ ಮತದಾರರ ಓಲೈಕೆ ಗುರಿಯಾಗಿಸಿ ತರಹೇವಾರಿ ಘೋಷಣೆಗಳನ್ನು ಎಲ್ಲ ಪಕ್ಷಗಳೂ ಮಾಡಲಿವೆ. ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯ (ಎಸ್‌ಐಆರ್) ಗೊಂದಲಗಳೂ ಚುನಾವಣೆಯ ಕಾವು ಏರಿಸುವುದರಲ್ಲಿ ಸಂಶಯವಿಲ್ಲ. ಈ ನಾಲ್ಕೂ ರಾಜ್ಯಗಳಲ್ಲಿ ಸದ್ಯದ ಚುನಾವಣಾ ವಾತಾವರಣ ಹೇಗಿದೆಯೆಂದು ನೋಡೋಣ.

ಪಶ್ಚಿಮ ಬಂಗಾಳ: ಪ್ರಕ್ಷುಬ್ಧ ಪರಿಸ್ಥಿತಿಯಿರುವ ಬಾಂಗ್ಲಾದೇಶದ ಜೊತೆ ಗಡಿ ಅಷ್ಟೇ ಅಲ್ಲದೆ ನಿಕಟ ಸಂಬಂಧ ಹೊಂದಿರುವ ಪೂರ್ವ ಭಾರತದ ಈ ರಾಜ್ಯದ ಚುನಾವಣೆ ಕುತೂಹಲ ಕೆರಳಿಸಿದೆ. 2021ರ ಅಸೆಂಬ್ಲಿ ಚುನಾವಣೆಯಲ್ಲಿ ಬಿಜೆಪಿ ಜಯಗಳಿಸಲು ಭಾರೀ ಪ್ರಯತ್ನ ನಡೆಸಿತಾದರೂ, ಕೊನೆಯಲ್ಲಿ 77 ಸ್ಥಾನ (ಒಟ್ಟು ಅಸೆಂಬ್ಲಿ ಸ್ಥಾನ 294) ಮತ್ತು ಶೇ 38.15ರಷ್ಟು ಮತಗಳಿಸಿ ಸೋಲು ಅನುಭವಿಸಿತು. ಭರ್ಜರಿ ಜಯಗಳಿಸಿದ ಮಮತಾ ಬ್ಯಾನರ್ಜಿಯವರ ತೃಣಮೂಲ ಕಾಂಗ್ರೆಸ್ 215 ಸ್ಥಾನ ಗಳಿಸಿ, ಶೇ 48.02ರಷ್ಟು ಮತ ಗಳಿಸಿತು. ಕಾಂಗ್ರೆಸ್–ಕಮ್ಯುನಿಸ್ಟ್ ಪಾರ್ಟಿಗಳ ಕೂಟ ಹೀನಾಯ ಪ್ರದರ್ಶನ ನೀಡಿ ಕೇವಲ 1 ಸ್ಥಾನ ಗಳಿಸಿತು. ಲೋಕಸಭಾ ಚುನಾವಣೆಯಲ್ಲೂ ಟಿಎಂಸಿ ಒಟ್ಟು 42 ಸ್ಥಾನಗಳಲ್ಲಿ 29 ಗೆದ್ದರೆ, ಬಿಜೆಪಿ 12 ಸ್ಥಾನಕ್ಕೆ ತೃಪ್ತಿಪಡಬೇಕಾಯಿತು.

ಭ್ರಷ್ಟಾಚಾರ ಪ್ರಕರಣಗಳಲ್ಲಿ ತೃಣಮೂಲ ನಾಯಕರ ಮೇಲೆ ಕೇಂದ್ರ ತನಿಖಾ ತಂಡಗಳಿಂದ ನಡೆದ ವಿಚಾರಣೆ ಮತ್ತು ಸೆರೆ, ವೈದ್ಯಕೀಯ ವಿದ್ಯಾರ್ಥಿನಿಯ ಮೇಲೆ ನಡೆದ ಅತ್ಯಾಚಾರ, ಕೆಲವೆಡೆ ನಡೆದ ಹಿಂಸಾಚಾರದ ಘಟನೆಗಳು ರಾಜ್ಯ ಸರ್ಕಾರಕ್ಕೆ ತೀವ್ರ ಮುಜುಗರ ಉಂಟುಮಾಡಿದರೂ, ಈ ವಿದ್ಯಮಾನಗಳು ಬಿಜೆಪಿಗೆ ಮತಗಳಾಗಿ ಪರಿವರ್ತನೆಯಾಗುವುದು ಕಷ್ಟ ಎನ್ನಲಾಗಿದೆ. ಅಲ್ಪಸಂಖ್ಯಾತರ (ಶೇ 27ರಷ್ಟು ಜನಸಂಖ್ಯೆ) ಜೊತೆ ಮಹಿಳೆಯರ ಮತಗಳು ಈ ಚುನಾವಣೆಯಲ್ಲೂ ಟಿಎಂಸಿಯ ಜೊತೆಯಲ್ಲಿಯೇ ಉಳಿಯುತ್ತವೆ ಎಂದು ಹೇಳಲಾಗುತ್ತಿದೆ.

ಅಸ್ಸಾಂ: ಉತ್ತರ ಪ್ರದೇಶದ ಯೋಗಿ ಆದಿತ್ಯನಾಥ ಬಿಟ್ಟರೆ ಬಿಜೆಪಿ ಮುಖ್ಯಮಂತ್ರಿಗಳಲ್ಲಿ ಹೆಚ್ಚು ವಿವಾದಾಸ್ಪದ ನಾಯಕ ಅಸ್ಸಾಂನ ಹಿಮಂತ ಬಿಸ್ವ ಶರ್ಮ. ಕಾಂಗ್ರೆಸ್ ತ್ಯಜಿಸಿ ಬಿಜೆಪಿ ಸೇರಿದ ಶರ್ಮ, ಈ ಬಾರಿಯೂ ಅಸ್ಸಾಂ ಫಲಿತಾಂಶದಲ್ಲಿ ಬದಲಾವಣೆಯಿಲ್ಲದಿದ್ದರೆ, ಪಕ್ಷದ ಮೊದಲ ಸಾಲಿನ ನಾಯಕರಲ್ಲಿ ಒಬ್ಬರಾಗುವುದರಲ್ಲಿ ಸಂಶಯವಿಲ್ಲ.

ಕಳೆದ ಐದು ವರ್ಷಗಳಲ್ಲಿ ಅಸ್ಸಾಂ ಸರ್ಕಾರ ಅನೇಕ ಜನಹಿತ ಕಾರ್ಯಕ್ರಮ ಕೈಗೊಂಡಿದೆಯೆನ್ನಲಾಗಿದೆ. ಮುಸ್ಲಿಂ ಬಾಹುಳ್ಯವಿರುವ (ಶೇ 38) ಈ ರಾಜ್ಯದಲ್ಲಿ ಶರ್ಮ ಅನೇಕ ಬಾರಿ ಧ್ರುವೀಕರಣದ ಮಾತನಾಡಿ ವಿವಾದ ಸೃಷ್ಟಿಸಿದ್ದಾರೆ. '2041ರ ವೇಳೆಗೆ ಅಸ್ಸಾಂನಲ್ಲಿ ಹಿಂದೂಗಳೇ ಅಲ್ಪಸಂಖ್ಯಾತರಾಗುತ್ತಾರೆ' ಎಂಬ ಅವರ ಈಚಿನ ಹೇಳಿಕೆಗೆ ಪ್ರತಿಪಕ್ಷಗಳಿಂದ ತೀವ್ರ ವಿರೋಧ ವ್ಯಕ್ತವಾಗಿತ್ತು.

ಕಾಂಗ್ರೆಸ್‌ನ ಭದ್ರಕೋಟೆಯಾಗಿದ್ದ ಅಸ್ಸಾಂ ಕಳೆದ 10 ವರ್ಷಗಳಿಂದ ಬಿಜೆಪಿ ನೇತೃತ್ವದ ಎನ್‌ಡಿಎ ಬಿಗಿಮುಷ್ಠಿಯಲ್ಲಿದೆ. 2021ರಲ್ಲಿ ಒಟ್ಟು 126 ಸ್ಥಾನಗಳಲ್ಲಿ ಎನ್‌ಡಿಎ 75 ಕ್ಷೇತ್ರಗಳಲ್ಲಿ (ಶೇ 59.5ರಷ್ಟು ಮತಗಳಿಕೆ) ಹಾಗೂ ಕಾಂಗ್ರೆಸ್ ಮುಂದಾಳತ್ವದ ಮಹಾಜೋಟ್ 50 (ಶೇ 39.7) ಸ್ಥಾನಗಳಿಸಿದವು. 2024ರ ಲೋಕಸಭೆ ಚುನಾವಣೆಯಲ್ಲಿ ಎನ್‌ಡಿಎ 11 ಹಾಗೂ 'ಇಂಡಿಯಾ' ಗುಂಪು 3 ಸ್ಥಾನ ಗಳಿಸಿದ್ದವು.

ತಮಿಳುನಾಡು: ಬಿಜೆಪಿ ತನ್ನ ನೆಲೆ ಸ್ಥಾಪಿಸಲು ಹರಸಾಹಸಪಡುತ್ತಿರುವ ಈ ದಕ್ಷಿಣ ರಾಜ್ಯದಲ್ಲಿ ಎಲ್ಲರ ಕಣ್ಣು ಇರುವುದು ಸಿನಿಮಾ ಹೀರೊ ವಿಜಯ್ ಮೇಲೆ. ತಮಿಳಗ ವೆಟ್ರಿ ಕಳಗಂ ಪಕ್ಷ ಸ್ಥಾಪಿಸಿದ ವಿಜಯ್ ಸಭೆಗಳಿಗೆ ಭಾರೀ ಜನಸ್ತೋಮ ಸೇರುತ್ತಿದೆ. ಆದರೆ, ಇದು ವಿಜಯ್ ಪರ ಮತವಾಗಿ ಪರಿವರ್ತನೆಯಾಗುತ್ತದೆಯೇ ಎನ್ನುವುದು ಮುಖ್ಯ ಪ್ರಶ್ನೆ. ಇದುವರೆಗೂ ಆಡಳಿತಾರೂಢ ಡಿಎಂಕೆ ಹಾಗೂ ಬಿಜೆಪಿ ಸಮಾನ ವಿರೋಧಿಗಳು ಎನ್ನುತ್ತಿದ್ದ ಟಿವಿಕೆ ಪಕ್ಷ ಈಗ ವಿಜಯ್ ಮುಖ್ಯಮಂತ್ರಿ ಅಭ್ಯರ್ಥಿ ಎಂದು ಯಾವ ಪಕ್ಷ ಒಪ್ಪುತ್ತದೆಯೋ ಆ ಪಕ್ಷದ ಜೊತೆ ಹೊಂದಾಣಿಕೆ ಮಾಡಿಕೊಳ್ಳಲು ತಯಾರಿದೆ ಎನ್ನುವ ಸಂದೇಶ ರವಾನೆ ಮಾಡಿದೆ. ಕಾಂಗ್ರೆಸ್ ಅಥವಾ ಬಿಜೆಪಿ, ಟಿವಿಕೆ ಜೊತೆ ಸಖ್ಯ ಬೆಳೆಸುವ ಸಂದರ್ಭ ಕಡಿಮೆ. ಈ ನಡುವೆ, ಡಾ. ಅನ್ಬುಮಣಿ ರಾಮದಾಸ್ ಬಣದ ಪಿಎಂಕೆ, ಎನ್‌ಡಿಎ ಸೇರಿದೆ. ದಿವಂಗತ ವಿಜಯಕಾಂತ್ ಅವರ ಡಿಎಂಡಿಕೆ, ಮತ್ತು ಎಐಎಡಿಎಂಕೆ ತೊರೆದಿರುವ ಪನ್ನೀರ್ ಸೆಲ್ವಂ ಹಾಗೂ ಟಿಟಿವಿ ದಿನಕರನ್ ಅವರನ್ನು ಎನ್‌ಡಿಎಗೆ ಸೇರಿಸಿಕೊಳ್ಳಲು ಬಿಜೆಪಿ ಉತ್ಸುಕವಾಗಿದೆ. ತಮಿಳುನಾಡಿನ ಸಿ.ಪಿ. ರಾಧಾಕೃಷ್ಣನ್ ಅವರನ್ನು ಬಿಜೆಪಿ ಉಪರಾಷ್ಟ್ರಪತಿಯನ್ನಾಗಿ ಮಾಡಿದ್ದು, ಇದು ಚುನಾವಣೆಯಲ್ಲಿ ಎಷ್ಟರಮಟ್ಟಿಗೆ ಆ ಪಕ್ಷಕ್ಕೆ ಸಹಾಯವಾಗಲಿದೆಯೋ ನೋಡಬೇಕು. 2016ರಲ್ಲಿ ಜಯಲಲಿತಾ ನಿಧನರಾದ ಬಳಿಕ ಅವರ ಎಐಎಡಿಎಂಕೆ ಯಾವುದೇ ಚುನಾವಣೆ ಗೆದ್ದಿಲ್ಲ.

ರಾಜ್ಯ ವಿಧಾನಸಭೆಯ 234 ಸ್ಥಾನಗಳ ಪೈಕಿ ಡಿಎಂಕೆ ನಾಯಕತ್ವದ ಮೈತ್ರಿಕೂಟ 133 ಸ್ಥಾನಗಳನ್ನೂ (ಶೇ 37.7ರಷ್ಟು ಮತಗಳಿಕೆ), ಎಐಎಡಿಎಂಕೆ ಮುನ್ನಡೆಸಿದ ತಂಡ 66 ಸ್ಥಾನಗಳನ್ನೂ (ಶೇ 33.29ರಷ್ಟು ಮತಗಳಿಕೆ) ಪಡೆಯಿತು. ಲೋಕಸಭೆ ಚುನಾವಣೆಯಲ್ಲಿ ರಾಜ್ಯದ ಎಲ್ಲಾ 39 ಸ್ಥಾನಗಳಲ್ಲೂ ಅಭೂತಪೂರ್ವ ಜಯಗಳಿಸಿದ ಡಿಎಂಕೆ ಕೂಟ, ತನ್ನ ಪ್ರತಿಸ್ಪರ್ಧಿಗಳಿಗೆ ಭಾರೀ ಸವಾಲಾಗಿ ನಿಂತಿದೆ.

ಕೇರಳ: 2024ರ ಲೋಕಸಭೆ ಚುನಾವಣೆಯಲ್ಲಿ ತ್ರಿಶ್ಶೂರ್‌ನಲ್ಲಿನ ಗೆಲುವು, ಕಳೆದ ತಿಂಗಳು ತಿರುವನಂತಪುರಂ ನಗರಸಭೆಯ ಜಯದ ಹೊರತಾಗಿಯೂ ರಾಜ್ಯದಲ್ಲಿ ಬಿಜೆಪಿ ಉತ್ಸಾಹದಲ್ಲಿಲ್ಲ. ತೀವ್ರ ಪ್ರಯತ್ನದ ನಂತರವೂ ಕೇರಳದಲ್ಲಿ ಬಿಜೆಪಿ ವರ್ಚಸ್ಸು ಹೆಚ್ಚಾದಂತಿಲ್ಲ. ಶೇ 18ರಷ್ಟಿರುವ ಕ್ರಿಶ್ಚಿಯನ್ನರು ನಿರೀಕ್ಷೆಯಂತೆ ಪಕ್ಷದ ಪರ ಒಲವು ತೋರದಿರುವುದು, ದೇಶದ ಅನೇಕ ಕಡೆ ಕಳೆದ ಕೆಲವು ವಾರಗಳಲ್ಲಿ ಕ್ರಿಶ್ಚಿಯನ್ನರ ಮೇಲೆ ಮತಾಂಧರಿಂದ ನಡೆದ ದಾಳಿ ಹಾಗೂ ಅದನ್ನು ಪ್ರಶ್ನಿಸದ ಬಿಜೆಪಿ – ಈ ಎಲ್ಲ ಕಾರಣಗಳಿಂದ ಕೇಸರಿ ಬಣ ಈ ಬಾರಿಯೂ ಅಸೆಂಬ್ಲಿ ಕಣದಲ್ಲಿ ದುರ್ಬಲ ಆಟಗಾರನಾಗಿಯೇ ಉಳಿಯುವ ಸಾಧ್ಯತೆ ಹೆಚ್ಚಾಗಿದೆ.

ಡಿಸೆಂಬರ್‌ನ ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಕಾಂಗ್ರೆಸ್ ನೇತೃತ್ವದ ಯುಡಿಎಫ್, ಕಮ್ಯುನಿಸ್ಟ್ ಪಕ್ಷಗಳ ಕೂಟವಾದ ಎಲ್‌ಡಿಎಫ್ ಮೇಲೆ ಜಯಗಳಿಸಿ ಆತ್ಮವಿಶ್ವಾಸದಿಂದ ಬೀಗುತ್ತಿದೆ. ಈ ಹಣಾಹಣಿಯಲ್ಲಿ ಯುಡಿಎಫ್ ಒಟ್ಟು 649 ಸಂಸ್ಥೆಗಳಲ್ಲಿ ವಿಜಯಿಯಾದರೆ, ಎಲ್‌ಡಿಎಫ್ 439 ಹಾಗೂ ಬಿಜೆಪಿ 29ರಲ್ಲಿ ಗೆಲುವು ಸಾಧಿಸಿತು.

ಕೇರಳದಲ್ಲಿ ಯಾವುದೇ ಕೂಟ ಸತತ ಎರಡನೇ ಬಾರಿಗೆ ಗೆಲ್ಲುವುದು ಅಪರೂಪ. ಆದಾಗ್ಯೂ ಎಲ್‌ಡಿಎಫ್ 2021ರಲ್ಲಿ ಎರಡನೇ ಬಾರಿಗೆ ಗೆಲುವು ಸಾಧಿಸಿ ಅಚ್ಚರಿ ಮೂಡಿಸಿತ್ತು. ಈ ಬಾರಿ ಈ ಕೂಟ ಸೋತರೆ, ದೇಶದ ಯಾವುದೇ ರಾಜ್ಯದಲ್ಲಿ ಕಮ್ಯುನಿಸ್ಟ್ ಸರ್ಕಾರ ಇರುವುದಿಲ್ಲ. ಕಾಂಗ್ರೆಸ್ ಗೆದ್ದರೆ ಕರ್ನಾಟಕ, ತೆಲಂಗಾಣ, ಹಿಮಾಚಲ ಪ್ರದೇಶ ಸೇರಿದಂತೆ 4 ರಾಜ್ಯಗಳಲ್ಲಿ ಪಕ್ಷದ ಸರ್ಕಾರವಿರುತ್ತದೆ. ಇಂಡಿಯಾ ಕೂಟದಲ್ಲಿಯೂ ಪಕ್ಷದ ಪ್ರಾಮುಖ್ಯತೆ ಹೆಚ್ಚುತ್ತದೆ.

2021ರ ವಿಧಾನಸಭೆ ಚುನಾವಣೆಯಲ್ಲಿ ಒಟ್ಟು 140 ಸ್ಥಾನಗಳ ಪೈಕಿ 99 ಸ್ಥಾನಗಳಲ್ಲಿ (ಶೇ. 43.38ರಷ್ಟು ಮತಗಳಿಕೆ) ಎಲ್‌ಡಿಎಫ್ ಜಯಗಳಿಸಿದರೆ, 41 ಸ್ಥಾನಗಳು (ಶೇ. 38.81) ಯುಡಿಎಫ್ ಪಾಲಾದವು. 2024ರ ಲೋಕಸಭೆ ಚುನಾವಣೆಯಲ್ಲಿ ಯುಡಿಎಫ್ 18, ಎಲ್ ಡಿಎಫ್ 1 ಹಾಗೂ ಬಿಜೆಪಿ 1 ಕ್ಷೇತ್ರದಲ್ಲಿ ಗೆದ್ದಿದ್ದವು.

ಲೇಖಕರು: ಹಿರಿಯ ಪತ್ರಕರ್ತ

ವಾಚಕರ ವಾಣಿ

ಕನ್ನಡ ಪುಸ್ತಕ ಸಂಸ್ಕೃತಿ, ದೇವರೇ ಗತಿ!

ರಾಜ್ಯದ ಗ್ರಂಥಾಲಯಗಳಲ್ಲಿ ಹೊಸ ಪುಸ್ತಕಗಳಿಲ್ಲ. ಮೂರು ವರ್ಷಗಳಾದರೂ ಪುಸ್ತಕ ಖರೀದಿಯ ಬಾಕಿ ಹಣ ಪಾವತಿಯಾಗಿಲ್ಲ. ಸಗಟು ಖರೀದಿ ಪ್ರಕ್ರಿಯೆ ನಿಂತು ಹೋಗಿದೆ. ಆರ್ಥಿಕ ವರ್ಷ ಮುಗಿಯುತ್ತಿದ್ದರೂ ಬಜೆಟ್ ಅನುಮೋದನೆ ಆಗಿಲ್ಲ. ಅಂತಿಮಗೊಂಡಿರುವ 2022ನೇ ಸಾಲಿನ ಪುಸ್ತಕಗಳ ಆಯ್ಕೆಪಟ್ಟಿ ಬಿಡುಗಡೆಯಾಗುತ್ತಿಲ್ಲ. ಎಂಟು ವರ್ಷಗಳಿಂದ ಪುಸ್ತಕದ ಪುಟವಾರು ದರ ಏರಿಕೆ ಮಾಡುತ್ತಿಲ್ಲ. ಈ ಬಗ್ಗೆ ಮುಖ್ಯಮಂತ್ರಿ, ಸಚಿವರು, ಸರ್ಕಾರದ ಕಾರ್ಯದರ್ಶಿ, ಇಲಾಖೆಯ ಆಯುಕ್ತರಿಗೆ ಹತ್ತಾರು ಮನವಿ ಪತ್ರ ಸಲ್ಲಿಸಿ, ಚರ್ಚಿಸಿ, ಬೇಡಿ ಕೊಂಡರೂ ಪ್ರಯೋಜನವಾಗಿಲ್ಲ. ಕಾರಣ, ಯಕ್ಷಪ್ರಶ್ನೆ! ತೆರಿಗೆ ಹಣದಿಂದ ಜೀವಿಸುತ್ತಿರುವ ಅಧಿಕಾರಿಗಳ ನಿರ್ಲಕ್ಷ್ಯದ ಬಗ್ಗೆ ಪ್ರಶ್ನೆ ಮಾಡಲು ಸಾಧ್ಯವೇ? ರಾಜ್ಯದ ಪುಸ್ತಕ ಸಂಸ್ಕೃತಿಯನ್ನು ದೇವರೇ ಉಳಿಸಿ ಬೆಳೆಸಬೇಕಿದೆ.

ನಿಡಸಾಲೆ ಪುಟ್ಟಸ್ವಾಮಯ್ಯ, ಬೆಂಗಳೂರು

ಸಿಗರೇಟ್ ಕೃತಕ ಅಭಾವ: ಗ್ರಾಹಕರಿಗೆ ಬರೆ

ಕೇಂದ್ರ ಸರ್ಕಾರವು ಫೆಬ್ರುವರಿ 1ರಿಂದ ಸಿಗರೇಟ್ ಹಾಗೂ ತಂಬಾಕು ಉತ್ಪನ್ನಗಳ ಮೇಲೆ ಹೆಚ್ಚುವರಿ ಅಬಕಾರಿ ಸುಂಕ ವಿಧಿಸುವುದಾಗಿ ಪ್ರಕಟಿಸಿದೆ. ಇದು ಸಿಗರೇಟ್ ಮಾರಾಟಗಾರರಿಗೆ ವರದಾನವಾಗಿದೆ. ಸಿಗರೇಟನ್ನು ದಾಸ್ತಾನು ಮಾಡಿಟ್ಟು ಒಂದೂವರೆಪಟ್ಟು ಹೆಚ್ಚು ಬೆಲೆಗೆ ಮಾರುತ್ತಿದ್ದಾರೆ. ಕೆಲವೆಡೆ ಪೂರೈಕೆ ಸ್ಥಗಿತಗೊಳ್ಳುವಂತೆ ಮಾಡುತ್ತಿದ್ದಾರೆ. ಈ ವಿಷಯದಲ್ಲಷ್ಟೇ ಅಲ್ಲ. ಪೆಟ್ರೋಲ್ ಬೆಲೆ ಏರಿಕೆ ಸಮಯದಲ್ಲಿಯೂ ಕೃತಕ ಅಭಾವ ಸೃಷ್ಟಿಸುತ್ತಾರೆ. ಈ ಬಗ್ಗೆ ಸರ್ಕಾರ ತಪಾಸಣೆ ನಡೆಸಿ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕಿದೆ.

ಪ್ರಶಾಂತ್ ಕೆ.ಸಿ., ಚಾಮರಾಜನಗರ

ಮಂದಿರ ಪ್ರವೇಶಕ್ಕೆ ತಾರತಮ್ಯ ಏಕೆ?

ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ರಾಮ ಮಂದಿರಕ್ಕೆ ಭೇಟಿ ನೀಡಬಾರದೆಂದು ಕೆಲವು ಸನ್ಯಾಸಿಗಳು ಆಕ್ಷೇಪಿಸಿದ್ದಾರೆ. ಮಠ, ಮಂದಿರಗಳು ಎಲ್ಲರನ್ನೂ ಒಳಗೊಳ್ಳುವ ಸಾರ್ವಜನಿಕ ಕೇಂದ್ರಗಳಾಗಬೇಕು. ಅದರೊಳಗೆ ಹೋಗಿ ಬರಲು ಯಾರಪ್ಪಣೆಯ ಅಗತ್ಯವಿಲ್ಲ. ಆದರೂ, ಅಲ್ಲಿನ ಕೆಲವು ಪಟ್ಟಭದ್ರರು ಕೆಲವರಿಗೆ ಅವಕಾಶ ನೀಡುತ್ತಿಲ್ಲವೆಂದಾದರೆ, ಅದಿನ್ನೂ ಖಾಸಗಿ ಹಿಡಿತದಲ್ಲಿದೆ ಎಂದರ್ಥ.

ಇತ್ತೀಚಿನ ದಿನಗಳಲ್ಲಿ ಮಠ, ಮಂದಿರಗಳು ಭಕ್ತರ ಶ್ರದ್ಧಾಕೇಂದ್ರಗಳಾಗದೆ, ಭಕ್ತಿಯ ಹೆಸರಿನಲ್ಲಿ ಲೂಟಿ ಕೇಂದ್ರಗಳೂ, ಭ್ರಷ್ಟಾಚಾರಕ್ಕೆ ಆಶ್ರಯತಾಣಗಳೂ ಆಗುತ್ತಿವೆ. ಮೂರ್ತಿ ದರ್ಶನಕ್ಕೆ ಅಡಿಪಡಿಸುತ್ತಿರುವವರು ರಾಗ–ದ್ವೇಷಗಳನ್ನು ತ್ಯಜಿಸಿದ ಸನ್ಯಾಸಿಗಳಾಗಲು ಹೇಗೆ ಸಾಧ್ಯ? ಕೆರೆಯ ನೀರನ್ನು ಇಂತಹವರೇ ಮುಟ್ಟಬೇಕೆಂಬ ನಿಯಮ ಹಾಕಿಕೊಂಡವರಲ್ಲಿ ಸನಾತನಕ್ಕೆ ಏನರ್ಥ ಹುಡುಕುತ್ತೀರಿ? ಆದ್ದರಿಂದ ಆ ಮುಳ್ಳು ಬೇಲಿಯ ಮೇಲೆ ಬಟ್ಟೆ ಹಾಕುವ ಬದಲು ಅಲ್ಲಿಗೆ ಹೋಗದಿರುವುದೇ ಒಳ್ಳೆಯದು.

ತಾ.ಸಿ. ತಿಮ್ಮಯ್ಯ, ಬೆಂಗಳೂರು

ಜಾತ್ಯತೀತ ಮೌಲ್ಯಗಳಿಗೆ ಬೆಲೆ ಕಟ್ಟಲಾದೀತೆ?

'**ಕರ್ನಾಟಕಕ್ಕೆ** ಒಬ್ಬರೇ ದೇವರಾಜ ಅರಸು!' ಲೇಖನದಲ್ಲಿ (ಲೇ: ಆರ್. ರಘು (ಕೌಟಿಲ್ಯ), ಪ್ರ.ವಾ., ಜ. 16) ದೇವರಾಜ ಅರಸು ಮತ್ತು ಸಿದ್ದರಾಮಯ್ಯನವರ ಕಾರ್ಯವೈಖರಿ ಬಗ್ಗೆ ಪ್ರಸ್ತಾಪಿಸಲಾಗಿದೆ. ಆದರೆ, ಈ ಇಬ್ಬರ ಕಾಲಘಟ್ಟದ ರಾಜಕೀಯ ಇತಿಮಿತಿಗಳೇ ಬೇರೆ. ಈ ನಿಟ್ಟಿನಲ್ಲಿ ನೋಡಿದಾಗ ಇಬ್ಬರ ಶಕ್ತಿ, ಸಾಮರ್ಥ್ಯಗಳು ಸ್ಪಷ್ಟವಾಗುತ್ತವೆಯೇ ಹೊರತು ಇಬ್ಬರಲ್ಲಿ ಒಬ್ಬರನ್ನು ಮಾತ್ರ ಮೇಲೆಂದು ನೋಡುವುದು ಸರಿಯಲ್ಲ. ಅರಸು ಅವರ ಅಷ್ಟೆಲ್ಲಾ ಜನಪರ ಕಾಳಜಿಗಳ ಒಟ್ಟಿಗೆ, ಅವರ ಅವಧಿಯಲ್ಲಿಯೂ ಭ್ರಷ್ಟಾಚಾರ ಇತ್ತೆನ್ನುವುದನ್ನು ಗಮನಿಸಬೇಕು. ಸಿದ್ದರಾಮಯ್ಯನವರ ಅವಧಿಯಲ್ಲಿ ಭ್ರಷ್ಟಾಚಾರ ಎಲ್ಲೆ ಮೀರಿದೆ. ಆದರೂ, ಈ ಇಬ್ಬರೂ ಕೋಮುವಾದಿಗಳಾಗದೆ ಸಂವಿಧಾನ ಪ್ರತಿಪಾದಿಸುವ ಜಾತ್ಯತೀತ ಮೌಲ್ಯಕ್ಕೆ ಬದ್ಧರಾಗಿರುವುದನ್ನು ನಾವು ಮೆಚ್ಚಲೇಬೇಕಿದೆ.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ

ಚಾಮುಂಡಿ ಒಡಲು; ಮುಕ್ಕಾಗುವ ದಿಗಿಲು

ಚಾಮುಂಡಿ ಬೆಟ್ಟವು ತನ್ನ ನೈಸರ್ಗಿಕ ಸೌಂದರ್ಯ, ಭಕ್ತಿ ಮತ್ತು ಪರಂಪರೆಗೆ ಹೆಸರುವಾಸಿ. ಆದರೆ, ಇತ್ತೀಚಿನ ದಿನಗಳಲ್ಲಿ ಅಭಿವೃದ್ಧಿಯ ಹೆಸರಿನಲ್ಲಿ ಬೆಟ್ಟದ ಸೌಂದರ್ಯ ಹಾಗೂ ಪರಂಪರೆಗೆ ಧಕ್ಕೆ ತರಲಾಗುತ್ತಿದೆ. ಕೇಂದ್ರ ಸರ್ಕಾರದ 'ಪ್ರಸಾದ್' ಯೋಜನೆಯಡಿ ಚಾಮುಂಡಿ ಬೆಟ್ಟ ಪ್ರಾಧಿಕಾರ ಹಾಗೂ ರಾಜ್ಯ ಸರ್ಕಾರವು ದೇಗುಲದ ಪಕ್ಕದಲ್ಲಿ ವಾಹನಗಳ ತಂಗುದಾಣ, ವಾಣಿಜ್ಯ ಕಟ್ಟಡ ನಿರ್ಮಿಸಲು ರಸ್ತೆ ಅಗೆದಿದೆ. ಈ ಕಾಮಗಾರಿಯಿಂದ ದೇವಸ್ಥಾನದ ಸುತ್ತಮುತ್ತಲಿನ ಸೌಂದರ್ಯಕ್ಕೆ ಹಾನಿಯಾಗಲಿದೆ. ಈಗಾಗಲೇ, ಪ್ರಾಧಿಕಾರದ ರಚನೆ ವಿರುದ್ಧ ರಾಜವಂಶಸ್ಥರು ಕೋರ್ಟ್ ಮೆಟ್ಟಿಲೇರಿದ್ದಾರೆ. ಈಗ ಏಕಾಏಕಿ ಅಭಿವೃದ್ಧಿಯ ನೆಪದಲ್ಲಿ ಬೆಟ್ಟದ ನೈಸರ್ಗಿಕ ಸೌಂದರ್ಯವನ್ನು ಹಾಳು ಮಾಡಲು ಹೊರಟಿರುವುದು ಸರಿಯಲ್ಲ.

ಲಕ್ಷ್ಮಿ ಕಿಶೋರ್ ಅರಸ್, ಮೈಸೂರು

'ಕಲ್ಯಾಣ'ಕ್ಕೆ ಸಿಗದ ನ್ಯಾಯೋಚಿತ ಪಾಲು

ರೈಲ್ವೆ ಯೋಜನೆಗಳಲ್ಲಿ ರಾಜ್ಯಕ್ಕೆ ನ್ಯಾಯೋಚಿತ ಪಾಲು ಪಡೆಯುವುದಕ್ಕಾಗಿ 2003ರಲ್ಲಿ ಹುಬ್ಬಳ್ಳಿಯಲ್ಲಿ ನೈರುತ್ಯ ರೈಲ್ವೆಯ ಪ್ರಧಾನ ಕಚೇರಿ ಅಸ್ತಿತ್ವಕ್ಕೆ ಬಂದಿತು. ಆದರೆ, ಎರಡು ದಶಕದ ನಂತರವೂ ಕೆಲವು ಜಿಲ್ಲೆಗಳಿಗೆ ರೈಲ್ವೆ ಸೌಲಭ್ಯಗಳು ಮರೀಚಿಕೆಯಾಗಿವೆ. ಪ್ರತ್ಯೇಕ ವಲಯ ಸ್ಥಾಪನೆಯ ಉದ್ದೇಶವೇ ಮೂಲೆಗೆ ಸರಿದಿದೆ. ಕಳೆದ 10 ವರ್ಷಗಳಿಂದ ಮೈಸೂರು, ಶಿವಮೊಗ್ಗ, ಹುಬ್ಬಳ್ಳಿ, ಬೆಳಗಾವಿ ಜಿಲ್ಲೆಗಳಿಗೆ ಆದ್ಯತೆ ಸಿಕ್ಕಿದೆ. ಕಲ್ಯಾಣ ಕರ್ನಾಟಕದ ಜಿಲ್ಲೆಗಳನ್ನು ಕಡೆಗಣಿಸಲಾಗಿದೆ. ಸರಕು ಸಾಗಾಣಿಕೆಯಲ್ಲಿ ರೈಲ್ವೆ ವಲಯಕ್ಕೆ ಅತಿಹೆಚ್ಚು ಆದಾಯ ನೀಡುತ್ತಿರುವ ವಿಜಯನಗರ, ಬಳ್ಳಾರಿ, ಕೊಪ್ಪಳ ಜಿಲ್ಲೆಯ ಬೇಡಿಕೆಗಳಿಗೆ ಇಲಾಖೆಯು ಮಲತಾಯಿ ಧೋರಣೆ ತಳೆದಿದೆ.

ಮಹೇಶ್ ಕುಡಿತಿನಿ, ಹೊಸಪೇಟೆ

ಚುರುಮುರಿ

ರನ್‌ವೇ ಟಾಕ್!

• ತುರುವೇಕೆರೆ ಪ್ರಸಾದ್

'**ಮೊದ್ಲೆಲ್ಲಾ** ಹೈಕಮಾಂಡ್ ಓಲೈಸಕ್ಕೆ ಹಾರ–ತುರಾಯಿ ಸನ್ಮಾನ. ಈಗ ಪದರುಗುಟ್ಕೊಂಡು ಬೆನ್ನತ್ತಿ ಓಗ್ಬೇಕು ವಿಮಾನ' ನಕ್ಕ ಗುದ್ಲಿಂಗ.

'ಇಂಗ್ ವೊಸ ತರ ಸಾಹಸ ಮಾಡಕ್ಕೂ ಬೀಟನ್‌ವೇ, ರನ್‌ವೇ ಅಂತಾರೆ. ಆದ್ರೂ ಅಲ್ಯಾಕೋ ಸಿಎಂ, ಡಿಸಿಎಂ ಇಬ್ರೂ ನಾನೊಂದು ತೀರಾ ನೀನೊಂದು ತೀರಾ ಪ್ಯಾಥೋ ಸಾಂಗ್ ಆಕ್ಕಂಡು ನಿಂತಿದ್ರಲ್ಲ'.

'ತಲ ಸೀದು ಧಗ್ ಅನ್ನೋ ಒತ್ನಲ್ಲಿ ಏನ್ ರಾಕ್ ಸಾಂಗ್ ಆಕ್ಕಂಡು ಜಿಂಗಿಚಕ್ಕ ಡಾನ್ಸ್ ಮಾಡಕ್ಕೆ ಆಯ್ತುದೇನಾ?'

'ಅದೇನೋ ನಿಜವೇ ಬುಡು. ಈ ಮಾಡೆಲ್‌ಗಳ ಶೋ ರ್‍ಯಾಂಪ್ ಇರಕಾಕಿಲ್ವಾ, ಅದ್ನೂ ರನ್‌ವೇ ಅಂತಾರೆ. ಇದೂ ಒಂತರಾ ಹೈಕಮಾಂಡ್ ಮಾಡುಸ್ತಿರೋ ಡಾನ್ಸೇ ಕಣ್ಲಾ'.

'ರಾಹುಲಣ್ಣ ಯಾರನ್ನ ಪೈಲೆಟ್ ಮಾಡಿ ಕಾಕ್‌ಪಿಟ್ನಲ್ಲಿ ಹಾಕ್ತಾರೋ, ಯಾರನ್ನ ಸೋಕ್ ಪಿಟ್ನಲ್ಲಿ ಹಾಕ್ತಾರೋ ದೇವರಿಗೇ ಗೊತ್ತು'.

'ಸೋಕ್ ಪಿಟ್ ಅಂದ್ರೆ ಯೋನ್ಲಾ?'

'ನಾರಿನ್ ಗುಂಜ್ ಆಕಿ ನೀರು ಇಂಗ್ಸೋದು. ಇಲ್ಲಿ ಭಿನ್ನಮತನ ಇಂಗ್ಸೋದು. ನಾಯಕ್ರುಗೆ ಏನ್ ಯೋಳುದ್ರಂತೋ?'

'ಒಬ್ರಿಗೆ ಮತ ಕಳವು, ಇನ್ನೊಬ್ರಿಗೆ ಮನರೇಗಾ ಟಾಸ್ಕ್ ಕೊಟ್ಟು ಗೆದ್ದೋರಿಗೆ ಮಣೆ ಆಕದು ಅಂದವ್ರಂತೆ'.

'ಅಯ್ಯೊ ಮನೆಗೋಗೋ ಅಂಗಾದಾತು ಅಂತ ಮನೋರೋಗ ಅಂಟ್ಕಂಡದೆ. ಮನೆ'ರಾಗಾ' ಬದ್ಲಾಯಿಸುದ್ರೆ ಎಂಗೆ?'

'ಒಟ್ನಾಗೆ ರಾಹುಲಣ್ಣಂಗೆ ಭಾರೀ ಪೇಚಾಟ ಆಗೋಗದೆ. ಎಲ್ಲಾರಾ ಒಂದ, ಎರಡ ಮಾಡಕ್ಕು ಇಮಾನದಿಂದ ಇಳಿಯಂಗಿಲ್ಲ, ನಾಯಕ್ರು ಅಟಕಾಯಿಸ್ಕಂಡ್ ಬುಡ್ತಾರೆ'.

'ಅದ್ಕೇ ಸಮ್ಮರ್ ಟೂರ್ ಅಂತ ಫಾರಿನ್ಗೆ ಒಂಟೋದ್ರೆ ಮಳೆಗಾಲದ ಕುದಿವೇಶನದ ತಂಕ ರನ್‌ವೇ ಕಾಯೋ ಅಂಗಿಲ್ಲ'.

'ಇದು ರನ್‌ವೇ ಟಾಕ್ ಅಲ್ಲ, ರನ್ ಅವೇ ಟಾಕ್...' ಎಂದ ಪರ್ಮೇಶಿ.

ಎಲ್ಲಾ ಬಿದ್ದು ಬಿದ್ದು ನಕ್ಕರು.

ಸಂಗತ

ಸಿನಿಮಾ ಗೆಲ್ಲಲು ಕಥೆ–ಸರಳತೆಯೇ ಶಕ್ತಿ

ಕಥೆಗೆ ಗಮನಕೊಡದೆ, ನಾಯಕನಟ ಹಾಗೂ ಆತನ ಅಭಿಮಾನಿಗಳನ್ನು ಮೆಚ್ಚಿಸುವ ಉದ್ದೇಶದ ಕನ್ನಡ ಚಲನಚಿತ್ರಗಳು ಸಿನಿಮಾದ ನೈಜ ಪ್ರೇಕ್ಷಕರಿಂದ ದೂರ ಉಳಿಯುತ್ತವೆ.

• ಅಭಿಲಾಷ್ ಪಿ.ಎಸ್.

ಸಿನಿಮಾ ನೋಡುವ ಬಹುತೇಕ ಸಹೃದಯರು ತೆರೆಯ ಮೇಲೆ ಬಯಸುವುದು ಅರ್ಥಪೂರ್ಣವಾದ ಸರಳ ಕಥೆ, ಮನಸ್ಸಿಗೆ ಹತ್ತಿರವಾಗುವ ಪಾತ್ರಗಳು ಹಾಗೂ ಮನರಂಜನೆ. ಇಂಥ, ಗೆಲುವಿನ ಸೂತ್ರಗಳ ಸಮೀಕರಣದಂತಿರುವ ಮಲಯಾಳದ 'ಸರ್ವಂ ಮಾಯ' ಚಲನಚಿತ್ರ, ಕನ್ನಡ ಸಿನಿಮಾಗಳ ಸಮಸ್ಯೆಗಳನ್ನು ಎತ್ತಿ ತೋರಿಸುವಂತೆಯೂ ಇದೆ.

ಕಳೆದ ವರ್ಷಾಂತ್ಯದಲ್ಲಿ ಮೂರು ಬಿಗ್‌ಬಜೆಟ್ ಕನ್ನಡ ಸಿನಿಮಾಗಳು ತೆರೆಗೆ ಬಂದವು. ಇವು ಫ್ಯಾನ್ ವಾರ್, ಪೈರಸಿ ವಿಷಯದಲ್ಲಷ್ಟೇ ಸುದ್ದಿಯಾದವು. ಪೈರಸಿ ಬರೀ ಒಂದೆರಡು ಸಿನಿಮಾಗಳನ್ನು ಗುರಿಯಾಗಿಸಿ ಆಗುತ್ತಿಲ್ಲ. ಬಿಡುಗಡೆಯಾದ ಬಹುತೇಕ ಸಿನಿಮಾಗಳು ಪೈರಸಿ ಆಗುತ್ತಿವೆ. 'ಬ್ಲಾಕ್‌ಎಕ್ಸ್' ಕಂಪನಿಯು 'ಕೆಜಿಎಫ್ ಚಾಪ್ಟರ್– 2' ಸಿನಿಮಾದ 4 ಲಕ್ಷ ಲಿಂಕ್‌ಗಳನ್ನು ಬ್ಲಾಕ್ ಮಾಡಿತ್ತು. ಆ ಪೈಕಿ ಇಡೀ ಸಿನಿಮಾವಿದ್ದ 75 ಸಾವಿರ ಲಿಂಕ್‌ಗಳಿದ್ದವು. 'ಸು ಫ್ರಮ್ ಸೋ'ಗೂ ಪೈರಸಿ ತಟ್ಟಿತ್ತು. ಇಡೀ ಸಿನಿಮಾವಿದ್ದ 22 ಸಾವಿರ ಲಿಂಕ್‌ಗಳನ್ನು ನಿರ್ಮಾಣ ಸಂಸ್ಥೆ ತೆಗೆದುಹಾಕಿತ್ತು. ಪೈರಸಿ ಸಮಸ್ಯೆ ನಡುವೆಯೂ ಈ ಸಿನಿಮಾಗಳು ಗೆದ್ದವು. ಪೈರಸಿ ಸಿನಿಮಾದ ಆದಾಯಕ್ಕೆ ಪೆಟ್ಟು ಕೊಡಬಹುದೇ ವಿನಾ ಇಡೀ ಸಿನಿಮಾವನ್ನು ನಾಶ ಮಾಡಲಾರದು. ಹೀಗಾಗಿ, ಒಂದು ಸಿನಿಮಾ ನಿರೀಕ್ಷಿತ ಯಶಸ್ಸು ಗಳಿಸಲಿಲ್ಲ ಎಂದರೆ ಅವುಗಳ ಕಥೆ, ನಿರೂಪಣೆಯ ಬಗ್ಗೆ ವಿಶ್ಲೇಷಣೆ ಅಗತ್ಯ.



'ಡೆವಿಲ್' ಒನ್‌ಲೈನ್ ಕಥೆ ಚೆನ್ನಾಗಿದ್ದರೂ, ಅದರ ನಿರೂಪಣೆಯಲ್ಲಿ ಎಡವಿತು. 'ಮಾರ್ಕ್'ನಲ್ಲಿ ಕಥೆಯತ್ತ ಗಮನ ಕೊಡದ ನಿರ್ದೇಶಕರು ನಾಯಕನ ಅಭಿಮಾನಿ ಆದರು, '45' ಮೇಕಿಂಗ್‌ನತ್ತಲೇ ವಾಲಿತು. ಹಲವರು ಎಡವಿ ಬಿದ್ದಿರುವ ಕಲ್ಲು ಗೋಚರಿಸುತ್ತಿದ್ದರೂ ಮತ್ತದೇ ದಾರಿಯಲ್ಲಿ ಹೋಗಿ ಎಡವುತ್ತಿದ್ದಾರೆ. ಅತ್ತ ಡಿ. 25ರಂದೇ ತೆರೆಕಂಡ ಮಲಯಾಳದ 'ಸರ್ವಂ ಮಾಯ' ಸಿನಿಮಾ ಇಲ್ಲಿಯವರೆಗೆ ವಿಶ್ವದಾದ್ಯಂತ ₹125 ಕೋಟಿಗೂ ಹೆಚ್ಚು ಗಳಿಸಿದೆ ಎಂದು ಅದರ ನಿರ್ಮಾಣ ಸಂಸ್ಥೆ ಹೇಳಿದೆ. 'ಯು' ಪ್ರಮಾಣಪತ್ರ ಹೊಂದಿರುವ ಈ ಸಿನಿಮಾ– ಸರಳ ಕಥೆ, ನಿರೂಪಣೆ, ನಟನೆಯಿಂದಲೇ ಗೆದ್ದಿದೆ. ಬೇರೆ ಯಾವ ಮ್ಯಾಜಿಕ್ ಅನ್ನೂ ಅವರು ಮಾಡಿಲ್ಲ. 'ಸರ್ವಂ ಮಾಯ' ₹10–₹15 ಕೋಟಿ ವೆಚ್ಚದಲ್ಲಿ ನಿರ್ಮಾಣವಾದ ಸಿನಿಮಾ. ದಿನ ಉರುಳಿದಂತೆ ಅದರ ಗಳಿಕೆಯೂ ಏರುತ್ತಿದೆ. ಈ ಭಾಗ್ಯ ಕನ್ನಡದ ಇತ್ತೀಚಿನ ಸಿನಿಮಾಗಳಿಗಿಲ್ಲ.

ಬಿಗ್ ಬಜೆಟ್ ಸಿನಿಮಾಕ್ಕೆ ₹50ರಿಂದ ₹100 ಕೋಟಿ ಸುರಿಯುವುದು ಇತ್ತೀಚೆಗೆ ಕನ್ನಡದಲ್ಲಿ ಸಾಮಾನ್ಯ ಎಂಬಂತಾಗಿದೆ. ಹೀಗೆ ಸುರಿದು ಅದರ ಎರಡರಷ್ಟು ಪಡೆಯುವುದರಲ್ಲಿ ಸಿನಿಮಾದ ಅಥವಾ ಚಿತ್ರರಂಗದ ಗೆಲುವಿಲ್ಲ. 'ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ', 'ಕಾಂತಾರ', 'ಸು ಫ್ರಮ್ ಸೋ' ರೀತಿಯಲ್ಲಿ, ಹತ್ತು–ಇಪ್ಪತ್ತು ಕೋಟಿಯೊಳಗೆ ಸಿನಿಮಾ ಮಾಡಿ ಅದರ ಹತ್ತರಷ್ಟು ಮರಳಿ ಪಡೆಯುವುದೇ ವಹಿವಾಟು, ಜಾಣತನ. ಇದಕ್ಕೆ ಉತ್ತಮ ಕಥೆಯ ಆಯ್ಕೆಯೇ ಮೊದಲ ಹೆಜ್ಜೆ.

ಕನ್ನಡದಲ್ಲಿ 'ಫೀಲ್ ಗುಡ್' ಸಿನಿಮಾಗಳ ಸಂಖ್ಯೆ ಇತ್ತೀಚಿನ ದಿನಗಳಲ್ಲಿ ಇಳಿಕೆಯಾಗುತ್ತಿದೆ. 'ಯು' ಪ್ರಮಾಣ ಪತ್ರವಿರುವ ಸಿನಿಮಾಗಳು ವಿರಳವಾಗುತ್ತಿವೆ. 'ಮುಂಗಾರು ಮಳೆ', 'ಗಾಳಿಪಟ', 'ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕಾಸರಗೋಡು'ನಂಥ ಪದೇ ಪದೇ ನೋಡಿದರೂ ಬೇಸರ ತರಿಸದ ಸೀದಾ ಸಾದಾ ಸಿನಿಮಾಗಳು ಬರುತ್ತಿಲ್ಲ. ಕನ್ನಡ ಚಿತ್ರರಂಗ ಕುಗ್ಗುತ್ತಿರಲು ಇದೂ ಒಂದು ಕಾರಣ.

ಮಲಯಾಳ ಚಿತ್ರರಂಗವು ನಿರಂತರವಾಗಿ ಒಳ್ಳೆಯ ಸಿನಿಮಾಗಳನ್ನು ನೀಡುವ ಮೂಲಕ ಗ್ಯಾರಂಟಿ ಪ್ರೇಕ್ಷಕರನ್ನು ರೂಪಿಸಿದೆ. ಇತ್ತೀಚಿನ ಅವರ ಸಿನಿಮಾ ಪಟ್ಟಿ ನೋಡಿ. ಕಳೆದ ಆಗಸ್ಟ್‌ನಲ್ಲಿ 'ಲೋಕಾ', ಅಕ್ಟೋಬರ್‌ನಲ್ಲಿ 'ಡಿಯಸ್ ಇರೇ', ನವೆಂಬರ್‌ನಲ್ಲಿ 'ಇಕೊ', ಡಿಸೆಂಬರ್‌ನಲ್ಲಿ 'ಕಲಮ್ ಕಾವಲ್' ಹಾಗೂ 'ಸರ್ವಂ ಮಾಯ' ಹೀಗೆ ಸರಾಸರಿ ತಿಂಗಳಿಗೊಂದರಂತೆ ಹಿಟ್ ಸಿನಿಮಾಗಳು ಅಲ್ಲಿ ಬಂದಿವೆ. 'ಲೋಕ' ಕರ್ನಾಟಕದಲ್ಲೇ ₹5 ಕೋಟಿವರೆಗೆ ಲಾಭ ಗಳಿಸಿದೆ. 'ಇಕೊ' ಸುಮಾರು ₹1 ಕೋಟಿ ಲಾಭ ಪಡೆದಿದೆ. ಇದಕ್ಕೆ ಪ್ರತಿಯಾಗಿ, ಕಳೆದೊಂದು ವರ್ಷದಲ್ಲಿ ಕೇರಳದಲ್ಲಿ ಹಣ ಗಳಿಸಿದ ಕನ್ನಡ ಸಿನಿಮಾಗಳು ಒಂದೆರಡಷ್ಟೇ. ಕರ್ನಾಟಕದಲ್ಲಿ 'ಗ್ಯಾರಂಟಿ ಪ್ರೇಕ್ಷಕರು' ಸಿದ್ಧಗೊಳ್ಳದ ಕಾರಣದಿಂದಾಗಿಯೇ 'ರೂಪಾಂತರ', 'ಶಿವಮ್ಮ', 'ಫೋಟೋ', 'ಪಪ್ಪಿ', 'ಹೆಬ್ಬುಲಿ ಕಟ್'ನಂಥ ಉತ್ತಮ ಸಿನಿಮಾಗಳು ಬಂದರೂ ಜನ ಚಿತ್ರಮಂದಿರದತ್ತ ಬರಲಿಲ್ಲ. ಒಟಿಟಿಯಲ್ಲಿ ಬಂದ ಬಳಿಕವಷ್ಟೇ ಇವು ಮೆಚ್ಚುಗೆ ಪಡೆದವು.

ನಿರ್ದೇಶಕರು ಅಭಿಮಾನಿಗಳಿಗಾಗಿ, ಜೊತೆಗೆ ಹೀರೊ ಅಭಿಮಾನಿಯಾಗಿ ಸಿನಿಮಾ ಮಾಡುವುದನ್ನು ನಿಲ್ಲಿಸಬೇಕು. ಮೊದಲು ಹೀರೊ ಅಂತಿಮಗೊಳಿಸಿಕೊಂಡು ಕಥೆ ಮಾಡುವುದು, ಹೀರೊಗಳು ಕಥೆಗೆ ಕೈ ಹಾಕುವುದೂ ಕಡಿಮೆಯಾಗಬೇಕು.

ಅಭಿಮಾನಿಗಳು ಸಿನಿಮಾವನ್ನು ಬಿಡುಗಡೆಯಾದ ಮೊದಲ ವಾರಾಂತ್ಯದಲ್ಲಿ ಓಡಿಸಬಹುದು. ಮುಂದಿನ ಇಡೀ ಓಟಕ್ಕೆ ಬೇಕಾಗುವುದು ನೈಜ ಸಿನಿಮಾ ಅಭಿಮಾನಿಗಳೇ! ಗೆದ್ದ ಎಲ್ಲಾ ಸಿನಿಮಾಗಳನ್ನು ಗೆಲ್ಲಿಸಿದ್ದು ಸಾಮಾನ್ಯ ಪ್ರೇಕ್ಷಕನೇ! ಈ ಚಿತ್ರರಸಿಕನಿಗೆ ಅದ್ದೂರಿ ಟ್ರೇಲರ್ ಲಾಂಚ್, ಪ್ರಿರಿಲೀಸ್ ಕಾರ್ಯಕ್ರಮ, ಹತ್ತಾರು ಸುದ್ದಿಗೋಷ್ಠಿಗಳು ಬೇಕಿಲ್ಲ. ಬೇಕಿರುವುದು ಒಳ್ಳೆಯ ಕಥೆ, ಮನರಂಜನೆ ನೀಡುವ ಸಿನಿಮಾವಷ್ಟೇ. ಅಷ್ಟನ್ನೂ ನೀಡದೇ ಹೋಗುವುದು ಸಿನಿಮಾ ನಿರ್ಮಾತೃಗಳು ಮಾಧ್ಯಮಕ್ಕೆ ಮಾಡುವ ವಂಚನೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಸಾರ್ವಜನಿಕ ಸ್ಥಳಗಳಲ್ಲಿ ಬೀದಿನಾಯಿ ಹಾವಳಿ ತಡೆಗೆ ಸುಪ್ರೀಂ ಕೋರ್ಟ್ ನೀಡಿರುವ ಸೂಚನೆ ಬಗ್ಗೆ ಎರಡು ಭಿನ್ನ ಅಭಿಪ್ರಾಯಗಳು

ಬೀದಿನಾಯಿಗಳ ತೆರವು ಅವೈಜ್ಞಾನಿಕ, ಅಪಾಯಕಾರಿ

• ಸುಧಾ ಎಸ್. ನಾರಾಯಣನ್

ಶಾಲೆ, ಆಸ್ಪತ್ರೆ ಹಾಗೂ ಬಸ್ ನಿಲ್ದಾಣಗಳಲ್ಲಿ ಆಶ್ರಯ ಪಡೆದಿರುವ ಬೀದಿ ನಾಯಿಗಳನ್ನು ತೆರವುಗೊಳಿಸಿ, ಅವುಗಳನ್ನು ಪುನರ್ವಸತಿ ಕೇಂದ್ರಗಳಿಗೆ ಸ್ಥಳಾಂತರಿಸುವಂತೆ ಸುಪ್ರೀಂ ಕೋರ್ಟ್ ಇತ್ತೀಚೆಗೆ ನೀಡಿರುವ ನಿರ್ದೇಶನವು ಸಾರ್ವಜನಿಕ ಸುರಕ್ಷತೆ ಮತ್ತು ಪ್ರಾಣಿಗಳ ಕ್ಷೇಮಾಭಿವೃದ್ಧಿಗೆ ಸಂಬಂಧಿಸಿದ ದೀರ್ಘ ಕಾಲದ ಚರ್ಚೆಯನ್ನು ಮತ್ತೆ ಮುನ್ನೆಲೆಗೆ ತಂದಿದೆ. ಮಕ್ಕಳು, ರೋಗಿಗಳು ಮತ್ತು ಸಾರ್ವಜನಿಕರ ಸುರಕ್ಷತೆಯ ಕುರಿತು ಸುಪ್ರೀಂ ಕೋರ್ಟ್ ವ್ಯಕ್ತಪಡಿಸಿರುವ ಕಳವಳವು ನ್ಯಾಯಸಮ್ಮತ ಮತ್ತು ಗಮನ ಕೊಡಬೇಕಾದ ಸಂಗತಿ ಆಗಿದ್ದರೂ, ಸೂಚಿಸಿರುವ ಪರಿಹಾರವು ಒಳಿತಿಗಿಂತಲೂ ಹೆಚ್ಚು ಕೆಡುಕನ್ನೇ ಮಾಡುವ ಅಪಾಯ ತಂದೊಡ್ಡಿದೆ. ಪ್ರಸ್ತಾವಿತ ಪರಿಹಾರವು ವೈಜ್ಞಾನಿಕ ಸಾಕ್ಷ್ಯ, ಸಾರ್ವಜನಿಕ ಆರೋಗ್ಯ ನಿಯಮಗಳು, ಪ್ರಾಣಿಗಳ ಕ್ಷೇಮಕ್ಕೆ ಸಂಬಂಧಿಸಿದ ವಾಸ್ತವ ಸಂಗತಿಗಳು ಮತ್ತು ಭಾರತದಲ್ಲಿ ದೀರ್ಘ ಕಾಲದಿಂದಲೂ ಜಾರಿಯಲ್ಲಿರುವ ಪ್ರಾಣಿಗಳೊಂದಿಗೆ ಸಹಬಾಳ್ವೆ ನಡೆಸುವ ಸಂಸ್ಕೃತಿಗೆ ವಿರುದ್ಧವಾಗಿದೆ.

ಬೀದಿನಾಯಿಗಳು ಎಂದರೆ ಮನುಷ್ಯರ ಜೀವನದಲ್ಲಿ ಪ್ರವೇಶಿಸುವ ಬಾಹ್ಯ ಬಿಕ್ಕಟ್ಟು ಎಂಬಂತೆ ಬಿಂಬಿಸಲಾಗುತ್ತದೆ. ವಾಸ್ತವದಲ್ಲಿ ಅವುಗಳು ಮಾನವ ಸಮಾಜ ವ್ಯವಸ್ಥೆ ಮತ್ತು ಅದರ ವೈಫಲ್ಯಗಳ ಪ್ರತಿಫಲ. ವೇಗವಾಗಿ ನಡೆಯುತ್ತಿರುವ ನಗರೀಕರಣ, ಅಸಮರ್ಪಕ ಘನ ತ್ಯಾಜ್ಯ ನಿರ್ವಹಣೆ, ಸಾಕುಪ್ರಾಣಿಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ ಬಿಡುವುದು, ಅನಿಯಂತ್ರಿತ ಸಂತಾನೋತ್ಪತ್ತಿ ಮತ್ತು ಪ್ರಾಣಿಗಳ ಕ್ಷೇಮಾಭಿವೃದ್ಧಿ ಕಾನೂನುಗಳನ್ನು ಸರಿಯಾಗಿ ಅನುಷ್ಠಾನಗೊಳಿಸದಿರುವುದರಿಂದ ವಸತಿ ಪ್ರದೇಶಗಳಲ್ಲಿ ನಾಯಿಗಳೂ ಸ್ವಚ್ಛಂದವಾಗಿ ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಈ ನಾಯಿಗಳು ರಾತ್ರಿ ಹಗಲಾಗುವುದರಲ್ಲಿ ಆ ಸ್ಥಳಗಳಲ್ಲಿ ಕಾಣಿಸಿಕೊಳ್ಳುವುದಿಲ್ಲ ಅಥವಾ ಹೊರಗಿನಿಂದಲೂ ಬಂದಿರುವುದಿಲ್ಲ. ಅವುಗಳು ದೇಶದ ನಗರ ಮತ್ತು ಅರೆ ನಗರ ಪ್ರದೇಶಗಳ ಅವಿಭಾಜ್ಯ ಅಂಗವಾಗಿವೆ.

‘ತೆರವು’ ಎಂಬ ಗೋಪ್ಯ ಕ್ರೌರ್ಯ: ಸಾರ್ವಜನಿಕ ಸ್ಥಳಗಳಿಂದ ಬೀದಿ ನಾಯಿಗಳನ್ನು ತೆರವುಗೊಳಿಸಿ, ಆಶ್ರಯ ಕೇಂದ್ರಗಳಿಗೆ ಸ್ಥಳಾಂತರಿಸುವುದು ಮಾನವೀಯ ನಡೆ ಎಂದು ಮೇಲ್ನೋಟಕ್ಕೆ ಕಾಣಬಹುದು. ಆದರೆ, ಈ ಪ್ರಕ್ರಿಯೆಯನ್ನು ಸೂಕ್ಷ್ಮವಾಗಿ ಗಮನಿಸಿದರೆ ಆ ಗ್ರಹಿಕೆ ಸುಳ್ಳು ಎಂಬುದು ಮನದಟ್ಟಾಗುತ್ತದೆ. ನಾಯಿಗಳು ತಾವಿದ್ದ ಸ್ಥಳದ ನೆನಪಿಟ್ಟುಕೊಳ್ಳುವ ಸಾಮರ್ಥ್ಯ ಮತ್ತು ಸಾಮಾಜಿಕ ಬಾಂಧವ್ಯ ಹೊಂದಿರುವ ಪ್ರಾಣಿಗಳು. ಅವುಗಳಿಗೆ ತಿಳಿದಿರುವ ಸ್ಥಳಗಳಿಂದ ತೆರವುಗೊಳಿಸುವುದರಿಂದ ನಾಯಿಗಳು ಮಾನಸಿಕ ಒತ್ತಡ, ಭಯ ಮತ್ತು ಆಘಾತಕ್ಕೆ ಸಿಲುಕುತ್ತವೆ. ನಮ್ಮಲ್ಲಿ ನಾಯಿಗಳ ಸೆರೆ ಕಾರ್ಯಾಚರಣೆಯು ಶಾಂತ ರೀತಿಯಲ್ಲಿ ನಡೆಯುವುದು ಬಹಳ ಕಡಿಮೆ. ಬಹುತೇಕ ಸಂದರ್ಭಗಳಲ್ಲಿ ಅಟ್ಟಿಸುವುದು, ಅವುಗಳು ಪ್ರತೀಕಾರ ತೋರುವುದು ನಡೆಯುತ್ತವೆ. ಬಂಧನದಂತಹ ಪರಿಸ್ಥಿತಿಯಲ್ಲಿ ಸಾಗಿಸಲಾಗುತ್ತದೆ. ಈ ಅನುಭವಗಳು ಶ್ವಾನಗಳನ್ನು ದೈಹಿಕ ಮತ್ತು ಮಾನಸಿಕವಾಗಿ ಕುಸಿಯುವಂತೆ ಮಾಡುತ್ತವೆ.

ಪುನರ್ವಸತಿ ಕೇಂದ್ರಗಳು ಆರೋಗ್ಯವಂತ ಮತ್ತು ಸ್ವತಂತ್ರವಾಗಿ ಜೀವಿಸುವ ನಾಯಿಗಳಿಗೆ ಸುರಕ್ಷಿತ ಎಂಬ ನಂಬಿಕೆ ಜನರಲ್ಲಿದೆ. ಅದು ನಿಜವಲ್ಲ. ಭಾರತದಾದ್ಯಂತ ಬಹುತೇಕ ಕೇಂದ್ರಗಳು ತಮ್ಮ ಸಾಮರ್ಥ್ಯಕ್ಕೂ ಮೀರಿದ ಸಂಖ್ಯೆಯ ಶ್ವಾನಗಳಿಗೆ ಆಶ್ರಯ ನೀಡುತ್ತಿವೆ. ವಾಸ್ತವದಲ್ಲಿ ಈ ಕೇಂದ್ರಗಳು ಗಾಯಗೊಂಡಿರುವ, ಕಾಯಿಲೆಗೆ ತುತ್ತಾಗಿರುವ, ಬಿಟ್ಟಿರುವ ಅಥವಾ ಹಿಂಸೆಗೆ ಗುರಿಯಾಗಿರುವ ನಾಯಿಗಳಿಗೆ ತಾತ್ಕಾಲಿಕ ಅವಧಿಗೆ ಆರೈಕೆ ನೀಡಲು ಮೀಸಲಾಗಿರುವಂಥವೇ ವಿನಾ, ಆರೋಗ್ಯವಾಗಿರುವ ನಾಯಿಗಳನ್ನು ಅನಿರ್ದಿಷ್ಟಾವಧಿಗೆ ಕೂಡಿ ಹಾಕುವುದಕ್ಕೆ ಇರುವಂಥದ್ದಲ್ಲ. ಹೆಚ್ಚುವರಿಯಾಗಿ ಸಾವಿರಾರು ಪ್ರಾಣಿಗಳಿಗೆ ಈ ಕೇಂದ್ರಗಳು ಆಶ್ರಯ ನೀಡಬೇಕು ಎಂದು ನಿರೀಕ್ಷಿಸುವುದು ಅವಾಸ್ತವಿಕ ಮಾತ್ರವಲ್ಲ, ಅಪಾಯಕಾರಿಯೂ ಹೌದು. ವರ್ಷಗಳ ಕಾಲ ಪಂಜರ ಅಥವಾ ಮುಚ್ಚಿದ ಆವರಣದಲ್ಲಿ ಬಂಧನದಲ್ಲಿರುವ ಶ್ವಾನಗಳು ತೀವ್ರ ಒತ್ತಡ, ಖಿನ್ನತೆಗೆ ಒಳಗಾಗುವುದು ಮಾತ್ರವಲ್ಲದೆ, ತಮ್ಮ ಸಹಜ ವರ್ತನೆಗಳನ್ನೂ ಕಳೆದುಕೊಳ್ಳುತ್ತವೆ.

ಸಾರ್ವಜನಿಕ ಆರೋಗ್ಯದ ಮೇಲೆ ಪರಿಣಾಮ: ಸಾರ್ವಜನಿಕ ಸ್ಥಳಗಳಿಂದ ಬೀದಿನಾಯಿಗಳನ್ನು ತೆರವುಗೊಳಿಸುವುದರಿಂದ ಸಾರ್ವಜನಿಕ ಆರೋಗ್ಯದ ಮೇಲೆ, ಅದರಲ್ಲೂ ಪ್ರಮುಖವಾಗಿ ರೇಬಿಸ್ ನಿಯಂತ್ರಣದ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ನಾಯಿಗಳನ್ನು ಕೊಲ್ಲುವುದು ಮತ್ತು ಅವುಗಳನ್ನು ಬೇರೆ ಕಡೆಗಳಿಗೆ ಸ್ಥಳಾಂತರಿಸುವುದರಿಂದ ರೇಬಿಸ್ ನಿರ್ಮೂಲನೆ ಮಾಡಲು ಸಾಧ್ಯವಾಗುವುದಿಲ್ಲ ಎಂಬುದನ್ನು ಜಾಗತಿಕ ಮಟ್ಟದ ಎಲ್ಲ ಆರೋಗ್ಯ ಸಂಸ್ಥೆಗಳು ಒಪ್ಪುತ್ತವೆ. ರೇಬಿಸ್ ಹರಡುವಿಕೆ ತಡೆಯಲು ಇರುವ ಏಕೈಕ ದಾರಿ ಎಂದರೆ, ನಾಯಿಗಳ ಸಮೂಹವು ಸೋಂಕಿನಿಂದ ರಕ್ಷಣೆ ಪಡೆಯುವುದು. ಒಂದು ಪ್ರದೇಶದಲ್ಲಿರುವ ಎಲ್ಲ ನಾಯಿಗಳಿಗೆ ಲಸಿಕೆ ಹಾಕಿಸುವುದರಿಂದ ಮಾತ್ರ ಇದು ಸಾಧ್ಯ.

> ಬೀದಿ ನಾಯಿಗಳ ರಕ್ಷಣೆಗೆ ನಮ್ಮ ಮುಂದಿರುವ ಮಾನವೀಯತೆಯ ದಾರಿ ಎಂದರೆ, ಎಬಿಸಿ ಕಾರ್ಯಕ್ರಮಗಳನ್ನು ಇನ್ನಷ್ಟು ಬಲಪಡಿಸುವುದು, ಸಾರ್ವತ್ರಿಕವಾಗಿ ಲಸಿಕೆ ನೀಡುವುದನ್ನು ಖಾತ್ರಿ ಪಡಿಸುವುದು, ತ್ಯಾಜ್ಯ ನಿರ್ವಹಣೆಯನ್ನು ಸುಧಾರಿಸುವುದು, ಅನಿಯಂತ್ರಿತ ಸಂತಾನೋತ್ಪತ್ತಿ ತಡೆಯುವುದು, ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಹೆಚ್ಚು ಹಣ ವ್ಯಯಿಸುವುದು

ಲಸಿಕೆ ಹಾಕಿಸಿರುವ ಮತ್ತು ಸಂತಾನಶಕ್ತಿಹರಣ ಶಸ್ತ್ರ ಚಿಕಿತ್ಸೆಗೆ ಒಳಪಟ್ಟಿರುವ ಬೀದಿನಾಯಿಗಳು ರೋಗ ಹರಡುವಿಕೆಗೆ ಜೈವಿಕ ತಡೆಗೋಡೆಯಾಗಿ ಕಾರ್ಯನಿರ್ವಹಿಸುತ್ತವೆ. ನಿರ್ದಿಷ್ಟ ಪ್ರದೇಶದಲ್ಲಿರುವ ಈ ನಾಯಿಗಳು, ಅಲ್ಲಿಗೆ ಲಸಿಕೆ ಹಾಕದ ನಾಯಿಗಳು ಬರದಂತೆ ತಡೆಯುತ್ತವೆ. ಒಂದು ವೇಳೆ ಈ ನಾಯಿಗಳನ್ನು ಅಲ್ಲಿಂದ ತೆರವುಗೊಳಿಸಿದ ತಕ್ಷಣ ಆ ಜಾಗ ನಾಯಿಗಳಿಂದ ಮುಕ್ತವಾಗುವುದಿಲ್ಲ. ಸುತ್ತಮುತ್ತಲಿನ ಪ್ರದೇಶಗಳು, ಗ್ರಾಮಗಳು ಅಥವಾ ಮೇಲ್ವಿಚಾರಣೆ ಇಲ್ಲದ ವಲಯಗಳಿಂದ ನಾಯಿಗಳು ಬಂದು ಈ ಸ್ಥಳವನ್ನು ಆಕ್ರಮಿಸಿಕೊಳ್ಳುತ್ತವೆ. ಈ ನಾಯಿಗಳಿಗೆ ಲಸಿಕೆ ಹಾಕದಿರುವ, ಸಂತಾನಶಕ್ತಿಹರಣ ಶಸ್ತ್ರ ಚಿಕಿತ್ಸೆ ಮಾಡದಿರುವ ಸಾಧ್ಯತೆ ಹೆಚ್ಚಿರುತ್ತದೆ. ಅಲ್ಲದೇ ನಗರ ಪ್ರದೇಶಗಳ ವಾತಾವರಣದ ಪರಿಚಯವೂ ಇರುವುದಿಲ್ಲ. ಹೀಗಾದಾಗ ಸರಹದ್ದಿಗಾಗಿ ನಾಯಿಗಳ ನಡುವೆ ಕಾದಾಟ ಹೆಚ್ಚುತ್ತದೆ, ಸಂತಾನೋತ್ಪತ್ತಿ ಮತ್ತೆ ಆರಂಭವಾಗುತ್ತದೆ ಮತ್ತು ನಾಯಿಗಳ ಆಕ್ರಮಣಶೀಲತೆ ಜಾಸ್ತಿಯಾಗುತ್ತದೆ. ಇದು ಜನರ ಮೇಲೆ ನಾಯಿ ದಾಳಿ, ಕಡಿತವನ್ನು ಹೆಚ್ಚು ಮಾಡುವುದಲ್ಲದೆ, ರೇಬಿಸ್ ಅಪಾಯವನ್ನೂ ಹೆಚ್ಚಿಸುತ್ತದೆ.

ಸಹಬಾಳ್ವೆಯ ಸಂಸ್ಕೃತಿ : ಭಾರತವು ಪ್ರಾಣಿಗಳೊಂದಿಗೆ ಆಳವಾದ ಸಾಂಸ್ಕೃತಿಕ, ನಾಗರಿಕತೆಯ ಸಂಬಂಧ ಹೊಂದಿದೆ. ನಮ್ಮ ಸಮಾಜದಲ್ಲಿ ನಾಯಿಗಳು ಕೂಡ ಐತಿಹಾಸಿಕವಾಗಿ ಸಂಕೀರ್ಣವೂ ಗೌರವಯುತವೂ ಆಗಿರುವ ಸ್ಥಾನವನ್ನು ಪಡೆದಿವೆ. ನಾಯಿಯನ್ನು ಕಾವಲುಗಾರ, ನಂಬಿಕಸ್ಥ, ರಕ್ಷಕ ಪ್ರಾಣಿ ಎಂದು ಪರಿಗಣಿಸಲಾಗುತ್ತದೆ. ಪಟ್ಟಣ, ಗ್ರಾಮಗಳಲ್ಲಿ ಸಾರ್ವಜನಿಕ ಸ್ಥಳಗಳಲ್ಲಿರುವ ನಾಯಿಗಳನ್ನು ಸ್ಥಳೀಯ ನಿವಾಸಿಗಳು ಆರೈಕೆ ಮಾಡುತ್ತಾರೆ. ಅವುಗಳಿಗೆ ಆಹಾರ ನೀಡುವುದು, ಲಸಿಕೆ ಕೊಡಿಸುವುದು, ಅವುಗಳ ಮೇಲೆ ನಿಗಾ ಇಡುವುದು ಮುಂತಾದ ಕೆಲಸ ಮಾಡುತ್ತಾರೆ. ಈ ಸಹಬಾಳ್ವೆಯು ಆಕಸ್ಮಿಕವಲ್ಲ. ಅದು ಸಾಮರಸ್ಯ, ಮೂಕ ಪ್ರಾಣಿಗಳ ಮೇಲೆ ಅಧಿಕಾರವನ್ನು ಸಾಧಿಸದೇ ಇರುವುದನ್ನು ಪ್ರತಿಬಿಂಬಿಸುತ್ತದೆ ಮತ್ತು ಮನುಷ್ಯ ಮತ್ತು ಪ್ರಾಣಿಗಳ ನಡುವೆ ದೀರ್ಘಾವಧಿಯ ಸಮತೋಲನವನ್ನು ಖಾತರಿಪಡಿಸುತ್ತದೆ. ಜನ ಸಾಂದ್ರತೆ ಹೆಚ್ಚಿರುವ ಜನವಸತಿಗಳು ಕೂಡ ಸ್ವತಂತ್ರವಾಗಿ ಜೀವಿಸುತ್ತಿರುವ ಪ್ರಾಣಿಗಳನ್ನು ಕೊಲ್ಲದೆ ಅಥವಾ ಬಂಧನಕ್ಕೆ ಒಳಪಡಿಸದೆ ಅವುಗಳೊಂದಿಗೆ ಹೇಗೆ ಸಹಬಾಳ್ವೆ ನಡೆಸಬಹುದು ಎಂಬುದಕ್ಕೆ ಭಾರತ ಮಾದರಿಯಾಗಿದೆ. ಜಾಗತಿಕವಾಗಿ ಇದನ್ನೇ ಉದಾಹರಣೆಯನ್ನಾಗಿ ಹಲವು ಬಾರಿ ಉಲ್ಲೇಖಿಸಲಾಗಿದೆ. ಹೀಗಿರುವಾಗ ಸಾರ್ವಜನಿಕ ಸ್ಥಳಗಳಿಂದ ಬೀದಿನಾಯಿಗಳನ್ನು ತೆರವುಗೊಳಿಸುವುದು ಎಂದರೆ ಬೆದರಿಕೆಗೆ ಸಮನಾದ ಸಂದೇಶವನ್ನು ರವಾನಿಸುತ್ತದೆ. ಬಂಧನ ಎಂದರೆ ಸುರಕ್ಷತೆ ಎಂದೂ ಪ್ರತಿಪಾದಿಸುತ್ತದೆ. ಇಂತಹ ಯೋಚನೆಯು ಶತಮಾನಗಳ ಸಹಬಾಳ್ವೆಯ ಆಶಯವನ್ನು ಮಣ್ಣುಪಾಲು ಮಾಡುತ್ತದೆ.

ಸಮುದಾಯದ ಸುರಕ್ಷತೆಗೂ ಭಂಗ: ಬೀದಿ ನಾಯಿಗಳು ನಮ್ಮ ನೆರೆಹೊರೆ ಪರಿಸರದ ಅನೌಪಚಾರಿಕ ಭದ್ರತಾ ವ್ಯವಸ್ಥೆಯ ಭಾಗವೂ ಆಗಿವೆ. ಒಂದೇ ಸ್ಥಳದಲ್ಲಿ ಇರುವ ನಾಯಿಗಳು ಸ್ಥಳೀಯ ನಿವಾಸಿಗಳನ್ನು ಗುರುತಿಸುತ್ತವೆ. ಆ ಪ್ರದೇಶಕ್ಕೆ ಅಪರಿಚಿತರು ಬಂದರೆ ಅಥವಾ ಸಂದೇಹಾತ್ಮಕ ಚಟುವಟಿಕೆಗಳು ನಡೆಯುತ್ತಿದ್ದರೆ ಸ್ಥಳೀಯರನ್ನು ಎಚ್ಚರಿಸುತ್ತವೆ. ಅಂತಹ ನಾಯಿಗಳನ್ನು ತೆರವುಗೊಳಿಸಿದರೆ ಸಮಾಜದ ಸಮತೋಲನ ತಪ್ಪುತ್ತದೆ. ಅಲ್ಲದೇ ಇಂತಹ ಕ್ರಮವು ಆರ್ಥಿಕವಾಗಿ ದುರ್ಬಲವಾಗಿರುವ ಸಮುದಾಯಗಳ ಮೇಲೂ ಪರಿಣಾಮ ಬೀರುತ್ತದೆ. ಹಲವು ಪ್ರದೇಶಗಳಲ್ಲಿ ಬೀದಿ ನಾಯಿಗಳು ವೃದ್ಧರ, ಮಕ್ಕಳ ಮತ್ತು ವಸತಿರಹಿತ ಜನರ ಒಡನಾಡಿಗಳಾಗಿರುತ್ತವೆ. ಸುರಕ್ಷತೆಯ ಕಾರಣವೊಡ್ಡಿ, ಈ ಸಂಬಂಧಗಳನ್ನು ಮುರಿಯುವುದರಿಂದ ಸಮಾಜದ ವಾಸ್ತವಗಳನ್ನು ನಿರ್ಲಕ್ಷಿಸಿದಂತಾಗುತ್ತದೆ.

ಮೂಲ ಸಮಸ್ಯೆಗೆ ಸಿಗದ ಪರಿಹಾರ: ನಾಯಿಗಳನ್ನು ತೆರವುಗೊಳಿಸುವ ವಿಧಾನವು ಸಮಸ್ಯೆಗಳ ಮೂಲವನ್ನೇ ನಿರ್ಲಕ್ಷಿಸುತ್ತದೆ. ಸಾರ್ವಜನಿಕ ಸ್ಥಳಗಳಲ್ಲಿರುವ ತೆರೆದ ಕಸದ ಬುಟ್ಟಿಗಳು ನಾಯಿಗಳಿಗೆ ಬೇಕಾದಷ್ಟು ಆಹಾರವನ್ನು ಒದಗಿಸುತ್ತವೆ. ಜವಾಬ್ದಾರಿರಹಿತವಾಗಿ ನಡೆಯುವ ಸಾಕುಪ್ರಾಣಿಗಳ ಸಂತಾನೋತ್ಪತ್ತಿ ಮತ್ತು ಅವುಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ ಬಿಡುವುದರ ಮೇಲೆ ನಿಗಾ ಇಡಲಾಗುತ್ತಿಲ್ಲ. ಪ್ರಾಣಿಗಳೊಂದಿಗೆ ಸಹ ಜೀವನ, ನಾಯಿಗಳ ವರ್ತನೆ ಮತ್ತು ಸುರಕ್ಷತೆಯ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಕೆಲಸ ದೊಡ್ಡ ಪ್ರಮಾಣದಲ್ಲಿ ಆಗುತ್ತಿಲ್ಲ. ವ್ಯವಸ್ಥೆಗೆ ಸಂಬಂಧಿಸಿದ ಈ ಸಮಸ್ಯೆಗಳನ್ನು ಬಗೆಹರಿಸದೆ ಸಾರ್ವಜನಿಕ ಸ್ಥಳಗಳಿಂದ ನಾಯಿಗಳನ್ನು ತೆರವುಗೊಳಿಸುವುದು ಸಮಸ್ಯೆಯನ್ನು ಬೇರೆಲ್ಲಿಗೋ ವರ್ಗಾಯಿಸಿದಂತೆ ಆಗುತ್ತದೆ ಅಷ್ಟೆ.

ಮಾನವೀಯತೆಯ ದಾರಿ: ನಮ್ಮ ಮುಂದಿರುವ ದಾರಿ ಎಂದರೆ, ಎಬಿಸಿ ಕಾರ್ಯಕ್ರಮಗಳನ್ನು ಇನ್ನಷ್ಟು ಬಲಪಡಿಸುವುದು, ಸಾರ್ವತ್ರಿಕವಾಗಿ ಲಸಿಕೆ ನೀಡುವುದನ್ನು ಖಾತ್ರಿ ಪಡಿಸುವುದು, ತ್ಯಾಜ್ಯ ನಿರ್ವಹಣೆಯನ್ನು ಸುಧಾರಿಸುವುದು, ಅನಿಯಂತ್ರಿತ ಸಂತಾನೋತ್ಪತ್ತಿ ತಡೆಯುವುದು, ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಹೆಚ್ಚು ಹಣ ವ್ಯಯಿಸುವುದು. ನಾಯಿಗಳನ್ನು ಬೇರೆಡೆಗೆ ಸ್ಥಳಾಂತರಗೊಳಿಸುವುದದರ ಬದಲಿಗೆ ಶಾಲೆಗಳು ಮತ್ತು ಆಸ್ಪತ್ರೆಗಳು ನಾಯಿಗಳಿಗೆ ಪೂರಕ ಮೂಲಸೌಕರ್ಯಗಳನ್ನು ಅನುಷ್ಠಾನಗೊಳಿಸಬಹುದು ಮತ್ತು ಅವುಗಳ ವರ್ತನೆಯ ಬಗ್ಗೆ ಜಾಗೃತಿ ಮೂಡಿಸಲು ಕ್ರಮ ಕೈಗೊಳ್ಳಬಹುದು.

ದೇಶದ ನ್ಯಾಯಾಲಯಗಳು ಮತ್ತು ನೀತಿನಿರೂಪಕರಿಗೆ ದೊಡ್ಡ ಜವಾಬ್ದಾರಿಗಳಿವೆ. ಧ್ವನಿ ಇಲ್ಲದ ಲಕ್ಷಾಂತರ ಜೀವಿಗಳ ಮೇಲೆ ಪರಿಣಾಮ ಬೀರುವಂತಹ ನಿರ್ಧಾರಗಳು ವಿಜ್ಞಾನ, ನೈತಿಕತೆ, ಮಾನವೀಯತೆ ಮತ್ತು ಬದುಕಿನ ವಾಸ್ತವ ಆಧಾರಿತವಾಗಿರಬೇಕು.

ಒಂದು ಸಮಾಜವು ತಾನು ಎದುರಿಸುತ್ತಿರುವ ಸಮಸ್ಯೆಯನ್ನು ಎಷ್ಟು ಪರಿಣಾಮಕಾರಿಯಾಗಿ ಪರಿಹರಿಸಿಕೊಂಡಿದೆ ಎಂಬುದರ ಮೇಲೆ ಆ ಸಮಾಜ ಹೇಗಿದೆ ಎಂದು ನಿರ್ಣಯಿಸಲಾಗುವುದಿಲ್ಲ; ಬದಲಿಗೆ ಎಷ್ಟು ವಿವೇಕದಿಂದ ಆ ಸಮಸ್ಯೆಯನ್ನು ಪರಿಹರಿಸುತ್ತದೆ ಎಂಬುದರ ಮೇಲೆ ನಿರ್ಣಯಿಸಲಾಗುತ್ತದೆ. ನಿಜವಾದ ಸುರಕ್ಷತೆಯು ವಿಜ್ಞಾನ ಆಧಾರಿತ ಸಹಬಾಳ್ವೆಯಲ್ಲಿ ಇದೆಯೇ ವಿನಾ ಆತಂಕದಿಂದ ಕೂಡಿದ ಪ್ರತ್ಯೇಕತೆಯಲ್ಲಿ ಅಲ್ಲ ಎಂಬುದನ್ನು ನಾವು ಅರಿಯಬೇಕು.

ಲೇಖಕಿ: ಚಾರ್ಲೀಸ್ ಅನಿಮಲ್ ರೆಸ್ಕ್ಯು ಸೆಂಟರ್‌ನ (ಕೇರ್) ಸಂಸ್ಥಾಪಕ ಟ್ರಸ್ಟಿ

ಜನನ ನಿಯತ್ರಣ, ಲಸಿಕೆ: ಏಕೈಕ ಪರಿಹಾರ

ಬೀದಿ ನಾಯಿಗಳ ಸಂಖ್ಯೆಯನ್ನು ನಿಯಂತ್ರಿಸಲು ಇರುವ ಏಕೈಕ ಮಾನವೀಯ, ಪರಿಣಾಮಕಾರಿ ಮತ್ತು ಸುಸ್ಥಿರ ವಿಧಾನ ಎಂದರೆ ಪ್ರಾಣಿ ಜನನ ನಿಯಂತ್ರಣ (ಎಬಿಸಿ) ಕಾರ್ಯಕ್ರಮ ಮತ್ತು ನಾಯಿಗಳಿಗೆ ಸಾಮೂಹಿಕವಾಗಿ ರೇಬಿಸ್ ತಡೆ ಲಸಿಕೆ ನೀಡುವುದು. ದಶಕಗಳ ಸಂಶೋಧನೆ ಮತ್ತು ಅನುಭವದಿಂದ ಇದು ಸಾಬೀತಾಗಿದೆ. ಎಬಿಸಿ ಕಾರ್ಯಕ್ರಮದಲ್ಲಿ ಬೀದಿ ನಾಯಿಗಳನ್ನು ಸೆರೆಹಿಡಿದು ಅವುಗಳ ಸಂತಾನಶಕ್ತಿಹರಣ ಶಸ್ತ್ರಕ್ರಿಯೆಯ ಮೂಲಕ ಅನಿಯಂತ್ರಿತ ಸಂತಾನೋತ್ಪತ್ತಿಯನ್ನು ತಡೆಯಲಾಗುತ್ತದೆ ಮತ್ತು ರೇಬಿಸ್ ಬಾರದಂತೆ ಲಸಿಕೆಯನ್ನೂ ನೀಡಲಾಗುತ್ತದೆ. ಬಳಿಕ ಆ ನಾಯಿಗಳನ್ನು ಅವುಗಳು ಮೊದಲಿದ್ದ ಜಾಗದಲ್ಲಿ ಬಿಡಲಾಗುತ್ತದೆ.

ಸಂತಾನಶಕ್ತಿಹರಣ ಶಸ್ತ್ರಚಿಕಿತ್ಸೆಗೆ ಒಳಪಟ್ಟ ನಾಯಿಗಳ ಆಕ್ರಮಣಶೀಲತೆ ಕಡಿಮೆ ಇರುತ್ತದೆ. ಅವುಗಳು ಹೆಚ್ಚು ಓಡಾಡುವುದೂ ಇಲ್ಲ. ಸಂತಾನೋತ್ಪತ್ತಿಗೆ ಸಂಬಂಧಿಸಿ ಜಗಳದಲ್ಲಿ ತೊಡಗುವುದೂ ಇಲ್ಲ. ಲಸಿಕೆ ನೀಡುವುದರಿಂದ ದೀರ್ಘ ಕಾಲ ಅವುಗಳಿಗೆ ರೇಬಿಸ್ ಸೋಂಕು ತಗಲುವುದೂ ಇಲ್ಲ. ಸಮಯ ಕಳೆದಂತೆ ನಾಯಿಗಳ ಸಂಖ್ಯೆ ಸ್ಥಿರವಾಗುತ್ತದೆ ಮತ್ತು ಕಾಲಕ್ರಮೇಣ ಕಡಿಮೆಯಾಗುತ್ತದೆ. ದೇಶದ ಹಲವು ನಗರಗಳು ಮತ್ತು ನಗರ ಪಾಲಿಕೆಗಳು ಈ ಕಾರ್ಯಕ್ರಮಗಳನ್ನು ನಿರಂತರವಾಗಿ ಅನುಷ್ಠಾನಗೊಳಿಸಿ ನಾಯಿ ಕಡಿತ ಮತ್ತು ರೇಬಿಸ್ ಪ್ರಕರಣಗಳು ಕಡಿಮೆಯಾಗುವಂತೆ ನೋಡಿಕೊಂಡಿವೆ. ಬಹಳ ಮುಖ್ಯವಾಗಿ ಈ ವಿಧಾನವು ಸಾರ್ವಜನಿಕ ಸುರಕ್ಷತೆ ಮತ್ತು ಪ್ರಾಣಿ ಕ್ಷೇಮಾಭಿವೃದ್ಧಿಗೆ ಪೂರಕವಾಗಿದೆ.

ಪ್ರಾಣಿದಯೆ ಜನರಿಗೆ ಮಾರಕವಾಗಬಾರದು

• ಕೆ.ಪಿ.ಶ್ರೀಪಾಲ

ಮನುಷ್ಯ ಮತ್ತು ನಾಯಿ ನಡುವಿನ ಸಂಬಂಧವು ಮಾನವ ನಾಗರಿಕತೆಯಷ್ಟೇ ಹಳೆಯದು. ಪೆಟ್ ಸಂಸ್ಕೃತಿ ಬರುವುದಕ್ಕೆ ಬಹಳ ಹಿಂದೆಯೇ, ನಾಯಿ ಮನುಷ್ಯನ ನಿಷ್ಠಾವಂತ ಸಂಗಾತಿಯಾಗಿ ರೂಪುಗೊಂಡಿತ್ತು. ಇತಿಹಾಸ ಹೇಳುವಂತೆ ನಾಯಿ ಮನುಷ್ಯನ ಮೊದಲ ಸಾಕು ಪ್ರಾಣಿ. ಅಪಾಯ ಬಂದಾಗ ಎಚ್ಚರಿಸುವ ಸಾಮರ್ಥ್ಯ, ಅತಿಥಿ ಮತ್ತು ಶತ್ರುಗಳನ್ನು ಗುರುತಿಸುವ ಬುದ್ಧಿಮತ್ತೆಯಿಂದಾಗಿ ನಾಯಿ ಕೇವಲ ಉಪಯುಕ್ತ ಪ್ರಾಣಿಯಾಗಿ ಉಳಿಯದೆ ಸ್ನೇಹಿತನಾಗಿ ಮನುಷ್ಯನ ಜೀವನದಲ್ಲಿ ಸ್ಥಾನ ಪಡೆಯಿತು.

ನಾಯಿಯಲ್ಲಿದ್ದ ಕೆಲವು ಉಪಯುಕ್ತ ಗುಣಗಳು ಮನುಷ್ಯನಿಗೆ ಅದರ ಮೇಲಿನ ಪ್ರೀತಿ ಮತ್ತು ಅವಲಂಬನೆ ಹೆಚ್ಚಿಸಿತು. ನಾಯಿ ಮನುಷ್ಯನಿಗೆ ಪ್ರತಿಫಲದ ನಿರೀಕ್ಷೆಯಿಲ್ಲದೆ ನಿಷ್ಠೆ ತೋರಿಸುವ ಪ್ರಾಣಿ. ಮಾಲೀಕರಿಗಾಗಿ ಪ್ರಾಣ ತ್ಯಾಗಮಾಡಿದ ಅನೇಕ ಕಥೆಗಳು ಇತಿಹಾಸದಲ್ಲಿ ದಾಖಲಾಗಿವೆ. ಪ್ರಾಣಿಗಳ ಮೇಲೆ ಕರುಣೆ ಅಗತ್ಯವಾದರೂ, ಮಾನವ ಸಮಾಜದ ಸುರಕ್ಷತೆ ಮತ್ತು ಆರೋಗ್ಯವನ್ನು ನಿರ್ಲಕ್ಷ್ಯ ಮಾಡುವಂತಾಗಬಾರದು. ಯಾವುದೇ ಜೀವಿಯ ಸಂತತಿ ಹೆಚ್ಚಾದರೂ ಅದು ಪ್ರಾಕೃತಿಕ ಸಮತೋಲನಕ್ಕೆ ಮಾರಕವೇ ಆಗಿರುತ್ತದೆ. ಮನುಷ್ಯನಂತೆ ಪ್ರಾಣಿಗಳಿಗೂ ಬದುಕುವ ಹಕ್ಕಿದೆ ಎನ್ನುವುದು ನಿಜ. ಹಾಗೆಂದು ಮಾನವ ಕುಲಕ್ಕೆ ಮಾರಕವಾಗುವ ರೀತಿಯಲ್ಲಿ ಬೆಳೆದಾಗ ಅದಕ್ಕೆ ಕಡಿವಾಣ ಹಾಕುವುದು ಅತಿ ಅಗತ್ಯ.

ಇತ್ತೀಚೆಗೆ ನಗರ ಪ್ರದೇಶಗಳಲ್ಲಿ ಬೀದಿ ನಾಯಿಗಳ ಸಂಖ್ಯೆ ಹೆಚ್ಚುತ್ತಿರುವುದು ಗಂಭೀರ ಸಮಸ್ಯೆಯಾಗಿದೆ. ಬೆಳಿಗ್ಗೆ ಮತ್ತು ಸಂಜೆ ಶಾಲಾ ಮಕ್ಕಳು, ವೃದ್ದರು, ಮಹಿಳೆಯರು ಹಾಗೂ ದ್ವಿಚಕ್ರ ವಾಹನ ಸವಾರರು ಬೀದಿನಾಯಿಗಳ ಉಪಟಳಕ್ಕೆ ತೀವ್ರವಾಗಿ ನಲುಗಿ ಹೋಗಿದ್ದಾರೆ. ರಾತ್ರಿ ಹೊತ್ತಿನಲ್ಲೂ ಇವುಗಳ ಕಾಟ ಹೆಚ್ಚು. ಹಲವೆಡೆ ನಾಯಿ ಕಚ್ಚುವ ಪ್ರಕರಣಗಳು ದಿನೇದಿನೇ ಹೆಚ್ಚುತ್ತಿದ್ದು ಸಾರ್ವಜನಿಕರಲ್ಲಿ ಭಯದ ವಾತಾವರಣ ಆರಂಭವಾಗಿದೆ. ಹುಚ್ಚು ನಾಯಿ ಕಡಿತದಿಂದ ಮಾರಕ ರೇಬಿಸ್ ರೋಗ ಹರಡುವುದರಿಂದ ಇದು ಸಾರ್ವಜನಿಕ ಆರೋಗ್ಯದ ದೃಷ್ಟಿಯಿಂದಲೂ ಅಪಾಯಕಾರಿ.

ಪ್ರತಿವರ್ಷ ಲಕ್ಷಾಂತರ ಜನರು ನಾಯಿಯಿಂದ ಕಚ್ಚಿಸಿಕೊಂಡು ಆಸ್ಪತ್ರೆಗಳಿಗೆ ಧಾವಿಸುವ ಪರಿಸ್ಥಿತಿ ನಿರ್ಮಾಣವಾಗಿದೆ. ಬಡವರು ಮತ್ತು ಗ್ರಾಮೀಣ ಪ್ರದೇಶದ ಜನರಿಗೆ ಸಮಯಕ್ಕೆ ಸರಿಯಾಗಿ ಚಿಕಿತ್ಸೆ ದೊರೆಯದೆ ಪ್ರಾಣ ಕಳೆದುಕೊಂಡ ಉದಾಹರಣೆಗಳು ಬಹಳಷ್ಟಿವೆ. ಅದರಲ್ಲೂ ಶಾಲೆಗಳು, ಆಸ್ಪತ್ರೆ, ಬಸ್ ನಿಲ್ದಾಣಗಳು, ಮಾರುಕಟ್ಟೆಗಳಂತಹ ಜನಸಂದಣಿಯ ಪ್ರದೇಶಗಳಲ್ಲಿಯೇ ಬೀದಿ ನಾಯಿಗಳ ಹಿಂಡು ಹೆಚ್ಚಾಗಿರುವುದು ಅಪಾಯಕಾರಿಯಾಗಿದೆ. ಹಲವೆಡೆ ಪ್ರತಿ ದಿನವೂ ವರದಿಯಾಗುವಂತೆ ಮಕ್ಕಳು ನಾಯಿಗಳ ದಾಳಿಗೆ ಒಳಗಾಗಿ ಗಾಯಗೊಂಡು ಸಾವು ಸಂಭವಿಸಿರುವ ಹೃದಯ ವಿದ್ರಾವಕ ಘಟನೆಗಳು ಪೋಷಕರ ಆತಂಕಕ್ಕೆ ಕಾರಣವಾಗಿದೆ.

ಜನರು ಬೀದಿ ನಾಯಿಗಳ ಹಾವಳಿಗೆ ತುತ್ತಾಗುತ್ತಿರುವುದನ್ನು ಗಮನಿಸಿದ ಸುಪ್ರೀಂ ಕೋರ್ಟ್ ಸ್ವಯಂ ಪ್ರೇರಿತವಾಗಿ ಸಾರ್ವಜನಿಕ ಹಿತಾಸಕ್ತಿ ಪ್ರಕರಣವನ್ನು ದಾಖಲಿಸಿಕೊಂಡು ವಿಚಾರಣೆ ನಡೆಸಿ ಪ್ರಾಣಿಗಳ ಕ್ರೌರ್ಯ ತಡೆ ಕಾಯ್ದೆ 1960ರ ಮತ್ತು ಪ್ರಾಣಿ ಜನನ ನಿಯಂತ್ರಣ ನಿಯಮಗಳು 2023ರ ಅನುಸಾರ ನಗರಗಳಲ್ಲಿ ನಾಯಿಗಳನ್ನು ಬೀದಿಗೆ ಬೀಡುವುದನ್ನು ಸಂಪೂರ್ಣವಾಗಿ ನಿಷೇಧಿಸುವಂತೆ, ಸಂತಾನಶಕ್ತಿ ಹರಣ ಶಸ್ತ್ರಕ್ರಿಯೆ ನಡೆಸುವುದಕ್ಕೆ, ರೇಬಿಸ್ ಲಸಿಕೆ ನೀಡುವುದಕ್ಕೆ ಮತ್ತು ಸಾರ್ವಜನಿಕ ಸ್ಥಳಗಳಿಂದ ತೆರವುಗೊಳಿಸಿ ಪುನರ್ವಸತಿ ಕೇಂದ್ರಗಳಿಗೆ ಸ್ಥಳಾಂತರ ಮಾಡುವುದಕ್ಕೆ ಸೂಚನೆ ನೀಡಿತ್ತು. ನಂತರ ತೀರ್ಪಿನಲ್ಲಿ ಕೆಲವು ಮಾರ್ಪಾಡು ಮಾಡಿ 2023ರ ಪ್ರಾಣಿಗಳ ಜನನ ನಿಯಂತ್ರಣ ನಿಯಮಗಳ ಪ್ರಕಾರ, ಸಂತಾನಶಕ್ತಿಹರಣ ಶಸ್ತ್ರಕ್ರಿಯೆ ಮಾಡಬೇಕು ಮತ್ತು ಲಸಿಕೆ ನೀಡಬೇಕು, ಸಾರ್ವಜನಿಕ ರಸ್ತೆ, ಪಾದಚಾರಿ ಮಾರ್ಗ, ಉದ್ಯಾನಗಳಲ್ಲಿ ನಾಯಿಗಳಿಗೆ ಆಹಾರ ಕೊಡಬಾರದು, ಆಹಾರ ನೀಡುವ ನಿರ್ದಿಷ್ಟ ಸ್ಥಳಗಳನ್ನು ನಗರಾಡಳಿತಗಳು ಗುರುತಿಸಬೇಕು, ದೂರುಗಳಿಗೆ ಸಹಾಯವಾಣಿ ವ್ಯವಸ್ಥೆ ಇರಬೇಕು, ನಿಯಮ ಉಲ್ಲಂಘಿಸುವ ಎನ್ ಜಿ ಒ /ವ್ಯಕ್ತಿಗಳ ವಿರುದ್ಧಕ್ರಮ ಕೈಗೊಳ್ಳುವಂತೆ ಸೂಚಿಸಿತು. ಶಾಲೆಗಳು, ಆಸ್ಪತ್ರೆಗಳು, ಬಸ್ ನಿಲ್ದಾಣ, ರೈಲು ನಿಲ್ದಾಣ, ಕ್ರೀಡಾಂಗಣಗಳು, ಉದ್ಯಾನ ಮತ್ತು ಇನ್ನಿತರ ಅತಿ ಹೆಚ್ಚು ಜನ ಸಂಚಾರ ಪ್ರದೇಶಗಳಲ್ಲಿ ಬೀದಿ ನಾಯಿಗಳನ್ನು ನಿಯಂತ್ರಿಸಿ ಅವುಗಳನ್ನು ಹಿಡಿದು ಆಶ್ರಯ ಕೇಂದ್ರಗಳಿಗೆ ಸ್ಥಳಾಂತರಿಸಬೇಕು ಮತ್ತು ನಂತರ ಜನಸಂದಣಿಯ ಸ್ಥಳಗಳಿಗೆ ಅವುಗಳನ್ನು ಬಿಡಬಾರದು ಎಂದು ಆದೇಶ ನೀಡಿದೆ.

> ಸುಪ್ರೀಂ ಕೋರ್ಟ್‌ನ ಸೂಚನೆಗಳನ್ನು ಎಲ್ಲ ಸರ್ಕಾರ, ನಗರ ಸ್ಥಳೀಯ ಸಂಸ್ಥೆಗಳು ಕಡ್ಡಾಯವಾಗಿ ಪಾಲಿಸಬೇಕು. ಪ್ರಾಣಿಗಳ ರಕ್ಷಣೆಯಲ್ಲಿ ತೊಡಗಿರುವ ಎನ್‌ಜಿಒಗಳು ಮತ್ತು ವ್ಯಕ್ತಿಗಳು ನಡೆಸುವ ನಾಯಿಗಳ ಆಶ್ರಯ ಕೇಂದ್ರಗಳಿಗೆ ನೆರವು ನೀಡುವ ಮೂಲಕ ಉತ್ತೇಜಿಸುವ ಕಾರ್ಯವನ್ನು ಮಾಡಬೇಕು. ಇದಕ್ಕಾಗಿ ವ್ಯವಸ್ಥೆಗಳು ಇಚ್ಛಾಶಕ್ತಿ ಪ್ರದರ್ಶಿಸಬೇಕು

ಸರ್ಕಾರ ಮಾಡಬೇಕಾಗಿರುವುದೇನು?: ಬೀದಿನಾಯಿಗಳ ನಿಯಂತ್ರಣದ ಹೆಸರಿನಲ್ಲಿ ನಗರಾಡಳಿತಗಳು ಕೋಟ್ಯಂತರ ರೂಪಾಯಿ ಹಣವನ್ನು ವ್ಯಯ ಮಾಡುತ್ತಿವೆ. ಬೀದಿನಾಯಿಗಳ ನಿಯಂತ್ರಣ ಮತ್ತು ನಿರ್ವಹಣೆಗೆ ಸಂಬಂಧಿಸಿದಂತೆ ಜಿಬಿಎ (ಹಿಂದಿನ ಬಿಬಿಎಂಪಿ) ಬೀದಿನಾಯಿಗಳಿಗೆ ಬಿರಿಯಾನಿ ಊಟ ಬಡಿಸುವ ಯೋಜನೆಗಳು ಜನರ ಆಕ್ರೋಶಕ್ಕೆ ಕಾರಣವಾಗಿದೆ. ಪ್ರಾಣಿಗಳ ಮೇಲಿನ ಅತಿಯಾದ ಕರುಣೆ ಮನುಷ್ಯನ ಬದುಕಿಗೆ ಮಾರಕವಾಗಬಾರದು. ಹಾಗಾಗಿ, ಸರ್ಕಾರ ಬೀದಿನಾಯಿಗಳಿಂದ ಜನ ಸಾಮಾನ್ಯರಿಗೆ ಆಗುವ ತೊಂದರೆಗಳನ್ನು ತಪ್ಪಿಸಲು ಕೆಲವು ಕ್ರಮಗಳನ್ನು ಕೈಗೊಳ್ಳಲೇಬೇಕಾಗಿದೆ. ಪ್ರಾಣಿಗಳ ಜನನ ನಿಯಂತ್ರಣ ನಿಯಮ 2023 ಅನ್ನು ಕಡ್ಡಾಯವಾಗಿ ಜಾರಿಗೊಳಿಸಿ ಇದರ ಅನುಸಾರ ಬೀದಿನಾಯಿಗಳಿಗೆ ಸಂತಾನಶಕ್ತಿ ಹರಣ ಶಸ್ತ್ರಕ್ರಿಯೆ ಮಾಡಿ ಸಂಖ್ಯೆ ನಿಯಂತ್ರಣ, ಎಲ್ಲಾ ಬೀದಿ ನಾಯಿಗಳಿಗೆ ರೇಬಿಸ್ ಲಸಿಕೆ ಹಾಕುವುದು, ಅಪಾಯಕಾರಿಯಾಗಿರುವ ಬೀದಿನಾಯಿಗಳನ್ನು ಹಿಡಿದು ಆಶ್ರಯ ಕೇಂದ್ರಗಳಲ್ಲಿ ಇರಿಸುವುದು ಸಾರ್ವಜನಿಕರ ಸುರಕ್ಷತೆಯ ದೃಷ್ಟಿಯಿಂದ ಅತ್ಯಂತ ಮುಖ್ಯ.

ಇದಕ್ಕಾಗಿ ನಗರಾಡಳಿತಗಳು ಆಶ್ರಯ ಕೇಂದ್ರಗಳನ್ನು ತೆರೆಯಬೇಕು ಮತ್ತು ಪ್ರಾಣಿಗಳ ರಕ್ಷಣೆಯಲ್ಲಿ ತೊಡಗಿರುವ ಎನ್‌ಜಿಒಗಳು ಮತ್ತು ವ್ಯಕ್ತಿಗಳು ನಡೆಸುವ ನಾಯಿಗಳ ಪುನರ್ವಸತಿ ಕೇಂದ್ರಗಳಿಗೆ ನೆರವು ನೀಡುವ ಮೂಲಕ ಉತ್ತೇಜಿಸುವ ಕಾರ್ಯವನ್ನು ಮಾಡಬೇಕು. ಶಾಲೆಗಳ ಬಳಿ ಬೀದಿನಾಯಿಗಳನ್ನು ನಿಯಂತ್ರಿಸಬೇಕು. ಬೀದಿನಾಯಿಗಳಿಗೆ ಅಲ್ಲಲ್ಲಿ ತಾತ್ಕಾಲಿಕ ಆಶ್ರಯ ತಾಣಗಳನ್ನು ನಿರ್ಮಿಸಿ ಅಲ್ಲಿಯೇ ಆಹಾರಗಳನ್ನು ಹಾಕುವ ಮೂಲಕ ಎಲ್ಲೆಂದರಲ್ಲಿ ಆಹಾರಗಳನ್ನು ಹಾಕುವುದನ್ನು ನಿಯಂತ್ರಿಸಬೇಕು. ಸಾರ್ವಜನಿಕ ಸ್ಥಳಗಳಲ್ಲಿ ಕಸಗಳನ್ನು/ ಆಹಾರ ಪದಾರ್ಥಗಳ, ಮಾಂಸ ಇನ್ನಿತರ ತ್ಯಾಜ್ಯ ಹಾಕುವುದನ್ನು ನಿಯಂತ್ರಿಸಬೇಕು. ಬೀದಿ ನಾಯಿಗಳ ನಿಯಂತ್ರಣವೆಂದರೆ ಅವುಗಳಿಗೆ ವಿಷ ಪ್ರಾಶನ ಮಾಡಿ ಕೊಲ್ಲುವುದೊಂದೇ ದಾರಿಯಲ್ಲ. ಎಬಿಸಿ ನಿಯಮದಂತೆ ಲಸಿಕೆ ಹಾಕುವ ಮೂಲಕ ಸಂತಾನ ನಿಯಂತ್ರಣವನ್ನು ಸಹ ಮಾಡಬಹುದಾಗಿದೆ. ಈ ಎಲ್ಲಾ ಕ್ರಮಗಳನ್ನು ಕೈಗೊಳ್ಳುವುದರೊಂದಿಗೆ ಜನರಲ್ಲಿ ಜಾಗೃತಿ ಮೂಡಿಸುವ ಕೆಲಸ ಆಗಬೇಕು. ಇದಕ್ಕಾಗಿ ಸರ್ಕಾರ ಮತ್ತು ಸ್ಥಳೀಯ ಆಡಳಿತ ವ್ಯವಸ್ಥೆಗಳು ಇಚ್ಛಾಶಕ್ತಿ ಹೊಂದಿರಬೇಕು.

ಲೇಖಕ: ಶಿವಮೊಗ್ಗದಲ್ಲಿ ವಕೀಲ



ದಾಖಲೆಯಲ್ಲಿ ಕಡಿಮೆ ಸಂಖ್ಯೆ

ಅಂಕಿ ಅಂಶಗಳ ಪ್ರಕಾರ, ದೇಶದಾದ್ಯಂತ 2024ರಲ್ಲಿ 37.15 ಲಕ್ಷಕ್ಕೂ ಹೆಚ್ಚು ನಾಯಿ ಕಡಿತದ ಪ್ರಕರಣಗಳು ದಾಖಲಾಗಿವೆ. ದೇಶದಲ್ಲಿ ವಾರ್ಷಿಕವಾಗಿ ರೇಬಿಸ್‌ನಿಂದ ಸಾವಿಗೀಡಾಗುತ್ತಿರುವವರ ಸಂಖ್ಯೆ 18 ಸಾವಿರ–19 ಸಾವಿರದಷ್ಟಿದೆ ಎಂದು ವೈಜ್ಞಾನಿಕ ಅಧ್ಯಯನಗಳು ಹೇಳುತ್ತವೆ. ಆದರೆ ಸರ್ಕಾರದ ಅಧಿಕೃತ ದಾಖಲೆ ಇಂದಿಗೂ ಕಡಿಮೆ ಸಂಖ್ಯೆಯನ್ನು ಮಾತ್ರ ವರದಿ ಮಾಡುತ್ತಿದೆ. ಕರ್ನಾಟಕವನ್ನೇ ತಗೆದುಕೊಂಡರೆ 2024ರಲ್ಲಿ 3.6 ಲಕ್ಷ ನಾಯಿ ಕಚ್ಚಿದ ಪ್ರಕರಣಗಳು, 2025ರ ಜನವರಿಯಿಂದ ಆಗಸ್ಟ್ ತಿಂಗಳ ವರೆಗೆ 3.1 ಲಕ್ಷ ನಾಯಿ ಕಚ್ಚಿದ ಪ್ರಕರಣಗಳು ದಾಖಲಾಗಿವೆ. ರಾಜ್ಯದಲ್ಲಿ ರೇಬಿಸ್‌ನಿಂದ 2024ರಲ್ಲಿ 42 ಮಂದಿ ಸಾವಿಗೀಡಾಗಿದ್ದರೆ, 2025ರ ಜನವರಿಯಿಂದ ಆಗಸ್ಟ್ ತಿಂಗಳವರೆಗೆ 26 ಮೃತಪಟ್ಟಿದ್ದಾರೆ ಎಂದು ವರದಿಯಾಗಿದೆ.

ಇತ್ತೀಚೆಗೆ ದಾವಣಗೆರೆಯಲ್ಲಿ ಖದಿರಾ ಬಾನು ಎಂಬ 4 ವರ್ಷದ ಹುಡುಗಿ ರೇಬಿಸ್ ರೋಗಕ್ಕೆ ತುತ್ತಾಗಿ ಸಾವಿಗೀಡಾಗಿದ್ದು ಮತ್ತು ಉತ್ತರ ಕರ್ನಾಟಕ ಭಾಗದಲ್ಲಿ ನಾಯಿ ಕಚ್ಚಿದ್ದಕ್ಕೆ ಸರಿಯಾಗಿ ಚಿಕಿತ್ಸೆ ಪಡೆಯದೆ ಇದ್ದಿದ್ದಕ್ಕೆ ವ್ಯಕ್ತಿಯೊಬ್ಬರು ಸಾವಿಗೀಡಾಗಿದ್ದು ಸುದ್ದಿಯಾಗಿತ್ತು.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

17 ಜನವರಿ 2026 ಶನಿವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಹೇಮಂತ ಋತು ತಿಥಿ: ಪೌಷ ಕೃಷ್ಣ ಚತುರ್ದಶಿ ಗಂ 24-04 ನಕ್ಷತ್ರ: ಮೂಲ ಗಂ 8-12 ಯೋಗ: ವ್ಯಾಘಾತ ಗಂ. 21-18 ಕರಣ: ವಿಷ್ಟಿ ಗಂ. 11-16 ಮಕರ ಮಾಸದ 03 ನೇ ದಿನ. ಮಳೆ ನಕ್ಷತ್ರ : ಉತ್ತರಾಷಾಢ 2 ನೇ ಪಾದ. ರಾಹುಕಾಲ : ಬೆಳಿಗ್ಗೆ 09-00 -10-30 , ಸೂರ್ಯೋದಯ : 07-01 ಸೂರ್ಯಾಸ್ತ : 06-20, ಮುಸ್ಲಿಂ ದಿನಾಂಕ : 27 ರಜಬ್ , ಅದೃಷ್ಟ ಸಂಖ್ಯೆ : 1, 8

ಮೇಷ: ಸತತ ಪ್ರಯತ್ನದ ಫಲವಾಗಿ ಯಶಸ್ಸು ಹುಡುಕಿಕೊಂಡು ಬರುವುದರಿಂದ ಸಂತಸ ಸಿಗಲಿದೆ. ಸ್ವ ಉದ್ಯೋಗಿಗಳು ವೃತ್ತಿ ಬದುಕಿನಲ್ಲಿ ಉನ್ನತ ಸ್ಥಾನರಕ್ಕೇರಲು ಇದು ಸಕಾಲ.

ವೃಷಭ: ಉತ್ಸಾಹದಿಂದ ಕೆಲಸ ಆರಂಭಿಸಿದಲ್ಲಿ ಸಮಸ್ಯೆಗಳು ತಾನಾಗಿಯೇ ಪರಿಹಾರಗೊಳ್ಳಲಿವೆ. ಅಭಿರುಚಿಗೆ ತಕ್ಕ ವ್ಯಕ್ತಿಗಳೊಂದಿಗೆ ವ್ಯವಹರಿಸುವುದರಿಂದ ಭಿನ್ನಾಭಿಪ್ರಾಯಗಳಿಗೆ ಅವಕಾಶವಿರುವುದಿಲ್ಲ.

ಮಿಥುನ: ಚರ್ಮದ ವ್ಯಾಪಾರಿಗಳಿಗೆ ಲಾಭದಾಯಕ ದಿನ. ಮಕ್ಕಳ ಆರೋಗ್ಯದ ವಿಚಾರದಲ್ಲಿ ವೈದ್ಯರನ್ನು ಭೇಟಿ ಮಾಡಬೇಕಾದ ಸ್ಥಿತಿಯು ಎದುರಾಗಬಹುದು. ರೈತರ ಫಸಲಿಗೆ ಉತ್ತಮ ಬೆಲೆ ನಿರೀಕ್ಷಿಸಬಹುದು.

ಕರ್ಕಾಟಕ: ಹೂಡಿಕೆ ವಿಚಾರದಲ್ಲಿ ದೀರ್ಘಾಲೋಚನೆ ಮಾಡಿ. ವೃತ್ತಿಯಲ್ಲಿ ಆಪಾದನೆಗಳು ಎದುರಾಗಿ ಮಾನಸಿಕವಾಗಿ ಕಿರಿಕಿರಿ ಎನಿಸಬಹುದು. ವೃತ್ತಿಯಲ್ಲಿ ಅನಗತ್ಯ ವಿಷಯಗಳತ್ತ ಗಮನಹರಿಸದಿರಿ.

ಸಿಂಹ: ಸ್ನೇಹಿತರ ಜೊತೆ ಹಣಕಾಸಿನ ವಿಚಾರದಲ್ಲಿ ದಾಕ್ಷಿಣ್ಯ ಪ್ರವೃತ್ತಿಗೆ ಒಳಗಾಗದಂತೆ ನಿಸ್ಸಂಕೋಚವಾಗಿ ಇರಬೇಕಾಗುತ್ತದೆ. ತಪ್ಪುಗಳು ನಡೆಯದಂತೆ ಜಾಗರೂಕತೆ ವಹಿಸಬೇಕಾಗುತ್ತದೆ.

ಕನ್ಯಾ: ಸಮಸ್ಯೆಗಳನ್ನು ಸೌಹಾರ್ದಯುತವಾಗಿ ಮತ್ತು ನ್ಯಾಯ ಸಮ್ಮತವಾಗಿ ಬಗೆಹರಿಸಿಕೊಳ್ಳುವಲ್ಲಿ ಯಶಸ್ವಿಯಾಗುವಿರಿ. ಕಳೆದ ವಾರದ ಎಲ್ಲ ಕೆಲಸಗಳು ಸಂಪೂರ್ಣಗೊಂಡು ವಿಫುಲ ಆದಾಯ ಪಡೆದುಕೊಳ್ಳುವಿರಿ.

ತುಲಾ: ಹೋಟೆಲ್ ಅಥವಾ ಸಮಾರಂಭಗಳಲ್ಲಿ ಊಟ ಮಾಡುವಾಗ ಎಚ್ಚರದಿಂದಿರಿ. ಸ್ವಾದಿಷ್ಟ ಭೋಜನ ಆರೋಗ್ಯಕ್ಕೆ ಸ್ವಲ್ಪ ತೊಂದರೆ ತರಬಹುದು. ರಾಜಕೀಯ ಚಟುವಟಿಕೆಗಳು ಹೆಚ್ಚಾಗುವುದು.

ವೃಶ್ಚಿಕ: ಜೀವನದ ಕಷ್ಟ ಸುಖಗಳು ತಿರುಗುವ ಚಕ್ರದಂತಿರುವುದರಿಂದ ಒಳ್ಳೆಯ ದಿನಗಳು ಜೀವನದಲ್ಲಿದೆ ಎಂಬ ಆಶಾ ಭಾವನೆಯನ್ನು ಮರೆಯದಿರಿ. ಮಹಾವಿಷ್ಣುವಿನ ಸೇವೆಯಿಂದ ದೈವಾನುಕೂಲ ಒದಗಿ ಬರುವುದು.

ಧನು: ಆರ್ಥಿಕ ಸ್ಥಿತಿಯಲ್ಲಿ ಯಾವುದೇ ತಾಪತ್ರಯಗಳಿಲ್ಲದೆ ವ್ಯಾಪಾರ ಹಂತ ಹಂತವಾಗಿ ಅಭಿವೃದ್ಧಿಯಾಗಲಿದೆ. ಮಸಾಲೆ ಪದಾರ್ಥ ಅಥವಾ ಖಾದ್ಯ ವಸ್ತುಗಳ ಮಾರಾಟದ ಉದ್ಯೋಗದವರು ನೆಮ್ಮದಿ ಕಾಣಬಹುದು.

ಮಕರ: ಪ್ರಯತ್ನ ಪಟ್ಟ ಕೆಲಸಗಳು ದಿನದ ಅಂತ್ಯಕ್ಕೆ ಫಲ ನೀಡಲಿವೆ. ಧಾರ್ಮಿಕ ವ್ಯಕ್ತಿಯ ಸ್ನೇಹ ಸಂಬಂಧ ಅಥವಾ ಧಾರ್ಮಿಕ ಉಪನ್ಯಾಸಗಳಿಂದ ಜೀವನ ಶೈಲಿ ಬದಲಾಗಲಿದೆ. ಮನೆಯವರ ಆರೋಗ್ಯ ಸುಧಾರಣೆಯಾಗುತ್ತದೆ.

ಕುಂಭ: ಕಾರ್ಮಿಕ ವರ್ಗದವರಲ್ಲಿ ಜನ ಸಂಪತ್ತಿನ ಕೊರತೆಯ ಕಾರಣದಿಂದ ಅಧಿಕ ಶ್ರಮ ಉಂಟಾಗುವುದು . ಮನರಂಜನೆಯ ಕಾರ್ಯಕ್ರಮದಲ್ಲಿ ಸಮಯ ಕಳೆಯುವಿರಿ. ಶ್ರಮಕ್ಕೆ ತಕ್ಕ ಪ್ರತಿಫಲ ದೊರೆತು ಸಂತಸ ಮೂಡಲಿದೆ.

ಮೀನ: ನಿಧಾನ ಗತಿಯಲ್ಲಿ ನಡೆಯುತ್ತಿದ್ದ ಕಾರ್ಯಗಳು ಪ್ರಗತಿಯನ್ನು ಹೊಂದುತ್ತವೆ. ಹಿಂದಿನಿಂದಲೂ ಪ್ರಭಾವಿತ ವ್ಯಕ್ತಿಗಳ ಜೊತೆ ಇರುವ ಪರಿಚಯ ನಿಮಗೆ ಈ ಸಮಯದಲ್ಲಿ ಸಹಾಯ ಮಾಡುತ್ತದೆ.

ಪದಬಂಧ 6287

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
3.ಕೆನ್ನೆಗೆ ಹೊಡೆಯುವ ಏಟು (4)
5.ಕರಿಯ ಹತ್ತಿರ ಹಾರುತ್ತಿರುವ ಹೆಣ್ಣು ದುಂಬಿ (4)
6. ಗಿರಿಯ ಕೊನೆಗೆ ಸೆರೆ ಹಿಡಿಯುವುದು (4)
8. ಜೈನ ಸನ್ಯಾಸಿನಿಯನ್ನು ಹೀಗೂ ಕರೆಯುತ್ತಾರೆ (2)
9.ಆ ಮನೆ ಮುಂದಿರುವ ಗಜ (2)
10.ಬಿರುಸಾದ ಮಾತಿದು (4)
13.ಯಾವ ವಿವಾದಕ್ಕೂ ಸೇರದವನು (4)
14.ಸಾರವತ್ತಾದ ಭಾಗದೊಡನಿರುವ ಕ್ಷೀರ (2)

ಮೇಲಿಂದ ಕೆಳಕ್ಕೆ
1.ನೆಲ್ಲಿಕಾಯಿ ಇಲ್ಲಿದೆ (4)
2.ಹೂವಿನಲ್ಲಿರುವ ಸಿಹಿ ರಸ (4)
3.ತರಿಯನ್ನು ತರಲು ತೋರಿದ ಅವಸರ (4)
4.ಪತಿ ಮಾಡಿರುವುದು ಸಲ್ಲದ ಕಾರ್ಯ! (4)
7.ಗೀಟು ಕಾಣದಂತೆ ಮಾಡಿದ ಹೊಳಪಿನ ಲೇಪನ (3)
9.ಆಮಕೂಡಿದ ಬೇಧಿ (4)
10.ಗಾಡಿಯ ಚಕ್ರಗಳು ಬೀಳದಂತೆ ತಡೆಯುವ ಕೀಲು (4)
11.ನ್ಯಾಯಾಲಯದಲ್ಲಿ ತನ್ನ ಕಡೆಗೆ ತೀರ್ಪುಪಡೆದ ವ್ಯಕ್ತಿ (4)
12.ಹೊಸದಾಗಿ ಅಭಿನಯಿಸುತ್ತಿರುವವಳು (4)



6286ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
3.ಪಾವತಿ
5.ಸರೀಕ 6.ಸದ್ಗತಿ
7.ಮಾದಾರಚನ್ನಯ್ಯ
8.ಕಿನ್ನರಿಬೊಮ್ಮಯ್ಯ
12.ಹೊಂಬಣ್ಣ 13.ಪಟ್ಟಾಂಗ
14.ಗರುಡ

ಮೇಲಿಂದ ಕೆಳಕ್ಕೆ:
1.ಹಸಲೆ 2.ತೆಕದಮಾ
3.ಪಾತಿ 4.ತಿಕ್ಕಲು
6.ಸಗರದಬೊಮ್ಮಣ್ಣ
9.ಯವ್ಯಪಅ 10.ಪರಾಗ
11.ತಂಗಳು 12.ಹೊಂಡ

ಸುಡೊಕು 6671

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

2		6					5	9
		7	5		6	3		2
3	8						6	
	2							4
			2	4	7			6
	7					5		
7		9			8		4	
4				3			8	
	6		4		2	7		3

6670 ಸುಡೊಕು

3	9	1	8	7	5	6	4	2
7	6	5	2	4	9	3	8	1
2	8	4	3	1	6	7	9	5
1	5	9	7	2	4	8	6	3
4	2	7	6	8	3	5	1	9
8	3	6	5	9	1	2	7	4
6	1	2	4	5	8	9	3	7
9	7	8	1	3	2	4	5	6
5	4	3	9	6	7	1	2	8

ಷೇರುಪೇಟೆ ವಹಿವಾಟು

83,382 ಹಿಂದಿನ ಅಂತ್ಯ | 187 | 83,570 ಇಂದಿನ ಅಂತ್ಯ

ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	25,665
ಇಂದಿನ ಅಂತ್ಯ:	25,694
ದಿನದ ಗರಿಷ್ಠ:	25,873
	28

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	100 ಕ್ಕೆ	₹605
	12 ಕ್ಕೆ	₹90
ಮೈಸೂರು:	100 ಕ್ಕೆ	₹605

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹186
ಆರ್‌ಎಸ್‌ಎಸ್-5	₹181
ಗುಡ್ ಲಾಟ್	₹169.50

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹555-742
ದ್ವಿತಳಿ (ಬಿ.ವಿ)	₹325-910

ಮುದ್ರಮನೆ ಕಾಫಿ

ಎಪಿ	₹26250
ಎಸಿ	₹14420
ಆರ್‌ಪಿ	₹17200
ಆರ್‌ಸಿ	₹10260

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1630 (1630)
ಸೋಯಾ (ರಿಫೈನ್ಡ್)	₹1350 (1340)
ಸೂರ್ಯಕಾಂತಿ (ರಿಫೈನ್ಡ್)	₹1600 (1580)
ಪಾಮೋಲಿನ್	₹1290 (1280)

ಮೆಕ್ಕೆಜೋಳ: ಬೆಳೆಗಾರರಿಗೆ ದೊರೆಯದ ಎಂಐಪಿ

ಕಡಿಮೆ ದರಕ್ಕೆ ಈಗಾಗಲೇ ಮಾರಾಟ ಮಾಡಿದ ರೈತರಿಗೂ ಪರಿಹಾರ ನೀಡಲು ಆಗ್ರಹ

• ರಾಮಮೂರ್ತಿ ಪಿ.

ದಾವಣಗೆರೆ ಎಪಿಎಂಸಿಯಲ್ಲಿ ಮೆಕ್ಕೆಜೋಳ ತೂಕಮಾಡಿ ಕಾರ್ಮಿಕರು ಚೀಲಕ್ಕೆ ತುಂಬಿದರು

ದಾವಣಗೆರೆ: ರಾಜ್ಯದ ಆಯ್ದ ಎಪಿಎಂಸಿಗಳಲ್ಲಿ ಜನವರಿ 9ರಿಂದ ಮಾರುಕಟ್ಟೆ ಮಧ್ಯಪ್ರವೇಶ ದರ (ಎಂಐಪಿ) ಯೋಜನೆಯಡಿ ರೈತರಿಂದ ಮೆಕ್ಕೆಜೋಳ ಖರೀದಿಸಲಾಗುತ್ತಿದೆ. ಆದರೆ, ಕಡಿಮೆ ದರಕ್ಕೆ ಈಗಾಗಲೇ ಮೆಕ್ಕೆಜೋಳ ಮಾರಾಟ ಮಾಡಿರುವ ರೈತರಿಗೆ ಇದರಿಂದ ಯಾವುದೇ ಪ್ರಯೋಜನವಾಗಿಲ್ಲ ಎಂಬ ದೂರು ಕೇಳಿಬರುತ್ತಿದೆ.

ಮಾರುಕಟ್ಟೆಯಲ್ಲಿ ಕಡಿಮೆ ದರಕ್ಕೆ ಮೆಕ್ಕೆಜೋಳ ಮಾರಾಟವಾಗುತ್ತಿರುವ ಕಾರಣಕ್ಕೆ ಬೆಳೆಗಾರರಿಗೆ ಆಗುತ್ತಿರುವ ಆರ್ಥಿಕ ನಷ್ಟವನ್ನು ತಪ್ಪಿಸಲು ರಾಜ್ಯ ಸರ್ಕಾರ 2025–26ನೇ ಮುಂಗಾರು ಹಂಗಾಮಿಗೆ ಮಾರುಕಟ್ಟೆ ಮಧ್ಯ ಪ್ರವೇಶ ಯೋಜನೆಯಡಿ ಮೆಕ್ಕೆಜೋಳ ಖರೀದಿಗೆ ಜ.4ರಂದು ಆದೇಶಿಸಿದೆ. ವಿಳಂಬವಾಗಿದ್ದರಿಂದ ಬಹುತೇಕ ರೈತರಿಗೆ ಅನುಕೂಲ ಆಗಿಲ್ಲ ಎಂದು ರೈತರು ಹೇಳಿದ್ದಾರೆ.

ಮೆಕ್ಕೆಜೋಳದ ಉತ್ಪಾದನೆಯ ಆಧಾರದ ಮೇಲೆ ರಾಜ್ಯದ ಹಾವೇರಿ, ವಿಜಯನಗರ, ಗದಗ, ಬೆಳಗಾವಿ, ಕೊಪ್ಪಳ, ವಿಜಯಪುರ, ಹಾಸನ, ದಾವಣಗೆರೆ, ಚಿತ್ರದುರ್ಗ, ಬಾಗಲಕೋಟೆ ಹಾಗೂ ಧಾರವಾಡ ಜಿಲ್ಲೆಗಳ ಎಪಿಎಂಸಿಗಳಲ್ಲಿ ಮಾರುಕಟ್ಟೆ ಮಧ್ಯಪ್ರವೇಶ ದರ ಯೋಜನೆಯಡಿ ಒಟ್ಟು 40 ಲಕ್ಷ ಕ್ವಿಂಟಲ್ ಮೆಕ್ಕೆಜೋಳ ಖರೀದಿಗೆ ಸರ್ಕಾರ ಮುಂದಾಗಿದ್ದು, ಸಮರ್ಪಕವಾಗಿ ಪ್ರಚಾರವನ್ನೂ ನೀಡಲಾಗಿಲ್ಲ ಎಂದೂ ರೈತರು ದೂರಿದ್ದಾರೆ.

ಮಾರುಕಟ್ಟೆಯಲ್ಲಿ ಪ್ರತಿ ಕ್ವಿಂಟಲ್‌ಗೆ ₹2,150ಕ್ಕಿಂತ ಕಡಿಮೆ ಬೆಲೆಗೆ ಮೆಕ್ಕೆಜೋಳ ಮಾರಾಟವಾದಲ್ಲಿ ಮಾತ್ರ ವ್ಯತ್ಯಾಸದ ಮೊತ್ತವನ್ನು ಸರ್ಕಾರ ಪಾವತಿಸಲಿದೆ. ನಿಗದಿತ ದರಕ್ಕಿಂತ ಹೆಚ್ಚಿನ ಬೆಲೆಗೆ ಮಾರಾಟ ಮಾಡಿದರೆ ಯೋಜನೆಯ ಪ್ರತಿಫಲ ಸಿಗದು. ರೈತರಿಂದ ಪ್ರತಿ ಎಕರೆಗೆ 12 ಕ್ವಿಂಟಲ್‌ಗಳಂತೆ ಗರಿಷ್ಠ 50 ಕ್ವಿಂಟಲ್‌ಗೆ ಮಾತ್ರ ವ್ಯತ್ಯಾಸದ ದರವನ್ನು ಪರಿಗಣಿಸಲಾಗುತ್ತಿದೆ.

ಮಾರುಕಟ್ಟೆಯಲ್ಲಿ ಕ್ವಿಂಟಲ್‌ಗೆ ₹1,950ರಂತೆ ಮಾರಾಟವಾದರೆ ಬೆಳೆಗಾರರಿಗೆ ₹200 ದೊರೆಯಲಿದೆ. ₹2,000ರಂತೆ ಮಾರಾಟವಾದರೆ ₹150 ದೊರೆಯಲಿದೆ. ಇದೇ ಮಾದರಿಯಲ್ಲಿ ಬೆಳೆಗಾರರಿಗೆ ಕನಿಷ್ಠ ದರ ₹2,150 ದೊರೆಯಲಿದೆ.

ರಾಜ್ಯದಲ್ಲಿ 2025–26ನೇ ಸಾಲಿನಲ್ಲಿ ಮುಂಗಾರು ಹಂಗಾಮಿನಲ್ಲಿ ಒಟ್ಟು 17.64 ಲಕ್ಷ ಹೆಕ್ಟೇರ್‌ನಲ್ಲಿ ಮೆಕ್ಕೆಜೋಳ ಬೆಳೆದಿದ್ದು, 53.80 ಲಕ್ಷ ಟನ್ ಉತ್ಪಾದನೆ ನಿರೀಕ್ಷಿಸಲಾಗಿತ್ತು ಎಂದು ಕೃಷಿ ಇಲಾಖೆ ತಿಳಿಸಿದೆ.

ದಾವಣಗೆರೆಯ ಎಪಿಎಂಸಿಯಲ್ಲಿ ಜ.16ರವರೆಗೆ 157 ರೈತರು ಯೋಜನೆಯಡಿ ನೋಂದಾಯಿಸಿದ್ದು, ಒಟ್ಟು 2,591 ಕ್ವಿಂಟಲ್ ಮೆಕ್ಕೆಜೋಳದ ಟೆಂಡರ್ (ಖರೀದಿ) ಮುಗಿದಿದೆ. ಇಲ್ಲಿನ ಎಪಿಎಂಸಿಯಲ್ಲಿ ಶುಕ್ರವಾರ ಮೆಕ್ಕೆಜೋಳ ಕ್ವಿಂಟಲ್‌ಗೆ ಕನಿಷ್ಠ ₹1,849, ಗರಿಷ್ಠ ₹1,969, ಸರಾಸರಿ ₹1,918 ರಂತೆ ಮಾರಾಟವಾಯಿತು.

'ದಾವಣಗೆರೆ, ಚನ್ನಗಿರಿ, ಹರಿಹರ, ಹೊನ್ನಾಳಿ ಮತ್ತು ಜಗಳೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಂದ ಎಂಐಪಿ ಅನುಷ್ಠಾನಗೊಳಿಸಲಾಗಿದ್ದರೂ ಉತ್ತಮ ದರದ ನಿರೀಕ್ಷೆಯಲ್ಲಿರುವ ಬೆಳೆಗಾರರಿಗೆ ಈ ಬಗ್ಗೆ ಮಾಹಿತಿಯೇ ಇಲ್ಲ' ಎಂದೂ ರೈತ ಮುಖಂಡ ಕೊಳೇನಹಳ್ಳಿ ಬಿ.ಎಂ.ಸತೀಶ್ ತಿಳಿಸಿದ್ದಾರೆ.

ನೋಂದಣಿ ಹೇಗೆ?: ರೈತರು ಫ್ರೂಟ್ ಐಡಿ, ಆಧಾರ್ ಕಾರ್ಡ್, ಪಹಣಿ ಹಾಗೂ ಬ್ಯಾಂಕ್ ಪಾಸ್‌ಬುಕ್ ಪ್ರತಿ ನೀಡಿ ಸಮೀಪದ ಎಪಿಎಂಸಿಗಳಲ್ಲಿ ಯೋಜನೆಗೆ ಹೆಸರು ನೋಂದಾಯಿಸಬಹುದು.

ಮೆಕ್ಕೆಜೋಳ ಮಾರಾಟವಾದ ಬಳಿಕ ರಸೀದಿ, ರೈತರ ಪಟ್ಟಿ, ತೂಕದ ಪಟ್ಟಿ, ಗ್ರೇಡರ್ ಸರ್ಟಿಫಿಕೇಟ್, ಆಧಾರ್ ಕಾರ್ಡ್, ಪಹಣಿ ಹಾಗೂ ವ್ಯಾಪಾರದ ಬಿಲ್ ಪ್ರತಿಯನ್ನು ಆಡಳಿತ ಕಚೇರಿಯ ಈ ಟೆಂಡರ್ ಕೊಠಡಿಯಲ್ಲಿ ಸಲ್ಲಿಸಬೇಕು.

ಮೆಕ್ಕೆಜೋಳ ಖರೀದಿಸಿದ ವ್ಯಾಪಾರಿಗಳು ರೈತರಿಗೆ ಅಂದೇ ಹಣ ಪಾವತಿಸಿದರೆ, ಸರ್ಕಾರ ನೀಡುವ ಮಾರುಕಟ್ಟೆ ಮಧ್ಯಪ್ರವೇಶ ದರದ ಮೊತ್ತವು ಕೆಲ ದಿನಗಳ ಬಳಿಕ ನೇರ ಪಾವತಿ ಮೂಲಕ ದೊರೆಯಲಿದೆ ಎಂದು ಎಪಿಎಂಸಿಯ ಸಹಾಯಕ ಕಾರ್ಯದರ್ಶಿ ಗಿರೀಶ ನಾಯ್ಕ ತಿಳಿಸಿದರು.

> **ಜಿಲ್ಲೆಯಲ್ಲಿ ಅರ್ಧದಷ್ಟು ರೈತರು ಈಗಾಗಲೇ ಮೆಕ್ಕೆಜೋಳ ಮಾರಾಟ ಮಾಡಿದ್ದಾರೆ. ರಸೀದಿ, ಎಪಿಎಂಸಿ ದಾಖಲೆ ಆಧರಿಸಿ ಇವರಿಗೂ ಸರ್ಕಾರ ಮಾರುಕಟ್ಟೆ ಮಧ್ಯಪ್ರವೇಶ ದರ ಪಾವತಿಸಲಿ**
> **ಕೊಳೇನಹಳ್ಳಿ ಬಿ.ಎಂ.ಸತೀಶ್,** ರೈತ ಮುಖಂಡ

'ಮೊದಲೇ ಮಾರಾಟ ಮಾಡಿದವರಿಗೆ ಅನ್ಯಾಯ'

'ಜಿಲ್ಲೆಯಲ್ಲಿ ಸಣ್ಣ, ಅತಿಸಣ್ಣ ರೈತರು ಕ್ವಿಂಟಲ್‌ಗೆ ₹1,500 ರಿಂದ ₹1,700ರಂತೆ ಮೆಕ್ಕೆಜೋಳ ಮಾರಾಟ ಮಾಡಿದ್ದಾರೆ. ಕಡಿಮೆ ದರಕ್ಕೆ ಉತ್ಪನ್ನ ಮಾರಾಟ ಮಾಡಿದ ರೈತರ ಬಗ್ಗೆ ಸರ್ಕಾರದ ಆದೇಶದಲ್ಲಿ ಉಲ್ಲೇಖವೇ ಇಲ್ಲ' ಎಂದು ರೈತ ಮುಖಂಡ ಹುಚ್ಚವ್ವನಹಳ್ಳಿ ಮಂಜುನಾಥ್ ಬೇಸರಿಸಿದರು.

'ಜಿಲ್ಲೆಯಲ್ಲಿ 1,28,647 ಹೆಕ್ಟೇರ್ ಪ್ರದೇಶದಲ್ಲಿ ಮೆಕ್ಕೆಜೋಳ ಬಿತ್ತನೆಯಾಗಿತ್ತು. 6,43,235 ಟನ್ ಇಳುವರಿ ನಿರೀಕ್ಷಿಸಲಾಗಿತ್ತು. ಈಗಾಗಲೇ ಮೆಕ್ಕೆಜೋಳ ಮಾರಾಟ ಮಾಡಿದ ರೈತರಿಗೆ ಸರ್ಕಾರದ ನಡೆಯಿಂದ ಅನ್ಯಾಯವಾಗಲಿದೆ' ಎಂದರು. 'ಸಾಲ ಮಾಡಿ ಬೆಳೆ ಬೆಳೆದ ರೈತರು ಕಟಾವಿನ ಬಳಿಕ ಹೆಚ್ಚು ದಿನ ಉತ್ಪನ್ನ ಉಳಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಹೀಗಾಗಿ ಮೊದಲೇ ಮಾರಾಟ ಮಾಡಿರುವ ರೈತರಿಗೆ ಅಗತ್ಯ ದಾಖಲೆ ಪಡೆದು ಪರಿಹಾರ ನೀಡಲಿ' ಎಂದು ಒತ್ತಾಯಿಸಿದರು.

ಸುದ್ದಿ 2 ನಿಮಿಷ

ರಿಲಯನ್ಸ್ ಲಾಭ ಇಳಿಕೆ

ಮುಂಬೈ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ರಿಲಯನ್ಸ್ ಇಂಡಸ್ಟ್ರೀಸ್ ಕಂಪನಿಯು ₹18,645 ಕೋಟಿ ಲಾಭ ಗಳಿಸಿದೆ.

ಕಳೆದ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ಕಂಪನಿಯು ₹18,540 ಕೋಟಿ ಲಾಭ ಗಳಿಸಿತ್ತು. ಜಿಎಸ್‌ಟಿ ದರ ಸರಳೀಕರಣದಿಂದ ಕಂಪನಿಯ ರಿಟೇಲ್ ವಹಿವಾಟು ಮಂದಗೊಂಡಿದೆ. ಹೀಗಾಗಿ, ಲಾಭದ ಪ್ರಮಾಣ ಕಡಿಮೆ ಆಗಿದೆ ಎಂದು ಕಂಪನಿ ಶುಕ್ರವಾರ ತಿಳಿಸಿದೆ.

ಕಂಪನಿಯ ವರಮಾನವು ₹2.69 ಲಕ್ಷ ಕೋಟಿಗೆ ಏರಿಕೆಯಾಗಿದ್ದು, 2024ರ ಡಿಸೆಂಬರ್‌ನಲ್ಲಿ ₹2.43 ಲಕ್ಷ ಕೋಟಿಯಷ್ಟಿತ್ತು.

ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನ ಒಡೆತನದಲ್ಲಿರುವ ಜಿಯೊ ಪ್ಲ್ಯಾಟ್‌ಫಾರ್ಮ್ಸ್ ಕಂಪನಿಯ ಲಾಭವು ಶೇ 11ರಷ್ಟು ಹೆಚ್ಚಾಗಿದ್ದು, ₹7,629 ಕೋಟಿ ಲಾಭ ಗಳಿಸಿದೆ.

ಚಂದಾದಾರರ ಸಂಖ್ಯೆಯಲ್ಲಿನ ಹೆಚ್ಚಳ, ಪ್ರತಿ ಗ್ರಾಹಕರಿಂದ ಬರುವ ವರಮಾನದಲ್ಲಿನ (ಎಆರ್‌ಪಿಯು) ಏರಿಕೆ ಮತ್ತು ಡಿಜಿಟಲ್ ಸೇವೆಗಳಿಂದ ಲಾಭವು ಹೆಚ್ಚಳವಾಗಿದೆ.

ಪ್ರತಿ ಗ್ರಾಹಕರಿಂದ ಬರುವ ವರಮಾನ ₹213.7ಕ್ಕೆ ಏರಿಕೆ ಆಗಿದೆ. ಹಿಂದಿನ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ₹203.3 ಆಗಿತ್ತು ಎಂದು ತಿಳಿಸಿದೆ.

ಅನಧಿಕೃತವಾಗಿ ವಾಕಿ–ಟಾಕಿ ಮಾರಾಟ: ಸಿಸಿಪಿಎ ದಂಡ

ನವದೆಹಲಿ (ಪಿಟಿಐ): ಅನಧಿಕೃತವಾಗಿ ವಾಕಿ–ಟಾಕಿಗಳನ್ನು ಮಾರಾಟ ಮಾಡಿದ್ದಕ್ಕೆ ಇ–ಕಾಮರ್ಸ್ ವೇದಿಕೆಗಳಾದ ಮೆಟಾ, ಅಮೆಜಾನ್, ಫ್ಲಿಪ್‌ಕಾರ್ಟ್ ಮತ್ತು ಮೀಶೊಗೆ ಕೇಂದ್ರ ಗ್ರಾಹಕ ರಕ್ಷಣಾ ಪ್ರಾಧಿಕಾರವು (ಸಿಸಿಪಿಎ) ತಲಾ ₹10 ಲಕ್ಷ ದಂಡ ವಿಧಿಸಿದೆ.

ಅನಧಿಕೃತವಾಗಿ ವಾಕಿ–ಟಾಕಿಗಳನ್ನು ಮಾರಾಟ ಮಾಡುವ ಮೂಲಕ ಕಂಪನಿಗಳು ಗ್ರಾಹಕರ ರಕ್ಷಣಾ ಕಾಯ್ದೆ 2019 ಮತ್ತು ದೂರಸಂಪರ್ಕ ಕಾಯ್ದೆಯನ್ನು ಉಲ್ಲಂಘನೆ ಮಾಡಿವೆ ಎಂದು ಪ್ರಾಧಿಕಾರವು ತಿಳಿಸಿದೆ. ಅಲ್ಲದೆ, ಚಿಮಿಯಾ, ಜಿಯೋಮಾರ್ಟ್ ಸೇರಿದಂತೆ 13 ಕಂಪನಿಗಳಿಗೆ ನೋಟಿಸ್ ನೀಡಿದೆ.

ಈ ಕಂಪನಿಗಳು ಗ್ರಾಹಕರ ಹಕ್ಕುಗಳ ಉಲ್ಲಂಘನೆ, ತಪ್ಪು ದಾರಿಗೆಳೆಯುವ ಜಾಹೀರಾತು ಮತ್ತು ನ್ಯಾಯಯುತವಾದ ವ್ಯಾಪಾರ ನಡೆಸುತ್ತಿಲ್ಲ. ಹೀಗಾಗಿ, ಮೀಶೊ, ಮೆಟಾ ವೇದಿಕೆ, ಫ್ಲಿಪ್‌ಕಾರ್ಟ್ ಮತ್ತು ಅಮೆಜಾನ್‌ಗೆ ತಲಾ ₹10 ಲಕ್ಷ ದಂಡ ವಿಧಿಸಲಾಗಿದೆ. ಚಿಮಿಯಾ, ಜಿಯೋಮಾರ್ಟ್, ಟಾಕ್ ಪ್ರೊ ಮತ್ತು ಮಾಸ್ಕ್‌ಮ್ಯಾನ್ ಟಾಯ್ಸ್‌ಗೆ ತಲಾ ₹1 ಲಕ್ಷ ದಂಡ ವಿಧಿಸಲಾಗಿದೆ ಎಂದು ಗ್ರಾಹಕ ವ್ಯವಹಾರ ಕಾರ್ಯದರ್ಶಿ ನಿಧಿ ಖರೆ ತಿಳಿಸಿದ್ದಾರೆ.

ಈಗಾಗಲೇ ಮೀಶೊ, ಮೆಟಾ, ಚಿಮಿಯಾ, ಜಿಯೋಮಾರ್ಟ್ ಮತ್ತು ಟಾಕ್ ಪ್ರೊ ದಂಡ ಪಾವತಿಸಿವೆ. ಉಳಿದ ವೇದಿಕೆಗಳು ಪಾವತಿಸಬೇಕಿದೆ ಎಂದು ಹೇಳಿದ್ದಾರೆ.

ಫೆಡರಲ್ ಬ್ಯಾಂಕ್ ಲಾಭ ಹೆಚ್ಚಳ

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದ ಅಕ್ಟೋಬರ್–ಡಿಸೆಂಬರ್ ತ್ರೈಮಾಸಿಕದಲ್ಲಿ ಖಾಸಗಿ ವಲಯದ ಫೆಡರಲ್ ಬ್ಯಾಂಕ್‌ನ ನಿವ್ವಳ ಲಾಭದಲ್ಲಿ ಶೇ 9ರಷ್ಟು ಹೆಚ್ಚಳವಾಗಿದೆ.

ಕಳೆದ ಆರ್ಥಿಕ ವರ್ಷದ ಇದೇ ತ್ರೈಮಾಸಿಕದಲ್ಲಿ ಬ್ಯಾಂಕ್ ₹955 ಕೋಟಿ ಲಾಭ ಗಳಿಸಿತ್ತು. ಈ ಬಾರಿ ₹1,041 ಕೋಟಿ ಲಾಭ ಗಳಿಸಿದೆ ಎಂದು ಬ್ಯಾಂಕ್ ಷೇರುಪೇಟೆಗೆ ಶುಕ್ರವಾರ ತಿಳಿಸಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ನಾಲ್ಕನೇ ವರ್ಷದ ಪುಣ್ಯಸ್ಮರಣೆ

ನಿಧನ : 17–01–2022
ದೇವನಹಳ್ಳಿ
ಶ್ರೀ ಕೆ.ಹೆಚ್. ರಾಮಕೃಷ್ಣಪ್ಪ
ಶ್ರೀ ಮಾರುತಿ ಫಾರಂ
ಕೊಡಿಗೇಹಳ್ಳಿ, ಬೆಂಗಳೂರು–560092
ನಿಮ್ಮ ಆತ್ಮಕ್ಕೆ ಪರಮಾತ್ಮನು ಚಿರಶಾಂತಿಯನ್ನು ಕರುಣಿಸಲೆಂದು ಸದಾ ನಿಮ್ಮ ಸ್ಮರಣೆಯಲ್ಲಿರುವೆಂದು ಪ್ರಾರ್ಥಿಸುವೆ.
ಇಂತಿ ದುಃಖತಪ್ತರು: ಶ್ರೀ ಕೆ.ಆರ್.ರಾಜು ಸಹೋದರರು ಮತ್ತು ಸಹೋದರಿಯರು ಸೊಸೆಯಂದಿರು ಹಾಗೂ ಮೊಮ್ಮಕ್ಕಳು

ಚಿರಸ್ಮರಣೆ

ಶ್ರೀಮತಿ ಗೀತಾಲಕ್ಷ್ಮೀ ಆರ್.
ನಿಧನ : 17–1–1994
ನೀವು ನಮ್ಮನ್ನಗಲಿ ಇಂದಿಗೆ ಮೂವತ್ತೆರಡು ವರ್ಷಗಳಾದವು. ಮೃತರ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ಕರುಣಿಸಲೆಂದು ಪ್ರಾರ್ಥಿಸುವ
ಎ. ರವೀಂದ್ರನಾಥ್ ಮತ್ತು ಎ. ಆರ್. ಅಶ್ವಥ್
ಹಾಗೂ ಕುಟುಂಬವರ್ಗದವರು
ರಾಜ್‌ಹನ್ಸ್ ಎಂಟರ್‌ಪ್ರೈಸಸ್, ರಾಜ್‌ಹನ್ಸ್ ಪಬ್ಲಿಕೇಷನ್, ಪ್ರಿಯಾಂಕ ಮತ್ತು ಚಿತ್ರ ಪತ್ರಿಕೆಗಳು
ಬೆಂಗಳೂರು – 560 044.

'ಸ್ಟಾರ್ಟ್‌ಅಪ್ ಇಂಡಿಯಾ ಮಿಷನ್' ಇದೀಗ ಕ್ರಾಂತಿ: ಪ್ರಧಾನಿ ಮೋದಿ



ನರೇಂದ್ರ ಮೋದಿ

ನವದೆಹಲಿ (ಪಿಟಿಐ): 'ದೇಶದ ಯುವಜನರು ಮತ್ತು ಉದ್ಯಮಿಗಳು ನೈಜ ಸಮಸ್ಯೆಗಳನ್ನು ಪರಿಹರಿಸುವತ್ತ ಗಮನ ಹರಿಸಿದ್ದಾರೆ. ಜೊತೆಗೆ ಸ್ಟಾರ್ಟ್‌ಅಪ್ ಇಂಡಿಯಾ ಮಿಷನ್ ಇದೀಗ ಕ್ರಾಂತಿಯಾಗಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಹೇಳಿದ್ದಾರೆ.

'ಸ್ಟಾರ್ಟ್‌ಅಪ್ ಇಂಡಿಯಾ' ಕಾರ್ಯಕ್ರಮಕ್ಕೆ ದಶಕ ತುಂಬಿದ ಪ್ರಯುಕ್ತ ಆಯೋಜಿಸಿದ್ದ ಸಮಾರಂಭದಲ್ಲಿ ಮಾತನಾಡಿದ ಅವರು, 2014ರಲ್ಲಿ ದೇಶದಲ್ಲಿ ಬೆರಣಿಕೆಯಷ್ಟು ಯೂನಿಕಾರ್ನ್‌ಗಳು ಮತ್ತು 500 ನವೋದ್ಯಮಗಳು ಇದ್ದವು. ಪ್ರಸ್ತುತ ದೇಶದಲ್ಲಿ 125ಕ್ಕೂ ಹೆಚ್ಚು ಸಕ್ರಿಯ ಯೂನಿಕಾರ್ನ್ ಮತ್ತು 2 ಲಕ್ಷಕ್ಕೂ ಅಧಿಕ ನವೋದ್ಯಮಗಳಿದ್ದು, ಭಾರತವು, ಜಗತ್ತಿನಲ್ಲಿ ಅತಿ ಹೆಚ್ಚು ನವೋದ್ಯಮ ಹೊಂದಿದ ಮೂರನೇ ರಾಷ್ಟ್ರವಾಗಿದೆ. ಯೂನಿಕಾರ್ನ್‌ಗಳು ಐಪಿಒ ಆರಂಭಿಸಿ, ಉದ್ಯೋಗ ಸೃಷ್ಟಿ ಮಾಡುತ್ತಿವೆ ಎಂದು ತಿಳಿಸಿದ್ದಾರೆ.

ಎರಡು ಮತ್ತು ಮೂರನೇ ಹಂತದ ನಗರಗಳು, ಗ್ರಾಮೀಣ ಪ್ರದೇಶಗಳಲ್ಲಿನ ಯುವಜನರು ಸ್ವಂತವಾದ ಉದ್ಯಮಗಳನ್ನು ಸ್ಥಾಪಿಸುತ್ತಿದ್ದಾರೆ. ಶೇ 45ರಷ್ಟು ನವೋದ್ಯಮಗಳು ಒಬ್ಬ ಮಹಿಳಾ ನಿರ್ದೇಶಕಿ ಅಥವಾ ಮಹಿಳಾ ಪಾಲುದಾರರನ್ನು ಹೊಂದಿವೆ ಎಂದು ಹೇಳಿದ್ದಾರೆ.

ಭಾರತವು ತನ್ನ ನವೋದ್ಯಮಗಳ ನಾವೀನ್ಯ ಮತ್ತು ವಿಶ್ವಾಸದಲ್ಲಿ ಸಂಪೂರ್ಣ ನಂಬಿಕೆಯನ್ನು ಹೊಂದಿದೆ. ಮುಂಬರುವ 10 ವರ್ಷಗಳಲ್ಲಿ ಭಾರತವು, ನವೋದ್ಯಮ ಮತ್ತು ತಂತ್ರಜ್ಞಾನದಲ್ಲಿ ಜಗತ್ತನ್ನು ಮುನ್ನಡೆಸುವುದು ನಮ್ಮ ಗುರಿಯಾಗಿರಬೇಕು ಎಂದು ಹೇಳಿದ್ದಾರೆ.

2016ರ ಜನವರಿ 16ರಂದು ಸ್ಟಾರ್ಟ್‌ಅಪ್ ಇಂಡಿಯಾ ಕಾರ್ಯಕ್ರಮ ಆರಂಭವಾಯಿತು. ಶುಕ್ರವಾರ ಈ ಕಾರ್ಯಕ್ರಮಕ್ಕೆ ದಶಕ ಪೂರೈಸಿದೆ.

ಫೆ.1ರಂದು ಷೇರುಪೇಟೆ ವಹಿವಾಟು

ಮುಂಬೈ (ಪಿಟಿಐ): ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಫೆಬ್ರುವರಿ 1ರಂದು ಬಜೆಟ್ ಮಂಡಿಸಲಿದ್ದಾರೆ. ಹೀಗಾಗಿ, ಅಂದು ಷೇರುಪೇಟೆ ವಹಿವಾಟು ನಡೆಯಲಿದೆ ಎಂದು ಬಿಎಸ್‌ಇ ಮತ್ತು ಎನ್‌ಎಸ್‌ಇ ಶುಕ್ರವಾರ ತಿಳಿಸಿದೆ.

ಬೆಳ್ಳಿಗ್ಗೆ 9.15ರಿಂದ ಮಧ್ಯಾಹ್ನ 3.30ರ ವರೆಗೆ ಷೇರುಪೇಟೆ ಕಾರ್ಯನಿರ್ವಹಿಸಲಿದೆ ಎಂದು ತಿಳಿಸಿದೆ. ಫೆಬ್ರುವರಿ 1 ಭಾನುವಾರ ಆಗಿದೆ. ಸಾಮಾನ್ಯ ವೇಳೆ ಭಾನುವಾರ ಷೇರುಪೇಟೆಗೆ ರಜೆ ಇರಲಿದ್ದು, ವಹಿವಾಟು ನಡೆಯುವುದಿಲ್ಲ. ಆದರೆ, ಈ ಬಾರಿ ಫೆಬ್ರುವರಿ 1ರಂದು ಬಜೆಟ್ ಮಂಡನೆ ಆಗಲಿದೆ. ಹೀಗಾಗಿ, ಅಂದು ವಿಶೇಷ ವಹಿವಾಟು ನಡೆಯಲಿದೆ.

ಅಡಿಕೆ ಧಾರಣೆ

ಕುಮಟಾ					
ಚಾಲಿ	45099-50199	ಹೊಸತು	45089-58701	ಬಿಳಿಗೋಟು	21899-41599
ಚಿಪ್ಪು	29569-37019	ರಾಶಿ	42869-59100	ಚಾಲಿ	45400-51298
ಕೋಕ	14569-32999	ಸರಕು	60009-92040	ಕೆಂಪುಗೋಟು	25118-38699
ಫ್ಯಾಕ್ಟರಿ	9990-25050	**ಸಿದ್ದಾಪುರ**		ರಾಶಿ	52009-56211
ಹೊಸಚಾಲಿ	39899-45077	ಬಿಳಿಗೋಟು	26699-38699	**ಯಲ್ಲಾಪುರ**	
ಪುತ್ತೂರು		ಚಾಲಿ	43899-49899	ಆಪಿ	63865-68119
ಕೋಕ	20000-35500	ಕೋಕ	21699-31089	ಬಿಳಿಗೋಟು	14899-34016
ಹೊಸತು	26000-46000	ಹೊಸಚಾಲಿ	37399-46479	ಕೋಕ	12109-31699
ಹಳತು	45000-53500	ಕೆಂಪುಗೋಟು	30119-35899	ಹಳೆಚಾಲಿ	36409-51611
ಶಿವಮೊಗ್ಗ		ರಾಶಿ	45399-54099	ಹೊಸಚಾಲಿ	38119-44605
ಬೆಟ್ಟೆ	57099-68416	ತಟ್ಟಿಬೆಟ್ಟೆ	35099-46899	ಕೆಂಪುಗೋಟು	17089-41669
ಗೊರಬಲು	19000-42730	**ಶಿರಸಿ**		ರಾಶಿ	50005-63500
		ಬೆಟ್ಟೆ	30310-54181	ತಟ್ಟಿಬೆಟ್ಟೆ	37119-55019

ಮುಂಬೈ ಧಾರಣೆ (ಶೇಂಗಾ)

16-01-2026	
ಜಾವಾ 70/80(ಹೊಸ)	11000-11100
ಜಾವಾ 80/90(ಹೊಸ)	10300-10400
ದಪ್ಪ ಮಧ್ಯಪ್ರದೇಶ (ಹೊಸ)	8000-8100
ದಪ್ಪ ಗುಜರಾತ್ (ಹೊಸ)	9300-9400
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1640 (1640)
ಒಂದು ವಾರದ ಡೆಲಿವರಿ	1635 (1635)
ಪಾಮ್ ವಾರದ ಡೆಲಿವರಿ	1288 (1278)
ಸೂರ್ಯಕಾಂತಿ ಎಣ್ಣೆ ಕಚ್ಚಾ	1510 (1510)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,40,800 (1,41,600)
ಬೆಳ್ಳಿ ಕೆ.ಜಿಗೆ	2,79,000 (2,81,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹27800-27800
ಭದ್ರಾವತಿ	₹18000-18000
ವಿಜಯಪುರ	₹8400-8500

ವಿಪ್ರೊ ಲಾಭ ಇಳಿಕೆ

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ದೇಶದ ಐ.ಟಿ ಸೇವಾ ಕಂಪನಿ ವಿಪ್ರೊ, ₹3,119 ಕೋಟಿ ನಿವ್ವಳ ಲಾಭ ಗಳಿಸಿದೆ.

ಕಳೆದ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ಕಂಪನಿಯು ₹3,353 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಲಾಭದಲ್ಲಿ ಶೇ 7ರಷ್ಟು ಇಳಿಕೆಯಾಗಿದೆ ಎಂದು ಕಂಪನಿ ತಿಳಿಸಿದೆ.

ಟ್ರಂಪ್ ಒತ್ತಡದಿಂದ ಇರಾನ್ 800 ಹೋರಾಟಗಾರರ ಗಲ್ಲು ತಡೆ ಹಿಡಿದಿರುವುದು ನಿಜವೇ?

● ಹೌದು ● ಇಲ್ಲ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಏಪ್ರಿಲ್‌ನಿಂದ ಯುಪಿಐ ಮೂಲಕ ಇಪಿಎಫ್

ನವದೆಹಲಿ (ಪಿಟಿಐ): ನೌಕರರ ಭವಿಷ್ಯ ನಿಧಿ ಸಂಘಟನೆ (ಇಪಿಎಫ್‌ಒ) ಚಂದಾದಾರರು ಪ್ರಸಕ್ತ ಸಾಲಿನ ಏಪ್ರಿಲ್ ನಂತರ ನೌಕರರ ಭವಿಷ್ಯ ನಿಧಿಯನ್ನು (ಇಪಿಎಫ್) ಯುಪಿಐ ಆಧಾರಿತ ಪಾವತಿ ಮೂಲಕ ಹಿಂತೆಗೆದುಕೊಳ್ಳಬಹುದು.

ಯುಪಿಐ 'ಆಟೊ ಸೆಟಲ್‌ಮೆಂಟ್' ಆಯ್ಕೆಯಡಿ ಅರ್ಜಿ ಸಲ್ಲಿಸಿದ ಮೂರು ದಿನಗಳಲ್ಲೇ ಮೊತ್ತವು ಚಂದಾದಾರರ ಬ್ಯಾಂಕ್ ಖಾತೆಗೆ ನೇರವಾಗಿ ಜಮಾ ಆಗುತ್ತದೆ. ಭವಿಷ್ಯನಿಧಿ ಹಿಂತೆಗೆದುಕೊಳ್ಳುವಾಗ ಹಳೆಯ ವ್ಯವಸ್ಥೆಯಲ್ಲಿ ಆಗುತ್ತಿದ್ದ ವಿಳಂಬವು ಹೊಸ ವ್ಯವಸ್ಥೆಯಲ್ಲಿ ತಪ್ಪಲಿದೆ ಎಂದು ಮೂಲಗಳು ತಿಳಿಸಿವೆ.

ಭವಿಷ್ಯನಿಧಿಯನ್ನು ಹಿಂತೆಗೆದುಕೊಳ್ಳುವುದು ಮಾತ್ರವಲ್ಲ, ಬಾಕಿ ಉಳಿದಿರುವ ಮೊತ್ತವನ್ನೂ ಯುಪಿಐ ಮೂಲಕ ಪರಿಶೀಲಿಸಿಕೊಳ್ಳಬಹುದು. ಉದ್ಯೋಗಿ ಮತ್ತು ಉದ್ಯೋಗದಾತ ಕಂಪನಿ ಇಬ್ಬರ ಪಾಲೂ ಸೇರಿ ಒಟ್ಟು ಅರ್ಹವಿರುವ ಶೇ 100ರಷ್ಟು ಮೊತ್ತವನ್ನೂ ಹಿಂತೆಗೆದುಕೊಳ್ಳಲು ಕಾರ್ಮಿಕರಿಗೆ ಅವಕಾಶವಿದೆ.

ಇಪಿಎಫ್ ಖಾತೆಯಿಂದ ಬ್ಯಾಂಕ್ ಖಾತೆಗೆ ಹಣವು ಸುರಕ್ಷಿತವಾಗಿ ವರ್ಗಾವಣೆಯಾಗಲು, ಚಂದಾದಾರರು ತಮ್ಮ ಲಿಂಕ್ ಮಾಡಲಾದ ಯುಪಿಐ ಪಿನ್ ಬಳಸಬೇಕು. ಒಮ್ಮೆ ಹಣವು ಬ್ಯಾಂಕ್ ಖಾತೆಗೆ ಜಮಾಗೊಂಡ ನಂತರ, ಆ ಮೊತ್ತವನ್ನು ಇನ್ನೊಂದು ಖಾತೆಗೆ ವರ್ಗಾಯಿಸಿಕೊಳ್ಳಲು ಅಥವಾ ಎಟಿಎಂ ಮೂಲಕ ತೆಗೆದುಕೊಳ್ಳಲು ಚಂದಾದಾರರಿಗೆ ಅವಕಾಶವಿರುತ್ತದೆ.

ಸದ್ಯ ಯುಪಿಐ ಆಧಾರಿತ ಪಾವತಿ ವ್ಯವಸ್ಥೆಯಲ್ಲಿನ ಸಾಫ್ಟ್‌ವೇರ್ ಲೋಪಗಳನ್ನು ಇಪಿಎಫ್‌ಒ ಸರಿಪಡಿಸುತ್ತಿದೆ. ಈ ಯೋಜನೆ ಜಾರಿಗೆ ಬಂದರೆ ಸುಮಾರು 8 ಕೋಟಿಯಷ್ಟು ಚಂದಾದಾರರಿಗೆ ಅನುಕೂಲವಾಗಲಿದೆ.

ತುರ್ತು ಹಣಕಾಸು ಅಗತ್ಯ ಇರುವ ಕಾರ್ಮಿಕರಿಗೆ ನೆರವಾಗುವ ಉದ್ದೇಶದಿಂದ ಕೋವಿಡ್–19 ಸಂದರ್ಭದಲ್ಲಿ ಇಪಿಎಫ್‌ಒ ಮೊದಲ ಬಾರಿಗೆ ಆನ್‌ಲೈನ್ ಆಟೊ ಸೆಟಲ್‌ಮೆಂಟ್ ಆಯ್ಕೆಯನ್ನು ಪರಿಚಯಿಸಿತ್ತು. ಪ್ರತಿವರ್ಷ ಸುಮಾರು 5 ಲಕ್ಷದಷ್ಟು ಇಪಿಎಫ್ ಕ್ಲೇಮ್‌ಗಳನ್ನು ಇಪಿಎಫ್‌ಒ ಇತ್ಯರ್ಥಪಡಿಸುತ್ತದೆ.

ಇಪಿಎಫ್‌ಒ ಯಾವುದೇ ಬ್ಯಾಂಕಿಂಗ್ ಪರವಾನಗಿ ಹೊಂದಿರದ ಕಾರಣ, ಚಂದಾದಾರರಿಗೆ ಇಪಿಎಫ್ ಖಾತೆಗಳಿಂದ ನೇರವಾಗಿ ಹಣವನ್ನು ಹಿಂತೆಗೆದುಕೊಳ್ಳಲು ಅವಕಾಶ ಇರುವುದಿಲ್ಲ.

ಭಾರತ–ಐರೋಪ್ಯ ಒಕ್ಕೂಟದ ಎಫ್‌ಟಿಎ 'ಎಲ್ಲ ಒಪ್ಪಂದಗಳ ತಾಯಿ'–ಗೋಯಲ್

ನವದೆಹಲಿ (ಪಿಟಿಐ): 'ಭಾರತ ಮತ್ತು ಐರೋಪ್ಯ ಒಕ್ಕೂಟದ ನಡುವಿನ ಮುಕ್ತ ವ್ಯಾಪಾರ ಒಪ್ಪಂದವು (ಎಫ್‌ಟಿಎ) 'ಎಲ್ಲ ಒಪ್ಪಂದಗಳ ತಾಯಿ' ಆಗಿರುತ್ತದೆ' ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಶುಕ್ರವಾರ ಹೇಳಿದ್ದಾರೆ.

ಈ ಪ್ರಸ್ತಾವಿತ ವ್ಯಾಪಾರ ಒಪ್ಪಂದವು ಪರಸ್ಪರ ಪ್ರಯೋಜನಕಾರಿಯಾಗಿದ್ದು, ಒಪ್ಪಂದದ ಮಾತುಕತೆಯು ಅಂತಿಮ ಹಂತದಲ್ಲಿದೆ. ಅಲ್ಲದೆ, ಭಾರತವು ನಿರೀಕ್ಷಿಸಿದ ರೀತಿಯಲ್ಲಿ ಈ ಒಪ್ಪಂದ ಫಲಪ್ರದವಾಗಲಿದೆ ಎಂದು ಹೇಳಿದ್ದಾರೆ.

2014ರಿಂದ ಇಲ್ಲಿಯವರೆಗೆ ಭಾರತವು, ಏಳು ವ್ಯಾಪಾರ ಒಪ್ಪಂದಗಳನ್ನು ಅಂತಿಮಗೊಳಿಸಿದೆ. ಆಸ್ಟ್ರೇಲಿಯಾ, ಬ್ರಿಟನ್, ಓಮನ್, ನ್ಯೂಜಿಲ್ಯಾಂಡ್, ಯುಎಇ, ಐರೋಪ್ಯ ಮುಕ್ತ ವ್ಯಾಪಾರ ಒಕ್ಕೂಟ (ಇಎಫ್‌ಟಿಎ) ಮತ್ತು ಮಾರಿಷಷ್ ನಡುವೆ ಒಪ್ಪಂದ ಆಗಿದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General

ಉದ್ಯೋಗಾವಕಾಶಗಳು TVS, ಬ್ರಿಟಾನಿಯಾ,ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ಯುವಕ ಯುವತಿಯರಿಗೆ ಹೆಲ್ಪರ್ ಕೆಲಸ ಖಾಲಿ ಇದೆ. ತಿಂಗಳಿಗೆ ವೇತನ 30000 ರಿಂದ 35000/- ವರೆಗೆ. ವಿಳಾಸ: ಶೇಷಾದ್ರಿಪುರಂ ಬೆಂಗಳೂರು. 9019626612

Wanted

ತೋಟದ ಕೆಲಸಕ್ಕಾಗಿ ನುರಿತ ಅನುಭವ ಇರುವ (ಫ್ಯಾಮಿಲಿ) ಕೆಲಸಗಾರರು ಬೇಕಾಗಿರುತ್ತಾರೆ. ಆಸಕ್ತ ಉಳ್ಳವರು ಈ ಕೆಳಗಿನ ನಂಬರ್‌ಗೆ ಫೋನ್ ಮಾಡಬಹುದು ತೋಟ ನಂಜನಗೂಡು ತಾಲ್ಲೂಕಿನ ವ್ಯಾಪ್ತಿಯಲ್ಲಿದೆ. 9448471047

ಕರ್ನಾಟಕದಾದ್ಯಂತ ಕಂಪನಿಗಳಿಗೆ work form Home ಕೆಲಸಕ್ಕೆ ಯುವಕರು ಯುವತಿಯರು ಬೇಕಾಗಿದ್ದಾರೆ. 19000-25000. ಏಳನೇ, ಹತ್ತನೇ ವಿದ್ಯಾರ್ಹತೆಯಿಲ್ಲದವರಿಗೂ. 7996021216

ಫೀಲ್ಡ್ ಆಫೀಸರ್ ಮತ್ತು ಸೆಕ್ಯುರಿಟಿ ಗಾರ್ಡ್ ಕೆಲಸಕ್ಕೆ ಬೇಕಾಗಿದರೆ ಸ್ಥಳ: ಮೈಸೂರು ರೋಡ್, ಕುಂಬಳಗೂಡು, ಬಿಡದಿ. ಸಂಪರ್ಕಿಸಿ:7259511666/ 9611248555/ 9611630666

ಭವಿಷ್ಯ

Astrology

ಶಿವಶಕ್ತಿ ಜ್ಯೋತಿಷ್ಯಂ (ಪ್ರೇಮಭವಿಷ್ಯ) ಪ್ರೀತಿಸಿದವರನ್ನು ಮರಳಿ ಸ್ತ್ರೀಪುರುಷ ವಶೀಕರಣ ಮಾಡಿಕೊಡುತ್ತಾರೆ. ಶತ್ರುನಾಶ ಗಂಡಹೆಂಡತಿ ಪರಿಹಾರಕ್ಕೆ ಮಂಜುನಾಥ್ ಭಟ್ 9663243202

ವೈಯಕ್ತಿಕ

Change of Name

ನಾನು ಶೇಖ್ ಜಾಕಿರ್ ಹುಸ್ಸೇನ್, ನನ್ನ ಪುತ್ರಿಯ ಹೆಸರನ್ನು ಶೈಕ್ ಬೀಬಿ ಮರಿಯಂ ಎಂಬುದರಿಂದ ಶೈಕ್ ಸನಾ ಮರಿಯಂ ಎಂದು ದಿನಾಂಕ 03-01-2026 ರ ಪ್ರಮಾಣ ಪತ್ರ ದ ಮೂಲಕ ಬದಲಾಯಿಸಿದ್ದೇನೆ. ಈ ಪ್ರಮಾಣ ಪತ್ರವನ್ನು ಬೆಂಗಳೂರು ನೋಟರಿ ಎಂ. ರಾಜೇಂದ್ರ ಅವರ ಮುಂದೆ ಪ್ರಮಾಣೀಕರಿಸಲಾಗಿದೆ.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಎಲ್ಲ ಆಯ್ಕೆಗಳು ಮುಕ್ತ: ಅಮೆರಿಕ

ವಿಶ್ವಸಂಸ್ಥೆ ಭದ್ರತಾ ಮಂಡಳಿ ತುರ್ತು ಸಭೆಯಲ್ಲಿ ಇರಾನ್‌ಗೆ ಎಚ್ಚರಿಕೆ

ಮೈಕ್ ವಾಟ್ಜ್

ವಿಶ್ವಸಂಸ್ಥೆ(ಎಪಿ): 'ಇರಾನ್‌ನಲ್ಲಿ ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸುತ್ತಿರುವವರ ಹತ್ಯೆ ತಡೆಯುವುದು ಅಮೆರಿಕಕ್ಕೆ ಮುಖ್ಯ. ಈ ನಿಟ್ಟಿನಲ್ಲಿ ನಮ್ಮ ಮುಂದೆ ಎಲ್ಲ ಆಯ್ಕೆಗಳೂ ಮುಕ್ತವಾಗಿವೆ' ಎಂದು ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಸಭೆಯಲ್ಲಿ ಅಮೆರಿಕ ಹೇಳಿದೆ.

'ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಾವು ಆಡಿದ ಮಾತನ್ನು ಕಾರ್ಯರೂಪಕ್ಕೆ ತಂದು ತೋರಿಸುವ ವ್ಯಕ್ತಿ ಎಂಬುದನ್ನು ಸ್ಪಷ್ಟಪಡಿಸುತ್ತೇನೆ. ಈ ಮಾತನ್ನು ಇರಾನ್ ಸರ್ಕಾರದ ಚುಕ್ಕಾಣಿ ಹಿಡಿದವರಿಗಿಂತಲೂ ಹೆಚ್ಚು ಬೇರೆ ಯಾರೂ ಅರ್ಥ ಮಾಡಿಕೊಳ್ಳಲಾರರು' ಎಂದು ವಿಶ್ವಸಂಸ್ಥೆಯಲ್ಲಿ ಅಮೆರಿಕದ ರಾಯಭಾರಿ ಮೈಕ್ ವಾಟ್ಜ್ ಹೇಳಿದರು.

ಇರಾನ್‌ನಲ್ಲಿ ಆಡಳಿತ ವಿರೋಧಿ ಪ್ರತಿಭಟನೆಗಳು ಆರಂಭವಾದ ಬಳಿಕ, ಇದೇ ಮೊದಲ ಬಾರಿಗೆ ಅಮೆರಿಕ ಹಾಗೂ ಇರಾನ್ ಪ್ರತಿನಿಧಿಗಳು ಗುರುವಾರ ನಡೆದ ಭದ್ರತಾ ಮಂಡಳಿಯ ತುರ್ತು ಸಭೆಯಲ್ಲಿ ಮುಖಾಮುಖಿ ಆಗಿದ್ದಾರೆ.

ವಿಶ್ವಸಂಸ್ಥೆಯಲ್ಲಿ ಇರಾನ್‌ನ ಪ್ರತಿನಿಧಿಗಳನ್ನು ಉದ್ದೇಶಿಸಿ ಮಾತನಾಡುವ ವೇಳೆ, ವಾಟ್ಜ್ ಅವರು ಅಮೆರಿಕದ ನಿಲುವನ್ನು ವಿವರಿಸಿದ್ದಾರೆ.

ಅಮೆರಿಕದ ಮನವಿ ಮೇರೆಗೆ ಭದ್ರತಾ ಮಂಡಳಿಯ ತುರ್ತು ಸಭೆಯನ್ನು ಆಯೋಜಿಸಲಾಗಿತ್ತು. ಇರಾನ್‌ನ ಭಿನ್ನಮತೀಯ ನಾಯಕಿ ಮಸಿಹ್ ಅಲಿನೆಜಾದ್ ಹಾಗೂ ಮುಖಂಡ ಅಹಮದ್ ಬತೇಬಿ ಅವರನ್ನು ಕೂಡ ಸಭೆಗೆ ಆಹ್ವಾನಿಸಲಾಗಿತ್ತು.

ಸಭೆ ಆರಂಭವಾದಾಗ ಮಾತನಾಡಿದ ಇರಾನ್‌ನ ಈ ಇಬ್ಬರು ಭಿನ್ನಮತೀಯ ನಾಯಕರು, ದೇಶದಲ್ಲಿ ಪ್ರತಿಭಟನಕಾರರ ಮೇಲೆ ನಡೆದ ದೌರ್ಜನ್ಯ ಕುರಿತು ವಿವರಿಸಿದರು.

'ನನ್ನನ್ನು ಹತ್ಯೆ ಮಾಡಲು ನೀವು ಮೂರು ಬಾರಿ ಯತ್ನಿಸಿದಿರಿ. ನನ್ನನ್ನು ಹತ್ಯೆ ಮಾಡಲು ಯತ್ನಿಸಿದ ವ್ಯಕ್ತಿಯನ್ನು ಬ್ರೂಕ್‌ಲಿನ್‌ನಲ್ಲಿರುವ ಮನೆಯ ಮುಂದಿನ ಉದ್ಯಾನದಲ್ಲಿ ಸ್ವತಃ ನಾನೇ ನೋಡಿದ್ದೇನೆ' ಎಂದು ಇರಾನ್ ಪ್ರತಿನಿಧಿಗಳನ್ನು ಉದ್ದೇಶಿಸಿ ಅಲಿನೆಜಾದ್ ಹೇಳಿದರು.

> **ನೀವು(ಡೊನಾಲ್ಡ್ ಟ್ರಂಪ್) ಇರಾನ್ ಜನರ ಕೈಬಿಡಬೇಡಿ. ಸರ್ಕಾರದ ವಿರುದ್ಧ ಬೀದಿಗಿಳಿಯುವಂತೆ ನೀವು ಜನರನ್ನು ಪ್ರೇರೇಪಿಸಿದ್ದೀರಿ. ಅದು ಒಳ್ಳೆಯದೇ. ಈಗ ಅವರನ್ನು ನಡುನೀರಿನಲ್ಲಿ ಬಿಡಬೇಡಿ**
> **ಅಹಮದ್ ಬತೇಬಿ** ಇರಾನ್‌ನ ಭಿನ್ನಮತೀಯ ನಾಯಕ

ಇರಾನ್‌ನಲ್ಲಿ ಸಿಲುಕಿಕೊಂಡಿರುವ 24 ಮಲಯಾಳಿಗರು

ಪ್ರಜಾವಾಣಿ ವಾರ್ತೆ

ತಿರುವನಂತಪುರಂ: ಸಂಘರ್ಷಪೀಡಿತ ಇರಾನ್‌ನಲ್ಲಿ ಸಿಲುಕಿಕೊಂಡಿರುವ 24 ಮಲಯಾಳಿಗರು ಮರಳಿ ಸ್ವದೇಶಕ್ಕೆ ಕರೆತರುವಂತೆ ನೋರ್ಕಾ ರೂಟ್ ನೋಡಲ್ ಏಜೆನ್ಸಿಗೆ ಮನವಿ ಮಾಡಿದ್ದಾರೆ.

ಇದರಲ್ಲಿ 12 ಮಂದಿ ವೈದ್ಯಕೀಯ ವಿದ್ಯಾರ್ಥಿಗಳಿದ್ದು, ಉಳಿದವರು ನಾವಿಕರಾಗಿದ್ದಾರೆ.

'ಭಾರತಕ್ಕೆ ಮರಳಿ ಬರಲು ಬಯಸುತ್ತಿರುವವರ ಸಂಖ್ಯೆ ಕಲೆ ಹಾಕಲಾಗುತ್ತಿದ್ದು, ರಾಯಭಾರ ಕಚೇರಿ ಹಾಗೂ ವಿದೇಶಾಂಗ ಇಲಾಖೆಯ ಜೊತೆಗೂ ಹಂಚಿಕೊಳ್ಳಲಾಗುವುದು' ಎಂದು ನೋರ್ಕಾ ರೂಟ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅಜಿತ್ ಕೊಲಶ್ಶೇರಿ ತಿಳಿಸಿದ್ದಾರೆ.

ಬರಹಗಾರರಿಂದ ಮಾತ್ರ ಹೊಸ ಜಗತ್ತು ಸೃಷ್ಟಿ ಸಾಧ್ಯ: ಚೆನ್ನೈ ಅಂತರರಾಷ್ಟ್ರೀಯ ಪುಸ್ತಕ ಮೇಳದಲ್ಲಿ ಕನಿಮೊಳಿ ಅಭಿಮತ

ಪ್ರಕಾಶಕ– ಅನುವಾದಕರ ಹೆಬ್ಬಾಗಿಲಾದ ಕರಾವಳಿ ನಗರ

• ಮಂಜುಶ್ರೀ ಎಂ. ಕಡಕೋಳ

ಚೆನ್ನೈ: ಜಾಗತಿಕ ಮಟ್ಟದ ಪ್ರಕಾಶಕರು, ಅನುವಾದಕರ ನೆಚ್ಚಿನ ಮೇಳವಾಗಿ ಮಾರ್ಪಟ್ಟಿರುವ ಚೆನ್ನೈ ಅಂತರರಾಷ್ಟ್ರೀಯ ಪುಸ್ತಕ ಮೇಳದ ನಾಲ್ಕನೇ ಆವೃತ್ತಿಗೆ ಇಲ್ಲಿನ ಕಲೈವಾನರ್ ಅರಂಗಂನಲ್ಲಿ ಶುಕ್ರವಾರ ಅದ್ದೂರಿ ಚಾಲನೆ ದೊರೆಯಿತು.

102 ದೇಶಗಳಿಂದ ಬಂದಿದ್ದ ಪ್ರಕಾಶಕರು, ಅನುವಾದಕರು, ಲೇಖಕರು ಒಂದೇ ವೇದಿಕೆಯಲ್ಲಿ ಮುಖಾಮುಖಿಯಾಗಿ ತಮ್ಮ ದೇಶ, ಭಾಷೆಗಳ ಪುಸ್ತಕಗಳ ಕುರಿತು ಚರ್ಚಿಸಿದರು. ದಕ್ಷಿಣ ಭಾರತದ ಪ್ರಾದೇಶಿಕ ಭಾಷೆಗಳ ಕೃತಿಗಳನ್ನು ತಮಿಳು ಸೇರಿದಂತೆ ಜಗತ್ತಿನ ಇತರ ಭಾಷೆಗಳಿಗೆ ಅನುವಾದಿಸುವ ಕುರಿತು ಮಾತುಕತೆ ನಡೆಸಿದರು.

ಮೇಳದ ಆಶಯ ನುಡಿಗಳನ್ನಾಡಿದ ಕವಯತ್ರಿ, ಸಂಸದೆ ಕೆ. ಕನಿಮೊಳಿ, 'ಇಂದು ಜಗತ್ತು ಧರ್ಮ, ಜಾತಿ, ಜನಾಂಗ ಸೇರಿ ಸಾಧ್ಯವಿರುವ ಎಲ್ಲ ವಿಷಯಗಳಲ್ಲೂ ಗೋಡೆಗಳನ್ನು ನಿರ್ಮಿಸುತ್ತಿದೆ. ಆದರೆ, ಇಂಥ ತಡೆಗೋಡೆಗಳನ್ನು ಸಾಹಿತ್ಯ ಮಾತ್ರ ಒಡೆಯಬಲ್ಲದು. ಪ್ರಶ್ನಿಸುವ ಮನೋಭಾವವನ್ನು ಜೀವಂತವಾಗಿಡುವುದೇ ಸಾಹಿತ್ಯದ ಮುಖ್ಯ ಉದ್ದೇಶವಾಗಿದ್ದು, ಬರಹಗಾರನ ಪ್ರತಿ ಸಾಲೂ ಹಳೆಯ ಜಗತ್ತು ಸೃಷ್ಟಿಸಿದ್ದನ್ನು ಪ್ರಶ್ನಿಸುತ್ತಾ ನಮ್ಮನ್ನು ಮರುಚಿಂತನೆ ಮಾಡಲು ಪ್ರೇರೇಪಿಸುತ್ತದೆ. ಹಾಗಾಗಿ, ಬರಹಗಾರರಿಗಷ್ಟೇ ಹೊಸ ಜಗತ್ತನ್ನು ಸೃಷ್ಟಿಸಲು ಸಾಧ್ಯ' ಎಂದರು.

ತಮ್ಮ ಮಾತುಗಳಲ್ಲಿ ನೆಲ್ಸನ್ ಮಂಡೇಲಾ, ಅಬ್ರಹಾಂ ವರ್ಗೀಸ್, ಇಮ್ಮೈಯಮ್ ಅವರ ಬದುಕು ಮತ್ತು ಸಾಹಿತ್ಯವನ್ನು ಉಲ್ಲೇಖಿಸಿದ ಅವರು ಲೇಖಕನಿಗೆ ಮಾತ್ರ ಪ್ರಭುತ್ವಕ್ಕೆ ಸವಾಲು ಎಸೆಯುವ ಸಾಮರ್ಥ್ಯವಿರುತ್ತದೆ ಎಂದು ಅಭಿಪ್ರಾಯಪಟ್ಟರು.

ಫ್ರಾಂಕ್‌ಫರ್ಟ್ ಪುಸ್ತಕ ಮೇಳದ ವ್ಯವಹಾರ ಅಭಿವೃದ್ಧಿ ವಿಭಾಗದ ಉಪಾಧ್ಯಕ್ಷೆ ಕ್ಲೌಡಿಯಾ ಕೈಸರ್ ಮಾತನಾಡಿ, ತಮಿಳು ಸಾಹಿತ್ಯವನ್ನು ಜಗತ್ತಿಗೆ ಪರಿಚಯಿಸುವುದು ಮತ್ತು ಸಾಂಸ್ಕೃತಿಕ ವಿನಿಮಯಕ್ಕೆ ಅವಕಾಶಗಳನ್ನು ಸೃಷ್ಟಿಸುವುದು ಫ್ರಾಂಕ್‌ಫರ್ಟ್ ಪುಸ್ತಕ ಮೇಳದ ಪ್ರಮುಖ ಗುರಿಗಳಲ್ಲಿ ಒಂದಾಗಿದೆ ಎಂದರು.

'ಮನೆಯ ಹೊಸ್ತಿಲು: ಬಂಧನವೋ ಬಿಡುಗಡೆಯೋ' ಗೋಷ್ಠಿಯಲ್ಲಿ ತಮಿಳು ಲೇಖಕಿ ಸಿ.ಎಸ್. ಲಕ್ಷ್ಮಿ (ಅಂಬೈ) ಮಾತನಾಡಿ, 'ವಿವಾಹದ ನಂತರ ನಾಟಕಗಳಲ್ಲಿ ನಟಿಸುವುದಿಲ್ಲವೆಂದು ತಮ್ಮ ಪತಿಗೆ ಮಾತು ಕೊಟ್ಟಿದ್ದ ಜಿ.ವಿ. ಮಾಲತಮ್ಮ (ಗುಬ್ಬಿ ವೀರಣ್ಣ ಮಗಳು), ನಾಟಕವೊಂದರಲ್ಲಿ ನಟಿ ಕೈಕೊಟ್ಟಾಗ ಪತಿಯ ಮಾತು ಮೀರಿ ನಟನೆಗೆ ಸಿದ್ಧವಾಗಿದ್ದರು. ಆ ಹೊತ್ತಿನಲ್ಲಿ ಪತಿಯೋ, ನಟನೆಯೋ ಎಂಬ ಆಯ್ಕೆಯನ್ನು ಪತಿ ಇಟ್ಟಾಗ ತಮ್ಮಿಚ್ಛೆಯಂತೆ ನಟನೆಯನ್ನೇ ಆಯ್ಕೆ ಮಾಡಿಕೊಳ್ಳುವ ಮೂಲಕ ಬಂಧಮುಕ್ತರಾದರು' ಎಂದರು.

ಫ್ರಾನ್ಸ್ ಸಂಶೋಧಕ ಥಾಮಸ್ ಹಿತೋಷಿ, ತಮಿಳು ಕವಯಿತ್ರಿ ಅವ್ವೈ ತಮ್ಮ ಬದುಕಿನ ಕ್ರಮವನ್ನು ಬದಲಿಸಿದ ಕುರಿತು ವಿಶ್ಲೇಷಿಸಿದರು.

ಮೊದಲ ದಿನ ನಡೆದ ಆರು ಗೋಷ್ಠಿಗಳಲ್ಲಿ ತಮಿಳಿನ ಮಹಿಳಾ ಜಗತ್ತು, ದಮನಿತ ಸಾಹಿತ್ಯದ ನೆಲೆ, ಭಾಷಾ ಬೆಳವಣಿಗೆ, ಶ್ರೇಷ್ಠ ಕೃತಿಯ ಮಾನದಂಡ ಕುರಿತು ಚರ್ಚಿಸಲಾಯಿತು.

ಕನ್ನಡದ ಅಣ್ಣ, ತಮಿಳಿನ ತಂಬಿ!

ಉದ್ಘಾಟನಾ ಸಮಾರಂಭದಲ್ಲಿ ತಮಿಳುನಾಡಿನ ಶಾಲಾ ಶಿಕ್ಷಣ ಖಾತೆ ಸಚಿವ ಡಾ. ಅನ್ಬಿಲ್ ಮಹೇಶ್ ಪೊಯ್ಯಮೊಳಿ ಅವರು, ಕರ್ನಾಟಕದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ ಮಧು ಬಂಗಾರಪ್ಪ ಅವರನ್ನು 'ಅಣ್ಣ' ಎಂದು ಕರೆದರೆ, ಮಧು ಬಂಗಾರಪ್ಪ ತಮ್ಮ ಭಾಷಣದಲ್ಲಿ ಡಾ.ಅನ್ಬಿಲ್ ಮಹೇಶ್ ಅವರನ್ನು ತಮಿಳಿನಲ್ಲಿ 'ತಂಬಿ' ಎಂದು ಕರೆದರು.

ಕೇಂದ್ರದ ಭಾಷಾ ನೀತಿ ಹೇರಿಕೆ, ಎನ್‌ಇಪಿ ವಿಚಾರದಲ್ಲಿ ತಮಿಳುನಾಡು ಮತ್ತು ಕರ್ನಾಟಕ ಜತೆಯಾಗಿ ಹೋರಾಟ ಮಾಡುತ್ತಿರುವ ಕುರಿತು ಕನಿಮೊಳಿ ಸ್ಮರಿಸಿದರು.

6ನೇ ತೈಲ ಟ್ಯಾಂಕರ್ ವಶಕ್ಕೆ ಪಡೆದ ಅಮೆರಿಕ

ವಾಷಿಂಗ್ಟನ್ (ಎಪಿ): ವೆನೆಜುವೆಲಾ ಜತೆಗೆ ಸಂಬಂಧ ಹೊಂದಿದೆ ಎಂದು ಹೇಳುವ ಮತ್ತೊಂದು ತೈಲ ಟ್ಯಾಂಕರ್ ಅನ್ನು ಅಮೆರಿಕ ವಶಪಡಿಸಿಕೊಂಡಿದೆ.

ದಕ್ಷಿಣ ಅಮೆರಿಕದ ಪ್ರಮುಖ ತೈಲ ಉತ್ಪಾದನಾ ದೇಶವಾದ ವೆನೆಜುವೆಲಾ ಮೇಲೆ ತನ್ನ ನಿಯಂತ್ರಣವನ್ನು ಬಿಗಿಗೊಳಿಸುವ ಭಾಗವಾಗಿ ಅಮೆರಿಕ ಈ ಕ್ರಮ ತೆಗೆದುಕೊಂಡಿದೆ.

ಕೆರಿಬಿಯನ್ ಸಮುದ್ರದಲ್ಲಿ ಅಮೆರಿಕ ಪಡೆಗಳು 'ವೆರೋನಿಕಾ' ಹೆಸರಿನ ಟ್ಯಾಂಕರ್ ಅನ್ನು ವಶಕ್ಕೆ ತೆಗೆದುಕೊಂಡಿವೆ ಎಂದು ಅಮೆರಿಕದ 'ಹೋಮ್‌ಲ್ಯಾಂಡ್ ಸೆಕ್ಯುರಿಟಿ' ಕಾರ್ಯದರ್ಶಿ ಕ್ರಿಸ್ಟಿ ನೋಯೆಮ್ ಸಾಮಾಜಿಕ ಮಾಧ್ಯಮದಲ್ಲಿ ಮಾಹಿತಿ ನೀಡಿದ್ದಾರೆ. ಇಲ್ಲಿಯವರೆಗೆ ಅಮೆರಿಕ ಪಡೆಗಳು ವಶಕ್ಕೆ ಪಡೆದ ಆರನೇ ತೈಲ ಟ್ಯಾಂಕರ್ ಇದಾಗಿದೆ. ಎರಡು ವಾರಗಳ ಹಿಂದೆಯಷ್ಟೇ ವೆನೆಜುವೆಲಾ ಅಧ್ಯಕ್ಷ ನಿಕೊಲಸ್ ಮಡುರೊ ಅವರನ್ನು ಅಮೆರಿಕ ಮಿಂಚಿನ ಕಾರ್ಯಾಚರಣೆ ಮೂಲಕ ವಶಕ್ಕೆಪಡೆದಿತ್ತು.


ಧೀರೆನ್

ಸಂದೀಪ್ ಸುಂಕದ್

‘ಪಬ್ಬಾರ್’ನಲ್ಲಿ ಹೀಗಿದ್ದಾರೆ ಧೀರೆನ್

ಚೊಚ್ಚಲ ನಿರ್ದೇಶನದ ಸಿನಿಮಾ ‘ಶಾಖಾಹಾರಿ’ ಮೂಲಕ ಗಮನಸೆಳೆದ ಸಂದೀಪ್ ಸುಂಕದ್ ತಮ್ಮ ಮುಂದಿನ ಸಿನಿಮಾ ‘ಪಬ್ಬಾರ್’ ತೆರೆಗೆ ತರಲು ಸಜ್ಜಾಗಿದ್ದಾರೆ. ಸಂಕ್ರಾಂತಿಗೆ ಸಿನಿಮಾದ ನಾಯಕ ಧೀರೆನ್ ಆರ್. ರಾಜ್‌ಕುಮಾರ್ ಪಾತ್ರದ ಪರಿಚಯವನ್ನು ಚಿತ್ರತಂಡ ಮಾಡಿದೆ.

‘ಶಿವ 143’ ಸಿನಿಮಾ ಮೂಲಕ ಚಿತ್ರರಂಗಕ್ಕೆ ಕಾಲಿಟ್ಟ ಧೀರೆನ್ ಇದೀಗ ಗೀತಾ ಪಿಕ್ಚರ್ಸ್ ನಿರ್ಮಾಣದ ‘ಪಬ್ಬಾರ್’ನಲ್ಲಿ ಪೊಲೀಸ್ ಅಧಿಕಾರಿಯಾಗಿ ಕಾಣಿಸಿಕೊಳ್ಳಲಿದ್ದಾರೆ. ಸಿನಿಮಾವನ್ನು ಗೀತಾ ಪಿಕ್ಚರ್ಸ್ ಲಾಂಛನದಲ್ಲಿ ಗೀತಾ ಶಿವರಾಜ್‌ಕುಮಾರ್ ನಿರ್ಮಾಣ ಮಾಡಿದ್ದಾರೆ. ಭಿನ್ನವಾಗಿ ನಾಯಕನ ಪಾತ್ರವನ್ನು ಸಂದೀಪ್ ಪರಿಚಯಿಸಿದ್ದಾರೆ. ಇದೊಂದು ಕ್ರೈಂ, ಅಡ್ವೆಂಚರಸ್ ಥ್ರಿಲ್ಲರ್ ಸಿನಿಮಾವಾಗಿದ್ದು, ಹಿಮಾಚಲ ಪ್ರದೇಶದ ಶಿಮ್ಲಾ ಬಳಿಯ ‘ಪಬ್ಬಾರ್’ ನದಿ ಈ ಚಿತ್ರದ ಕಥೆಯ ಕೇಂದ್ರಬಿಂದುವಾಗಿದೆ. ಹೀಗಾಗಿಯೇ ಚಿತ್ರಕ್ಕೆ ‘ಪಬ್ಬಾರ್’ ಎಂಬ ಶೀರ್ಷಿಕೆ ಇಡಲಾಗಿದೆ.

ಚಿತ್ರದ ನಾಯಕ ಪೊಲೀಸ್ ಅಧಿಕಾರಿಯಾಗಿದ್ದು, ಆತನ ಎರಡು ಪಯಣಗಳು ಕಥೆಯಲ್ಲಿದೆ. ಒಂದು ಪ್ರಕರಣಕ್ಕೆ ಸಂಬಂಧಿಸಿದ್ದು, ಇನ್ನೊಂದು ಆತನ ವೈಯಕ್ತಿಕ ಪಯಣ ಎಂದಿದ್ದಾರೆ ಸಂದೀಪ್. ‘ಟಗರು ಪಲ್ಯ’ ಖ್ಯಾತಿಯ ನಟಿ ಅಮೃತ ಪ್ರೇಮ್ ಚಿತ್ರದಲ್ಲಿ ನಾಯಕಿಯಾಗಿ ನಟಿಸಿದ್ದು, ಆಯುರ್ವೇದ ವೈದ್ಯೆಯಾಗಿ ಕಾಣಿಸಿಕೊಳ್ಳುತ್ತಿದ್ದಾರೆ.

ವಿಶ್ವಜಿತ್ ರಾವ್ ಛಾಯಾಚಿತ್ರಗ್ರಹಣ ಹಾಗೂ ಮಯೂರ್ ಅಂಬೆಕಲ್ಲು ಸಂಗೀತ ನಿರ್ದೇಶನ ಚಿತ್ರಕ್ಕಿದೆ. ಅಚ್ಯುತ್ ಕುಮಾರ್, ಗೋಪಾಲಕೃಷ್ಣ ದೇಶಪಾಂಡೆ, ರಾಮಕೃಷ್ಣ, ಭರತ್ ಜಿ.ಬಿ, ಶ್ರೀಹರ್ಷ ಗೋಭಟ್ ತಾರಾ ಬಳಗದಲ್ಲಿದ್ದಾರೆ.

ಜ.23ರಿಂದ ಜೀ5ನಲ್ಲಿ 45

ಕಳೆದ ಡಿ.25ರಂದು ಚಿತ್ರಮಂದಿರಗಳಲ್ಲಿ ತೆರೆಕಂಡ ಅರ್ಜುನ್ ಜನ್ಯ ನಿರ್ದೇಶನದ ಶಿವರಾಜ್‌ಕುಮಾರ್, ಉಪೇಂದ್ರ ಹಾಗೂ ರಾಜ್ ಬಿ.ಶೆಟ್ಟಿ ಜೊತೆಯಾಗಿ ನಟಿಸಿರುವ ‘45’ ಸಿನಿಮಾ ಜ.23ರಿಂದ ಜೀ5 ಒಟಿಟಿ ವೇದಿಕೆಯಲ್ಲಿ ಸ್ಟ್ರೀಮ್ ಆಗಲಿದೆ.

ಭಿನ್ನವಾದ ಕಥಾಹಂದರದಿಂದ ಪ್ರೇಕ್ಷಕರನ್ನು ಸೆಳೆದಿದ್ದ ಈ ಸಿನಿಮಾದಲ್ಲಿ ‘ಶಿವಪ್ಪ’ನಾಗಿ ಶಿವರಾಜ್‌ಕುಮಾರ್ ಹಾಗೂ ‘ರಾಯಪ್ಪ’ನಾಗಿ ಉಪೇಂದ್ರ ನಟಿಸಿದ್ದಾರೆ. ಗರುಡ ಪುರಾಣದ ಸಾರವೇ ಚಿತ್ರದ ಕಥಾವಸ್ತುವಾಗಿದೆ. ಸಾಫ್ಟ್‌ವೇರ್ ಉದ್ಯೋಗಿ ವಿನಯ್ (ರಾಜ್ ಬಿ.ಶೆಟ್ಟಿ) ಚಲಾಯಿಸುತ್ತಿದ್ದ ದ್ವಿಚಕ್ರ ವಾಹನ ಅಪಘಾತವಾಗಿ ನಾಯಿಯೊಂದು ಬಲಿಯಾಗುತ್ತದೆ. ಈ ನಾಯಿಯನ್ನು ತಾಯಿಯೆಂದು ಭಾವಿಸುವ ‘ರಾಯಪ್ಪ’ ವಿನಯ್ ಪಾಲಿಗೆ ಯಮನಾಗಿ ಕಾಡುತ್ತಾನೆ. ವಿನಯ್‌ಗೆ ಭೂಮಿಯ ಮೇಲೆ ಬದುಕುಳಿಯಲು ರಾಯಪ್ಪ 45 ದಿನಗಳ ಗಡುವು ನೀಡುತ್ತಾನೆ. ಆ ಅವಧಿಯಲ್ಲಿ ನಡೆಯುವ ಘಟನೆಗಳೇ ಸಿನಿಮಾದ ಕಥೆಯಾಗಿದೆ.

ಕೌಸ್ತುಭ ಮಣಿ, ಜಾಫರ್ ಸಾದಿಕ್ ಮುಂತಾದವರು ಸಿನಿಮಾದ ತಾರಾಬಳಗದಲ್ಲಿದ್ದು, ಎಂ.ರಮೇಶ್ ರೆಡ್ಡಿ ತಮ್ಮ ಸೂರಜ್ ಪ್ರೊಡಕ್ಷನ್ಸ್ ಲಾಂಛನದಲ್ಲಿ ಈ ಚಿತ್ರವನ್ನು ನಿರ್ಮಿಸಿದ್ದಾರೆ.

‘ಸುಖೀಭವ’ ಎಂದ ಹೊಸಬರು

ಸುಶ್ಮಿತ ನಾಯಕ್

ಬಹುತೇಕ ಹೊಸಬರಿಂದಲೇ ಕೂಡಿರುವ ‘ಸುಖೀಭವ’ ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಎಸ್.ಕೆ.ರಾಜೇಶ್ ನಾಯ್ಡು ಕಥೆ, ಚಿತ್ರಕಥೆ ಬರೆದು ಆ್ಯಕ್ಷನ್ ಕಟ್ ಹೇಳಿದ್ದಾರೆ.

‘ಯೋಗರಾಜ್ ಭಟ್ ಸೇರಿದಂತೆ ಅನೇಕರ ಬಳಿ ಸಹ ನಿರ್ದೇಶಕನಾಗಿ ಕೆಲಸ ಮಾಡಿದ್ದೆ. ಇದು ನನ್ನ ಚೊಚ್ಚಲ ನಿರ್ದೇಶನದ ಸಿನಿಮಾ. ಕೌಟುಂಬಿಕ ಕಥಾ ಹಂದರವಿದೆ. ಚಿತ್ರದಲ್ಲಿ ನಾಲ್ಕು ಹಾಡುಗಳಿದ್ದು, ‘ಬೇಡ ಮಚ್ಚಾ ಬೇಡ’ ಎಂಬ ಗೀತೆಗೆ ನಟ ಶರಣ್ ಧ್ವನಿಯಾಗಿದ್ದಾರೆ’ ಎಂದರು ನಿರ್ದೇಶಕ.

ಸಂತೋಷ್ ಕುಮಾರ್, ಭಾರ್ಗವಿ ಸಂತೋಷ್ ನಿರ್ಮಾಪಕರು. ಮಹೇಂದ್ರ ಚಿತ್ರದ ನಾಯಕ, ಸುಶ್ಮಿತ ನಾಯಕ್ ಹಾಗೂ ವಿಯಾನ್ಸಿ ಹೆಗ್ಡೆ ನಾಯಕಿಯರು. ಗೌರವ್ ಶೆಟ್ಟಿ, ಶೋಭರಾಜ್, ರವಿಶಂಕರ್ ಗೌಡ, ಸುನಿಲ್ ಪುರಾಣಿಕ್, ಚುಕ್ಕಿ ಸಂತು, ಮೈತ್ರಿ ಜಗ್ಗಿ ಮುಂತಾದವರು ಅಭಿನಯಿಸಿದ್ದಾರೆ. ಬಿ.ಜೆ. ಭರತ್ ಸಂಗೀತ, ಮಂಜುನಾಥ್ ನಾಯಕ್ ಛಾಯಾಚಿತ್ರಗ್ರಹಣವಿದೆ.

‘ಸ್ಲಂ ಡಾಗ್’ನಲ್ಲಿ ವಿಜಯ್ ಸೇತುಪತಿ

ವಿಜಯ್ ಸೇತುಪತಿ

ಪುರಿ ಜಗನ್ನಾಥ್–ವಿಜಯ್ ಸೇತುಪತಿ ಜೋಡಿಯ ಚಿತ್ರದ ಚಿತ್ರೀಕರಣ ಪೂರ್ಣಗೊಂಡಿದ್ದು, ಚಿತ್ರಕ್ಕೆ ‘ಸ್ಲಂ ಡಾಗ್– 33 ಟೆಂಪಲ್ ರೋಡ್’ ಎಂದು ಹೆಸರಿಡಲಾಗಿದೆ. ಚಿತ್ರತಂಡ ಶೀರ್ಷಿಕೆ ಜತೆಗೆ ಫಸ್ಟ್‌ಲುಕ್ ಪೋಸ್ಟರ್ ಬಿಡುಗಡೆಗೊಳಿಸಿದೆ. ಕೈಯಲ್ಲಿ ರಕ್ತಸಿಕ್ತ ಚಾಕು ಹಿಡಿದ ವಿಜಯ್ ಸೇತುಪತಿ ಉಗ್ರ ಅವತಾರದಲ್ಲಿ ಕಾಣಿಸಿಕೊಂಡಿದ್ದಾರೆ. ಮಾಸ್ ಆ್ಯಕ್ಷನ್ ಕಥಾಹಂದರ ಹೊಂದಿರುವ ಸಿನಿಮಾದಲ್ಲಿ ದೊಡ್ಡ ತಾರಾಬಳಗವಿದೆ. ಸಂಯುಕ್ತ ನಾಯಕಿಯಾಗಿ ನಟಿಸುತ್ತಿದ್ದು, ದುನಿಯಾ ವಿಜಯ್ ಕೂಡ ಪ್ರಮುಖ ಪಾತ್ರದಲ್ಲಿದ್ದಾರೆ. ಟಬು, ಬ್ರಹ್ಮಾನಂದ ಹಾಗೂ ವಿಟಿವಿ ಗಣೇಶ್ ಕೂಡ ತಾರಾಬಳಗದಲ್ಲಿದ್ದಾರೆ.

ಪುರಿ ಜಗನ್ನಾಥ್ ಅವರು ತಮ್ಮದೇ ಪುರಿ ಕನೆಕ್ಟ್ಸ್ ಬ್ಯಾನರ್ ಅಡಿಯಲ್ಲಿ ಈ ಸಿನಿಮಾ ನಿರ್ಮಿಸುತ್ತಿದ್ದಾರೆ. ಜೆ.ಬಿ ನಾರಾಯಣ್ ರಾವ್ ಕೊಂಡ್ರೊಲ್ಲಾ ಜತೆಗೂಡಿ ಚಾರ್ಮಿ ಕೌರ್ ಈ ಚಿತ್ರವನ್ನು ಪ್ರಸ್ತುತಪಡಿಸುತ್ತಿದ್ದಾರೆ. ಹರ್ಷವರ್ಧನ್ ರಾಮೇಶ್ವರ್ ಸಂಗೀತವಿದೆ. ಈ ಪ್ಯಾನ್–ಇಂಡಿಯಾ ಸಿನಿಮಾ ತೆಲುಗು, ತಮಿಳು, ಕನ್ನಡ, ಮಲಯಾಳ ಮತ್ತು ಹಿಂದಿ ಭಾಷೆಗಳಲ್ಲಿ ಈ ವರ್ಷದ ದ್ವಿತೀಯಾರ್ಧದಲ್ಲಿ ಚಿತ್ರ ತೆರೆಗೆ ಬರುವ ನಿರೀಕ್ಷೆಯಿದೆ.

ರಣಜಿ: ಸ್ಮರಣ್‌ಗೆ ಗಾಯ, ಮರಳಿದ ನಿಕಿನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಗ್ರಕ್ರಮಾಂಕದ ಬ್ಯಾಟರ್ ನಿಕಿನ್ ಜೋಸ್ ಅವರು ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಆಡಲಿರುವ ಕರ್ನಾಟಕ ತಂಡಕ್ಕೆ ಮರಳಿದ್ದಾರೆ. ಗಾಯಗೊಂಡಿರುವ ಸ್ಮರಣ್ ರವಿಚಂದ್ರನ್ ಅವರ ಬದಲಿಗೆ ನಿಕಿನ್ ಸ್ಥಾನ ಪಡೆದಿದ್ದಾರೆ.

ಆಲೂರಿನ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ಇದೇ 22ರಿಂದ ಮಧ್ಯಪ್ರದೇಶ ಎದುರು ರಣಜಿ ಪಂದ್ಯ ನಡೆಯಲಿದೆ. ಗುರುವಾರ ನಡೆದಿದ್ದ ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಕರ್ನಾಟಕವು ವಿದರ್ಭ ಎದುರು ಸೋತಿತ್ತು.

ರಣಜಿ ಟೂರ್ನಿಯ ಪ್ರಥಮ ಹಂತದ ಐದು ಪಂದ್ಯಗಳಲ್ಲಿ ಯುವ ಬ್ಯಾಟರ್ ಸ್ಮರಣ್ ಅವರು 595 ರನ್ ಗಳಿಸಿದ್ದರು. ಅದರಲ್ಲಿ ಎರಡು ಶತಕ ಮತ್ತು ಎರಡು ಅರ್ಧಶತಕಗಳಿದ್ದವು.

ನಿಕಿನ್ ಜೋಸ್

ಏಕದಿನ ಟೂರ್ನಿಯಲ್ಲಿ 725 ರನ್ ಗಳಿಸಿದ್ದ ದೇವದತ್ತ ಪಡಿಕ್ಕಲ್, ಅನುಭವಿ ಕರುಣ್ ನಾಯರ್ ಅವರ ಮೇಲೆ ತಂಡದ ಬ್ಯಾಟಿಂಗ್ ವಿಭಾಗ ಅವಲಂಬಿತವಾಗಿದೆ.

ವೇಗಿ ವೈಶಾಖ ವಿಜಯಕುಮಾರ್ ಅವರನ್ನೂ ಆಯ್ಕೆ ಮಾಡಿಲ್ಲ. ಗುರುವಾರ ವಿದರ್ಭ ಎದುರಿನ ಪಂದ್ಯದಲ್ಲಿ ವೈಶಾಖ ತಲೆಗೆ ಚೆಂಡು ಬಡಿದಿತ್ತು. ಕಂಕಷನ್ ನಿಯಮದನ್ವಯ ಬದಲೀ ಆಟಗಾರ ವೈಶಾಖ ಬದಲಿಗೆ ಆಡಿದ್ದರು. ವೇಗಿ ಎಂ. ವೆಂಕಟೇಶ್ ಕಣಕ್ಕಿಳಿಯಲಿದ್ದಾರೆ.

ರಣಜಿ ಟ್ರೋಫಿಯಲ್ಲಿ ಸದ್ಯ ಕರ್ನಾಟಕ ತಂಡವು ಬಿ ಗುಂಪಿನಲ್ಲಿ 21 ಅಂಕಗಳೊಂದಿಗೆ ಅಗ್ರಸ್ಥಾನದಲ್ಲಿದೆ. ಮಹಾರಾಷ್ಟ್ರ (18) ಮತ್ತು ಮಧ್ಯಪ್ರದೇಶ (16) ಕ್ರಮವಾಗಿ ಎರಡು ಹಾಗೂ ಮೂರನೇ ಸ್ಥಾನದಲ್ಲಿವೆ.

ತಂಡ ಇಂತಿದೆ: ಮಯಂಕ್ ಅಗರವಾಲ್ (ನಾಯಕ), ನಿಕಿನ್ ಜೋಸ್, ದೇವದತ್ತ ಪಡಿಕ್ಕಲ್, ಕರುಣ್ ನಾಯರ್, ಕೆ.ಎಲ್. ಶ್ರೀಜಿತ್, ಅಭಿನವ್ ಮನೋಹರ್, ಶ್ರೇಯಸ್ ಗೋಪಾಲ್, ವಿದ್ಯಾಧರ್ ಪಾಟೀಲ, ವಿದ್ವತ್ ಕಾವೇರಪ್ಪ, ಅಭಿಲಾಷ್ ಶೆಟ್ಟಿ, ಮೊಹಸಿನ್ ಖಾನ್, ಶಿಖರ್ ಶೆಟ್ಟಿ, ಕೃತಿಕ್ ಕೃಷ್ಣ, ಕೆ.ವಿ. ಅನೀಶ್, ಎಂ. ವೆಂಕಟೇಶ್. ಕೋಚ್: ಯರೇಗೌಡ.

ಕ್ವಾರ್ಟರ್‌ನಲ್ಲಿ ಎಡವಿದ ಕಶ್ವಿ ಬಳಗ

ಬೆಂಗಳೂರು: ಆಲ್‌ರೌಂಡ್ ಪ್ರದರ್ಶನ ನೀಡಿದ ಮಹಾರಾಷ್ಟ್ರ ತಂಡವು ಬಿಸಿಸಿಐ 15 ವರ್ಷದೊಳಗಿನ ಬಾಲಕಿಯರ ಏಕದಿನ ಟ್ರೋಫಿ ಕ್ರಿಕೆಟ್ ಟೂರ್ನಿಯ ಕ್ವಾರ್ಟರ್‌ಫೈನಲ್‌ನಲ್ಲಿ 6 ವಿಕೆಟ್‌ಗಳಿಂದ ಕರ್ನಾಟಕ ತಂಡವನ್ನು ನಿರಾಯಾಸವಾಗಿ ಮಣಿಸಿತು.

ಪುದುಚೇರಿಯಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಬ್ಯಾಟಿಂಗ್ ಆಯ್ದುಕೊಂಡ ಕರ್ನಾಟಕ ತಂಡಕ್ಕೆ ರಾಶಿ ವ್ಯಾಸ್ (11ಕ್ಕೆ3) ಹಾಗೂ ಕೃಷ್ಣಾ ಸಾಗರೆ (12ಕ್ಕೆ3) ಆಘಾತ ನೀಡಿದರು. ಕಶ್ವಿ ಕಂಡಿಕೊಪ್ಪ ಬಳಗವು 34.3 ಓವರ್‌ಗಳಲ್ಲಿ 85 ರನ್‌ಗಳಿಗೆ ಕುಸಿಯಿತು. ಕೆಳಕ್ರಮಾಂಕದ ಬ್ಯಾಟರ್ ಕಶ್ವಿ ಎಸ್. ಶೇಖರ್ ಅವರು 16 ರನ್ ಗಳಿಸಿದ್ದೇ ಕರ್ನಾಟಕ ತಂಡದ ಪರ ವೈಯಕ್ತಿಕ ಗರಿಷ್ಠ ಮೊತ್ತವೆನಿಸಿತು.

ಮಹಾರಾಷ್ಟ್ರ ತಂಡವು ನಿಹೀನ್ ಶರ್ಮಾ (ಔಟಾಗದೇ 53) ಅವರ ಅರ್ಧಶತಕದ ನೆರವಿನಿಂದ 24.3 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ ಸುಲಭವಾಗಿ ಗುರಿ ತಲುಪಿತು.

ಸಂಕ್ಷಿಪ್ತ ಸ್ಕೋರು: ಕರ್ನಾಟಕ: 34.3 ಓವರ್‌ಗಳಲ್ಲಿ 85 (ಕಶ್ವಿ ಎಸ್. ಶೇಖರ್ 16; ರಾಶಿ ವ್ಯಾಸ್ 11ಕ್ಕೆ3, ಕೃಷ್ಣಾ ಸಾಗರೆ 12ಕ್ಕೆ3, ಆರ್ಯಾ ಜಂಭೂಲ್ಕರ್ 18ಕ್ಕೆ2). ಮಹಾರಾಷ್ಟ್ರ: 24.3 ಓವರ್‌ಗಳಲ್ಲಿ 4ಕ್ಕೆ 87 (ನಿಹೀನ್ ಶರ್ಮಾ ಔಟಾಗದೇ 53).

ಟಿ20 ವಿಶ್ವಕಪ್: ಬಾಂಗ್ಲಾದೇಶಕ್ಕೆ ಇಂದು ಐಸಿಸಿ ತಂಡ

ದುಬೈ (ಪಿಟಿಐ): ಮುಂದಿನ ತಿಂಗಳ ಟಿ20 ವಿಶ್ವಕಪ್‌ನಲ್ಲಿ ಬಾಂಗ್ಲಾದೇಶ ಪಾಲ್ಗೊಳ್ಳುವುದಕ್ಕೆ ಸಂಬಂಧಿಸಿ ಉಂಟಾಗಿರುವ ಕಗ್ಗಂಟು ಬಗೆಹರಿಸಲು ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿಯ (ಐಸಿಸಿ) ಇಬ್ಬರು ಸದಸ್ಯರ ತಂಡ ಶನಿವಾರ ಢಾಕಾಕ್ಕೆ ಬಂದಿಳಿಯಲಿದೆ.

ಭದ್ರತೆಗೆ ಸಂಬಂಧಿಸಿ ಬಿಸಿಬಿ ವ್ಯಕ್ತಪಡಿಸಿರುವ ಆತಂಕವನ್ನು ದೂರ ಮಾಡುವ ಮತ್ತು ಪ್ರಸ್ತುತ ಸ್ಥಿತಿಯಲ್ಲಿ ನಿಗದಿಯಾದ ತಾಣಗಳ ಬದಲಾವಣೆ ಕಾರ್ಯಸಾಧ್ಯವಲ್ಲ ಎಂದು ಮನವರಿಕೆ ಮಾಡುವ ವಿಶ್ವಾಸವನ್ನು ಈ ತಂಡ ಹೊಂದಿದೆ.

ಬಾಂಗ್ಲಾದೇಶ ತಂಡವು ತನ್ನ ವಿಶ್ವಕಪ್ ಪಂದ್ಯಗಳನ್ನು ಕೋಲ್ಕತ್ತ ಮತ್ತು ಮುಂಬೈನಲ್ಲಿ ಆಡಬೇಕಿದೆ. ಆದರೆ ತಂಡಕ್ಕೆ ಭದ್ರತಾ ಕಳವಳ ವ್ಯಕ್ತಪಡಿಸಿ ಪಂದ್ಯಗಳನ್ನು ಭಾರತದಿಂದ ಸ್ಥಳಾಂತರಿಸುವಂತೆ ಐಸಿಸಿಗೆ ಮನವಿ ಮಾಡಿದೆ.

‘ಐಸಿಸಿಯ ತಂಡ ಢಾಕಾಕ್ಕೆ ಭೇಟಿ ನೀಡಲಿದೆ. ಕಗ್ಗಂಟು ಬಗೆಹರಿಸಲು ಸಾಧ್ಯವಿರುವ ಎಲ್ಲ ದಾರಿಗಳ ಬಗ್ಗೆ ಸಮಾಲೋಚನೆ ನಡೆಸಲಾಗುವುದು. ಬಾಂಗ್ಲಾದೇಶದ ಸರ್ಕಾರಿ ಅಧಿಕಾರಿಗಳೂ ಚರ್ಚೆಯಲ್ಲಿ ಭಾಗವಹಿಸುವರೆಂಬ ನಿರೀಕ್ಷೆ ಹೊಂದಿದ್ದೇವೆ’ ಎಂದು ಈ ಬೆಳವಣಿಗೆಯನ್ನು ಬಲ್ಲ ವ್ಯಕ್ತಿಯೊಬ್ಬರು ಪಿಟಿಐಗೆ ತಿಳಿಸಿದ್ದಾರೆ.

ಕರ್ನಾಟಕ ಒಲಿಂಪಿಕ್ಸ್: ನೇಸರ ಡಿ.ಗೌಡಗೆ ಸ್ವರ್ಣ

ಪ್ರಜಾವಾಣಿ ವಾರ್ತೆ

ತುಮಕೂರು: ನೇಸರ ಡಿ.ಗೌಡ ಅವರು ಶುಕ್ರವಾರ ಆರಂಭವಾದ ಕರ್ನಾಟಕ ಒಲಿಂಪಿಕ್ಸ್ ಕೂಟದ ಟೇಕ್ವಾಂಡೊ ಸ್ಪರ್ಧೆಯಲ್ಲಿ ಚಿನ್ನದ ಪದಕ ಗೆದ್ದರು. ಈ ಕೂಟದ ಮೊದಲ ದಿನ ಕಬಡ್ಡಿ, ಆರ್ಚರಿ, ಬ್ಯಾಡ್ಮಿಂಟನ್, ಕತ್ತಿವರಸೆ, ಫುಟ್‌ಬಾಲ್, ನೆಟ್‌ಬಾಲ್, ಟೇಕ್ವಾಂಡೊ ಸ್ಪರ್ಧೆಗಳು ನಡೆದವು.

ನಗರದ ಮಹಾತ್ಮ ಗಾಂಧಿ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಟೇಕ್ವಾಂಡೊ ಸ್ಪರ್ಧೆಯಲ್ಲಿ ವೈ.ಲಿಖಿತ್, ಜಿ.ಎಂ.ಸಾಗರ್ ಕ್ರಮವಾಗಿ ಬೆಳ್ಳಿ, ಕಂಚು ಗೆದ್ದರು. ಪುರುಷರ 63 ಕೆ.ಜಿ. ವಿಭಾಗದ ಸ್ಪರ್ಧೆಯಲ್ಲಿ ಎಸ್.ರಾಹುಲ್ ಮತ್ತು ಉಮೇಶ್ ಚೌಧರಿ ಕ್ರಮವಾಗಿ ಚಿನ್ನ ಮತ್ತು ಬೆಳ್ಳಿ ಪದಕ ಗೆದ್ದರು.

ಮಹಿಳೆಯರ 62 ಕೆ.ಜಿ. ವಿಭಾಗದಲ್ಲಿ ವಿ.ಹ್ಯಾಪಿ, ಅನುಷಾವಾಣಿ ಮತ್ತು ಪ್ರಿಯಾಂಕಾ ಅವರು ಕ್ರಮವಾಗಿ ಮೊದಲ ಮೂರು ಸ್ಥಾನಗಳನ್ನು ಪಡೆದರು. 46 ಕೆ.ಜಿ. ವಿಭಾಗದಲ್ಲಿ ಸಂಜನಾ ಶರ್ಮಾ, ವಿಹಾರಿಕಾ ನಯನಾ ವಿಷ್ಣು ಮತ್ತು ಅಭಿನಯಾ ಇ. ಅವರು ಕ್ರಮವಾಗಿ ಚಿನ್ನ, ಬೆಳ್ಳಿ, ಕಂಚಿನ ಪದಕ ತಮ್ಮದಾಗಿಸಿಕೊಂಡರು.

ಫುಟ್‌ಬಾಲ್ ಉದ್ಘಾಟನಾ ಪಂದ್ಯದಲ್ಲಿ ಹಾಸನ ಮತ್ತು ಉತ್ತರ ಕನ್ನಡ ಜಿಲ್ಲೆ ತಂಡಗಳು ಮುಖಾಮುಖಿಯಾದವು. ಉತ್ತರ ಕನ್ನಡ ತಂಡವು 4-1 ಗೋಲುಗಳ ಅಂತರದಲ್ಲಿ ಗೆಲುವು ದಾಖಲಿಸಿತು. ತಂಡದ ರಾಜಾ ಮೊಹ್ಮದ್ ಫಹೀನ್ (10ನೇ, 45ನೇ ಮತ್ತು 55ನೇ ನಿಮಿಷ) ಹ್ಯಾಟ್ರಿಕ್ ಗೋಲು ಗಳಿಸಿ ಪ್ರೇಕ್ಷಕರನ್ನು ರಂಜಿಸಿದರು. ಇಹಾಬ್ (58ನೇ ನಿ.) ಒಂದು ಗೋಲು ಬಾರಿಸಿದರು.

ಎರಡನೇ ಪಂದ್ಯದಲ್ಲಿ ಕೊಡಗು ತಂಡವು 2-0 ಗೋಲುಗಳಿಂದ ಮಂಡ್ಯ ತಂಡದ ವಿರುದ್ಧ ಜಯ ಸಾಧಿಸಿತು. ಅಣ್ಣಪ್ಪ ವೈ.ಆರ್. (12ನೇ ನಿ.) ಮತ್ತು ಮೊಹ್ಮದ್ ಸಲಾಹುದ್ದೀನ್ ಪಿ.ಎ.(60 + 1ನೇ ನಿ.) ತಲಾ ಒಂದು ಗೋಲು ಗಳಿಸಿದರು.

ಕೂಟಕ್ಕೆ ಚಾಲನೆ: ಕರ್ನಾಟಕ ಒಲಿಂಪಿಕ್ಸ್ ಕೂಟಕ್ಕೆ ಶುಕ್ರವಾರ ಚಾಲನೆ ನೀಡಲಾಯಿತು. ಮುಖ್ಯಮಂತ್ರಿ ಸಿದ್ದರಾಮಯ್ಯ ಕ್ರೀಡಾಪಟುಗಳಿಂದ ಕ್ರೀಡಾ ಜ್ಯೋತಿ ಸ್ವೀಕರಿಸುವ ಮೂಲಕ ಚಾಲನೆ ಕೊಟ್ಟರು.

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಭದ್ರಾ ಮೇಲ್ದಂಡೆ ಯೋಜನಾ ವಿಭಾಗ ನಂ.6, ಸೋಮಗುದ್ದು ರಸ್ತೆ, ಚಳ್ಳಕೆರೆ.
ದೂ.ಸಂ: 08195–200307E.Mail I.D.: ubpee06@gmail.com
ಸಂಖ್ಯೆ: ವಿಜನಿನಿ/ಭಮೇಯೋ/ಕಾಇಂ/ವಿ–6/ಚಳ್ಳಕೆರೆ/ಟೆಂಡರ್ ಪ್ರಕಟಣೆ/2025–26/1121 ದಿನಾಂಕ:14.01.2026

ಸಂಕ್ಷಿಪ್ತ ಟೆಂಡರ್ ಪ್ರಕಟಣೆ
(ಕೆ.ಪಿ.ಪಿ.ಪಿ. ಪೋರ್ಟಲ್ ಮೂಲಕ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ, 4701 ಶೀರ್ಷಿಕೆಯಡಿಯಲ್ಲಿ ಅನುಮೋದನೆಯಾಗಿರುವ ಇಂಡೆಂಟ್ ಸಂ. 1) VJNL/2025-26/IW/WORK_INDENT450–ಟೆಂಡರ್‌ಗಿಟ್ಟ ಮೊತ್ತ 41.90 ಲಕ್ಷಗಳು ಮತ್ತು 2) VJNL/2025-26/RD/WORK_INDENT452–ಟೆಂಡರ್‌ಗಿಟ್ಟ ಮೊತ್ತ 169.45 ಲಕ್ಷಗಳು, ಏಕ/ದ್ವಿ–ಲಕೋಟೆ ಪದ್ಧತಿ ಮೂಲಕ ಅರ್ಹ ಗುತ್ತಿಗೆದಾರಿಂದ ಶೇಕಡಾವಾರು ಟೆಂಡರ್ ಕರೆಯಲಾಗಿದೆ. ಇ–ಪೋರ್ಟಲ್‌ನಿಂದ ಟೆಂಡರ್ ದಾಖಲೆಗಳನ್ನು ದಿನಾಂಕ: 14.01.2026 ರಿಂದ 28.01.2026 ರ ವರೆಗೆ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದ್ದು, ದಿನಾಂಕ: 28.01.2026 ರ 17.00 ಗಂಟೆ ರವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಕಾಮಗಾರಿಗಳಿಗೆ ಸಂಬಂಧಿಸಿದಂತೆ, ಗುತ್ತಿಗೆದಾರರ ಅರ್ಹತೆ/ಟೆಂಡರ್ ನಿಯಮ/ಇ.ಎಂ.ಡಿ./ಟೆಂಡರ್ ಪ್ರೋಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳನ್ನು www.kppp.karnataka.gov.in ಮೂಲಕ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿದವರ ಕಚೇರಿಯನ್ನು, ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದಾಗಿರುತ್ತದೆ. ಇಂಡೆಂಟ್ ಸಂ. 452 ಕಾಮಗಾರಿಗೆ ಸಂಬಂಧಿಸಿದಂತೆ ಪೂರ್ವಭಾವಿ (ಪ್ರೀ ಬಿಡ್) ಸಭೆಯನ್ನು ದಿನಾಂಕ: 22.01.2026 ರಂದು ಬೆಳಿಗ್ಗೆ 11.30 ಗಂಟೆಗೆ ಮಾನ್ಯ ಮುಖ್ಯ ಇಂಜಿನಿಯರ್‌ರವರ ಕಚೇರಿ, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಭದ್ರಾ ಮೇಲ್ದಂಡೆ ಯೋಜನಾ ವಲಯ, ಚಿತ್ರದುರ್ಗ ಇಲ್ಲಿ ನಿಗಧಿ ಪಡಿಸಲಾಗಿರುತ್ತದೆ. ಸ್ವೀಕೃತ ಟೆಂಡರ್‌ಗಳನ್ನು ದಿನಾಂಕ: 30.01.2026 ರಂದು ವಿಭಾಗ ಕಚೇರಿಯಲ್ಲಿ ತೆರೆಯಲಾಗುವುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಹಂತದಲ್ಲಿ ಟೆಂಡರ್‌ಗಳನ್ನು ಮಾರ್ಪಡಿಸುವ ಅಥವಾ ರದ್ದು ಪಡಿಸುವ ಅಧಿಕಾರವನ್ನು ಹೊಂದಿರುತ್ತಾರೆ.

DIPR/CTA/KSMCA/602/2025-26
ಸಹಿ/ ಕಾರ್ಯಪಾಲಕ ಅಭಿಯಂತರರು, ವಿಜನಿನಿ, ಭ.ಮೇ.ಯೋ. ವಿಭಾಗ ನಂ.06, ಚಳ್ಳಕೆರೆ.

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ತುಮಕೂರು ಉಪ ವಿಭಾಗ (ಪ್ರಾದೇಶಿಕ), ತುಮಕೂರು
ಇ–ಮೇಲ್: E-Mail:acftumkur@gmail.com
ಸಂಖ್ಯೆ–ಸ.ಅ.ಸಂ/ತುಉವಿ/ಇಟೆಂಡರ್/ಸಿಆರ್–07/2025–26/737
ದಿನಾಂಕ: 13.01.2026

ಇ–ಟೆಂಡರ್ ಪ್ರಕಟಣೆ

2025–26ನೇ ಸಾಲಿನಲ್ಲಿ ಮುಂದುವರೆದ ಕಾಮಗಾರಿಗಳಿಗೆ CEPMIZ (KMERC) ಯೋಜನೆಗಳಡಿ ತುಮಕೂರು ಪ್ರಾದೇಶಿಕ ವಿಭಾಗ, ತುಮಕೂರು ಉಪ ವಿಭಾಗದ, ಗುಬ್ಬಿ ವಲಯದಲ್ಲಿ ಸಿಪಿಟಿ ಅಗೆಯುವಿಕೆ ಮತ್ತು ಬದುಗಳ ಮೇಲೆ ಅಗೇವಾ ಸಸ್ಯಗಳನ್ನು ನೆಡುವುದು, ನೆಡುತೋಪು ನಿರ್ಮಾಣ, ಮುಂಡ ಕಾಮಗಾರಿ ಮತ್ತು ನೆಡುತೋಪು ನಿರ್ಮಾಣ, ಹಳೆಯ ಶ್ರೀಗಂಧ ನೆಡುತೋಪು ನಿರ್ವಹಣೆ, ಪರ್ಕ್ಯುಲೇಷನ್ ಟ್ರೆಂಚಸ್, ಬೆಂಕಿ ಕಾವಲುಗಾರರ ನೇಮಕ, ಹುಲ್ಲುಗಾವಲೀಕರಣ, ಗಣಿ ರಸ್ತೆಗಳು ಮತ್ತು ಸವೆತ ಪೀಡಿತ ಖಾಲಿ ಪ್ರದೇಶಗಳಲ್ಲಿ ಮುಂಗಡ ಕಾಮಗಾರಿ ಮತ್ತು ನೆಡುತೋಪು ನಿರ್ಮಾಣ, ರಸ್ತೆ ಬದಿ ನೆಡುತೋಪು ನಿರ್ವಹಣೆ, ಮುಂಗಡ ಕಾಮಗಾರಿ ಮತ್ತು 8"*12" ಗಾತ್ರದ ಪಾಲಿಥೀನ್ ಚೀಲಗಳನ್ನು ಬೆಳೆಸುವುದು, ಬೆಂಕಿ ರೇಖೆಗಳ ನಿರ್ವಹಣೆ, ಕಾವಲುಗಾರರ ನೇಮಕ, 8"*12" ಗಾತ್ರದ ಪಾಲಿಥೀನ್ ಚೀಲಗಳ ವಿತರಣೆ ಮತ್ತು ಇನ್ನಿತರೆ ಕಾಮಗಾರಿಗಳನ್ನು ಕೈಗೊಳ್ಳಲು 2025–26ನೇ ಸಾಲಿಗೆ ಅರಣ್ಯ ಗುತ್ತಿಗೆದಾರರಾಗಿ ನೊಂದಾವಣೆಯಾಗಿರುವ ಗುತ್ತಿಗೆದಾರರಿಂದ ಪ್ರತ್ಯೇಕವಾಗಿ ಇ–ಟೆಂಡರ್‌ಗಳನ್ನು ದಾಖಲಿಸಲು ಕೋರಿ ಟೆಂಡರ್ ಆಹ್ವಾನಿಸಲಾಗಿದೆ. ಒಟ್ಟು 58 ಕಾಮಗಾರಿಗಳ ಪೈಕಿ ಗರಿಷ್ಠ ಅಂದಾಜು ಮೊತ್ತ ರೂ.79,53,750/– ಗಳಿಗೆ ಇ.ಎಂ.ಡಿ ಮೊತ್ತ ರೂ.79,538/– ಗಳಾಗಿರುತ್ತದೆ ಮತ್ತು ಕನಿಷ್ಠ ಅಂದಾಜು ಮೊತ್ತ ರೂ.1,02,664/– ಗಳಿಗೆ ಇ.ಎಂ.ಡಿ. ಮೊತ್ತ ರೂ.2,567/– ಗಳಾಗಿರುತ್ತದೆ. ದಿನಾಂಕ:23–01–2026ರ ಅಪರಾಹ್ನ 3–00 ಗಂಟೆಯವರೆಗೆ ಟೆಂಡರ್ ಸಲ್ಲಿಸಬಹುದಾಗಿದೆ ಹಾಗೂ ದಿನಾಂಕ:27–01–2026ರಂದು ಅಪರಾಹ್ನ 3–00 ಗಂಟೆಗೆ ತಾಂತ್ರಿಕ ಬಿಡ್ಡುಗಳನ್ನು ತೆರೆಯಲಾಗುವುದು. ಪರಿಮಾಣ, ಇಎಂಡಿ ಹಾಗೂ ಇನ್ನಿತರೆ ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ ಮತ್ತು ಅಂತರ್ಜಾಲದ ಮೂಲಕ ಪಡೆಯಬಹುದಾಗಿದೆ.

ವೆಬ್‌ಸೈಟ್ ವಿಳಾಸ– http://www. kppp.karnataka.gov.in.

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ತುಮಕೂರು ಉಪ ವಿಭಾಗ, ತುಮಕೂರು.
DIPR/TUM/410/KSMCA/2025-26

ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ

ಟೆಂಡರ್ ಪ್ರಕಟಣೆ

Tender No.: KVAFSU/2025-26/IND0010 Dt.: 14.01.2026

ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ, ಇದರ ಅಧೀನದ ಪಶು ವೈದ್ಯಕೀಯ ಮಹಾವಿದ್ಯಾಲಯ ಶಿವಮೊಗ್ಗ ಇವರಿಗೆ ಬೇಕಾದ ಉಪಕರಣಗಳು & ಔಷಧಗಳನ್ನು ಸರಬರಾಜು ಮಾಡಲು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಹೆಸರನ್ನು ನೋಂದಾಯಿಸಿಕೊಂಡಿರುವ ಗುತ್ತಿಗೆದಾರರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್‌ಗಿಟ್ಟ ಒಟ್ಟು ಅಂದಾಜು ಮೊತ್ತ **ರೂ. 34.50 ಲಕ್ಷಗಳು.**

ಭರ್ತಿ ಮಾಡಿದ ಟೆಂಡರ್ ಅರ್ಜಿಗಳನ್ನು ಸಲ್ಲಿಸುವ ಅಂತಿಮ ದಿನಾಂಕ: **24.01.2026ರ ಸಂಜೆ 5:30 ಗಂಟೆ**ವರೆಗೆ. ಹೆಚ್ಚಿನ ವಿವರಗಳಿಗೆ ಅಧಿಕೃತ ವೆಬ್‌ಸೈಟ್: **https://kppp.karnataka.gov.in/** ಮುಖಾಂತರ ದಿನಾಂಕ: **14.01.2026** ನಂತರ ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ಕೆಳಕಂಡ ಕಛೇರಿಯ ವೇಳೆಯಲ್ಲಿ ವಿವರಗಳನ್ನು ಪಡೆಯಬಹುದು.

ಸಹಿ/–, ಸಂಯೋಜಕರು, ಟೆಂಡರ್ ಪ್ರಕ್ರಿಯೆ ಕೋಶ, ಕಪಪಮೀವಿವಿ, ಬೆಂಗಳೂರು–560024
ವಾಸಾಸಂಇ/ವಾಪ್ರ/ಎಲ್‌ಸಿ/5069/2025–26

ಬೆಂಗಳೂರು ಉತ್ತರ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ವಿಶೇಷ ವಿಭಾಗ, ಅಮೃತಹಳ್ಳಿ ಮುಖ್ಯರಸ್ತೆ, ಬ್ಯಾಟರಾಯನಪುರ, ಬೆಂಗಳೂರು – 560092.
ಸಂಖ್ಯೆ: ಬೆಂಉನಪಾ/ಕಾಅ/ವಿವಿ/ಟೆಂಡರ್/09/2025–26 ದಿನಾಂಕ: 16–01–2026

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) – (ಅಲ್ಪಾವಧಿ)
(ದ್ವಿ–ಲಕೋಟೆ ಪದ್ಧತಿ) (ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ವಿಶೇಷ ವಿಭಾಗ, ಬೆಂಉನಪಾ, ಬೆಂಗಳೂರು ಇವರು ಈ ಕೆಳಕಂಡ ಸೇವೆಗಾಗಿ ಯಾವುದೇ ರಾಜ್ಯ ಸರ್ಕಾರದ ಸಂಸ್ಥೆಗಳಲ್ಲಿ ನೋಂದಾಯಿತ ಏಜೆನ್ಸಿದಾರರಿಂದ ಟೆಂಡರ್‌ನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಯೋಜನೆಯ ಹೆಸರು
1	ಬೆಂಗಳೂರು ಉತ್ತರ ನಗರ ಪಾಲಿಕೆಯ ವಲಯ–1 ಮತ್ತು ವಲಯ–2 ಕ್ಕೆ ಕಂದಾಯ ಹಾಗೂ ಐಟಿ ಕೆಲಸಕ್ಕಾಗಿ ಸಿಬ್ಬಂದಿಯನ್ನು ಒದಗಿಸುವುದು. (2ನೇ ಕರೆ) – **ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ): 272.46, ಇ.ಎಂ.ಡಿ ಮೊತ್ತ (ರೂ. ಲಕ್ಷಗಳಲ್ಲಿ): 4.10**

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ವಿಚಾರಣೆಗಳಿಗೆ ಕೊನೆಯ ದಿನಾಂಕ ಮತ್ತು ಸಮಯ (ಆನ್‌ಲೈನ್ ಮೂಲಕ ಮಾತ್ರ): **22–01–2026 ರಂದು ಸಂಜೆ 4.00 ಗಂಟೆವರೆಗೆ.** 3) ಬಿಡ್ ಪೂರ್ವಭಾವಿ ಸಭೆ ದಿನಾಂಕ ಮತ್ತು ಸಮಯ: **22–01–2026 ರಂದು ಮಧ್ಯಾಹ್ನ 3.00 ಗಂಟೆಗೆ.** 4) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: **27–01–2026 ರಂದು ಸಂಜೆ 4.00 ಗಂಟೆವರೆಗೆ.** 5) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **28–01–2026 ರಂದು ಬೆಳಿಗ್ಗೆ 11.00 ಗಂಟೆಗೆ (ಸಾಧ್ಯವಾದಲ್ಲಿ ಅಥವಾ ಮುಂದಿನ ಕೆಲಸದ ದಿನದಂದು).** 6) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: **31–01–2026 ರಂದು ಸಂಜೆ 4.00 ಗಂಟೆಗೆ (ಸಾಧ್ಯವಾದಲ್ಲಿ).** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/–
ಕಾರ್ಯಪಾಲಕ ಅಭಿಯಂತರರು, ವಿಶೇಷ ವಿಭಾಗ, ಬೆಂಉನಪಾ.

ಸಂಜಯ ಗಾಂಧಿ ಟ್ರಾಮ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆ
(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)
ಭೈರಸಂದ್ರ, ಜಯನಗರ ಪೂರ್ವ, ಬೆಂಗಳೂರು – 560 011.
ದೂ: 080–26564516, 26562500, ಗ್ರಾಮ್ಸ್:SITO ಫ್ಯಾಕ್ಸ್:26565222
ಇ–ಮೇಲ್: sitodirector@gmail.com
ಸಂಖ್ಯೆ:ಸಂಗಾಂಟ್ರಾಅಚಿ/ಇ–ಟೆಂಡರ್/ಎಂಇ/09/2025–26 ದಿನಾಂಕ:16–01–2026

ಟೆಂಡರ್ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮೂಲಕ)

ಸಂಜಯಗಾಂಧಿ ಟ್ರಾಮ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆ, ಭೈರಸಂದ್ರ, ಜಯನಗರ ಪೂರ್ವ, ಬೆಂಗಳೂರು–11 ಇವರು ಅರ್ಹ ಟೆಂಡರುದಾರರಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿದೆ.

No. SGITO/e-Tender/Anaesth/Ultrasound/09/2025-26
1) General Anaesthesia Machine-3nos.
2) Ultrasound Machine(Portable)-1no.

No. SGITO/e-Tender/C-Arm/09/2025-26
1) Flat Panel C-Arm Equipment with Vascular Surgery Capabilities-1no.
2) Flat Panel C-Arm Equipment for Orthopaedic Usages-1no.

(1) ಟೆಂಡರ್ ದಾಖಲೆಗಳನ್ನು **https://kppp.karnataka.gov.in** ನಿಂದ ದಿನಾಂಕ **17–01–2026**ರಿಂದ ಅಥವಾ ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಭರ್ತಿ ಮಾಡಿದ ಟೆಂಡರ್‌ಗಳನ್ನು ಕೆಪಿಪಿ ಪೋರ್ಟಲ್ ಮುಖಾಂತರ ದಿನಾಂಕ **31–01–2026**ರ ಸಂಜೆ **4:00** ಗಂಟೆಯೊಳಗಾಗಿ ಸಲ್ಲಿಸತಕ್ಕದ್ದು. (2) ಟೆಂಡರನ್ನು ಯಾವುದೇ ಕಾರಣ ನೀಡದೆ ಸ್ವೀಕರಿಸುವ/ತಿರಸ್ಕರಿಸುವ ಅಥವಾ ರದ್ದುಪಡಿಸುವ ಅಧಿಕಾರದ ಹಕ್ಕನ್ನು ಟೆಂಡರ್ ಅಂಗೀಕಾರ ಪ್ರಾಧಿಕಾರವು ಕಾಯ್ದಿರಿಸಿಕೊಂಡಿದೆ.

ಸಹಿ/– ನಿರ್ದೇಶಕರು
ಟೆಂಡರ್ ಆಹ್ವಾನ ಪ್ರಾಧಿಕಾರ
ಡಿಐಪಿಆರ್/ಎಸ್‌ಐ/5053/2025–26

National Dairy Development Board
PB No. 40, Anand, Gujarat-388001, Tel: 02692-260 148/149/160 Fax: 02692-260 159
Website: http://www.nddb.coop, Email: purchase@nddb.coop
INVITATION FOR BIDS (IFB) / LOCAL COMPETITIVE BIDDING (LCB)

Bids are invited on behalf of Service Recipients/ NDDB from eligible bidders for the works listed below:

Sl. No.	Description of works / Bid Reference	Estd. Cost (₹) incl GST/Duration	Event Start / Close Date	Bid submission / opening date & time
A	**Civil, Structural, Water Supply, Sanitary & Other Misc. works including Internal Electrification works for:**			
I	Renovation of 8 (Nos.) D-Type Quarters and Miscellaneous Civil Repair Works at NDDB Residential Complex, Noida **NDDB/HO/Purchase/95/25-26/ET/95[CIVIL-NOIDA]**	106 Lakh / 06 Months	22.01.26 12.02.26	12.02.26 15:00 hrs. 12.02.26 15:30 hrs.
B	**Design, Supply, Installation, Testing and Commissioning the following:**			
I	11KV /433 V sub-station at Giridih Dairy, Jharkhand **NDDB/HO/Purchase/96/25-26/ET/96[SUBSTATION-GIRIDIH]**	169 Lakh / 10 Months	17.01.26 09.02.26	09.02.26 15:00 hrs. 09.02.26 15:30 hrs.
II	Water Treatment Plant at Giridih Dairy, Jharkhand **NDDB/HO/Purchase/97/25-26/ET/97[WTP-GIRIDIH]**	152 Lakh / 08 Months	22.01.26 12.02.26	12.02.26 15:00 hrs. 12.02.26 15:30 hrs.
III	Electrical light fixtures & Fans at AmulFed Dairy II, Rajkot, Gujarat. **NDDB/HO/Purchase/98/25-26/ET/98[Fixture-RAJKOT]**	93 Lakh / 03 Months	20.01.26 10.02.26	10.02.26 15:00 hrs. 10.02.26 15:30 hrs.
IV	Effluent Treatment Plant of 8 LLPD at Davanagere, Karnataka. **NDDB/HO/Purchase/99/25-26/ET/99[ETP-DAVANAGERE]**	715 Lakh / 12 Months	20.01.26 10.02.26	10.02.26 15:00 hrs. 10.02.26 15:30 hrs.
V	Furniture and Interior Works at CEAH, Hesaraghatta Karnataka **NDDB/HO/Purchase/100/25-26/ET/100[FURNITURE - HESSARAGHATTA]**	300 Lakh / 03 Months	17.01.26 09.02.26	09.02.26 15:00 hrs. 09.02.26 15:30 hrs.
VI	HVAC, Modular Partitions and Allied MEP Works for Vaccine Production Facility at OBPI, Berhampur, Odisha **NDDB/HO/Purchase/101/25-26/ET/101[HVAC-BERHAMPUR]**	918 Lakh / 07 Months	23.01.26 13.02.26	13.02.26 15:00 hrs. 13.02.26 15:30 hrs.
VII	7 KLPD ETP for Vaccine Production Facility at OBPI, Berhampur, Odisha **NDDB/HO/Purchase/102/25-26/ET/102[ETP-BERHAMPUR]**	80 Lakh / 06 Months	20.01.26 10.02.26	10.02.26 15:00 hrs. 10.02.26 15:30 hrs.
VIII	Utility works (Clean & General) for Vaccine Production Facility at OBPI, Berhampur, Odisha **NDDB/HO/Purchase/103/25-26/ET/103[UTL-BERHAMPUR]**	510 Lakh / 07 Months	21.01.26 11.02.26	11.02.26 15:00 hrs. 11.02.26 15:30 hrs.
C	Providing House-keeping and Gardening services at NDDB Kolkata **NDDB/HO/Purchase/104/25-26/ET/104[HK-KOLKATA]**	63.72 Lakh / 12 Months	17.01.26 09.02.26	09.02.26 15:00 hrs. 09.02.26 15:30 hrs.

For further details pertaining to IFB and for downloading the bid document, please visit these websites: **www.nddb.coop** and **www.mstcecommerce.com/eprocn** For any clarification please contact **Group Head (Purchase), NDDB, Anand-**388001.
NB: Any corrigendum/modification etc. will be posted only on these websites.

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ
ಉಪ ಪ್ರಧಾನ ವ್ಯವಸ್ಥಾಪಕರು–2 ರವರ ಕಛೇರಿ, 1ನೇ ಮಹಡಿ, ಬಿಬಿಎಂಪಿ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತನಗರ, ಬೆಂಗಳೂರು – 560052.
ಸಂಖ್ಯೆ: ಉಪ್ರವ್ಯ–2/ಬಿಎಸ್‌ಡಬ್ಲ್ಯೂಎಂಎಲ್/ಟೆಂಡರ್/25/2025–26 ದಿನಾಂಕ: 16–01–2026

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ (ಐಎಫ್‌ಟಿ)
(ಕರ್ನಾಟಕ ಸರ್ಕಾರದ ಕೆ.ಪಿ.ಪಿ. ಪೋರ್ಟಲ್ ಮೂಲಕ ಮಾತ್ರ)

ಉಪ ಪ್ರಧಾನ ವ್ಯವಸ್ಥಾಪಕರು–2, ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ (ಬಿಎಸ್‌ಡಬ್ಲ್ಯೂಎಂಎಂ) ರವರು ವ್ಯವಸ್ಥಾಪಕ ನಿರ್ದೇಶಕರು, ಬಿಎಸ್‌ಡಬ್ಲ್ಯೂಎಂಎಲ್, ಬೆಂಗಳೂರು ರವರ ಪರವಾಗಿ, ಕೆಳಕಂಡ ಕೋಷ್ಟಕದಲ್ಲಿ ವಿವರಿಸಲಾದ ಕಾರ್ಯಾಚರಣೆ ಮತ್ತು ನಿರ್ವಹಣೆ ಸೇವೆಗಳಿಗಾಗಿ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ನ್ನು ಆಹ್ವಾನಿಸಿದ್ದಾರೆ. ಟೆಂಡರ್‌ದಾರರು ಕರ್ನಾಟಕ ಸರ್ಕಾರದ ಕೆ.ಪಿ.ಪಿ. ಪೋರ್ಟಲ್ **(https://kppp.karnataka.gov.in)** ಮೂಲಕ ಕೋಷ್ಟಕದಲ್ಲಿ ನೀಡಲಾದ ಕೆಲಸಗಳಿಗೆ ಟೆಂಡರ್‌ಗಳನ್ನು ಸಲ್ಲಿಸಬಹುದು. ಟೆಂಡರ್‌ದಾರರಿಗೆ ಒಪ್ಪಂದದ ಪ್ರಧಾನಕ್ಕೆ ಅರ್ಹತೆ ಪಡೆಯಲು ಟೆಂಡರ್‌ದಾರರಿಗೆ ನೀಡುವ ಸೂಚನೆಗಳಲ್ಲಿ ಸ್ಟ್ಯಾಂಡರ್ಡ್ ಬಿಡ್ ಡಾಕ್ಯೂಮೆಂಟ್ ಪ್ರಕಾರ ನಿರ್ದಿಷ್ಟಪಡಿಸಲಾದ ಕನಿಷ್ಠ ಅರ್ಹತಾ ಮಾನದಂಡಗಳನ್ನು ಗಮನಿಸಲು ಸೂಚಿಸಲಾಗಿದೆ. ಇತರೆ ವಿವರಗಳನ್ನು ಬಿಡ್ಡಿಂಗ್ ಡಾಕ್ಯೂಮೆಂಟ್‌ಗಳಲ್ಲಿ ನೋಡಬಹುದು.

ಕ್ರ. ಸಂ.	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ. ಗಳಲ್ಲಿ)	ಸೇವಾ ಒಪ್ಪಂದದ ನಿಗದಿತ ಅವಧಿ
1	ಲಿಂಗಧೀರನಹಳ್ಳಿ ಇಲ್ಲಿರುವ 150 ಟಿಪಿಡಿ ಸಾಮರ್ಥ್ಯದ ಹಸಿ ತ್ಯಾಜ್ಯ ಸಂಸ್ಕರಣಾ ಘಟಕವನ್ನು 24 ತಿಂಗಳ ಅವಧಿಯ ಕಾರ್ಯಾಚರಣೆ ಮತ್ತು ನಿರ್ವಹಣೆ. (3ನೇ ಕರೆ)	**992.46**	**ರೂ. 1,00,000/–** ಅನ್ನು ಇ–ಪಾವತಿ ಮೂಲಕ, ಅಂದರೆ ಆನ್‌ಲೈನ್ / ಆರ್‌ಟಿಜಿಎಸ್ / ಎನ್‌ಇಎಫ್‌ಟಿ / ಓಟಿಸಿ ಮೂಲಕ, ಮತ್ತು ಉಳಿದ **ರೂ. 13,88,700/–** ಅನ್ನು ರಾಷ್ಟ್ರೀಕೃತ / ಕೋಷ್ಟಕ ಬ್ಯಾಂಕ್ ನೀಡಿದ ಬ್ಯಾಂಕ್ ಗ್ಯಾರಂಟಿ / ಎಫ್‌ಡಿಆರ್ ಮೂಲಕ ಪಾವತಿಸುವುದು.	**24 ತಿಂಗಳು**

ಸೂಚನೆ: 1) ತನ್ನ ನಿಯಂತ್ರಣವನ್ನು ಮೀರಿ ಸಿಸ್ಟಮ್ ವೈಫಲ್ಯದ ಕಾರಣದಿಂದ ಯಾವುದೇ ವಿಳಂಬಗಳಿಗೆ ಉದ್ಯೋಗದಾತನು ಜವಾಬ್ದಾರನಾಗಿರುವುದಿಲ್ಲ. ಯಾವುದೇ ಟೆಂಡರ್ ನವೀಕರಣಗಳನ್ನು ಟೆಂಡರ್‌ದಾರರಿಗೆ ತಿಳಿಸಲು ಸಿಸ್ಟಮ್ ಪ್ರಯತ್ನಿಸಿದರೂ ಸಹ, ಟೆಂಡರ್‌ದಾರರು ಸ್ವೀಕರಿಸದ ಯಾವುದೇ ಮಾಹಿತಿಗೆ ಉದ್ಯೋಗದಾತನು ಜವಾಬ್ದಾರನಾಗಿರುವುದಿಲ್ಲ. ಟೆಂಡರ್‌ಗೆ ಸಂಬಂಧಿಸಿದ ಇತ್ತೀಚಿನ ಮಾಹಿತಿಗಾಗಿ ಕೆ.ಪಿ.ಪಿ. ಪೋರ್ಟಲ್ ಅನ್ನು ಪರಿಶೀಲಿಸುವುದು ಟೆಂಡರ್‌ದಾರರ ಜವಾಬ್ದಾರಿಯಾಗಿದೆ, ಹೆಲ್ಪ್‌ಡೆಸ್ಕ್ ಇ–ಮೇಲ್ ವಿಳಾಸ **hphelpdesk.blr@intarvo.com** ಕೆ.ಪಿ.ಪಿ. ಪೋರ್ಟಲ್ ಹೆಲ್ಪ್ ಡೆಸ್ಕ್ ದೂರವಾಣಿ ಸಂಖ್ಯೆ: **080 – 22371090 / 22373788.** ಟೆಂಡರ್‌ದಾರರು ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯಕ್ಕೆ ಮುಂಚಿತವಾಗಿ ಕಂಪ್ಯೂಟರ್‌ನ ಬ್ರೌಸರ್ ಸಾಮರ್ಥ್ಯವನ್ನು ಖಚಿತಪಡಿಸಿಕೊಳ್ಳಬೇಕು. ಇಂಟರ್ನೆಟ್ ಸಂಪರ್ಕದ ಸಮಸ್ಯೆಗಳು ಮತ್ತು ತಾಂತ್ರಿಕ ದೋಷಗಳಿಂದಾಗಿ ಕೆ.ಪಿ.ಪಿ. ಪೋರ್ಟಲ್‌ಗೆ ಪ್ರವೇಶಿಸಲಾಗದಿರುವಿಕೆಗೆ ಉದ್ಯೋಗದಾತನು ಜವಾಬ್ದಾರನಾಗಿರುವುದಿಲ್ಲ. 2) ಯಾವುದೇ ತಿದ್ದುಪಡಿ / ಅನುಬಂಧವನ್ನು ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ. 3) **ಟೆಂಡರ್ ವೇಳಾಪಟ್ಟಿ ಈ ಕೆಳಕಂಡಂತಿದೆ.**

ಬಿಡ್ ಪೂರ್ವಭಾವಿ ಸಭೆಯ ದಿನಾಂಕ	23–01–2026 ರಂದು 15.00 ಗಂಟೆಗೆ ಮುಖ್ಯ ಅಭಿಯಂತರರು ಮತ್ತು ಮುಖ್ಯ ಪ್ರಧಾನ ವ್ಯವಸ್ಥಾಪಕರು (ಟೆಕ್) ರವರ ಕಛೇರಿ, ಬಿಎಸ್‌ಡಬ್ಲ್ಯೂಎಂಎಲ್, ತಿಮ್ಮಯ್ಯ ರಸ್ತೆ, ವಸಂತನಗರ, ಬೆಂಗಳೂರು – 560052.
ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ	04–02–2026 ರಂದು 16.00 ಗಂಟೆಯವರೆಗೆ
ತಾಂತ್ರಿಕ ಬಿಡ್ ತೆರೆಯುವ ದಿನಾಂಕ	05–02–2026 ರಂದು 16.30 ಗಂಟೆಗೆ
ಆರ್ಥಿಕ ಬಿಡ್ ತೆರೆಯುವ ದಿನಾಂಕ	ತಾಂತ್ರಿಕವಾಗಿ ಅರ್ಹ ಬಿಡ್ಡುದಾರರಿಗೆ ತಿಳಿಸಲಾಗುವುದು.

ಹೆಚ್ಚಿನ ವಿವರಗಳನ್ನು ವೆಬ್‌ಸೈಟ್: **https://kppp.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/–
ಉಪ ಪ್ರಧಾನ ವ್ಯವಸ್ಥಾಪಕರು–2
ಬಿಎಸ್‌ಡಬ್ಲ್ಯೂಎಂಎಲ್
ವಾಸಾಸಂಇ/ವಾ.ಪ್ರ/5055/ಅಡ್ವರ್ಟೋರ್/2025–26

ಮಂದಾನ ಬಳಗಕ್ಕೆ 'ಹ್ಯಾಟ್ರಿಕ್' ಜಯ

ರಾಧಾ–ರಿಚಾ ಶತಕದ ಜೊತೆಯಾಟ
● ಶ್ರೇಯಾಂಕಾಗೆ ಐದು ವಿಕೆಟ್ ಗೊಂಚಲು

ನವಿ ಮುಂಬೈ (ಪಿಟಿಐ): ಶ್ರೇಯಾಂಕಾ ಪಾಟೀಲ ಅವರ ಐದು ವಿಕೆಟ್ ಗೊಂಚಲು ಹಾಗೂ ರಾಧಾ ಯಾದವ್ ಅವರ ಅರ್ಧಶತಕದ ಬಲದಿಂದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಮಹಿಳಾ ಪ್ರೀಮಿಯರ್ ಲೀಗ್ ಪಂದ್ಯದಲ್ಲಿ ಶುಕ್ರವಾರ 32 ರನ್‌ಗಳಿಂದ ಗುಜರಾತ್ ಜೈಂಟ್ಸ್ ತಂಡವನ್ನು ಮಣಿಸಿತು.

ಅನುಭವಿ ಆಟಗಾರ್ತಿಯರಾದ ರಾಧಾ ಯಾದವ್ ಮತ್ತು ರಿಚಾ ಘೋಷ್ ಅವರು ಶತಕದ ಜೊತೆಯಾಟವಾಡಿ ಆರ್‌ಸಿಬಿ ತಂಡ ಸವಾಲಿನ ಮೊತ್ತ ಗಳಿಸಲು ನೆರವಾದರು. 183 ರನ್ ಗುರಿ ಬೆನ್ನಟ್ಟಿದ ಜೈಂಟ್ಸ್ ತಂಡಕ್ಕೆ ಕನ್ನಡತಿ, ಆಫ್ ಸ್ಪಿನ್ನರ್ ಶ್ರೇಯಾಂಕಾ (23ಕ್ಕೆ5) ಹಾಗೂ ಇಂಗ್ಲೆಂಡ್‌ನ ವೇಗಿ ಲಾರೆನ್ ಬೆಲ್ (29ಕ್ಕೆ3) ಆಘಾತ ನೀಡಿದರು. ಇವರಿಬ್ಬರ ಸ್ಪಿನ್ ಮತ್ತು ವೇಗದ ಬೌಲಿಂಗ್ ದಾಳಿ ಎದುರು ಆ್ಯಷ್ಲೆ ಗಾರ್ಡನರ್ ಬಳಗವು 18.5 ಓವರ್‌ಗಳಲ್ಲಿ 150 ರನ್‌ಗಳಿಗೆ ಸರ್ವಪತನವಾಯಿತು. ಸ್ಮೃತಿ ಮಂದಾನ ಪಡೆ ಹ್ಯಾಟ್ರಿಕ್ ಗೆಲುವನ್ನು ಸಂಭ್ರಮಿಸಿತು.

ಮಹಿಳಾ ಪ್ರೀಮಿಯರ್ ಲೀಗ್

ಆರಂಭ ಆಟಗಾರ್ತಿ ಬೆತ್ ಮೂನಿ (27; 14ಎ) ಹಾಗೂ ಮಧ್ಯಮ ಕ್ರಮಾಂಕದ ಬ್ಯಾಟರ್ ಭಾರತಿ ಫೂಲ್ಮಾಲಿ (39; 20ಎ) ಹೋರಾಟ ತೋರಿದರು. ಬೆತ್ ಅವರನ್ನು ಶ್ರೇಯಾಂಕಾ ಸ್ಪಿನ್ ಬಲೆಗೆ ಬೀಳಿಸಿದರೆ, ಬೆಲ್ ಎಸೆದ ಓವರ್‌ನಲ್ಲಿ ಭಾರತಿ ಗ್ರೇಸ್ ಹ್ಯಾರಿಸ್‌ಗೆ ಕ್ಯಾಚಿತ್ತರು. ಉಳಿದ ಬ್ಯಾಟರ್‌ಗಳು ಹೆಚ್ಚಿನ ಪ್ರತಿರೋಧ ತೋರಲಿಲ್ಲ.

ಇದಕ್ಕೆ ಮೊದಲು, 43 ರನ್ ಗಳಿಸುವಷ್ಟರಲ್ಲಿ ನಾಲ್ವರು ಪ್ರಮುಖ ಬ್ಯಾಟರ್‌ಗಳನ್ನು ಕಳೆದುಕೊಂಡಿದ್ದ ಆರ್‌ಸಿಬಿ ತಂಡಕ್ಕೆ ರಾಧಾ (66, 47 ಎಸೆತ) ಹಾಗೂ ರಿಚಾ (44, 28 ಎಸೆತ) ನೆರವಾದರು. ಈ ಜೋಡಿ ಐದನೇ ವಿಕೆಟ್‌ಗೆ 105 ರನ್ ಜೊತೆಯಾಟವಾಡಿತು. ಇದರಿಂದ, 2023ರ ಚಾಂಪಿಯನ್ ತಂಡವನ್ನು ಅಲ್ಪ ಮೊತ್ತಕ್ಕೆ ಸೀಮಿತಗೊಳಿಸುವ ಜೈಂಟ್ಸ್ ಲೆಕ್ಕಾಚಾರ ಈಡೇರಲಿಲ್ಲ.

ಜೈಂಟ್ಸ್ ವೇಗದ ಬೌಲರ್‌ಗಳು, ಅದರಲ್ಲೂ ವಿಶೇಷವಾಗಿ ಕಶ್ವಿ ಗೌತಮ್ (42ಕ್ಕೆ2) ಅವರು ವಿಕೆಟ್‌ನ ತಾಜಾತನದ ಲಾಭಪಡೆದು ಆರ್‌ಸಿಬಿ ಬ್ಯಾಟರ್‌ಗಳನ್ನು ಕಾಡಿದರು. ಕಶ್ವಿ ತಮ್ಮ ಎರಡನೇ ಓವರಿನಲ್ಲಿ ಆರಂಭ ಆಟಗಾರ್ತಿ ಗ್ರೇಸ್ ಹ್ಯಾರಿಸ್ (17, 8ಎ, 4x4) ಮತ್ತು ಮೂರನೇ ಓವರಿನಲ್ಲಿ ಡಿ.ಹೇಮಲತಾ ಅವರ ವಿಕೆಟ್‌ಗಳನ್ನು ಪಡೆದರು.

ಇನಿಂಗ್ಸ್‌ನ ಮೊದಲ ಓವರಿನಲ್ಲಿ 23 ರನ್ ತೆತ್ತು ದುಬಾರಿಯೆನಿಸಿದ್ದ ಮಧ್ಯಮ ವೇಗಿ ರೇಣುಕಾ ಸಿಂಗ್ ತಮ್ಮ ಮೂರನೇ ಓವರಿನಲ್ಲಿ ನಾಯಕಿ ಸ್ಮೃತಿ ಮಂದಾನ (5) ಅವರ ವಿಕೆಟ್ ಪಡೆದು ಬೆಂಗಳೂರಿನ ತಂಡಕ್ಕೆ ಬಲವಾದ ಪೆಟ್ಟು ನೀಡಿದರು. ಆರನೇ ಓವರಿನಲ್ಲಿ ತಂಡ 4 ವಿಕೆಟ್‌ಗಳನ್ನು ಕಳೆದುಕೊಂಡು ಸಂಕಷ್ಟದಲ್ಲಿತ್ತು.

ಈ ವೇಳೆ ರಾಧಾ ಯಾದವ್ ಮತ್ತು ರಿಚಾ ಘೋಷ್ ಇನಿಂಗ್ಸ್ ಕಟ್ಟಿದರು. ಕೊನೆಯಲ್ಲಿ ಆಲ್‌ರೌಂಡರ್ ನದೀನ್ ಡಿ ಕ್ಲರ್ಕ್ ಬಿರುಸಿನ ಆಟವಾಡಿ 12 ಎಸೆತಗಳಲ್ಲಿ ಎರಡು ಬೌಂಡರಿ, ಎರಡು ಸಿಕ್ಸರ್‌ಗಳಿದ್ದ 26 ರನ್ ಬಾರಿಸಿದ ಪರಿಣಾಮ ಆರ್‌ಸಿಬಿ ಉತ್ತಮ ಮೊತ್ತ ತಲುಪಲು ಸಾಧ್ಯವಾಯಿತು. ನ್ಯೂಜಿಲೆಂಡ್ ವೇಗಿ ಸೋಫಿ ಡಿವೈನ್ 31 ರನ್‌ಗಳಿಗೆ 3 ವಿಕೆಟ್ ಪಡೆದರು.

ಸಂಕ್ಷಿಪ್ತ ಸ್ಕೋರು: ಆರ್‌ಸಿಬಿ: 20 ಓವರುಗಳಲ್ಲಿ 7ಕ್ಕೆ 182 (ರಾಧಾ ಯಾದವ್ 66, ರಿಚಾ ಘೋಷ್ 44, ನದಿನ್ ಡಿ ಕ್ಲರ್ಕ್ 26; ರೇಣುಕಾ ಸಿಂಗ್ 41ಕ್ಕೆ1, ಕಶ್ವಿ ಗೌತಮ್ 42ಕ್ಕೆ2, ಸೋಫಿ ಡಿವೈನ್ 31ಕ್ಕೆ3). ಗುಜರಾತ್ ಜೈಂಟ್ಸ್: 18.5 ಓವರ್‌ಗಳಲ್ಲಿ 150 (ಬೆತ್ ಮೂನಿ 27, ಭಾರತಿ ಫೂಲ್ಮಾಲಿ 39; ಶ್ರೇಯಾಂಕಾ 23ಕ್ಕೆ5, ಲಾರೆನ್ ಬೆಲ್ 29ಕ್ಕೆ3). ಫಲಿತಾಂಶ: ಆರ್‌ಸಿಬಿ ತಂಡಕ್ಕೆ 32 ರನ್ ಜಯ. ಪಂದ್ಯದ ಆಟಗಾರ್ತಿ: ರಾಧಾ ಯಾದವ್.

ಐದು ವಿಕೆಟ್ ಪಡೆದ ಶ್ರೇಯಾಂಕಾ ಪಾಟೀಲ (ಎಡ) ರಾಧಾ ಯಾದವ್ ಪಿಟಿಐ ಚಿತ್ರಗಳು

ವಿಜಯ್ ಹಜಾರೆ ಟ್ರೋಫಿ: ಪಂಜಾಬ್ ದುರ್ಬಲ ಬೌಲಿಂಗ್
ವಿಶ್ವರಾಜ್ ಶತಕ; ಫೈನಲ್‌ಗೆ ಸೌರಾಷ್ಟ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶುಕ್ರವಾರ ಮುಸ್ಸಂಜೆಯಲ್ಲಿ ಕಚಗುಳಿಯಿಡುವ ಚಳಿಯಲ್ಲಿ ಆರಂಭಿಕ ಬ್ಯಾಟರ್ ವಿಶ್ವರಾಜ್ ಜಡೇಜ ಅಮೋಘ ಶತಕ ದಾಖಲಿಸಿದರು. ಅವರ ಆಟದ ಬಲದಿಂದ ಸೌರಾಷ್ಟ್ರ ತಂಡವು 9 ವಿಕೆಟ್‌ಗಳಿಂದ ಪಂಜಾಬ್ ತಂಡವನ್ನು ಸೋಲಿಸಿತು. ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯ ಫೈನಲ್ ಪ್ರವೇಶಿಸಿತು.

ಭಾನುವಾರ ನಡೆಯಲಿರುವ ಫೈನಲ್ ಪಂದ್ಯದಲ್ಲಿ ಸೌರಾಷ್ಟ್ರ ತಂಡವು ವಿದರ್ಭವನ್ನು ಎದುರಿಸಲಿದೆ. ಗುರುವಾರ ನಡೆದಿದ್ದ ಮೊದಲ ಸೆಮಿಫೈನಲ್‌ನಲ್ಲಿ ಕಳೆದ ಬಾರಿಯ ರನ್ನರ್ಸ್ ಅಪ್ ವಿದರ್ಭ ತಂಡವು ಕರ್ನಾಟಕದ ಎದುರು ಗೆದ್ದಿತ್ತು.

ಬಿಸಿಸಿಐ ಶ್ರೇಷ್ಠತಾ ಕೇಂದ್ರದ ಮೈದಾನದಲ್ಲಿ ಪಂಜಾಬ್ ತಂಡವು ಒಡ್ಡಿದ 292ರನ್‌ಗಳ ಗೆಲುವಿನ ಗುರಿಯನ್ನು ಬೆನ್ನಟ್ಟಿದ ಸೌರಾಷ್ಟ್ರವು 9 ವಿಕೆಟ್‌ಗಳ ಜಯ ಸಾಧಿಸಲು ವಿಶ್ವರಾಜ್ (ಅಜೇಯ 161; 126ಎ, 4X17, 6X3) ಶತಕ ಕಾರಣವಾಯಿತು. ಅವರು ಮತ್ತು ನಾಯಕ ಹರ್ವಿಕ್ ದೇಸಾಯಿ (64; 63ಎ, 4X9) ಮೊದಲ ವಿಕೆಟ್ ಜೊತೆಯಾಟದಲ್ಲಿ 23 ಓವರ್‌ಗಳಲ್ಲಿ 167 ರನ್ ಸೇರಿಸಿದರು. ಇದರಿಂದಾಗಿ ಜಯ ಸುಲಭವಾಯಿತು. ಎರಡು ಸಲದ ಚಾಂಪಿಯನ್ ಸೌರಾಷ್ಟ್ರವು ಇಲ್ಲಿ ಗೆಲುವಿನ ಗುರಿ ಸಾಧಿಸಿದಾಗ ಇನ್ನೂ 10.3 ಓವರ್‌ಗಳಲ್ಲಿ ಬಾಕಿ ಇದ್ದವು.

27 ವರ್ಷದ ಜಡೇಜ ಅವರು ಪಂಜಾಬ್ ಬೌಲರ್‌ಗಳನ್ನು ಲೀಲಾಜಾಲವಾಗಿ ಎದುರಿಸಿದರು. ಫ್ಲಿಕ್, ಕಟ್ ಮತ್ತು ಡ್ರೈವ್‌ಗಳನ್ನು ಆರಂಭದಿಂದಲೇ ಪ್ರಯೋಗಿಸಿದರು. ಅವರು 120 ರನ್ ಗಳಿಸಿದ್ದ ಸಮದರ್ಭದಲ್ಲಿ ಡೀಪ್ ಮಿಡ್‌ವಿಕೆಟ್‌ನಲ್ಲಿದ್ದ ಫೀಲ್ಡರ್ ಕ್ಯಾಚ್ ಕೈಚೆಲ್ಲಿದರು.

ಟಾಸ್ ಗೆದ್ದ ಸೌರಾಷ್ಟ್ರ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಅನ್ಮೋಲ್ ಪ್ರೀತ್ ಸಿಂಗ್ (100; 105ಎ, 4X9, 6X1) ಶತಕ ಮತ್ತು ಪ್ರಭಸಿಮ್ರನ್ ಸಿಂಗ್ (87; 89ಎ, 4X9, 6X3) ಅರ್ಧಶತಕದ ಬಲದಿಂದ ಪಂಜಾಬ್ ತಂಡವು 50 ಓವರ್‌ಗಳಲ್ಲಿ 291 ರನ್ ಗಳಿಸಿತು. ಸೌರಾಷ್ಟ್ರದ ವೇಗಿ ಚೇತನ್ ಸಕಾರಿಯಾ (60ಕ್ಕೆ4), ಅಂಕುರ್ ಪನ್ವರ್ (54ಕ್ಕೆ2) ಮತ್ತು ಚಿರಾಗ್ ಜಾನಿ (73ಕ್ಕೆ2) ಉತ್ತಮ ಬೌಲಿಂಗ್ ಮಾಡಿದರು.

ವಿಶ್ವರಾಜ್ ಜಡೇಜ ಶತಕ ಸಂಭ್ರಮ ಪಿಟಿಐ ಚಿತ್ರ

ಸಂಕ್ಷಿಪ್ತ ಸ್ಕೋರು: ಪಂಜಾಬ್: 50 ಓವರ್‌ಗಳಲ್ಲಿ 291 (ಹರ್ನೂರ್ ಸಿಂಗ್ 33, ಪ್ರಭಸಿಮ್ರನ್ ಸಿಂಗ್ 87, ಅನ್ಮೋಲ್‌ಪ್ರೀತ್ ಸಿಂಗ್ 100, ರಮಣದೀಪ್ ಸಿಂಗ್ 42, ಚೇತನ್ ಸಕಾರಿಯಾ 60ಕ್ಕೆ4, ಅಂಕುರ್ ಪನ್ವರ್ 54ಕ್ಕೆ2, ಚಿರಾಗ್ ಜಾನಿ 73ಕ್ಕೆ2) ಸೌರಾಷ್ಟ್ರ: 39.3 ಓವರ್‌ಗಳಲ್ಲಿ 1 ವಿಕೆಟ್‌ಗೆ 293 (ಹರ್ವಿಕ್ ದೇಸಾಯಿ 64, ವಿಶ್ವರಾಜ್ ಜಡೇಜ ಔಟಾಗದೇ 165, ಪ್ರೇರಕ್ ಮಂಕಡ್ ಔಟಾಗದೇ 52) ಸೌರಾಷ್ಟ್ರ ತಂಡಕ್ಕೆ 9 ವಿಕೆಟ್ ಜಯ. ಪಂದ್ಯದ ಆಟಗಾರ: ವಿಶ್ವರಾಜ್ ಜಡೇಜ.
ಫೈನಲ್: ವಿದರ್ಭ–ಸೌರಾಷ್ಟ್ರ (ಜ.18)
ಸ್ಥಳ: ಬಿಸಿಸಿಐ ಸಿಒಇ ಮೈದಾನ

ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ಎ.ಐ. ಕ್ಯಾಮೆರಾ: ಕೆಎಸ್‌ಸಿಎಗೆ ಪ್ರಸ್ತಾವ ಸಲ್ಲಿಸಿದ ಆರ್‌ಸಿಬಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಇಂಡಿಯನ್ ಪ್ರಿಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಪಂದ್ಯಗಳ ಸಂದರ್ಭದಲ್ಲಿ ಜನಸಮೂಹದ ಚಲನವಲನದ ಮೇಲೆ ಕಣ್ಣಾವಲು ಇಡಲು ಕೃತಕ ಬುದ್ಧಿಮತ್ತೆ ತಂತ್ರಜ್ಞಾನದ ಕ್ಯಾಮೆರಾಗಳನ್ನು ಅಳವಡಿಸಬೇಕು ಎಂದು ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡವು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಗೆ ಪ್ರಸ್ತಾವ ಸಲ್ಲಿಸಿದೆ.

'ಆರ್‌ಸಿಬಿಯು ತನ್ನ ತವರು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಈ ಸಲದ ಪಂದ್ಯಗಳನ್ನು ಆಯೋಜಿಸಲು ಈಗಲೂ ಸಿದ್ಧವಾಗಿದೆ. ಒಂದೊಮ್ಮೆ ರಾಜ್ಯ ಸರ್ಕಾರದ ಅನುಮತಿ ದೊರೆಯದೇ ಹೋದರೆ ರಾಯಪುರ ಅಥವಾ ನವೀ ಮುಂಬೈ ಕ್ರೀಡಾಂಗಣಗಳಲ್ಲಿ ಪಂದ್ಯಗಳನ್ನು ನಡೆಸುವ ಆಯ್ಕೆಗಳನ್ನು ಕಾದಿರಿಸಿಕೊಂಡಿದೆ' ಎಂದು ಫ್ರ್ಯಾಂಚೈಸಿ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ಈ ಹಿನ್ನೆಲೆಯಲ್ಲಿ ಒಂದೊಮ್ಮೆ ರಾಜ್ಯ ಸರ್ಕಾರದಿಂದ ಪಂದ್ಯಗಳಿಗೆ ಅನುಮತಿ ದೊರೆತರೆ ಪ್ರೇಕ್ಷಕರ ಸುರಕ್ಷತೆಗಾಗಿ ಅತ್ಯಾಧುನಿಕ ತಂತ್ರಜ್ಞಾನದ ಬಳಕೆ ಮಾಡಲು ಆರ್‌ಸಿಬಿ ಸಿದ್ಧವಾಗಿದೆ. ಈ ಹಿನ್ನೆಲೆಯಲ್ಲಿ ಕೆಎಸ್‌ಸಿಎಗೆ ಎಐ ಕ್ಯಾಮೆರಾಗಳ ಅಳವಡಿಕೆಯ ಪ್ರಸ್ತಾವ ಸಲ್ಲಿಸಿದೆ. ಕ್ರೀಡಾಂಗಣದಲ್ಲಿ 300 ರಿಂದ 350 ಎ.ಐ. ಆಧಾರಿತ ಕ್ಯಾಮೆರಾಗಳನ್ನು ಅಳವಡಿಸಲು ತಗಲುವ ಅಂದಾಜು ₹4.50 ಕೋಟಿ ವೆಚ್ಚವನ್ನು (ಏಕ ಪಾವತಿ) ಭರಿಸಲು ಕೂಡ ತಾವು ಬದ್ಧ ಎಂದು ತಿಳಿಸಿದೆ.

'ಈ ಕ್ಯಾಮೆರಾಗಳನ್ನು ಅಳವಡಿಸುವುದರಿಂದ ಕ್ರೀಡಾಂಗಣದಲ್ಲಿ ಸೇರುವ ಜನರ ಪ್ರತಿಯೊಂದು ಚಲನವಲನದ ಮೇಲೂ ನಿಗಾ ಇಡಬಹುದು. ಸರದಿ ಸಾಲುಗಳ ನಿರ್ವಹಣೆ, ಜನರ ಆಗಮನ ಮತ್ತು ನಿರ್ಗಮನದ ದತ್ತಾಂಶಗಳ ಸಂಗ್ರಹ ಮಾಡಬಹುದು. ಜನರ ಸರದಿ ಸಾಲುಗಳ ನಿರ್ವಹಣೆ ಹಾಗೂ ಕ್ಷಣಕ್ಷಣದ ಮಾಹಿತಿಯನ್ನು ಪಡೆಯಬಹುದು. ಇದರಿಂದಾಗಿ ಯಾವುದೇ ರೀತಿಯ ಅವಘಡಗಳನ್ನು ತಪ್ಪಿಸಬಹುದು. ಪ್ರೇಕ್ಷಕರ ಸಂಪೂರ್ಣ ಸುರಕ್ಷತೆಗೆ ಅನುಕೂಲವಾಗಲಿದೆ' ಎಂದು ಪ್ರಕಟಣೆಯಲ್ಲಿ ಉಲ್ಲೇಖಿಸಲಾಗಿದೆ.

'ಎ.ಐ. ವಿಡಿಯೋ ವಿಶ್ಲೇಷಣಾ ಸಾಮರ್ಥ್ಯದಿಂದ ಹಿಂಸಾಚಾರ, ಅನಧಿಕೃತ ಪ್ರವೇಶ ಮತ್ತು ಒಳನುಸುಳುವಿಕೆಯಂತಹ ಘಟನೆಗಳನ್ನು ಶೀಘ್ರವಾಗಿ ಪತ್ತೆಹಚ್ಚಲು ಅನುವು ಮಾಡಿಕೊಡುತ್ತದೆ, ತ್ವರಿತ ಮತ್ತು ಪರಿಣಾಮಕಾರಿ ಕಾನೂನು ಕ್ರಮ ಜಾರಿ ಪ್ರಕ್ರಿಯೆಯನ್ನು ಸುಗಮಗೊಳಿಸುತ್ತದೆ. ಈ ತಂತ್ರಜ್ಞಾನ ವ್ಯವಸ್ಥೆಯನ್ನು ಮಾಡಲು 'ಸ್ಟಾಕ್ ಕಂಪೆನಿ'ಯೊಂದಿಗೆ ಆರ್‌ಸಿಬಿ ಪಾಲುದಾರಿಕೆ ಹೊಂದಿದೆ. ಈ ಕಂಪೆನಿಯು ಬೇರೆ ಬೇರೆ ರಾಜ್ಯಗಳಲ್ಲಿ ಪೊಲೀಸ್ ಇಲಾಖೆಯೊಂದಿಗೆ ಕಾರ್ಯನಿರ್ವಹಿಸಿದೆ. ಸಂಚಾರ ಸುವ್ಯವಸ್ಥೆ ನಿರ್ವಹಣೆ, ಜೈಲುಗಳಲ್ಲಿ ತಂತ್ರಜ್ಞಾನ ವ್ಯವಸ್ಥೆಯನ್ನು ಮಾಡಿಕೊಟ್ಟಿದೆ.

ಜೂನ್ 4ರಂದು ಆರ್‌ಸಿಬಿ ವಿಜಯೋತ್ಸವದ ಸಂದರ್ಭದಲ್ಲಿ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸಂಭವಿಸಿದ್ದ ಕಾಲ್ತುಳಿತದಲ್ಲಿ 11 ಜನರು ದುರ್ಮರಣಕ್ಕೀಡಾಗಿದ್ದರು. ಅದರಿಂದಾಗಿ ರಾಜ್ಯ ಸರ್ಕಾರ ನೇಮಕ ಮಾಡಿದ್ದ ಸಮಿತಿಯು ಕ್ರೀಡಾಂಗಣದಲ್ಲಿ ಕೆಲವು ಮಾರ್ಪಾಡುಗಳನ್ನು ಸೂಚಿಸಿತ್ತು. ಈ ಕಾಮಗಾರಿಗಳ ಪರಿಶೀಲನೆಗೆ ವಿವಿಧ ಇಲಾಖೆಗಳ ಅಧಿಕಾರಿಗಳಿರುವ ಕಾರ್ಯಪಡೆಯನ್ನೂ ರಚಿಸಲಾಗಿದೆ.

ಮಾರ್ಚ್ 26ರಂದು ಐಪಿಎಲ್ ಆರಂಭವಾಗಲಿದೆ. ನಿಯಮದ ಪ್ರಕಾರ ಟೂರ್ನಿಗೆ ಕನಿಷ್ಠ ಒಂದು ತಿಂಗಳು ಮುನ್ನ ಪಂದ್ಯಗಳ ಆಯೋಜಕರಿಗೆ ಕ್ರೀಡಾಂಗಣವನ್ನು ವಹಿಸಿಕೊಡಬೇಕು. ಆ ಮೂಲಕ ಸಿದ್ಧತೆಗಳಿಗೆ ಅನುವು ಮಾಡಿಕೊಡಬೇಕು.

ರನ್ನರ್ ಅಪ್ ಆದ ಮಂಗಳೂರು ವಿವಿ ತಂಡದವರು ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಗಣ್ಯರೊಂದಿಗೆ ಸಂಭ್ರಮಿಸಿದರು

ರಿಲೆ ದಾಖಲೆ; ಮಂಗಳೂರು ವಿವಿ ರನ್ನರ್ಸ್
ಅಂತರ ವಾರ್ಸಿಟಿ ಅಥ್ಲೆಟಿಕ್ಸ್: ಮದ್ರಾಸ್ ವಿವಿ ಸಮಗ್ರ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಮೂಡುಬಿದಿರೆ (ದಕ್ಷಿಣ ಕನ್ನಡ): ಎರಡು ದಿನಗಳ ಹಿಂದೆ 4x400 ಮೀಟರ್ಸ್ ಮಿಶ್ರ ರಿಲೆಯಲ್ಲಿ ಮಂಗಳೂರು ವಿಶ್ವವಿದ್ಯಾಲಯಕ್ಕೆ ಚಿನ್ನ ಗೆದ್ದುಕೊಟ್ಟ ತಂಡದಲ್ಲಿದ್ದ ಸಾಕೇತ್, ಸ್ವರಾಜ್ಯ ಮೈದಾನದ ಟ್ರ್ಯಾಕ್‌ನಲ್ಲಿ ಮತ್ತೊಮ್ಮೆ ಮಿಂಚು ಹರಿಸಿದರು. ಅವರಿದ್ದ ಮಂಗಳೂರು ವಿವಿ ಪುರುಷರ 4x400 ಮೀ. ರಿಲೆ ತಂಡ ದಾಖಲೆಯೊಂದಿಗೆ ಚಿನ್ನ ಗೆದ್ದುಕೊಂಡಿತು.

ಅಖಿಲ ಭಾರತ ಅಂತರ ವಿವಿ ಅಥ್ಲೆಟಿಕ್ ಕೂಟದ ಕೊನೆಯ ದಿನವಾದ ಶುಕ್ರವಾರ ಬೆಳಿಗ್ಗೆ ನಡೆದ ರಿಲೆಯ ಮೊದಲ ಲ್ಯಾಪ್‌ನಲ್ಲಿ ಓಡಿದ ಸಾಕೇತ್ ಭರ್ಜರಿ ಮುನ್ನಡೆ ತಂದುಕೊಟ್ಟರು. ಕೇಶವನ್, ಪ್ರಥಮೇಶ್ ಮತ್ತು ಆಕಾಶರಾಜ್ ಕೂಡ ಮಿಂಚಿ 3ನಿ 8.45 ಸೆಕೆಂಡುಗಳಲ್ಲಿ ತಂಡವನ್ನು ಗುರಿ ಮುಟ್ಟಿಸಿದರು. ಆ ಮೂಲಕ 2024ರಲ್ಲಿ ಕೇರಳ ವಿವಿ (3ನಿ, 9:31 ಸೆ) ಹೆಸರಿನಲ್ಲಿದ್ದ ದಾಖಲೆ ಮುರಿದರು. ಮದ್ರಾಸ್ ವಿವಿ (3ನಿ 9:17ಸೆ) ಕೂಡ ದಾಖಲೆ ಮೀರಿತು.

ಮದ್ರಾಸ್ ವಿವಿ ಚಾಂಪಿಯನ್: ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಸಹಯೋಗದಲ್ಲಿ ರಾಜೀವ ಗಾಂಧಿ ಆರೋಗ್ಯ ವಿಜ್ಞಾನಗಳ ವಿವಿ ಮತ್ತು ಭಾರತೀಯ ವಿವಿಗಳ ಸಂಘ ಆಯೋಜಿಸಿದ್ದ ಈ ಕೂಟದಲ್ಲಿ ಕಳೆದ ಬಾರಿಯ ಸಮಗ್ರ ಚಾಂಪಿಯನ್ ಮಂಗಳೂರು ವಿವಿಯನ್ನು ಹಿಂದಿಕ್ಕಿ ಮದ್ರಾಸ್ ವಿವಿ ಚಾಂಪಿಯನ್ ಪಟ್ಟಕ್ಕೇರಿತು. ಪುರುಷರು ತಂದುಕೊಟ್ಟ 74 ಪಾಯಿಂಟ್‌ಗಳೊಂದಿಗೆ 134 ಪಾಯಿಂಟ್‌ಗಳನ್ನು ಮದ್ರಾಸ್ ವಿವಿ ಕಲೆ ಹಾಕಿತು. ಮಂಗಳೂರು ವಿವಿ (109 ಪಾಯಿಂಟ್ಸ್) ಎರಡನೇ ಸ್ಥಾನ ಗಳಿಸಿತು. ಮೂರನೇ ಸ್ಥಾನ ಚಂಡೀಗಢ ವಿವಿಯ ಪಾಲಾಯಿತು.

ಪುರುಷರ ವಿಭಾಗದಲ್ಲಿ ಮದ್ರಾಸ್, ಮಂಗಳೂರು ಮತ್ತು ರೋಹ್ಟಕ್‌ನ ಎಂ.ಡಿ ವಿವಿ ಕ್ರಮವಾಗಿ ಮೊದಲ ಮೂರು ಸ್ಥಾನ ಗಳಿಸಿದರೆ ಮಹಿಳೆಯರ ವಿಭಾಗದಲ್ಲಿ ಚಂಡೀಗಢ, ಮದ್ರಾಸ್ ಮತ್ತು ಮಂಗಳೂರು ವಿವಿ ಮೊದಲ ಮೂರು ಸ್ಥಾನ ಗಳಿಸಿದವು.

ಪುರುಷರ ಹ್ಯಾಮರ್ ಥ್ರೋದಲ್ಲೂ ಮಂಗಳೂರು ವಿವಿಗೆ ಚಿನ್ನ ಒಲಿಯಿತು. 61.74 ಮೀ ದೂರ ಎಸೆದ ಮೊಹಮ್ಮದ್ ನದೀಂ ಮೊದಲಿಗರಾದರು. ಇದರೊಂದಿಗೆ ಒಟ್ಟು 6 ಚಿನ್ನ, ತಲಾ 5 ಬೆಳ್ಳಿ ಹಾಗೂ ಕಂಚಿನ ಪದಕಗಳು ಮಂಗಳೂರು ವಿವಿಗೆ ಲಭಿಸಿದವು.

ಶುಕ್ರವಾರದ ಫಲಿತಾಂಶಗಳು: ಪುರುಷರು: 200 ಮೀಟರ್ಸ್ ಓಟ: ಗೋಕುಲ್ ಪಾಂಡ್ಯನ್ (ಎಸ್‌ಆರ್‌ಎಂ)-1. ಕಾಲ: 21.22 ಸೆ., ಪ್ರಸನ್ನ ಕುಮಾರ್ ಮಣ್ಣೂರ (ಧಾರವಾಡ)-2, ಎಸ್.ಆರ್ ರೋಹನ್ (ಎಂ.ಜಿ ಕೋಟಯಂ)-3; 5 ಸಾವಿರ ಮೀ ಓಟ: ಗೌರವ್ (ಮಹಾತ್ಮ ಜ್ಯೋತಿಬಾ ಫುಲೆ ವಿವಿ)-1. ಕಾಲ:14ನಿ 4.1ಸೆ, ಪ್ರಿನ್ಸ್‌ರಾಜ್ ಯಾದವ್ (ಆದಿಕವಿ ಮಹರ್ಷಿ)-2, ಸಚಿನ್ ಯಾದವ್ (ಆರ್‌ಐಎಂಟಿ)-3; 4x100 ಮೀ. ರಿಲೆ: ಮದ್ರಾಸ್-1. ಕಾಲ: 40.69 ಸೆ, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ-2, ಕ್ಯಾಲಿಕಟ್-3; 4x400 ಮೀ ರಿಲೆ: ಮಂಗಳೂರು (ಸಾಕೇತ್, ಕೇಶವನ್, ಪ್ರಥಮೇಶ್, ಆಕಾಶ್ ರಾಜ್)-1. ಕಾಲ: 3ನಿ 8.45ಸೆ; ಕೂಟ ದಾಖಲೆ (ಹಿಂದಿನ ದಾಖಲೆ: ಕೇರಳ ವಿವಿ 3ನಿ 9:31ಸೆ; 2024), ಮದ್ರಾಸ್ -2, ಪಂಜಾಬ್-3; ಲಾಂಗ್‌ಜಂಪ್: ಸಾರುಣ್ ಪಾಯಾಸಿಂಗ್ (ಸಂಭಲ್‌ಪುರ್)-1. ಅಂತರ: 7.43ಮೀ, ಶಾರೋನ್ ಜಸ್ಟಸ್ (ಮನೋನ್ಮಣಿಯಮ್)-2, ಯಶ್ ಖಾನ್ವಿಳ್ಕರ್ (ಮುಂಬೈ)-3; ಹ್ಯಾಮರ್ ಥ್ರೋ: ಮೊಹಮ್ಮದ್ ನದೀಮ್ (ಮಂಗಳೂರು)-1. ದೂರ: 61.74ಮೀ, ಮುತ್ತಪ್ಪ (ಯೆನೆಪೋಯ)-2, ಜತಿನ್ ಕುಮಾರ್ (ಪಿಡಿಯುಎಸ್‌ಯು)-3.

ಮಹಿಳೆಯರು: 200 ಮೀ ಓಟ: ಪ್ರತಿಭಾ ಸೆಲ್ವರಾಜ್ (ಮದ್ರಾಸ್)-1. ಕಾಲ: 24.11ಸೆ, ಶ್ರೀನಾ ಎನ್ (ಎಂ.ಜಿ ಕೋಟಯಂ)-2, ಸೋನಿಯಾ (ಚಂಡೀಗಢ)-3; 5 ಸಾವಿರ ಮೀ ಓಟ: ಸೋನಿ ದೇವಿ (ಆದಿಕವಿ ಶ್ರೀ ಮಹರ್ಷಿ)-1. ಕಾಲ: 16ನಿ 50.98ಸೆ, ಪೌರ್ಣಮಿ ಎನ್ (ಎಂ.ಜಿ, ಕೋಟಯಂ)-2, ಮಿಲಾಲಿ ದೀಪಕ್ (ರಾಷ್ಟ್ರಸಂತ್ ತುಕ್ಡೋಜಿ)-3; 4x100 ಮೀ ರಿಲೆ: ಎಂಜಿ, ಕೋಟಯಂ-1. ಕಾಲ: 46.20 ಸೆ, ಮದ್ರಾಸ್-2, ಗುರುನಾನಕ್ ದೇವ್-3; 4x400 ಮೀ ರಿಲೆ: ಪಂಜಾಬಿ-1. ಕಾಲ: 3ನಿ 42.65ಸೆ, ಮದ್ರಾಸ್ -2, ಮಂಗಳೂರು-3; ಹೈಜಂಪ್: ಪೂಜಾ (ಲವ್ಲಿ)-1. ಎತ್ತರ: 1.85 ಮೀ; ಕೂಟ ದಾಖಲೆ (ಹಿಂದಿನ ದಾಖಲೆ: ಗ್ರೇಸ್ನಾ ಮರ್ಲಿ, 1.84ಮೀ; 2022), ಜೋನಿಕಾ ಪಹಲ್ (ಚಂಡೀಗಢ)-2, ಜಾಮೋದ್ ಪಿ. (ಸ್ವರ್ಣಿಮ್ ಗುಜರಾತ್)-3; ಹ್ಯಾಮರ್ ಥ್ರೋ: ತಾನ್ಯಾ ಚೌಧರಿ (ಚಂಡೀಗಢ)-1. ದೂರ: 65.60ಮೀ; ಕೂಟ ದಾಖಲೆ (ಹಿಂದಿನ ದಾಖಲೆ: ತಾನ್ಯಾ ಚೌಧರಿ, 62.62 ಮೀ; 2023), ನಂದಿನಿ (ಚಂಡೀಗಢ)-2, ಗ್ರೀಮಾ (ಲವ್ಲಿ, ಪಂಜಾಬ್)-3.

ತಾನ್ಯಾ ರಾಷ್ಟ್ರೀಯ ದಾಖಲೆ: ಮಾನ್ಯತೆ ಕಷ್ಟ?

ಮಹಿಳೆಯರ ಹ್ಯಾಮರ್ ಥ್ರೋದಲ್ಲಿ ತಾನ್ಯಾ ಚೌಧರಿ 65.60 ಮೀ ಸಾಧನೆ ಮಾಡಿ 2017ರಲ್ಲಿ ಉತ್ತರ ಪ್ರದೇಶದ ಸರಿತಾ ಸಿಂಗ್ (65.25ಮೀ) ಮಾಡಿದ್ದ ರಾಷ್ಟ್ರೀಯ ದಾಖಲೆ ಹಿಂದಿಕ್ಕಿದ್ದರು. ಆದರೆ ಅಂತರ ವಾರ್ಸಿಟಿ ಕೂಟಕ್ಕೆ ಎಎಫ್‌ಐ ಮಾನ್ಯತೆ ಇಲ್ಲದ ಕಾರಣ ಈ ದಾಖಲೆಯನ್ನು ಪರಿಗಣಿಸುವುದು ಕಷ್ಟಸಾಧ್ಯ ಎನ್ನಲಾಗಿದೆ.

ಈ ಕುರಿತು 'ಪ್ರಜಾವಾಣಿ' ಜೊತೆ ಮಾತನಾಡಿದ ಎಎಫ್‌ಐ ಅಧಿಕಾರಿ ಹರಿದಾಸ್, 'ತಾನ್ಯಾ ಸಾಧನೆ ಮಾಡಿರುವುದು ನಿಜ. ಅದನ್ನು ದಾಖಲೆ ಎಂದು ಎಎಫ್‌ಐ ಪರಿಗಣಿಸಲು ಹಲವು ಪ್ರಕ್ರಿಯೆಗಳು ಇವೆ. ಮೊದಲಿಗೆ ನಾಡಾದಿಂದ ಡೋಪ್ ಟೆಸ್ಟ್ ಆಗಬೇಕು. ತಾವು ಆಯೋಜಿಸಿದ್ದ ಕೂಟದಲ್ಲಿ ದಾಖಲೆ ಆಗಿದ್ದು ಅದನ್ನು ಮಾನ್ಯ ಮಾಡಬೇಕು ಎಂದು ರಾಜೀವ ಗಾಂಧಿ ವಿವಿ ಎಎಫ್‌ಐಗೆ ಮನವಿ ಮಾಡಬಹುದಾಗಿದೆ' ಎಂದರು.

ಇಂಡಿಯಾ ಓಪನ್: ಲಕ್ಷ್ಯ ನಿರ್ಗಮನ

ನವದೆಹಲಿ (ಪಿಟಿಐ): ವಿಶ್ವದ 12ನೇ ಕ್ರಮಾಂಕದ ಆಟಗಾರ ಲಿನ್ ಚುನ್-ಯಿ ಎದುರು ಭಾರತದ ಲಕ್ಷ್ಯ ಸೇನ್ ತೀವ್ರ ಹೋರಾಟ ಪ್ರದರ್ಶಿಸಿದರೂ, ಮೂರು ಗೇಮ್‌ಗಳ ಪಂದ್ಯದ ನಿರ್ಣಾಯಕ ಹಂತದಲ್ಲಿ ಎಡವಿದರು. ಶುಕ್ರವಾರ ನಡೆದ ಕ್ವಾರ್ಟರ್ ಫೈನಲ್‌ನಲ್ಲಿ ಅವರು ಸೋಲುವುದರೊಂದಿಗೆ ಇಂಡಿಯಾ ಓಪನ್ ಸೂಪರ್ 750 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತದ ಸವಾಲು ಅಂತ್ಯಗೊಂಡಿತು.



ಉತ್ತರಾಖಂಡದ ಅಲ್ಮೋರಾದ 24 ವರ್ಷ ವಯಸ್ಸಿನ ಆಟಗಾರ 21–17, 13–21, 18–21 ರಲ್ಲಿ ತೈವಾನ್‌ನ ಲಿನ್ ಚುನ್ ಅವರಿಗೆ ಮಣಿದರು. ತೀವ್ರ ಹಣಾಹಣಿಯ ಪಂದ್ಯದಲ್ಲಿ ಇಬ್ಬರೂ ಅತ್ಯುತ್ತಮ ಮಟ್ಟದಲ್ಲಿ ಆಡಿದರು.

ದೀರ್ಘ ರ‍್ಯಾಲಿಗಳು, ನೆಟ್ ಬಳಿ ಕೌಶಲದ ಹೊಡೆತಗಳು ಕಾಣಸಿಕ್ಕಿದವು. ಮೂರು ಗೇಮ್‌ಗಳ ದೀರ್ಘ ಪಂದ್ಯದಲ್ಲಿ ಇಬ್ಬರೂ ಪರಸ್ಪರರ ಸಂಯಮ ಪರೀಕ್ಷಿಸಿದರು.

ಟಿ20 ತಂಡಕ್ಕೆ ಬಿಷ್ಣೋಯಿ, ಶ್ರೇಯಸ್

ನವದೆಹಲಿ (ಪಿಟಿಐ): ಲೆಗ್‌ಸ್ಪಿನ್ನರ್ ರವಿ ಬಿಷ್ಣೋಯಿ ಮತ್ತು ಬ್ಯಾಟರ್ ಶ್ರೇಯಸ್ ಅಯ್ಯರ್ ಅವರು ಭಾರತ ಟಿ20 ಕ್ರಿಕೆಟ್ ತಂಡದಲ್ಲಿ ಸ್ಥಾನ ಗಳಿಸಿದ್ದಾರೆ.

ಇದೇ 21ರಿಂದ ನ್ಯೂಜಿಲೆಂಡ್ ಎದುರು ಆರಂಭವಾಗಲಿರುವ ಐದು ಪಂದ್ಯಗಳ ಸರಣಿಯಲ್ಲಿ ಆಡಲಿರುವ ಸೂರ್ಯಕುಮಾರ್ ಯಾದವ್ ನಾಯಕತ್ವದ ತಂಡವನ್ನು ಶುಕ್ರವಾರ ಪ್ರಕಟಿಸಲಾಯಿತು. ಗಾಯಗೊಂಡಿರುವ ಆಲ್‌ರೌಂಡರ್ ವಾಷಿಂಗ್ಟನ್ ಸುಂದರ್ ಮತ್ತು ತಿಲಕ್ ವರ್ಮಾ ಅವರನ್ನು ಕೈಬಿಡಲಾಗಿದೆ.

ಶ್ರೇಯಸ್ ಅವರನ್ನು ಮೊದಲ ಮೂರು ಪಂದ್ಯಗಳಿಗೆ ಮಾತ್ರ ಆಯ್ಕೆ ಮಾಡಲಾಗಿದೆ. ಹೋದ ವರ್ಷ ಫೆಬ್ರುವರಿಯಲ್ಲಿ ಇಂಗ್ಲೆಂಡ್ ವಿರುದ್ಧದ ಪಂದ್ಯದಲ್ಲಿ ಆಡಿದ್ದ ರವಿ ಬಿಷ್ಣೋಯಿ ಈಗ ಮತ್ತೆ ಭಾರತ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. 42 ಟಿ20 ಪಂದ್ಯಗಳನ್ನು ಆಡಿರುವ ಅವರು 61 ವಿಕೆಟ್ ಪಡೆದಿದ್ದಾರೆ.

ಸರಣಿಯ ಪಂದ್ಯಗಳು; ನಾಗಪುರ (ಜ.21), ರಾಯಪುರ (ಜ.23), ಗುವಾಹಟಿ (ಜ.25), ವಿಶಾಖಪಟ್ಟಣಂ (ಜ.28) ಮತ್ತು ತಿರುವನಂತಪುರ (ಜ.31) ದಲ್ಲಿ ನಡೆಯಲಿವೆ.

ತಂಡ: ಸೂರ್ಯಕುಮಾರ್ ಯಾದವ್ (ನಾಯಕ), ಅಕ್ಷರ್ ಪಟೇಲ್ (ಉಪನಾಯಕ), ಅಭಿಷೇಕ್ ಶರ್ಮಾ, ಸಂಜು ಸ್ಯಾಮ್ಸನ್ (ವಿಕೆಟ್‌ಕೀಪರ್), ಶ್ರೇಯಸ್ ಅಯ್ಯರ್ (ಮೊದಲ ಮೂರು ಪಂದ್ಯಗಳಿಗೆ), ಹಾರ್ದಿಕ್ ಪಾಂಡ್ಯ, ಶಿವಂ ದುಬೆ, ರಿಂಕು ಸಿಂಗ್, ಜಸ್‌ಪ್ರೀತ್ ಬೂಮ್ರಾ, ಹರ್ಷಿತ್ ರಾಣಾ, ಅರ್ಷದೀಪ್ ಸಿಂಗ್, ಕುಲದೀಪ್ ಯಾದವ್, ವರುಣ ಚಕ್ರವರ್ತಿ, ಇಶಾನ್ ಕಿಶನ್ (ವಿಕೆಟ್‌ಕೀಪರ್), ರವಿ ಬಿಷ್ಣೋಯಿ.

ಶ್ರೇಯಸ್ ಅಯ್ಯರ್